ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೬

ನಿರ್ವಾಣ ಪ್ರಕರಣ

ಕನ್ನಡಿಸಿದವರು :
ದೇವುಡು

ಜಯಭಾರತ ಪ್ರೆಸ್
(ದಿ ಕರ್ನಾಟಕ ಪ್ರಿಂಟರ್ಸ್ ಲಿಮಿಟೆಡ್)
ನಂ. ೨೦, ೪ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೨.

೧೯೫೦

ಯೋಗವಾಸಿಷ್ಠ

ಸಂಪುಟ ೧೬

ನಿರ್ವಾಣ ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೬

ನಿರ್ವಾಣ ಪ್ರಕರಣ

ಕನ್ನಡಿಸಿದವರು :
ದೇವುಡು

ಜಯಭಾರತ ಪ್ರೆಸ್
(ದಿ ಕರ್ನಾಟಕ ಪ್ರಿಂಟರ್ಸ್ ಲಿಮಿಟೆಡ್)
ನಂ. ೨೦, ೪ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೨.

೧೯೫೦

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠ ಸಿದ್ಧಾಂತವೂ ಶಾಂಕರಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ. ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಗರಿಕತೆಯ ದೇಶಗಳಲ್ಲಿಯೇ ಹುಟ್ಟಿ ಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠ ಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜವೈಭವನೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು, ವ್ಯವಹಾರ, ಉತ್ಪತ್ತಿ, ಸ್ಥಿತಿ ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವಸಂತ್ರವು ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರಲ್ಲಿ ವಿದ್ಯಾವಂತರಾಗಬೇಕೆಂಬ ಆಸೆ ಬಲವಾಗುತ್ತಿದೆ. ಕಲಿತ ವಿದ್ಯೆಗಳೆಲ್ಲವೂ ಸಾರ್ಥಕವಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಬೇಕೆಂಬ ಪ್ರಾಚೀನರ ಉಪದೇಶವೆಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡ ಲೋಕದ ಸುದೈವ. ಕಾವ್ಯಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ. ಶ್ರದ್ಧೆಯೊಂದಿದ್ದರೆ ಸಾಕು: ಅದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಅವರು. ಈ ಗ್ರಂಥ ಪಠನ ಪಾಠನಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾನಿ ಭವಂತು ಎಂದು ಹರಕೆ ಹೊರುತ್ತಾನೆ.

ಬೆಂಗಳೂರು ನಗರ
೧೫—೮—೫೦

ದೇವುಡು.

ವಿಷಯ ಸೂಚಿಕೆ

ಶ್ರೀ

ಯೋಗವಾಸಿಷ್ಠ

ನಿರ್ವಾಣ ಪ್ರಕರಣ

ಚತುಶ್ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ಕೇವಲೇನೇನ್ದ್ರಿಯೈಃ ಸಾರ್ಧಂ ವರ್ತಮಾನಾರ್ಥವರ್ತಿನಾ ।
ಅಸಂಗಮೇನ ಮನಸಾ ಯತ್ಕರೋಷಿ ನತತ್ಕೃತಮ್ ॥ ೧ ॥

ನಲವತ್ತನಾಲ್ಕನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು:—

೧. (ಭೂತ, ಭವಿಷ್ಯತ್ತುಗಳನ್ನು ಚಿಂತಿಸದೆ) ವರ್ತಮಾನವಾಗಿ ಎದುರಿಗಿರುವ ಅರ್ಥವು ಯಾವುದೋ ಅದನ್ನು ಮಾತ್ರ ಕುರಿಯುತ್ತ, ಕೇವಲವಾಗಿ, ಇತರ ಸಂಗದೋಷಗಳೂ ಇಲ್ಲದ ಮನಸ್ಸಿನಿಂದ, ಇಂದ್ರಿಯಗಳ ಮೂಲಕವಾಗಿ ಯಾವುದನ್ನು ಮಾಡುವೆಯೋ ಅದು ಮಾಡದೆ ಇದ್ದಂತೆಯೇ !

(ರಾಮೇಣ ಸ್ವಸ್ಯ ತತ್ತ್ವ ಬೋಧ ವಿಶ್ರಾಂತೌ ವರ್ಣಿತಾಯಾಮಪಿ ತತ್ಪರಿಪಾಕಾತ್ ಪ್ರಾಕ್ ಪ್ರಚ್ಯುತಿರ್ಮಾಭೂದಿತಿ ಶಿಲಾನಿಖಾತ ಸ್ಥೂಣಾ ದಾರ್ಢ್ಯಾಯ ಸಂಧಿಕೀಲ ಪರಂಪರಾಮಿವ ಜೀವನ್ಮುಕ್ತ ಲಕ್ಷಣಭೂತಾಂ ಪ್ರಾಗುಕ್ತ ಸಾಧನ ಪರಂಪರಾಮೇವ ಪ್ರತಿಷ್ಠಾಪಯಿಷ್ಯನ್ ಶ್ರೀ ವಸಿಷ್ಠಃ ಪ್ರಾಗುಕ್ತೇ ಯಥಾಪ್ರಾಪ್ತ ವ್ಯವಹಾರೋಪಭೋಗಾದಿಲಕ್ಷಣೇ ಶಿವಾರ್ಚನೇಽಪಿ "ಸರ್ವಾರಂಭಾಹಿ ದೋಷೇಣ ಧೂಮೇನಾಗ್ನಿರಿವಾವೃತಾಃ" ಇತಿ ನ್ಯಾಯೇನ ಪ್ರಮಾದಾತ್ ಹಿಂಸಾ

ಯಥಾಪ್ರಾಪ್ತಿಕ್ಷಣೇ ವಸ್ತು ಪ್ರಥಮೇ ತುಷ್ಟಯೇ ತಥಾ ।
ನ ಪ್ರಾಪ್ತ್ಯೇಕಕ್ಷಣಾದೂರ್ಧ್ವಮಿತಿ ಕೋ ನಾನುಭೂತವಾನ್ ॥ ೨ ॥

ವಾಂಛಾಕಾಲೇ ಯಥಾವಸ್ತು ತುಷ್ಟಯೇ ನಾನ್ಯದಾ ತಥಾ ।
ತಸ್ಮಾತ್ಕ್ಷಣಸುಖೇ ಸಕ್ತಿಂ ಬಾಲೋ ಬಧ್ನಾತಿ ನೇತರಃ ॥ ೩ ॥

ವಾಂಛಾಕಾಲೇ ತುಷ್ಟಯೇ ಯತ್ತತ್ರ ವಾಂಛೈವ ಕಾರಣಮ್ ।
ತುಷ್ಟಿಸ್ತ್ವತುಷ್ಟಿಪರ್ಯನ್ತಾ ತಸ್ಮಾದ್ವಾಂಛಾಂ ಪರಿತ್ಯಜ ॥ ೪ ॥

ಪರಾನಿಷ್ಟಾದಿ ಪ್ರಸಕ್ತೇರವರ್ಜನಾತ್, ಭೋಗಸ್ಯ ಅನರ್ಥಹೇತುತ್ವಾಚ್ಚ, ಸ್ಯಾದೇವ ಪುನರ್ಜನನಾದ್ಯನರ್ಥ ಇತ್ಯಾಶಂಕಾಂ ವಾರಯ‍ನ್ ಆಹ-ಕೇವಲೇ ನೇತಿ-ಕೇವಲೇನ ರಾಗಾದಿರಹಿತೇನ ಅತಏವ ಅಸಂಗಮೇನ ಕರ್ತೃತ್ವಾಭಿಮಾನ ಲಕ್ಷಣ ಕ್ರಿಯಾಸಂಗಮಶೂನ್ಯೇನ-ತಾ. ಪ್ರ.)

೨. (ವಿಷಯವಾಗಿ ಇಂದ್ರಿಯಗಳಿಗೆ ಸುಖವನ್ನು ಉಂಟುಮಾಡುವ) ವಸ್ತುವು ಲಭಿಸಿದ ಮೊದಲನೆಯ ಕ್ಷಣದಲ್ಲಿ ಯಾವ ಸುಖವನ್ನು ಕೊಡುವುದೋ, ಆ ಕ್ಷಣವು ಕಳೆದುಹೋದಮೇಲೆ ಅದರಿಂದ ಆ ಸುಖವಿರುವುದಿಲ್ಲ ಎಂಬುದನ್ನು ಯಾರುತಾನೇ ಅನುಭವಿಸಿಲ್ಲ ?

(ವಿಷಾಯಣಾಂ ತುಷ್ಟಿಜನಕತ್ವ ನಿಯಾಮಾತ್ ಕಥಂ ತೇಷು ರಾಗಸ್ತ್ಯಕ್ತುಂ ಶಕ್ಯಃ ? ಇತ್ಯಾಶಂಕ್ಯ ಆಹ-ತಾ. ಪ್ರ)

೩. ಯಾವ ವಸ್ತುವೇ ಆಗಲಿ ಅದು ಬೇಕು ಬೇಕು ಎನ್ನುವಾಗ ಅದರಿಂದ ತುಷ್ಟಿಯಾಗುವುದು(ಎಂಬ ನಂಬಿಕೆ ಇರುವುದು. ಪ್ರಾಪ್ತಿಯಾದ ಮೇಲೆ ನಿರೀಕ್ಷೆಯು ಸಡಿಲಿ, ಸುಖಾನುಭವವೂ ಕಡಿಮೆಯಾಗುವುದು.) ಅದರಿಂದ ಒಂದು ಗಳಿಗೆ ಮಾತ್ರ ಸುಖಕೊಡುವ ವಸ್ತುವಿನಲ್ಲಿ (ಅವಿವೇಕಿಯಾಗಿ) ಬಾಲ (ನಂತಿರುವ) ನು ಮಾತ್ರ ಆಸಕ್ತಿಯನ್ನು ವಹಿಸುವನಲ್ಲದೆ ಇತರನಲ್ಲ.

೪. ವಾಂಛಾಕಾಲದಲ್ಲಿಯಾದರೂ ತೃಪ್ತಿಯಾಗುವುದಲ್ಲ ಎಂದರೆ ಅದಕ್ಕೆ ವಾಂಛೆಯು ಬಲವಾಗಿರುವುದೇ ಕಾರಣವು. ತುಷ್ಟಿಯುತಾನೇ ಶಾಶ್ವತವಾಗಿರುವದೇನು ? ಆ ತುಷ್ಟಿಯು ಬರುವವರೆಗೂ ಇರುವುದು ಅಷ್ಟೆ! ಅದರಿಂದ ವಾಂಛೆಯನ್ನು ಬಿಡು.

ಯದಿ ತತ್ಪದ ಮಾಪ್ತೋಽಸಿ ಕದಾಚಿತ್ಕಾಲಪರ್ಯಯಾತ್ ।
ತದಹಂಭಾವನಾರೂಪೇ ನ ಮಂಕ್ತವ್ಯಂ ತ್ವಯಾ ಪುನಃ ॥ ೫ ॥

ಆತ್ಮಜ್ಞಾನಾಚಲಸ್ಯಾಗ್ರೇ ರಾಮ ವಿಶ್ರಾನ್ತವಾನಸಿ ।
ಅಹಂಭಾವಮಹಾಶ್ವಭ್ರೇ ನ ಪುನಃ ಪಾತಮರ್ಹಸಿ ॥ ೬ ॥

ಯತ್ಸ್ಮೃತಾನನ್ತ ಸದೃಷ್ಟೇರ್ಜ್ಞತ್ವಮೇರುಶಿರಃಸ್ಥಿತೇಃ ।
ಪುನರ್ಗರ್ಭಾನುಕಾರಾನ್ತಃ ಪಾತಾಲೇ ಪತನಂ ಕೃತಃ ॥ ೭ ॥

ದೃಶ್ಯತೇ ತೇ ಸ್ವಭಾವೋಽಯಂ ಸಮತಾಸತ್ಯತಾಮಯಃ ।
ಮನ್ಯೇ ಕ್ಷೀಣವಿಕಲ್ಪೋಽಸಿ ಜಾತೋಽಸಿ ಹತಕಾಲಿಕಃ ॥ ೮ ॥

ಸ್ವಭಾವೇ ಸಂಸ್ಥಿತೋ ರಾಮ ಇತ್ಯಾವೇದಯತೀವ ಮೇ ।
ಸೌಮ್ಯಪೂರ್ಣಾರ್ಣವಪ್ರಖ್ಯಾ ಸಮತಾ ನಿರ್ಮಲಾ ತವ ॥ ೯ ॥

---

೫. ಕೆಲವು ಕಾಲವು ಕಳೆದಮೇಲೆ ತತ್ಪದವನ್ನು ಹೊಂದುವೆಯಲ್ಲಾ! ಆಗಲೂ ಅಹಂಭಾವನಾರೂಪವಾದ (ಕೆಸರಿನಲ್ಲಿ) ಮತ್ತೆ ಮುಳುಗಬಾರದು.

೬. ರಾಮ, ಆತ್ಮಜ್ಞಾನವೆಂಬ ಬೆಟ್ಟದ ಶಿಖರದಲ್ಲಿ ಕುಳಿತಿರುವೆ. ಅಲ್ಲಿಂದ ಮತ್ತೆ, ಅಹಂಭಾವ ಎಂಬ ದೊಡ್ಡ ಹಳ್ಳದಲ್ಲಿ ನೀನು ಉರುಳಿಕೊಳ್ಳಬಾರದು.

೭. ಅನಂತನಾದ ಸದ್ದೃಷ್ಟಿಯು (ಬ್ರಹ್ಮವು) ಯಾವುದು ಎಂಬುದರ ಸ್ಮರಣೆಯಿದ್ದುಕೊಂಡು, ಜ್ಞತ್ವವೆಂಬ ಮೇರುವಿನ ಶಿಖರವನ್ನು ಏರಿದವನು ಗರ್ಭವಾಸ ಎಂಬ ಪಾತಾಲಕ್ಕೆ ಉರುಳುವುದೇಕೆ?

೮. ನಿನ್ನ ಸ್ವಭಾವವೇ ಸಮತಾ, ಸತ್ಯತಾ, ಇವುಗಳಿಂದ ತುಂಬಿ ಹೋಗಿರಲು, ನಿನ್ನ ವಿಕಲ್ಪಗಳೆಲ್ಲವೂ ತೊಳೆದುಹೋಯಿತು ಎಂದು ತಿಳಿಯುತ್ತೇನೆ.

೯. ಸೌಮ್ಯನಾದ ರಾಮ, ಪೂರ್ಣವಾಗಿರುವ ಸಾಗರದಂತೆ ತುಂಬಿರುವ ನಿನ್ನ ನಿರ್ಮಲವಾದ ಸಮತೆಯು ರಾಮನು ಸ್ವಭಾವದಲ್ಲಿ ಸಂಸ್ಥಿತನಾಗಿರುವನು ಎಂದು ಹೇಳುತ್ತಿದೆ.

ಆಶಾ ಯಾತು ನಿರಾಶತ್ವಮಭಾವಂ ಯಾತು ಭಾವನಮ್ ।
ಅಮನಸ್ತ್ವಂ ಮನೋ ಯಾತು ತವಾಸಂಗೇನ ಜೀವತಃ ॥ ೧೦ ॥

ಯಾಂ ಯಾಂ ವಸ್ತುದೃಶಂ ಯಾಸಿ ತಸ್ಯಾಂ ತಸ್ಯಾಮುವಸ್ಥಿತಮ್ ।
ಸತ್ತಾಸಾಮಾನ್ಯರೂಪೇಣ ಬ್ರಹ್ಮ ಬೃಂಹಿತ ಚಿದ್ಘನಮ್ ॥ ೧೧ ॥

ಅಜ್ಞಾತಾತ್ಮಾನಿಬದ್ಧೋಽಸಿ ವಿಜ್ಞಾತಾತ್ಮಾ ನ ಬಧ್ಯಸೇ ।
ರಾಮ ತ್ವಂ ಸ್ವಾತ್ಮನಾತ್ಮಾನಂ ಬೋಧಯಸ್ವ ಬಲಾದತಃ ॥ ೧೨ ॥

ಯತ್ರ ನ ಸ್ವದತೇ ವಸ್ತು ಸ್ವದತೇ ಚ ಯಥಾಗತಮ್ ।
ಅವಾಸನತ್ವಂ ತದ್ವಿದ್ಧಿ ಸಾಮ್ಯಮಾಕಾಶಕೋಮಲಮ್ ॥ ೧೩ ॥

---

೧೦. ಆಶೆಯು ನಿರಾಶೆಯಾಗಲಿ, ಭಾವವು ಅಭಾವವಾಗಲಿ, ಜೀವಂತನಾಗಿರುವಾಗಲೇ ಅಸಂಗನಾಗಿ ಬಾಳುತ್ತ ಮನಸ್ಸೂ ಅಮನಸ್ತ್ವವನ್ನು ಹೊಂದುವಂತೆ ಮಾಡಿಕೊ.

೧೧. ನೀನು ಯಾವ ಯಾವ ವಸ್ತುವನ್ನು ನೋಡುವೆಯೋ ಅದರದರಲ್ಲಿಯೇ ಸತ್ತಾಸಾಮಾನ್ಯರೂಪವಾಗಿ ಬ್ರಹ್ಮವೇ, ಬೃಂಹಿತಚಿದ್ಘನವಾಗಿ, (ಚಿದ್ಘನವೇ ಬೆಳೆದು ಆ ರೂಪವಾಗಿ) ಇರುವುದು.

೧೨. ಆತ್ಮನನ್ನು ಅರಿಯದವನಾಗಿ ಬದ್ಧನಾಗುವೆ: ಆತ್ಮವಿಜ್ಞಾನವನ್ನು ತಿಳಿದವನಾಗಿ ಬಂಧದಿಂದ ಮುಕ್ತನಾಗುವೆ. ಅದರಿಂದ, ಎಲೈ ರಾಮನೆ, ಬಲಾತ್ಕಾರದಿಂದ ನಿನ್ನನ್ನು ನೀನೇ ಬೋಧಿಸಿಕೊ.

೧೩. ಎಲ್ಲಿ ಭೋಗವಸ್ತುವು (ಅನುಭೂತವಾದರೂ) ಅನನುಭೂತವಾದಂತೆ ಇರುವುದೋ, ಯಾವಯಾವುದು ಹೇಗೆಹೇಗೆ ಬಂದರೆ ಹಾಗೆಹಾಗೆಯೇ ಅನುಭೂತವಾಗುವುದೋ, ಆ ಅವಸ್ಥೆಯು ಆಕಾಶದಂತೆ ನಿರ್ಮಲವಾಗಿರುವ ಸಾಮ್ಯಾವಸ್ಥೆಯು ಅದೇ ಅವಾಸನತ್ವವು ಎಂದು ತಿಳಿ.

ವಾಸನಾರಹಿತೈರನ್ತರಿನ್ದ್ರಿಯೈರಾಹರ ಕ್ರಿಯಾಃ ।
ನ ವಿಕ್ರಿಯಾಮವಾಪ್ನೋಷಿ ಖವತ್ಕ್ಷೋಭಶತೈರಪಿ ॥ ೧೪ ॥

ಜ್ಞಾತಾ ಜ್ಞಾನಂ ತಥಾ ಜ್ಞೇಯಂ ತ್ರಯಮೇಕತಯಾತ್ಮನಿ ।
ಶಾನ್ತಾತ್ಮಾನುಭವಾಭವ್ಯಂ ನ ಭೂಯೋ ಭಾವಭಾಗಸಿ ॥ ೧೫ ॥

ಚಿತ್ತೋನ್ಮೇಷನಿಮೇಷಾಭ್ಯಾಂ ಸಂಸಾರ ಪ್ರಲಯೋದಯೌ ।
ವಾಸನಾಪ್ರಾಣಸಂರೋಧಾದನಿಮೇಷಂ ಮನಃಕುರು ॥ ೧೬ ॥

ಪ್ರಾಣೋನ್ಮೇಷನಿಮೇಷಾಭ್ಯಾಂ ಸಂಸೃತೇಃ ಪ್ರಲಯೋದಯೌ ।
ತಮಭ್ಯಾಸಪ್ರಯೋಗಾಭ್ಯಾಮುನ್ಮೇಷರಹಿತಂ ಕುರು ॥ ೧೭ ॥

---

೧೪. ನೀನು ಬೇಕಾದ ಕೆಲಸವನ್ನುಮಾಡು. ಆದರೆ ಅಂತರಿಂದ್ರಿಯಗಳಲ್ಲಿ ಆ ಕ್ರಿಯೆಯ ವಾಸನೆಯು ನಿಲ್ಲದಂತೆ ನೋಡಿಕೊ. ವಾಸನಾರಹಿತವಾದ ಅಂತರಿಂದ್ರಿಯಗಳುಳ್ಳವನು ಯಾವಕಾರ್ಯವನ್ನೂ ಮಾಡಿದರೂ ಅದರಿಂದ ವಿಕಾರವನ್ನು ಹೊಂದುವುದಿಲ್ಲ. ಜಗತ್ತಿನಲ್ಲಿ ಎಷ್ಟೇ ಕ್ಷೋಭವಾದರೂ ಆಕಾಶವೇನಾದರೂ ಕ್ಷುಬ್ಧವಾಗುವುದೇನು ?

೧೫. ಜ್ಞಾತೃ, ಜ್ಞಾನ, ಜ್ಞೇಯ, ಎಂಬ ಮೂರೂ ಒಂದಾಗುವಂತೆಮಾಡಿ, ಎಲೈ ಶಾಂತಾತ್ಮನೆ, ಆ ಮೂರನ್ನೂ ನಿನ್ನಲ್ಲಿಯೇ ಅನುಭವ ಮಾಡು. ಹಾಗೆ ಮಾಡಿದರೆ ದುಃಖರೂಪವಾದ ಭಾವದಲ್ಲಿ ಮತ್ತೆ ನೀನು ಭಾಗಿಯಾಗುವುದಿಲ್ಲ.

೧೬. ಚಿತ್ತವು ಉನ್ಮೇಷ ನಿಮೇಷಮಾಡುವುದರಿಂದ ಸಂಸಾರವು ಹುಟ್ಟುವುದು ಸಾಯುವುದು. ವಾಸನಾ, ಪ್ರಾಣ, ಇವುಗಳನ್ನು ಸಂರೋಧಮಾಡಿ, ಮನಸ್ಸು (ಚಿತ್ತವು) ಉನ್ಮೇಷರಹಿತವಾಗುವಂತೆ ಮಾಡಿಕೋ.

೧೭. ಪ್ರಾಣದ ಉನ್ಮೇಷನಿಮೇಷಗಳಿಂದ ಸಂಸಾರದ ಉದಯ ಪ್ರಲಯಗಳಾಗುವುವು. ಅಭ್ಯಾಸದಿಂದಲೂ ಪ್ರಯೋಗದಿಂದಲೂ ಆ ಪ್ರಾಣವು ಉನ್ಮೇಷರಹಿತವಾಗುವಂತೆ ಮಾಡು.

ಮೌರ್ಖ್ಯೋನ್ಮೇಷ ನಿಮೇಷಾಭ್ಯಾಂ ಕರ್ಮಣಾಂ ಪ್ರಲಯೋದಯೌ ।
ತದ್ವಿಲೀನಂ ಕುರು ಬಲಾದ್ಗುರು ಶಾಸ್ತ್ರಾರ್ಥ ಸಂಯಮೈಃ ॥ ೧೮ ॥

ಯಥಾ ವಾತರಜಃ ಸಂಗಸ್ಪಂದಾತ್ಖಂ ಭಾವವೇದನಮ್ ।
ತಥಾ ಚಿತಶ್ಚೇತ್ಯತಯಾ ಸ್ಪಂದಾದಿದಮುಪಸ್ಥಿತಮ್ ॥ ೧೯ ॥

ದೃಶ್ಯದರ್ಶನಸಂಬಂಧ ಸ್ಪಂದೇನೇಯಂ ಜಗದ್ಗತಿಃ ।
ಸ್ಫುರತ್ಯಾಲೋಕ ಕುಡ್ಯಾದಿಸಂಗಜಾ ವರ್ಣಧೀರಿವ ॥ ೨೦ ॥

ದೃಶ್ಯ ದರ್ಶನಸಂಬಂಧ ಸ್ಪಂದಾಭಾವೇ ನ ಜಾಯತೇ ।
ವೇದನಾ ಭವದಾಭಾಸಾ ಚಿತ್ರಪುಂಸಾಮಿವಾಶಯೇ ॥ ೨೧ ॥

---

೧೮. ಮೌಖ್ಯರ್ದ ಉನ್ಮೇಷ ನಿಮೇಷಗಳಿಂದ ಕರ್ಮಗಳೆಲ್ಲವೂ ಹುಟ್ಟು ವುವು: ಸಾಯುವುವು. ಗುರು, ಶಾಸ್ತ್ರಾರ್ಥ, ಸಂಯಮಗಳನ್ನು ಪ್ರಯತ್ನಮಾಡಿ ಹಿಡಿದು, ಆ ಮೌಖ್ಯರ್ವು ನಾಶವಾಗುವಂತೆ ಮಾಡಿಕೊ.

೧೯. ಗಾಳಿಯು ಬೀಸಿ ಧೂಳು ಎದ್ದು ಆ ಧೂಳಿಯು ಚಲಿಸುವಾಗ ಆಕಾಶವೂ ಚಲಿಸುವಂತೆ ತೋರುವುದು. ಹಾಗೆಯೇ ಚಿತ್ತೂ ಚೇತ್ಯವಾಗಿ ವ್ಯಾಪಾರಮಾಡಿದಾಗ, 'ಇದಂ' ಎಂಬ ದೃಶ್ಯಮಂಡಲವು ಹುಟ್ಟುವುದು.

೨೦. ದೃಶ್ಯ, ದರ್ಶನ, ಸಂಬಂಧವಾದ ವ್ಯಾಪಾರಗಳಿಂದ ಈ ಜಗತ್ತು ನಡೆಯುತ್ತಿರುವುದು. ಕಣ್ಣೂ, ಚಿತ್ರವಿರುವ ಗೋಡೆಯೂ ಸೇರಿದಾಗ ವರ್ಣ ಭಾವನೆಯು ಮನಸ್ಸಿಗೆ ಬರುವುದು. ಅದರಂತೆಯೇ ಇದು.

೨೧. ಚಿತ್ರಗತರಾದ ಮನುಷ್ಯರ ಎದುರಿಗೇ ಬೇಕಾದ ವಸ್ತುಗಳಿದ್ದರೂ, ದೃಶ್ಯ ದರ್ಶನ ಸಂಬಂಧಿಯಾದ ವ್ಯಾಪಾರವು ಇಲ್ಲದ್ದರಿಂದ, ಅವರ ಮನಸ್ಸಿನಲ್ಲಿ ಜಗತ್ತಿರುವುದು ಎಂಬ ಆವೇದನವು ಹೇಗೆ ತೋರುವುದಿಲ್ಲವೋ ಹಾಗೆಯೇ ದೃಶ್ಯ ದರ್ಶನ ಸಂಬಂಧಿ ವ್ಯಾಪಾರವು ನಡೆಯದಿದ್ದರೆ, ಭವತ್ (ಜಗತ್) ಆಭಾಸ (ಇದೆಯೆಂದು ತೋರುವ) ಜ್ಞಾನವೇ ಹುಟ್ಟುವುದಿಲ್ಲ.

ಚಿತ್ತಸ್ಪಂದೋತ್ಥಿತಾ ಮಾಯಾ ತದಭಾವೇ ವಿಲೀಯತೇ ।
ಪಯಃಸ್ಪಂದೋತ್ಥಿತಾ ವೀಚಿಸ್ತದಭಾವೇ ವಿನಶ್ಯತಿ ॥ ೨೨ ॥

ತ್ಯಾಗೇನ ವಾಸನಾಂಶಸ್ಯ ಬೋಧಾದ್ವಾ ಪ್ರಾಣರೋಧನಾತ್ ।
ಚಿತ್ತೇ ನಿಸ್ಪನ್ದತಾಂ ಯಾತೇ ಕುತಃ ಸ್ಪಂದಸ್ಯ ಸಂಭವಃ ॥ ೨೩ ॥

ಅಸಂವಿತ್ಸ್ಪಂದ ಮಾತ್ರೇಣ ಯಾತಿ ಚಿತ್ತಮಚಿತ್ತತಾಮ್ ।
ಪ್ರಾಣಾನಾಂ ವಾ ನಿರೋಧೇನ ತದೇವ ಚ ಪರಂ ಪದಮ್ ॥ ೨೪ ॥

ದೃಶ್ಯದರ್ಶನಸಂಬಂಧೇ ಯತ್ಸುಖಂ ಪಾರಮಾರ್ಥಿಕಮ್ ।
ತದನ್ತೈಕಾನ್ತಸಂವಿತ್ತ್ಯಾ ಬ್ರಹ್ಮದೃಷ್ಟ್ಯಾ ಮನಕ್ಷಯಃ ॥ ೨೫ ॥

---

೨೨. ಮಾಯೆಯು ಚಿತ್ತದ ವ್ಯಾಪಾರದಿಂದ ಹುಟ್ಟಿದುದು. ಆ ವ್ಯಾಪಾರವಿಲ್ಲದಿದ್ದರೆ ಅದು ವಿಲೀನವಾಗುವುದು. ನೀರಿನ ವ್ಯಾಪಾರದಿಂದ ಹುಟ್ಟುವ ತರಂಗವು ಆ ವ್ಯಾಪಾರವಿಲ್ಲದಿದ್ದರೆ ಇಲ್ಲವಾಗುವುದು.

೨೩. ವಾಸನಾಂಶವನ್ನು ತ್ಯಾಗ ಮಾಡಿದರೂ ಸರಿ, ಆತ್ಮಜ್ಞಾನವನ್ನು ಪಡೆದರೂ ಸರಿ, ಪ್ರಾಣವನ್ನು ಸಂರೋಧ ಮಾಡಿದರೂ ಸರಿ. ಯಾವುದಾದರೊಂದರಿಂದಲೋ, ಅಥವಾ ಎಲ್ಲದರಿಂದ ಆದರೂ ಸರಿ. ಚಿತ್ತವು ನಿರ್ವ್ಯಾಪಾರವಾಗಲು ಬಹಿಃಸ್ಪಂದವಾದ ಜಗದ್ಗತಿಯು ಎಂತು ಸಂಭವಿಸುವುದು ?

(ಸ್ಪಂದಸ್ಯ ಕೌಟಸ್ಥ್ಯಚ್ಯುತಿರೂಪಸ್ಯ–ತಾ. ಪ್ರ.)

೨೪. ಸಂವಿತ್ತಿನ ವ್ಯಾಪಾರವು ನಿಂತಕೂಡಲೇ ಚಿತ್ತವು ಅಚಿತ್ತವಾಗುವುದು. ಪ್ರಾಣಗಳನ್ನು ನಿರೋಧ ಮಾಡಿದರೂ ಚಿತ್ತವು ಅಚಿತ್ತವಾಗುವುದು. ಹಾಗೆ ಚಿತ್ತವು ಅಚಿತ್ತವಾಗುವುದೇ ಪರಮಪದವು.

೨೫. ದೃಶ್ಯದರ್ಶನ ಸಂಬಂಧದಿಂದ ಯಾವ ಸುಖವು ಉಂಟಾಗುವುದೋ ಆ ಸುಖವು ನಿಜವಾಗಿಯೂ ಪಾರಮಾರ್ಥಿಕ ಸುಖದ ಒಂದು ಅಂಶವು. ಆ ಸುಖದ ಕೊನೆಯಲ್ಲಿ ಕಾಣುವ ಏಕಾಂತ ಸಂವಿತ್ತನ್ನು ಕಂಡು, ಅದೇ ಬ್ರಹ್ಮವೆಂದು ಅರಿತವನು ಮನಃಕ್ಷಯವನ್ನು ಹೊಂದುವನು.

ಯತ್ರ ನಾಭ್ಯುದಿತಂ ಚಿತ್ತಂ ತತ್ತ ತತ್ಸುಖಮಕೃತ್ರಿಮಮ್ ।
ನ ಸ್ವರ್ಗಾದೌ ಸಂಭವತಿ ಮರೌ ಹಿಮಗೃಹಂ ಯಥಾ । ॥ ೨೬ ॥

ಚಿತ್ತೋಪಶಮಜಂ ಸ್ಫಾರಮವಾಚ್ಯಂ ವಚಸಾಸುಖಮ್ ।
ಕ್ಷಯಾತಿಶಯನಿರ್ಮುಕ್ತಂ ನೋದೇತಿ ನ ಚ ಶಾಮ್ಯತಿ ॥ ೨೭ ॥

ಬೋಧಾದ್ಭವತಿ ಚಿತ್ತಾನ್ತೋ ದುರ್ಬೋಧಾಚ್ಚಿತ್ತವೇದಿತಾ ।
ಬಾಲವೇತಾಲವತ್ತೇನ ಮೋಹಶ್ರೀರ್ಘನತಾಂ ಗತಾ ॥ ೨೮ ॥

(ಬೋಧಾದ್ವಾ ಇತಿ ಮಧ್ಯಮೋಪಾಯ ಮುಕ್ತಂ ವಿವೃಣೋತಿ ದೃಶ್ಯೇತಿ । ವಿಷಯೇಂದ್ರಿಯ ಸಂಬಂಧೇ ಯತ್ಸುಖಂ ಪ್ರಸಿದ್ಧಂ ತತ್ಪರಮಾರ್ಥತೋ ಬ್ರಹ್ಮ ಸುಖಮೇವ । "ಏತಸ್ಯೈವಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾ ಮುಪ ಜೀವಂತಿ'' ಇತಿ ಶ್ರುತೇಃ । ಅತಃ ತಸ್ಯಾಂತಃ ಪರಮಾವಧಿಃ ಮಾನುಷಾನಂದ ಮಾರಭ್ಯ ಉತ್ತರೋತ್ತರಂ ಶತಗುಣೋತ್ಕರ್ಷೇಣ ಶ್ರುತ್ಯಾ ದರ್ಶಿತಃ "ಯತೋ ವಾಚೋ ನಿವರ್ತಂತೇ ಅಪ್ರಾಪ್ಯಮನಸಾಸಹ । ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ'' ಇತಿ । ತದೇಕಾಂತಂ ತನ್ಮಾತ್ರ ಪೂರ್ಣತಾ ತತ್ಸಂವಿತ್ತಿರೂಪಮಾಬ್ರಹ್ಮ ದೃಷ್ಟ್ವಾ ಮನಃ ಕ್ಷಯಂಃ ಸಿದ್ಧ್ಯತೀತ್ಯರ್ಥಃ— ತಾ. ಪ್ರ.)

೨೬. ಎಲ್ಲಿ ಚಿತ್ತವು ಅಭ್ಯುದಿತವಾಗಿರುವುದಿಲ್ಲವೋ ಎಂದರೆ ವ್ಯಾಪಾರ ಮಾಡುವುದಿಲ್ಲವೋ ಅದೇ ತತ್ಸುಖವು. ಅದೇ ಅಕೃತ್ರಿಮವಾದ ಬ್ರಹ್ಮಾನಂದವು. ಅದು ಸ್ವರ್ಗ ಮೊದಲಾದುವುಗಳಲ್ಲಿ ಸಂಭವವೇ ಇಲ್ಲ. ಮರುಭೂಮಿಯಲ್ಲಿ ಹಿಮ ಗೃಹವು ಇರುವುದೇನು ?

೨೭. ಚಿತ್ತವು ಉಪಶಮವಾದರೆ ಲಭಿಸುವ ಸುಖವು ಮಾತಿನಿಂದ ಹೇಳುವು ದಕ್ಕೆ ಆಗುವುದಿಲ್ಲ. ಅದು ಅತಿವಿಶದವಾದುದು. ಅದಕ್ಕೆ ಕ್ಷಯವಿಲ್ಲ: ಅದಕ್ಕಿಂತ ಅತಿಶಯವಾದುದು ಇನ್ನಿಲ್ಲ. ಅದು ಎಂದೂ ಉದಯವಾಗುವುದಿಲ್ಲ. (ಸರ್ವದಾ ಉದಯವಾಗಿಯೇ ಇರುವುದು) ಎಂದಿಗೂ ನಾಶವಾಗುವುದಿಲ್ಲ.

೨೮. ಸದ್ಬೋಧದಿಂದ ಚಿತ್ತವು ಕೊನೆಗಾಣುವುದು. ದುರ್ಬೋಧದಿಂದ ಚಿತ್ತವು ತಾನೇ ತಾನಾಗುವುದು. ಆಗ, ಬಾಲಕನಿಗೆ ಹಿಡಿದ ಬೇತಾಳದ ಭ್ರಾಂತಿ ಯಂತೆ, ಮೋಹವು ಘನವಾಗಿ ತಾನೇ ತಾನಾಗುವುದು.

ವಿದ್ಯಮಾನಮಪಿ ಹ್ಯೇತಚ್ಚಿತ್ತಂ ಬೋಧಾದ್ವಿಲೀಯತೇ ।
ಸದಪ್ಯಸದಿವಾಭಾತಿ ತಾಮ್ರಂ ಹೇಮೀಕೃತಂ ಯಥಾ || ೨೯ ||

ಜ್ಞಸ್ಯ ಚಿತ್ತಂ ನ ಚಿತ್ತಾಖ್ಯಂ ಜ್ಞಚಿತ್ತಂ ಸತ್ತ್ವಮುಚ್ಯತೇ ।
ನಾಮಾರ್ಥಾನ್ಯತ್ವಭಾಕ್ಚಿತ್ತಂ ಬೋಧಾತ್ತಾಮ್ರಂ ಸುವರ್ಣವತ್ || ೩೦ ||

ನ ಸಂಭವತಿ ಚಿತ್ತತ್ವಂ ತೇನ ತತ್ಪ್ರವಿಲೀಯತೇ ।
ಭ್ರಮಃ ಶಾಮ್ಯತಿ ಬೋಧೇನ ನಾಭಾವೋ ವಿದ್ಯತೇ ಸತಃ || ೩೧ ||

ಅವಸ್ತ್ವೇವ ವಿಕಲ್ಪಾತ್ಮ ಚಿತ್ತಾದಿ ಶಶಶೃಂಗವತ್ ।
ಸರ್ವಂ ತದಾತ್ಮನಸ್ತಸ್ಮಾತ್ತದ್ಧಿ ಬೋಧಾದ್ವಿಲೀಯತೇ || ೩೨ ||

---

೨೯. ಚಿತ್ತವು ಸ್ವತಂತ್ರವಾಗಿ ಇದ್ದೇ ಇದೆಯೆಂದರೂ ಅದು ಬೋಧ ಬಲದಿಂದ ವಿಲೀನವಾಗುವುದು. ತಾಮ್ರವು ಚಿನ್ನವಾದರೆ, ಇದ್ದದ್ದು ಇಲ್ಲವಾಗುವಂತೆ, ಬೋಧವು ಉದಯವಾದಾಗ ಚಿತ್ತವಿದ್ದರೂ ಇಲ್ಲವಾಗುವುದು.

೩೦. ಜ್ಞಾನಿಯ ಚಿತ್ತವು ಚಿತ್ತವೆನಿಸಿಕೊಳ್ಳುವುದಿಲ್ಲ: ಜ್ಞಾನಿಯ ಚಿತ್ತವು ಸತ್ತ್ವ ಎನ್ನಿಸಿಕೊಳ್ಳುವುದು. ಆ ಜ್ಞಾನಿಚಿತ್ತವು ಸ್ವರ್ಣವಾದ ತಾಮ್ರದಂತೆ ನಾಮದಲ್ಲೂ ಅರ್ಥದಲ್ಲೂ ಬೇರೆಯೇ ಆಗುವುದು.

೩೧. ಆ ಜ್ಞಾನಿಯ ಭ್ರಾಂತಿಯು ಬೋಧದಿಂದ ಶಾಂತವಾಗುವುದು. ಭ್ರಾಂತಿಯು ನಾಶವಾಗಲು ಚಿತ್ತತ್ತ್ವವು ಇರುವುದೇ ಇಲ್ಲ: (ಒಂದು ವೇಳೆ ಚಿತ್ತವು ಪ್ರತ್ಯೇಕವಾಗಿ ಇದ್ದಿದ್ದರೆ) ಸತ್ಪದಾರ್ಥವು ನಾಶವಾಗುವುದಿಲ್ಲ ಎಂಬ ನ್ಯಾಯದಿಂದ, ಅದಕ್ಕೆ ಹಾನಿಯೇ ಬರುತ್ತಿರಲಿಲ್ಲ. (ಅದರಿಂದ ಚಿತ್ತವೆಂಬುದೊಂದು ಪ್ರತ್ಯೇಕವಾಗಿಲ್ಲ.)

೩೨. ಸ್ವತಂತ್ರವಾಗಿ ಇಲ್ಲದೆ ವಿಕಲ್ಪದಿಂದ ಇದ್ದಂತೆ ತೋರುವ ಮೊಲದ ಕೊಂಬಿನಂತೆ, ಈ ಚಿತ್ತವು ಅಸತ್ತಾಗಿದ್ದರೂ ಸತ್ತೆಂಬ ಭ್ರಾಂತಿಯನ್ನು ಹುಟ್ಟಿಸುವುದು. ಆತ್ಮವಲ್ಲದೆ ಇನ್ನೇನೂ ಇಲ್ಲವಾಗಿ, ಇರುವುದೆಲ್ಲ (ಆತ್ಮನೇ !) ಆತ್ಮನಿಂದಲೇ ಬರಬೇಕು. ಅದರಿಂದ ಆತ್ಮ ಜ್ಞಾನವಾಗುತ್ತಲೂ ಮಿಕ್ಕ ಭ್ರಾಂತಿಗಳೆಲ್ಲ ಅಳಿಯುವುವು.

ಚಿತ್ತಂ ಸತ್ತ್ವಂ ಸಮಾಯಾತಂ ಕಿಂಚಿತ್ಕಾಲಂ ಜಗತ್ಸ್ಥಿತೌ ।
ವಿಹೃತ್ಯ ತುರ್ಯಾವಸ್ಥಾಯಾಂ ತುರ್ಯಾತೀತಂ ಭವತ್ಯತಃ ॥ ೩೩ ॥

ಬ್ರಹ್ಮೈವ ಭೂರಿಭುವನಭ್ರಮ ವಿಭ್ರಮಾಢ್ಯೈ ।
ರಿತ್ಥಂ ಸ್ಥಿತಂ ಸಮಮನೇಕತಯೈಕಮೇವ ॥
ಸರ್ವಾತ್ಮ ಸಂಭವತಿ ನೇತರದಂಗ ಕಿಂಚಿ ।
ಚ್ಚಿತ್ತಾದಿಕಂ ಚ ನ ಹೃದೀವ ಹಿ ಸಂನಿವೇಶಃ ॥ ೩೪ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಚಿತ್ತಸತ್ತಾಸೂಚನಂ" ನಾಮ ಚತುಶ್ಚತ್ವಾರಿಂಶಃ ಸರ್ಗಃ

---

೩೩. ಚಿತ್ತವು (ಜ್ಞಾನಿಯ ಚಿತ್ತವಾದ) ಸತ್ತ್ವವಾದಮೇಲೆ, ಕೆಲವು ಕಾಲ ಜಗತ್ತಿನಲ್ಲಿ ವಿಹರಿಸುತ್ತ ತುರ್ಯಾವಸ್ಥೆಯಲ್ಲಿದ್ದು ಅನಂತರ ತುರ್ಯಾತೀತವಾಗುವುದು.

(ತರ್ಹಿಕಿಂ ಜೀವನ್ಮುಕ್ತ ಚಿತ್ತಸ್ಯ ವ್ಯವಹಾರಕ್ಷಮಾವಸ್ಥಾ ವಾಸ್ತವ್ಯೇವ, ನ ಇತ್ಯಾಹ-ಚಿತ್ತಮಿತಿ । ವಿಹಾರ ಸಮಾಧಿ ಸಾಕ್ಷಾತ್ಕಾರ ಪರ್ಯಂತಾ ತದವಸ್ಥಾ ನ ವಾಸ್ತವೀ, ಕಿಂತು ಪ್ರಾರಬ್ಧ ಪ್ರತಿಬದ್ಧ ಅವಿದ್ಯಾಲೇಶಕೃತಬಾಧಿತಾನುವೃತ್ತಿಃ ವಿದೇಹ ಕೈವಲ್ಯಾವಿರ್ಭೂತ ತುರ್ಯಾತೀತಾವಸ್ಥೈವ ತಸ್ಯ ವಾಸ್ತವೀ ಇತಿ ಭಾವಃ– ತಾ. ಪ್ರ.)

೩೪. ಬ್ರಹ್ಮವು ತಾನೊಂದೇ ಆಗಿದ್ದರೂ ಅನಂತಗಳಾದ ಬ್ರಹ್ಮಾಂಡಗಳ ರೂಪವಾಗಿ ತೋರುತ್ತ, ಭ್ರಾಂತಿ ವಿಭ್ರಾಂತಿಗಳನ್ನು ಕಲ್ಪಿಸುತ್ತ, ನಾನಾ ರೂಪವಾಗಿ ಇರುವುದು. ಬ್ರಹ್ಮವು ಸರ್ವಾತ್ಮವಾದುದರಿಂದ, ಅದಲ್ಲದೆ ಇನ್ನೊಂದೂ ಇರುವ ಸಂಭವವೇ ಇಲ್ಲ. ಅದರಿಂದ ಚಿತ್ತ ಮೊದಲಾದವು ಇಲ್ಲ. ಇರುವಂತೆ ಕಾಣುವವಲ್ಲ ಎಂದರೆ, ಹೃದಯದಲ್ಲಿ ಭಾವನಾ ಮಾತ್ರದಿಂದ ಕಾಣುವ (ಕಥಾ) ಸಂನಿವೇಶಗಳಂತೆ ಅವೂ (ಮಾಯೆಯೇ !)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಚಿತ್ತಸತ್ತಾಸೂಚನ" ಎಂಬ
ನಲವತ್ತನಾಲ್ಕನೆಯ ಸರ್ಗವು

ಪಂಚಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಬ್ರಹ್ಮಜ್ಞಾನಾವಬೋಧಾಯ ವಿಸ್ಮಯೋಲ್ಲಾಸ ಕಾರಿಣೀಂ ।
ಅಪೂರ್ವಾಂ ಚೈವ ಸಂಕ್ಷೇಪಾದ್ರಾಮ ರಮ್ಯಾಂ ಕಥಾಂ ಶೃಣು ॥ ೧ ॥

ಯೋಜನಾನಾಂ ಸಹಸ್ರಾಣಿ ವಿಪುಲಂ ವಿಮಲಂ ಸ್ಫುಟಂ ।
ಯುಗೈರಪ್ಯಜರದ್ರೂಪಮಸ್ತಿ ಬಿಲ್ವಫಲಂ ಮಹತ್ ॥ ೨ ॥

ಅವಿನಾಶರಸಾಗಾರಂ ಸುಧಾಮಧುರಸಾರವತ್ ।
ಪುರಾಣಮಪಿ ಬಾಲೇಂದುದಲಮಾರ್ದವ ಸುಂದರಂ ॥ ೩ ॥

ನಲವತ್ತೈದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ರಾಮ, ಬ್ರಹ್ಮಜ್ಞಾನದ ಲಾಭವಾಗಲೆಂದು, ಅಪೂರ್ವವೂ ವಿಸ್ಮಯವನ್ನೂ ಉಲ್ಲಾಸವನ್ನೂ ಉಂಟುಮಾಡುವುದೂ ಆದ ರಮ್ಯವಾದ ಕಥೆಯನ್ನು ಸಂಕ್ಷೇಪವಾಗಿ ಹೇಳುವೆನು ಕೇಳು.

೨. ಒಂದು ದೊಡ್ಡ ಬಿಲ್ವಫಲವಿರುವುದು. ಅದು ಯೋಜನ ಯೋಜನಗಳ ಗಾತ್ರವಿರುವುದು. ನಿರ್ಮಲವಾಗಿರುವುದು. ಸ್ಫುಟವಾಗಿ ಕಣ್ಣಿಗೆ ಕಾಣಿಸುವುದು. ಯುಗ ಯುಗಗಳಾಗಿದ್ದರೂ ಅದು ಇನ್ನೂ ಜೀರ್ಣವಾಗದೆ ಇದ್ದಂತೆಯೇ ಇರುವುದು.

೩. ಅದರಲ್ಲಿರುವ ರಸವು ಎಂದಿಗೂ ಬತ್ತಿಹೋಗುವುದಿಲ್ಲ. ಅದರ ರುಚಿಯು ಅಮೃತಕ್ಕಿಂತ ಮಧುರವಾದುದು. ಅದು ಬಹು ಪುರಾತನವಾದುದಾದರೂ ಹೊಸ ಚಂದ್ರನ ಕಿರಣಗಳಂತೆ ಮೃದುವೂ ಸುಂದರವೂ ಆದುದು.

ವ್ಯೂಹಮಧ್ಯಮಹಾಮೇರುಂ ಮಂದರಾದ್ರಿರಿವಾಚಲಮ್ ।
ಮಹಾಕಲ್ಪಾಂತವಾತ್ಯಾಯಾ ಅಪಿ ವೇಗೈರಚಾಲಿತಮ್ ॥ ೪ ॥

ಯೋಜನಾಯುತಕೋಟೀನಾಂ ಕೋಟಿಲಕ್ಷ ಶತೈರಪಿ ।
ವೈಪುಲ್ಯೇನಾಪರಿಚ್ಛೇದ್ಯಂ ಮೂಲಮಾದ್ಯಂ ಜಗತ್ಸ್ಥಿತೇಃ ॥ ೫ ॥

ಯಸ್ಯ ಬಿಲ್ವಫಲಸ್ಯೋಚ್ಚೈರ್ಬ್ರಹ್ಮಾಂಡಾನಿ ಸಮೀಪತಃ ।
ಹರಂತಿ ಲೀಲಾಂ ಶೈಲಾಧೋರಾಜಿಕಾ ಕಣಪದ್ಧತೇಃ ॥ ೬ ॥

ಸ್ಯಂದಮಾನರಸಾಪೂರಾಂ ಸ್ವಾದ್ವೀಂ ರಸಚಮತ್ಕೃತಿಮ್ ।
ಯಸ್ಯಾತಿಶೇತೇ ನೋ ಕಶ್ಚಿದಪಿ ರಾಘವ ಷಡ್ರಸಃ ॥ ೭ ॥

---

೪. ಮಹಾ ಮೇರುವು ಹೇಗೆ ಬ್ರಹ್ಮಾಂಡ ವ್ಯೂಹ ಮಧ್ಯದಲ್ಲಿ ಇರುವುದೋ, ಹಾಗೆಯೇ ಇದೂ ಎಲ್ಲದಕ್ಕೂ ಮಧ್ಯದಲ್ಲಿ ಇರುವುದು. ಮಂದರ ಪರ್ವತದಂತೆ ಅಚಲವಾಗಿರುವುನು. ಮಹಾಪ್ರಲಯದಲ್ಲಿ ಬೀಸುವ ಮಹಾ ವಾಯುಗಳೂ ಕೂಡ ಅದನ್ನು ಅಲ್ಲಾಡಿಸಲಾರವು.

೫. ಅದು ಕೋಟಿ ಕೋಟಿ ಯೋಜನಗಳಷ್ಟು ದೊಡ್ಡದಾಗಿ ಜಗತ್ತಿನ ಸ್ಥಿತಿಗೆ ಮೂಲ ಕಾರಣವಾಗಿರುವುದು.

೬. ಆ ಬಿಲ್ವಫಲದ ಮಗ್ಗುಲಲ್ಲಿ ದೊಡ್ಡ ದೊಡ್ಡ ಬ್ರಹ್ಮಾಂಡಗಳನ್ನಿಟ್ಟರೆ, ಅವು ಪರ್ವತದ ಮಗ್ಗುಲಲ್ಲಿರುವ ಸಾಸುವೆಯ ಚೂರುಗಳೋ ಎನ್ನುವಂತಾಗುವುವು.

೭. ಎಲೈ ರಾಘವನೆ, ಅದು ಅಪೂರ್ವವಾದ ರಸವನ್ನು ಯಾವಾಗಲೂ ಸ್ರವಿಸುತ್ತಿರುವುದು. ಅದರ ರುಚಿಯನ್ನು ಮಿಕ್ಕ ಷಡ್ರಸಗಳೂ ಮೀರಲಾರವು.

(ಷಡ್ರಸಃ ಷಡಿಂದ್ರಿಯಭೋಗ್ಯ ಬ್ರಹ್ಮಲೋಕಾಂತ ಸುಖಲವಃ ಪ್ರಸಿದ್ಧೋ ವಾ–ತಾ. ಪ್ರ)

ನಕದಾ ಚನಪಾಕೇನ ಪಾತಂ ತೇನ ಸಮೇತಿ ಯತ್ ।
ಸದೈವಪಕ್ವಮಪ್ಯಂಗ ಜರಸಾ ಯನ್ನ ಬಾಧ್ಯತೇ ॥ ೮ ॥

ಬ್ರಹ್ಮವಿಷ್ಣ್ವಿಂದ್ರರುದ್ರಾದ್ಯಾ ಜರಠಾಃ ಕೇಚಿದೇವ ನ ।
ಯಸ್ಯೋತ್ಪತ್ತಿಂ ವಿಜಾನಂತಿ ಮೂಲಂ ವಾ ವೃಂತಮೇವ ಚ ॥ ೯ ॥

ಅದೃಷ್ಟಾಂಕುರ ವೃಕ್ಷಸ್ಯ ತ್ವದೃಷ್ಟ ಕುಸುಮಾಕೃತೇಃ ॥
ಅಸ್ತಂಭಮೂಲಶಾಖಸ್ಯ ಫಲಸ್ಯಾಸ್ಯಮಹಾಕೃತೇಃ । ॥ ೧೦ ॥

ಏಕಪಿಂಡ ಘನಾಕಾರ ವಿತತಸ್ಥೌಲ್ಯಶಾಲಿನಃ ।
ಯಸ್ಯೋತ್ಪತ್ತಿ ವಿಕಾರಾದಿ ಪರಿಣಾಮೋ ನ ದೃಶ್ಯತೇ ॥ ೧೧ ॥

ಸಮಸ್ತಫಲಸಾರಸ್ಯ ಫಲಸ್ಯಾಸ್ಯ ಮಹಾಕೃತೇಃ ।
ನಮಜ್ಜಾ ನಾಸ್ತಿವಿತತೋ ನಿರ್ವಿಕಾರೋ ನಿರಂಜನಃ ॥ ೧೨ ॥

---

೮. ಆ ಬಿಲ್ವಫಲವು ಹಣ್ಣಾಯಿತು. ಬಿದ್ದುಹೋಗುವುದು ಎನ್ನುವ ಹಾಗೆ ಇಲ್ಲ: ಅದು ಹುಟ್ಟುತ್ತಿದ್ದ ಹಾಗೆಯೇ ಹಣ್ಣಾಗಿದ್ದರೂ, ಅದಕ್ಕೆ ಮುಪ್ಪಿನ ಬಾಧೆಯಿಲ್ಲ.

೯. ಬ್ರಹ್ಮ, ವಿಷ್ಣು, ಇಂದ್ರ, ರುದ್ರ ಮೊದಲಾದ ಕೆಲವರು ಪುರಾತನರೂ ಕೂಡ, ಇದು ಯಾವಾಗ ಹುಟ್ಟಿತು ? ಇದರ ಮೂಲವು ಯಾವುದು ? ಇದರ ತೊಟ್ಟು ಯಾವುದು ? ಎಂಬುದನ್ನು ಯಾರೂ ಕಾಣರು:

೧೦. ಮಹಾಕೃತಿಯ ಈ ಫಲವನ್ನು ಬಿಡುವ ವೃಕ್ಷದ ಅಂಕುರವೆಲ್ಲಿತ್ತೋ ? ಅದು ಯಾವಾಗ ಕುಸುಮವನ್ನು ಬಿಟ್ಟಿತೋ ? ಅದರ ಬುಡ, ಕೊಂಬೆ ಇವು ಯಾವುವೋ (ಯಾರೂ ಕಾಣರು.)

೧೧. ಬಹಳ ದೊಡ್ಡದಾಗಿ ಏಕಪಿಂಡವಾಗಿ ಹರಡಿಕೊಂಡಿರುವುದರಿಂದ ಬಹು ಸ್ಥೂಲವಾಗಿ ಕಾಣುವ ಆ ಫಲದ ಉತ್ಪತ್ತಿಯನ್ನಾಗಲಿ, ಬೆಳೆಯುವುದು ಮೊದಲಾದ ವಿಕಾರಗಳನ್ನಾಗಲಿ, ಪರಿಣಾಮವನ್ನಾಗಲೀ ಯಾರೂ ಕಾಣರು.

೧೨. ಸಮಸ್ತ ಫಲಗಳ ಸಾರವನ್ನು ಹೊಂದಿರುವ ಈ ಫಲವು ಮಹಾ ಕೃತಿಯುಳ್ಳುದು. ಇದರಲ್ಲಿ ಮಜ್ಜಾ ಇಲ್ಲ: ಬೀಜವಿಲ್ಲ: ಅದು ಅಷ್ಟು ದೊಡ್ಡ ದಾಗಿದ್ದರೂ ಇದು ನಿರ್ವಿಕಾರವು: ನಿರಂಜನವು.

ಶಿಲಾನ್ತರಿವ ನೀರಂಧ್ರಃ ಸ್ಯಂದಮಾನೇಂದು ಬಿಮ್ಬವತ್ ।
ರಸಂ ಸ್ವಸಂವಿದಾಸ್ವಾದ್ಯಂ ಸ್ಯಂದಮಾನ ಇವಾಮೃತಮ್ ॥ ೧೩ ॥

ಕೋಶಃ ಸಕಲಸೌಖ್ಯಾನಾಂ ಶೀತಲಾಲೋಕಕಾರಕಃ ।
ಶೈಲಾಭೋಽಮೃತಪಿಂಡಾಭೋ ಮಜ್ಜಾ ಚಾತ್ಮಫಲಸ್ಥಿತೇಃ ॥ ೧೪ ॥

ತಸ್ಮಾತ್ಪರಮಮಜ್ಜಾ ತು ಯಾಸೌ ಸ್ವಾತ್ಮಚಮತ್ಕೃತಿಃ ।
ಅನನ್ತರಕ್ಷಿತೋ ನಿತ್ಯಮನನ್ಯಃ ಶ್ರೀಫಲಂ ಗತಃ ॥ ೧೫ ॥

(ಸಮಸ್ತೇಷು ಫಲೇಷು ಪುರುಷಾರ್ಥೇಷು ಚ ಸಾರಸ್ಯ, ಶ್ರೇಷ್ಠಸ್ಯ-ತಾ. ಪ್ರ.)

೧೩. ಶಿಲಾಂತಃ ಪ್ರದೇಶದಂತೆ ನೀರಂಧ್ರವಾಗಿ ಘನವಾಗಿರುವುದು. ಅಮೃತಕಿರಣನಾದ ಚಂದ್ರನಂತೆ, ಸ್ವಾರಸ್ಯವಾಗಿ, ಅಮೃತಕ್ಕಿಂತ ರುಚಿಯಾದ ಸ್ವಸಂವಿತ್ ಎಂಬ ರಸವನ್ನು ಯಾವಾಗಲೂ ಬಿಡುತ್ತಿರುವುದು.

(ನೀರಂಧ್ರೋಘನಃ । "ವಿಜ್ಞಾನ ಘನಏವ" ಇತಿಶ್ರುತೇಃ । -ತಾ. ಪ್ರ.)

೧೪. (ಆ ಹಣ್ಣಿನಲ್ಲಿ ಮಜ್ಜಾ-ತಿರುಳು ಇಲ್ಲವೆಂದು ಹಿಂದೆ ಹೇಳಿದೆ. ಮತ್ತೆ ಅದರಲ್ಲಿ ಮತ್ತೊಂದು ವಿಧವಾದ ಮಜ್ಜಾ ಇದೆಯೆಂದು ಹೇಳಲಾಗುತ್ತದೆ.) ಆ ಫಲವು ಸಕಲ ಸೌಖ್ಯಗಳಿಗೂ ಕೋಶವು. ಶೀತಲವಾಗಿ ಎಲ್ಲವನ್ನೂ ಬೆಳಗುವ (ಜ್ಞಾನವೆಂಬ) ಬೆಳಕನ್ನು ಕೊಡುವುದು. ಶೈಲದಂತೆ ಉನ್ನತವಾಗಿರುವುದು. ಅಮೃತ ಪಿಂಡದಂತೆ ಇರುವುದು. ಆತ್ಮ (ಕರ್ಮ) ಫಲವು ಇರುವುದಕ್ಕೆ ಕಾರಣವಾದ ಮಜ್ಜಾ ಅದರಲ್ಲಿ ಇರುವುದು.

(ಆತ್ಮನಃ ಮಾನುಷಾನಂದಾದಿ ಹೈರಣ್ಯಗರ್ಭಾನಂದಾಂತ ಕರ್ಮಫಲಸ್ಥಿತೇಃ ಮಜ್ಜಾಸಾರಃ । ತಾ. ಪ್ರ.)

೧೫. ಅದರಿಂದ ಉತ್ಕೃಷ್ಟೋತ್ಕೃಷ್ಟವಾದ ಸಾರ(ಮಜ್ಜಾ)ವು ಯಾವುದೋ ಅದೇ ತನ್ನ ಸ್ವಂತ ಚಮತ್ಕಾರದಿಂದ ಶ್ರೀಫಲವಾಗಿರುವುದು. ಆದರೂ ಅನಂತ ರಕ್ಷಿತವಾಗಿರುವುದು. ನಿತ್ಯವಾಗಿರುವುದು: ಅನನ್ಯವಾಗಿರುವುದು.

(ತ್ರಿವಿಧ ಪರಿಚ್ಛೇದ ಶೂನ್ಯ ಸ್ವಭಾವೇನ ಅನಂತೇನ ಏವ ರಕ್ಷಿತಃ । -ತಾ. ಪ್ರ.)

ಸ್ವಸಂನಿವೇಶವೈಚಿತ್ರ್ಯ ಮನ್ಯತ್ವಫಲತಾಂಗತಾಮ್ ।
ಅತ್ಯಜನ್ತ್ಯಾ ತಯಾತನ್ವ್ಯಾ ಸ್ಥೂಲಯಾಽಪ್ಯತಿಬಾಲಯಾ ॥ ೧೬ ॥

ಇಯಮಸ್ಮೀತಿ ಕಲನಾದಸದಪ್ಯನ್ಯತಾಮಲಮ್ ।
ಭೇದಾದ್ಯಸಂಭವದೀದಂ ಸ್ವಯಮುತ್ಪಾದ್ಯ ಭಾವಿತಮ್ ॥ ೧೭ ॥

ಅಹಂಕಲಾಸಮುದಯ ಸಮನನ್ತರಮೇವ ಸಾ ।
ವಲಿತಾಕಾಶಶಬ್ದಾಂಗ ತ್ರೈಲೋಕ್ಯ ಪರಮಾಣುಭಿಃ ॥ ೧೮ ॥

---

೧೬. ಎಲ್ಲದಕ್ಕಿಂತ ಬೇರೆಯಾಗಿರುವ ಆತ್ಮ ಸ್ಥಿತಿಯನ್ನು ಬಿಡದೆಯೇ, ಬೇರೆಯಾಗಿರುವಂತೆ ತೋರುವ ಮತ್ತೊಂದು ಫಲಸ್ವರೂಪವನ್ನು ಪಡೆದಿರುವ (ಚಿತ್ತು) ಬಹುಸೂಕ್ಷ್ಮವಾದರೂ ಬಹು ಸ್ಥೂಲವು ಮತ್ತು ಅತಿ ಬಾಲ್ಯವುಳ್ಳದು.

(ಅಣೋರಣೀಯಸ್ತ್ವಾತ್ ತನ್ವೀ । ಮಹತೋ ಮಹೀಯಸ್ತ್ವಾತ್ ಸ್ಥೂಲಾ । ಚಿರಂತನತ್ವೇಽಪಿ ವೃದ್ಧ್ಯಾದಿ ವಿಕಾರಾಭಾವಾತ್ ಬಾಲಾ –ತಾ. ಪ್ರ.)

೧೭. 'ನಾನು ಇದಾಗಿರುವೆ' ಎಂದು ಸಂಕಲ್ಪ ಮಾಡಿದ ಮಾತ್ರದಿಂದಲೇ, ಇಲ್ಲದೆಯೇ ಇರುವ ಅನ್ಯತ್ವವನ್ನೂ ಪಡೆಯಬಲ್ಲುದು ಅದು. ಅಸಂಭವವಾಗಿರುವ ಭೇದಾದಿಗಳನ್ನೆಲ್ಲ ಸ್ವಯಂ ಉತ್ಪಾದನ ಮಾಡಿಕೊಂಡು ಅದಕ್ಕೆ ವಶವಾಗುವುದು.

(ಅಸತೋಽಪಿ ಭೇದಸ್ಯ ಉತ್ಪಾದನೇ ಕೋ ಹೇತುಸ್ತಮಾಹ:–ಇಯಮಿತಿ। ಇಯಮಹಮಸ್ಮೀತಿ ಅನಿದಮಿ ಇದಂತಾಧ್ಯಾಸ ಏವತದ್ಧೇತುರಿತ್ಯರ್ಥಃ ।ಅನ್ಯಥಾ ಪೃಥಕ್ತ್ವಂ ತದಾಪಾದಕಮಲಂ ಅವಿದ್ಯಾಂ ಏವಂ ಭೂತ ಭುವನ ಭೇದಾದಿ ರೂಪೇಣ ಉತ್ಪಾದ್ಯ ಇತ್ಯರ್ಥಃ ! ಅಸಂಭವದಿತ್ಯನೇನ ಸ್ವಪ್ರಕಾಶ ಚಿದೇಕರಸೇ ಮಲಸ್ಯೈವ ಸಂಭವೋ ನಾಸ್ತಿ ಸುತರಾಂ ತತ್ಕಾರ್ಯ ಭೇದಸ್ಯ ಇತಿ ದ್ಯೋತ್ಯತೇ ॥ –ತಾ. ಪ್ರ.)

೧೮. 'ಅಹಂ' ಎಂಬ ಕಲೆಯು ಉತ್ಪನ್ನವಾದ ಮೇಲೆಯೇ, ಆಕಾಶ, ಆದರ ಗುಣವಾದ ಶಬ್ದ, (ಅದರಿಂದ ಆಗಿರುವುದರಿಂದ ಅದರ) ಅಂಗಗಳೇ ಆದ ತ್ರೈಲೋಕ್ಯಗಳೆಂಬ ಪರಮಾಣುಗಳು ಇವುಗಳಿಂದ (ಆ ಚಿತ್ತು) ಸಂವಲಿತ ವಾಗುವುದು.

ಇತ್ಯನುಕ್ರಮತೋ ಯಾತಾ ಸಂವಿಚ್ಛಕ್ತಿ ಸ್ವರೂಪತಾಮ್ ।
ಮಜ್ಜಾ ಪ್ರಾಕ್ ಸಂನಿವೇಶಂ ಸ್ವಂತಮೇವಾಪ್ಯ ಸಮುಜ್ಝತೀ ॥ ೧೯ ॥

ಸಂವಿಚ್ಛಕ್ತ್ಯಾ ತಯಾ ತತ್ರ ತತಸ್ತರಲರೂಪಯಾ ।
ನಿಜಏವಸಮೇರೂಪೇ ದೃಗಿತ್ಥಂ ಸಂಪ್ರಸಾರಿತಾ ॥ ೨೦ ॥

ಇದಂವ್ಯೋಮ ಮಹಾನನ್ತಮಿಯಂ ಕಾಲಮಯೀ ಕಲಾ ।
ಇಯಂ ನಿಯತಿರಿತ್ಯುಕ್ತಾ ಕ್ರಿಯೇಯಂ ಸ್ಪಂದರೂಪಿಣೀ ॥ ೨೧ ॥

ಅಯಂ ಸಂಕಲ್ಪವಿಸ್ತಾರ ಸ್ತ್ವಯಮಾಶಾನ್ತರಭ್ರಮಃ ।
ರಾಗದ್ವೇಷಸ್ಥಿತಿರಿಯಂ ಹೇಯೋಪಾದೇಯಧೀರಿಯಮ್ ॥ ೨೨ ॥

(ಸ್ವೋತ್ಪಾದಿತೈಃ ಭೂತಭುವನಾದಿ ಭೇದೈಃ ಅಹಂತೋತ್ಪಾದನ ದ್ವಾರಾ ಆಭಿಮಾನಿಕಂ ಸಂವಲನಂ ಸಾ ಲಭತೇ–ಇತ್ಯಾಹ । ಅಹಮಿತಿ । ಅಹಂಕಲಾ ಅಹಂಕಾರಃ, ತಸ್ಯಾಸ್ಸಮುದಯೋ ವ್ಯಷ್ಟಿ ಸಮಷ್ಟಿ ರೂಪೇಣ ಉದ್ಭವಃ ತತ್ಸಮನಂತರಂ । ಆಕಾಶಃ ತದ್ಗುಣಃ ಶಬ್ದಶ್ಚಾಂಗೇ ದ್ರವ್ಯಗುಣೈಕ ದೇಶೌ ಯೇಷಾ ತಥಾವಿಧೈಃ ತ್ರೈಲೋಕ್ಯೋಪಲಕ್ಷಿತ ವ್ಯಷ್ಟಿ ಸಮಷ್ಟಿ ಶರೀರ ಪರಮಾಣುಭಿಃ ॥ ತಾ. ಪ್ರ.)

೧೯. ಈ ಅನುಕ್ರಮದಿಂದ ಸಂವಿತ್ (ಸ್ವರೂಪವಾದ ಬ್ರಹ್ಮವು) ಶಕ್ತಿ (ಯೆಂದರೆ ವ್ಯವಹಾರ ಯೋಗ್ಯ ಸ್ವ) ರೂಪವನ್ನು ಹೊಂದುವುದು. ಸಾರ ಭೂತವಾದ ಮಜ್ಜೆಯು ಮೊದಲಿನ ಸಂನಿವೇಶವನ್ನು (ಬಿಟ್ಟಂತೆ ಆಗಿ) ಬಿಡುವುದು (ಬಿಟ್ಟಂತೆ ತೋರುವುದು.)

೨೦. ಅನಂತರ ಸಂವಿತ್ತು, ಚಂಚಲ ಸ್ವಭಾವದ ಆ ಶಕ್ತಿಯಿಂದ, ತನ್ನ ಸ್ವಕೀಯವಾದ ಬ್ರಹ್ಮಸ್ವರೂಪದಲ್ಲಿಯೇ ಹೀಗೆ ದೃಕ್ಕಾಗಿ ಪ್ರಸಾರಿತವಾಗುವುದು.

೨೧. ಇದು ಮಹಾನಂತವಾದ ವ್ಯೋಮವು, ಇದು ಕಾಲಮಯವಾದ ಕಲೆಯು, ಇದು ನಿಯತಿಯು, ಎಂದು ಹೇಳಿಸಿಕೊಳ್ಳುತ್ತ ವ್ಯವಹಾರ ರೂಪವಾದ ಕ್ರಿಯೆಯು (ತೋರುವುದು.)

೨೨. ಹೀಗೆ ಹರಡುವ ಈ ದೃಶ್ಯವು ಸಂಕಲ್ಪದ ವಿಸ್ತಾರವು. ಇದು ಆಶೆಯೆಂಬ ಭ್ರಾಂತಿಯ ಪ್ರಪಂಚವು. ರಾಗದ್ವೇಷಾದಿಗಳಿಂದ ಇದರ ಸ್ಥಿತಿಯು. ಇದೇ ಹೇಯ, ಉಪಾದೇಯ ಎಂಬ ಬುದ್ಧಿಯು.

ಇಯಂತ್ವತ್ತಾತ್ವಿಯಂಮತ್ತಾ ರತ್ತೇಯಂ ಸಂಸ್ಥಿತಾ ಸ್ವಯಮ್ ।
ಬ್ರಹ್ಮಾಂಡೌಘೋಽಯಮೂರ್ಧ್ವಸ್ಥಃ ಸ್ವಯಮಂಗೋರ್ಧ್ವಮಪ್ಯಧಃ॥ ೨೩ ॥

ಅಯಂ ಪುರಃ ಪಾರ್ಶ್ವತೋಽಯಂ ಪಶ್ಚಾದಾರಾದ್ದವೀಯಸೀ ।
ಇದಂ ಭೂತಂ ವರ್ತಮಾನಂ ಭವಿಷ್ಯತ್ತ್ವಿದಮಿತ್ಯಪಿ ॥ ೨೪ ॥

ಇದಮನ್ತಃ ಸ್ಥಿತಾನಲ್ಪ ಕಲ್ಪನಾಮ್ಭೋರುಹಾಲಯಮ್ ।
ಬ್ರಹ್ಮಾಂಡ ಮಂಡಪಾಪೀಡ ಕ್ರೀಡಾಮಂಡಪ ಮಂಡಲಮ್ ॥ ೨೫ ॥

ಅನನ್ತಕಲನಾತತ್ತ್ವ ಪರಿಪಲ್ಲವಿತಾ ಹರೇಃ ।
ಹೃದಬ್ಜಕರ್ಣಿಕಾ ಚೇಯಂ ಲೋಕಪದ್ಮಾಕ್ಷಮಾಲಿಕಾ ॥ ೨೬ ॥

---

೨೩. ಹೀಗೇ, ತ್ವತ್ತಾ, ಮತ್ತಾ, ತತ್ತಾ, ಎಂಬ ವ್ಯವಸ್ಥೆಯು ಏರ್ಪಡುವುದು. ಬ್ರಹ್ಮಾಂಡ ಸಮೂಹಗಳು ಏರ್ಪಡುವುವು. ಇದು ಮೇಲೆ ಇರುವುದು ಎಂಬುದೂ ಮೇಲೆ ಕೆಳಗೆ ಎಂಬ ವ್ಯವಸ್ಥೆಯೂ ತಾನಾಗಿ ಏರ್ಪಡುವುದು.

೨೪. ಈ ಪಟ್ಟಣವು ಪಾರ್ಶ್ವದಲ್ಲಿರುವುದು. ಇದು ಹಿಂದಿರುವುದು. ಇನ್ನೊಂದು ದೂರದಲ್ಲಿ ಮತ್ತೊಂದು ಹತ್ತಿರದಲ್ಲಿ ಇರುವುದು. ಇದು ಭೂತ (ಕಳೆದುಹೋದುದು), ಇದು ವರ್ತಮಾನ, ಇದು ಭವಿಷ್ಯತ್ತು, (ಎಂಬ ದೇಶ, ಕಾಲ ಬುದ್ಧಿಯೂ ಹುಟ್ಟಿಕೊಳ್ಳುವುದು.)

೨೫. ಬ್ರಹ್ಮಾಂಡ ಮಂಡಪವೆಂಬ ಕ್ರೀಡಾಮಂಡಪಗಳ ಸಮೂಹವು ಯಾವುದುಂಟೋ ಅದು ಅನಂತ ಕಲ್ಪನೆಗಳೆಂಬ ಕಮಲಗಳ ಸರೋವರವಾದ ಜೀವವನ್ನು ತನ್ನಲ್ಲಿ ಇಟ್ಟುಕೊಂಡಿರುವುದು.

೨೬. ಅನಂತ ಸಂಕಲ್ಪಗಳೆಂಬ ತತ್ವವನ್ನು ಹಿಡಿದು ಪಲ್ಲವಿಸಿ ಬೆಳೆದ ಲೋಕಗಳೆಂಬ ಕಮಲದ ಮಣಿಗಳನ್ನುಳ್ಳ ಈ ಅಕ್ಷಮಾಲಿಕೆಯೂ ಇದೇ ; ಮಹಾ ವಿಷ್ಣುವಿನ ನಾಭೀ ಕಮಲವೆಂಬುದೂ ಇದೆ.

(ಅನಂತೈಃಕಲನಾ ತತ್ತ್ವೈಃ ರಚನರಹಸ್ಯೈಃ ಪರಿತಃ ಪಲ್ಲವಿತಾ-ತಾ. ಪ್ರ.)

ಇಯಂಕೀರ್ಣ ಮಹಾರುದ್ರಗಣಾಪೂರಿತಕೋಟರಾ ।
ಧೀರ್ಘಾಭ್ರಸರಣಿರ್ಭ್ರಾಂತಿ ಧ್ವಂಸನೇಭ್ಯಃ ಪ್ರಭಾವಿನೀ ॥ ೨೭ ॥

ಇಯಂಮೇರುಃ ಕಕುಭ್ಯತ್ರ ಜಗತ್ಪಂಕಜಕರ್ಣಿಕಾ ।
ಸ್ಫುರದಿಂದು ಮಧೂಲ್ಲಾಸ್ಯಪ್ಪುಟಾಮರಷಟ್ಪದಾ ॥ ೨೮ ॥

ಇಯಮುದ್ದಾಮ ಸೌಗಂಧ ಸರ್ಗಶ್ರೀಪುಷ್ಪಮಂಜರೀ ।
ಜಗಜ್ಜರಠವೃಕ್ಷಸ್ಯ ರಜೋನರಕಮೂಲಿನಃ ॥ ೨೯ ॥

ಇಯಂಚ-ಶಾರಾಕಿಂ ಜಲ್ಕಾ ಬಹ್ಮಾಪಗತಟಸ್ಥಿತಾ ।
ಅಪಾರಾಪಾರಪರ್ಯಂತಾ ವ್ಯೋಮಲೀಲಾ ಸರೋಜಿನೀ ॥ ೩೦ ॥

---

೨೭. ಇದು ಮಹಾರುದ್ರಗಣಗಳಿಂದ ಎಡೆಯಿಲ್ಲದೆ ಕಿಕ್ಕಿರಿದಿರುವ ಒಂದು ರಂಧ್ರವು. ಇದೇ ಅಪಾರವಾದ ಆಕಾಶಮಂಡಲವು ಭ್ರಾಂತಿ (ವಿಷಯ ಭೋಗ) ಗಳಿಂದ ಧ್ವಂಸವಾಗಿ ಕೆಳಕ್ಕೆ ಬೀಳುತ್ತಿರುವ ದೇವತೆಗಳ ಪ್ರಕಾಶದಿಂದ ಬೆಳಗುತ್ತಿರುವುದು.

(ಕೀರ್ಣೈಃ ಸರ್ವತೋ ವ್ಯಾಪ್ತೈಃ ಮಹಾರುದ್ರಗಣೈಃ ಪೂರಿತಕೋಟರಾ ಅಭ್ರಸರಣಿರಾಕಾಶ ಪದವೀ। "ಅಸ್ಮಿನ್ ಮಹತ್ಯರ್ಣವೇಽಂತರಿಕ್ಷೇಭವಾ ಅಧಿ। ನೀಲಗ್ರೀವಾಃ ಶಿತಿಕಂಠಾಃ ಶರ್ವಾ": ಇತಿ ಶ್ರುತೇರಿತಿಭಾವಃ। ಭ್ರಾಂತಾ ವಿಷಯಲಂಪಟಾಃ ಸ್ವರ್ಗಿಣಃ। ತೇಷಾಂ ಧ್ವಂಸನೇಭ್ಯಃ ಅಧಃಪತನೇಭ್ಯಃ ನಿಮಿತ್ತೇಭ್ಯಃ ಪ್ರಭಾವಿನೀ ಪ್ರತಾಪವತೀ ಪ್ರಕಾಶವತೀ ವಾ। ನಕ್ಷತ್ರಪಾತೇ ನಭಃಪಾತೇ ಪ್ರಭಾನುವೃತ್ತಿ ದರ್ಶನಾದಿತ್ಯರ್ಥಃ--ತಾ. ಪ್ರ.)

೨೮. ಬ್ರಹ್ಮಾಂಡವೆಂಬ ಕಮಲದ ಕರ್ಣಿಕೆಯಾಗಿ ಇರುವ ಮಹಾ ಮೇರುವು ಈ ದಿಕ್ಕಿನಲ್ಲಿ ಇರುವುದು. ಇದರಲ್ಲಿ ಚಂದ್ರನ ಅಮೃತವನ್ನು ಕುಡಿದು ಉಲ್ಲಾಸಲಂಪಟರಾಗಿರುವ ಅಮರರೆಂಬ ದುಂಬಿಗಳು ಇರುವರು.

೨೯. ಇದು ಉದ್ದಾಮ ಸುಗಂಧಸುಂದರವಾದ ಸೃಷ್ಟಿಯೆಂಬ ಸುಂದರ ಪುಷ್ಪಮಂಜರಿಯು. ರಜಸ್ಸೆಂಬ ನರಕವೇ ಬುಡವಾಗಿ ಉಳ್ಳ ಬ್ರಹ್ಮಾಂಡವೆಂಬ ಪುರಾತನ ವೃಕ್ಷದಲ್ಲಿ ಹುಟ್ಟಿದುದು ಇದು.

೩೦. ಈ (ಜಗಜ್ಜರಠವೃಕ್ಷವು) ಬ್ರಹ್ಮವೆಂಬ ಮಹಾನದಿಯ ತಟದಲ್ಲಿರು ವುದು. ತಾರೆಗಳೆಂಬ ಕಿಂಜಲ್ಕ (ಕೇಸರ) ಗಳುಳ್ಳದು. ಎಲ್ಲೆಲ್ಲೂ, ಎಲ್ಲಾ

ಇಯಂಕ್ರಿಯಾಪರಿಗ್ರಾಹಾ ತರಂಗ ತರಲಾವಲೀ ।
ಸರ್ಗಾವರ್ತವಿಧಾನಸ್ಥ ಭೂರಿಭೂತ ಪರಂಪರಾ ॥ ೩೧ ॥

ಇಯತ್ತಯಾ ಪ್ರಸರಿಣೀ ಕ್ಷಣಕಲ್ಪಾದಿ ಪಲ್ಲವಾ ।
ತೇಜಃ ಕೇಸರಿಣೀ ಕಾಲನಲಿನೀ ವ್ಯೋಮಪಂಕಜಾ ॥ ೩೨ ॥

ಇಮಾ ಭಾವವಿಕಾರಾಖ್ಯಾ ಜರಾಮೃತಿ ವಿಷೂಚಿಕಾಃ ।
ವಿದ್ಯಾವಿದ್ಯಾವಿಲಾಸಾಖ್ಯಾ ಇಮಾಶ್ಶಾಸ್ತ್ರಾರ್ಥ ದೃಷ್ಟಯಃ ॥ ೩೩ ॥

ಇತಿ ಸಾ ತಸ್ಯ ಬಿಲ್ವಸ್ಯ ನಿಜಮಜ್ಜಾ ಚಮತ್ಕೃತಿಃ ।
ಸಂಕಲ್ಪ ಸಂನಿವೇಶಾಂತರೇವೈವ ಕೃತ ಸಂಸ್ಥಿತಿಃ ॥ ೩೪ ॥

ದಿಕ್ಕುಗಳಲ್ಲೂ ಅಪಾರವಾಗಿ ಹರಡಿರುವುದು. ಆಕಾಶವೆಂಬ ಲೀಲಾಸರೋವರವಾಗಿರುವುದು.

೩೧. ಈ ಸರೋವರದಲ್ಲಿ ಕ್ರಿಯಾಕಲಾಪಗಳೆಂಬ ಮೊಸಳೆಗಳು ಉಂಟು. ತರಂಗಗಳಂತೆ ಚಂಚಲಗಳಾದ ಮಾಸ, ಋತು, ಮೊದಲಾದ ಕಾಲಮಾನಗಳುಂಟು. ಸೃಷ್ಟಿಗೆ ಬಂದು ಬಂದು ಹೋಗುತ್ತಿರುವ ಅನೇಕಾನೇಕ ಪ್ರಾಣಿಸಮೂಹಗಳುಂಟು.

೩೨. ಕ್ಷಣಕಾಲದಿಂದ ಹಿಡಿದು ಪ್ರಲಯಕಾಲದವರೆಗೆ ಎಂಬ ನಾನಾ ಪಲ್ಲವಗಳನ್ನುಳ್ಳದಾಗಿರುವುದರಿಂದ ಇಯತ್ತಾ (ಆಯುಸ್ಸು ಇಷ್ಟೆಂಬ ನಿಗದಿ) ರೂಪವಾಗಿ ಹರಡುತ್ತಿರುವುದು. ಇದರಲ್ಲಿ ತೇಜವೆಂಬ ಕೇಸರಗಳುಳ್ಳ ಕಮಲಗಳೂ ಕಾಲವೆಂಬ ಕನ್ನೈದಿಲೆಗಳೂ ವ್ಯೋಮವೆಂಬ ತಾವರೆಗಳೂ ಉಂಟು.

೩೩. ಇವೇ (ಜನ್ಮಾದಿಷಟ್) ಭಾವವಿಕಾರಗಳು ಜರಾ ಮರಣಗಳೆಂಬ ವ್ಯಾಧಿಗಳು, ಇವೇ ವಿದ್ಯಾ–ಅವಿದ್ಯಾವಿಲಾಸಗಳು, ಇವೇ ಶಾಸ್ತ್ರ ಶಾಸ್ತ್ರಗಳಲ್ಲಿ ಹೇಳಿರುವ ಅರ್ಥ ದೃಷ್ಟಿಗಳು

೩೪. ಇದಿಷ್ಟೂ ಆ ಬಿಲ್ವಫಲದ ಮಜ್ಜಾ ಚಮತ್ಕಾರವು. ಸಂಕಲ್ಪವೆಂಬ ಒಂದರಲ್ಲಿಯೇ ಈ ಚಮತ್ಕಾರವೆಲ್ಲ ಇರುವುದು.

ಶಾಂತಾ ಸ್ವಸ್ಥಾ ನಿರಾಬಾಧಾ ಸೌಮ್ಯಾ ಭಾವನಯೋಜ್ಝಿತಾ ।
ಕರ್ತೃತ್ವಮಪ್ಯಕರ್ತೃತ್ವಂ ಕೃತ್ವಾ ಕೃತ್ವೇವ ಸಂಸ್ಥಿತಾ ॥ ೩೫ ॥

ಏಷೈಕಿಕೈವ ವಿವಿಧೇವ ವಿಭಾವ್ಯಮಾನಾ ।
ನೈಕಾತ್ಮಿಕಾ ನ ವಿವಿಧಾ ನನು ಸೈವ ಸೈವ ।
ಸತ್ಯಾಸ್ಥಿತಾ ಸಕಲಶಾನ್ತ್ಯಸಮೈಕರೂಪಾ ।
ಸರ್ವಾತ್ಮಿಕಾತಿಮಹತೀ ಚಿತಿರೂಪಶಕ್ತಿಃ । ॥ ೩೬ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಬಿಲ್ವೋಪಾಖ್ಯಾನಂ" ನಾಮ ಪಂಚಚತ್ವಾರಿಂಶಃ ಸರ್ಗಃ

---

೩೫. ತಾನು ಅಕರ್ತೃವಾಗಿದ್ದರೂ ಕರ್ತೃವಿನಂತೆ ವ್ಯವಹಾರದಲ್ಲಿ ಗೋಚರವಾಗುತ್ತ, ಸ್ವಭಾವದಲ್ಲಿ ಶಾಂತವಾಗಿ, ಸ್ವ-ಸ್ಥವಾಗಿ, ಯಾವುದೊಂದು ಬಾಧೆಯೂ ಇಲ್ಲದೆ ನಿರಾಬಾಧೆಯಾಗಿ, ಸೌಮ್ಯವಾಗಿ, ಯಾವ ಭಾವನೆಯೂ ಇಲ್ಲದೆ ಇರುವುದು.

೩೬. ಈ ಚಿತಿರೂಪವಾದ ಶಕ್ತಿಯು ತಾನೊಂದೇ ಒಂದಾಗಿದ್ದರೂ ವಿವಿಧ ರೂಪಗಳನ್ನು ಉಳ್ಳಂತೆ ತೋರಿಸಿಕೊಳ್ಳುತ್ತಿರುವುದು. ಇದು ಏಕಾತ್ಮವೂ ಅಲ್ಲ ವಿವಿಧವೂ ಅಲ್ಲ; ಅದು ತಾನೇ ತಾನಾಗಿರುವುದು. ಸತ್ಯಸ್ವರೂಪವಾಗಿ ಇದ್ದುಕೊಂಡು, ಸಕಲ ಶಾಂತಿಯಾದಾಗ ಬ್ರಹ್ಮವೆಂಬ ಒಂದೇ ರೂಪದಲ್ಲಿ ಇರುವುದು. (ಭ್ರಾಂತಿವಶರಾಗದೆ ಇರುವವರಿಗೆ) ಸರ್ವಾತ್ಮಕವಾಗಿ ಸಾಕ್ಷಾತ್ಕಾರವಾಗುವುದು. (ಬ್ರಹ್ಮವಾದ್ದರಿಂದ) ಅತಿಮಹತ್ತಾಗಿ ಇರುವುದು.

(ಬಿಲ್ವಾಖ್ಯಾಯಿಕಾಂ ಸಮಾಪ್ಯ ಸ್ವರೂಪೇಣೈವಚಿತಂ ಪರ್ಣಯನ್ನುಪಸಂಹರತಿ। ಏಷೇತಿ ಏಕತ್ವಸಂಖ್ಯಾಯಾಅಪಿ ದ್ವೈತಾಪಾದಕತ್ವಾತ್ ನೈಕಾತ್ಮಿಕಾ ನಾಪಿವಿವಿಧಾ, ಕಿಂತು ಸೈವೈಏಕಾತ್ವ, ಸೈವೈಕಾ । ವೀಪ್ಸಯಾ ಸಜಾತೀಯ ವಿಜಾತೀಯ ನಿವೃತ್ತಿರ್ವಾ, ಸಕಲಸ್ಯ ದ್ವೈತವಿಕಲ್ಪಸ್ಯ ಶಾಂತ್ಯಾ ಸಮೈಕರೂಪಾ॥ ಅನೇನಸ್ವಗತ ಭೇದಸ್ಯಾಪಿ ವ್ಯಾವೃತ್ತಿಃ । ಅತಿಮಹತೀ ಬ್ರಹ್ಮಶಬ್ದಲಕ್ಷ್ಯಾ ಚಿತಿರೂಪಾ ಶಕ್ತಿರೇವ ಇತ್ಥಂವ್ಯುತ್ಪಾದಿತಾ ಇತ್ಯರ್ಥಃ ॥

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಬಿಲ್ವೋಪಾಖ್ಯಾನ" ಎಂಬ
ನಲವತ್ತೈದನೆಯ ಸರ್ಗವು

ಷಟ್‌ಚತ್ವಾರಿಂಶಃ ಸರ್ಗಃ

ಶ್ರೀ ರಾಮ ಉವಾಚ :—

ಭಗರ್ವ ಸರ್ವಸಾರಜ್ಞ ತ್ವಯೈಷಾ ಬಿಲ್ವರೂಪಿಣೀ ।
ಮಹಾಚಿದ್ಘನಸತ್ತೇಹ ಕಥಿತೇತಿ ಮತಿರ್ಮಮ ॥ ೧ ॥

ಚಿನ್ಮಜ್ಜಾರೂಪಮಖಿಲ ಮಹಂತಾದೀದಮಾತತಂ ।
ನಮನಾಗಪಿ ಭೇದೋಽಸ್ತಿ ದ್ವೈತೈಕ್ಯಕಲನಾತ್ಮಕಃ ॥ ೨ ॥

ಶ್ರೀ ವಸಿಷ್ಠ ಉವಾಚಃ—

ಯಥಾಬ್ರಹ್ಮಾಂಡ ಕೂಶ್ಮಾಂಡ ಮಜ್ಜಮೇರ್ವಾದಿ ಸಂಸ್ಥಿತಾ ।
ತಥಾಚಿದ್ಬಿಲ್ವಮಜ್ಜೇಯಂ ಬ್ರಹ್ಮಾಂಡಾದಿ ಜಗತ್ಸ್ಥಿತಿಃ ॥ ೩ ॥

ನಲವತ್ತಾರನೆಯ ಸರ್ಗವು

ಶ್ರೀ ರಾಮನು ಕೇಳಿದನು:—

೧. ಭಗವಂತನೆ, ಸರ್ವಸಾರಜ್ಞನೆ, ನೀನು ಬಿಲ್ವ ಫಲವೊಂದಿದೆಯೆಂದು ಹೇಳಿದುದು ಮಹಾ ಚಿದ್ಘನದ ಸತ್ತೆಯನ್ನು ಕುರಿತೇ ಎಂದು ನನಗೆ ತೋರುತ್ತದೆ.

೨. ಅಹಂತಾದಿಯಾಗಿ, ಇದಂತೆಯಾಗಿ ಹರಡಿರುವ ಈ ಸರ್ವವೂ ಚಿತ್ತಿನ ಮಜ್ಜಾರೂಪವಾದುದೇ! ದ್ವೈತ, ಐಕ್ಯ, ಎಂಬ ಕಲ್ಪನಾ ರೂಪವಾದ ಭೇದವು ಎಳ್ಳಷ್ಟೂ ಇಲ್ಲ. (ಎಂದು ನನಗೆ ತೋರುವುದು.)

ಶ್ರೀ ವಸಿಷ್ಠನು ಹೇಳಿದನು :—

೩. ಬ್ರಹ್ಮಾಂಡವೆಂಬ ಕೂಶ್ಮಾಂಡದಲ್ಲಿ ಮಜ್ಜರೂಪವಾಗಿ ಮೇರ್ವಾದಿಗಳು ಹೇಗೆ ಇರುವುವೋ, ಹಾಗೆಯೇ ಈ ಚಿದ್ಬಿಲ್ವದಲ್ಲಿ ಮಜ್ಜಾ ಆಗಿರುವುದು ಯಾವುದೋ ಅದೇ ಬ್ರಹ್ಮಾಂಡಾದಿ ಜಗತ್ತುಗಳ ಸ್ಥಿತಿಯು.

ಸೃಷ್ಟಿಚಿದ್ಬಿಲ್ವಮಜ್ಜಾ ಸ್ಯಾತ್ ಸ್ವಾಧಾರಾನ್ಯತ್ವಸಂಭವೇ ।
ವಿನಾಶಃ ಸರ್ವಗಸ್ಯಾಸ್ಯ ನ ಚೈತತ್ಸಂಭವತ್ಯಲಂ ॥ ೪ ॥

ಚಿತೇರ್ಮರೀಚ ಬೀಜಸ್ಯ ಜಗದಾಖ್ಯಾಚಮತ್ಕೃತಿಃ ।
ಸ್ಥಿತಾ ಸೌಷುಪ್ತ ಸೌಮ್ಯಾಂತಃ ಶಿಲಾಂತಸ್ಸನಿವೇಶವತ್ ॥ ೫ ॥

(ನ ಅಹಂತಾದಿಮಾತ್ರಂ ಚಿದ್ಬಿಲ್ವಮಜ್ಜಾ, ಕಿಂತು ಬ್ರಹ್ಮಾಂಡಾದಿಸರ್ವ ಮಪೀತಿ ನಿಃಸಂಕೋಚಂ ಬೋಧ್ಯಮಿತ್ಯಾಶಯೇನ ವಸಿಷ್ಠ ಉವಾಚ–ಯಥೇತ್ಯಾದಿನಾ –ತಾ. ಪ್ರ.)

೪. ಬಿಲ್ವಫಲದ ಮಜ್ಜೆಯು ಇರುವುದಕ್ಕೆ ಅದರ ಕರಟವು ಆಧಾರವಾಗಿರುವಂತೆ, ಸೃಷ್ಟಿಯೆಂಬ ಮಜ್ಜೆಯು ಚಿದ್ಬಿಲ್ವದಲ್ಲಿ ಇರಲು ಇದಕ್ಕೆ ಬೇರೆ ಆಧಾರವು ಯಾವುದಾದರೂ ಉಂಟು ಎಂದಾದರೆ, ಆ ಚಿತ್ತಿಗೆ ಹಾನಿಯಾಗುವುದು. ಆದರೆ, ಚಿತ್ತು ಸರ್ವಗವೆಂದರೆ ಎಲ್ಲೆಲ್ಲಿಯೂ ಇರುವುದು. ಅದರಿಂದ ಅಂತಹ ವಿನಾಶವು ಎಂದಿಗೂ ಸಂಭವಿಸುವುದಿಲ್ಲ (ವಾಗಿ ಚಿದ್ಬಿಲ್ವದ ಕರಟವೂ ಚಿತ್ತೇ ಎನ್ನಬೇಕು.)

(ಚಿದ್ಬಿಲ್ವಸ್ಯ ಮಜ್ಜಾ ಇತ್ಯುಕ್ತೇ, ಅಂತಃ ಪ್ರದೇಶಸ್ಥ–ಅವಯವಾನಾಂ ರಸಘನಃ ಪರಿಣಾಮ ವಿಶೇಷ ಇತಿ ಕಸ್ಯಚಿದ್ಭ್ರಾಂತಿಂ ವಾರಯತಿ ।– ಸೃಷ್ಟಿರಿತಿ। ಯಥಾ ಬಿಲ್ವ ಖರ್ಪರಂ ಮಜ್ಜಾಯಾ, ಆಧೇಯಾಯಾಃ, ಸ್ವಾಧಾರಸ್ಯ ಖರ್ಪರಸ್ಥಾನೀಯಸ್ಯ ಅನ್ಯತ್ವಸಂಭವೇ, ತದಂತಃ ಪರಿಣಾಮರೂಪಾ ಮಜ್ಜಾ ಸ್ಯಾತ್ । ತತ್ರ ಸರ್ವಗಸ್ಯಾಸ್ಯ ಚಿದಾತ್ಮನಃ ಕಾತ್ಸ್ನ್ಯೇನ–ಏಕದೇಶೇನ ವಾ ಪರಿಣಾಮತ್ವೇ ವಿನಾಶೋ ದುರ್ವಾರಃ। ನಚ ಏತನ್ನಿರವಯವೇ ಮುಖ್ಯಃ। ಅಂತಃ ಪ್ರದೇಶಃ ಪರಿಣಾಮೋ ವಾ ಸಂಭವತೀತಿ ನ ಮಜ್ಜಾ ಶಬ್ದಃ ಪರಿಣಾಮಪರಃ– ಇತ್ಯರ್ಥಃ – ತಾ. ಪ್ರ.)

೫. ಚಿತ್ತೆಂಬ ಮೆಣಸಿನ ಬೀಜದ ಚಮತ್ಕಾರವು ಈ ಸೃಷ್ಟಿಯು, ಇದು ನಿದ್ದೆಹೋಗುತ್ತಿರುವವನ ಮನಸ್ಸಿರುವಂತೆ, ಶಿಲೆಯಲ್ಲಿ (ಶಿಲ್ಪಿಯ ಕಲ್ಪನೆಯಿಂದಾಗುವ) ಸಂನಿವೇಶವಿರುವಂತೆ, ಇರುವುದು.

(ತರ್ಹಿ ಕಿಂಪರ ಇತಿ ಚೇತ್, ವಿವರ್ತ ಲಕ್ಷಣ ಚಮತ್ಕಾರಪರ ಇತ್ಯಾಶಯೇನಾಹ– ತಾ. ಪ್ರ. ಹಿಂದಿನ ಶ್ಲೋಕದಲ್ಲಿ ಪರಿಣಾಮವಾದವನ್ನು ಅಲ್ಲ

ಅತ್ರೇಮಾಮಿಂದುವದನ ಚಿತ್ರಾಂ ವಿಸ್ಮಯಕಾರಿಣೀಂ ।
ವರ್ಣ್ಯಮಾನಾಂ ಮಯಾ ರಮ್ಯಾ ಮನ್ಯಾಮಾಖ್ಯಾಯಿಕಾಂ ಶೃಣು ॥ ೬ ॥

ಸ್ನಿಗ್ಧಾ ಸ್ಪಷ್ಟಾ ಮೃದುಸ್ಪರ್ಶಾ ಮಹಾವಿಸ್ತಾರಶಾಲಿನೀ ।
ನಿಬಿಡಾ ನಿತ್ಯಮಕ್ಷುಬ್ಧಾ ಕ್ವಚಿದಸ್ತಿ ಮಹಾಶಿಲಾ ॥ ೭ ॥

ತಸ್ಯಾಮಂತಃ ಪ್ರಫುಲ್ಲಾನಿ ಪದ್ಮಾನಿ ಸುಬಹೂನ್ಯಪಿ ।
ಸರಸ್ಯಾಮಿವ ರಮ್ಯಾಣಿ ತಾನ್ಯನಂತಾನಿ ಸಂತಿ ವೈ । ॥ ೮ ॥

ಅನ್ಯೋನ್ಯಪ್ರೋತಪತ್ರಾಣಿ ಮಿಥೋ ವಿಘಟಿತಾನಿ ಚ ।
ಮಿಥಶ್ಛೋಪನಿಗೂಢಾನಿ ಗೂಢಾನಿ ಪ್ರಕಟಾನಿ ಚ ॥ ೯ ॥

ಗಳಿದು ಈ ಶ್ಲೋಕದಲ್ಲಿ ವಿವರ್ತವಾದವನ್ನು ಹೇಳಿದೆಯೆಂದು ತಾತ್ಪರ್ಯ ಪ್ರಕಾಶಕರ ಅಭಿಪ್ರಾಯ.)

೬. ಚಂದ್ರವದನನಾದ ರಾಮನೆ, ಈ ಸಂಬಂಧವಾಗಿ ಇನ್ನೊಂದು ಕಥೆಯನ್ನು ಹೇಳುವೆನು, ಅದೂ ರಮ್ಯವಾದುದು: ಚಿತ್ರವೂ ವಿಸ್ಮಯಕಾರಕವೂ ಆದುದು. ಅದನ್ನು ವರ್ಣಿಸುವೆನು ಕೇಳು.

೭. ಸ್ನೇಹಸಂಪನ್ನವೂ, ಸ್ಪಷ್ಟವಾಗಿ ಕಣ್ಣಿಗೆ ಕಾಣುವುದೂ, ಮುಟ್ಟುವುದಕ್ಕೆ ಸುಖವಾದುದೂ ಆಗಿ ಮಹಾ ವಿಸ್ತಾರವಾಗಿರುವ ಒಂದು ಮಹಾಶಿಲೆಯು ಒಂದುಕಡೆಯಲ್ಲಿ ಇದೆ. ಅದು ಕೊಂಚವೂ ಟೊಳ್ಳು ಪೊಳ್ಳು ಇಲ್ಲದೆ, ಘನವಾಗಿರುವುದು. ಯಾವಾಗಲೂ ಯಾವ ರೀತಿಯ ಕ್ಷೋಭವೂ ಅದಕ್ಕೆ ಇಲ್ಲವು.

೮. ಆ ಮಹಾಶಿಲೆಯಲ್ಲಿ ಅನೇಕಾನೇಕ ಕಮಲಗಳು ಸರೋವರದಲ್ಲಿ ಹುಟ್ಟುವಂತೆ ಹುಟ್ಟಿರುವುವು. ಅವು ರಮ್ಯವಾಗಿ ಬೇಕಾದಷ್ಟು ಇರುವುವು.

೯. ಅವು ಒಂದರೊಳಗೊಂದು ಸೇರಿಕೊಂಡಿರುವುವು: ಒಂದನ್ನೊಂದು ಒತ್ತಿರುವುವು: ಇನ್ನು ಕೆಲವು ಇನ್ನು ಕೆಲವನ್ನು ಮುಚ್ಚಿರುವುವು: ಕೆಲವು ಪ್ರಕಟವಾಗಿ ಕಾಣಿಸುತ್ತಿರುವುವು: ಇನ್ನು ಕೆಲವು ಗೂಢವಾಗಿರುವುವು.

ಅಧೋಮುಖಾನ್ಯೂರ್ಧ್ವಮುಖಾನ್ಯಪಿ ತಿರ್ಯಂಗ್ಮುಖಾನಿಚ ।
ಮಿಥೋಮಿಲಿತಮೂಲಾನಿ ಮಿಥಃ ಪ್ರೋತಮುಖಾನ್ಯಪಿ ॥ ೧೦ ॥

ಕರ್ಣಿಕಾಜಾಲಮೂಲಾನಿ ಮೂಲಾಂತಃಕರ್ಣಿಕಾನಿಚ ।
ಊರ್ಧ್ವಮೂಲಾನ್ಯಧೋಮೂಲಾನ್ಯಮೂಲಾನೀತರಾಣಿ ಚ । ॥ ೧೧ ॥

ತೇಷಾಂ ಚ ನಿಕಟೇ ಸಂತಿ ಶಂಖಾಃ ಶತಸಹಸ್ರಶಃ ।
ಚಕ್ರೌಘಾಶ್ಚಮಹಾಕಾರಾಃ ಪದ್ಮವತ್ಸಂನಿವೇಶಿನಃ ॥ ೧೨ ॥

ಶ್ರೀ ರಾಮ ಉವಾಚ:—

ಸತ್ಯಮೇತನ್ಮಯಾ ದೃಷ್ಟಾ ತಾದೃಶೀ ಸಾ ಮಹಾಶಿಲಾ ।
ಶಾಲಗ್ರಾಮೇ ಹರೇರ್ಧಾಮ್ನಿ ವಿದ್ಯತೇ ಪರಿವಾರಿಣೀ ॥ ೧೩ ॥

---

೧೦. ಅವುಗಳಲ್ಲಿ ಅಧೋಮುಖವಾದುವು ಕೆಲವು: ಇನ್ನು ಕೆಲವು ಊರ್ಧ್ವ ಮುಖವಾದವು: ಇನ್ನು ಕೆಲವು ಅಡ್ಡವಾಗಿ ಮುಖವನ್ನು ತಿರುಗಿಸಿ ಕೊಂಡಿರುವವು: ಇನ್ನು ಕೆಲವು ಒಂದರ ಬುಡದಲ್ಲಿ ಇನ್ನೊಂದು ಸೇರಿಕೊಂಡಿರುವವು: ಇನ್ನು ಕೆಲವು ಒಂದರ ಮುಖದಲ್ಲಿ ಮುಖವನಿಟ್ಟುಕೊಂಡಿರುವವು.

೧೧. ಕೆಲವು ಕರ್ಣಿಕೆಯಲ್ಲಿ ಬುಡವನ್ನುಳ್ಳವು: ಕೆಲವು ಬುಡದಲ್ಲಿ ಕರ್ಣಿಕೆಯುಳ್ಳವು, ಕೆಲವು ಊರ್ಧ್ವಮೂಲಗಳು: ಕೆಲವು ಅಧೋ ಮೂಲಗಳು: ಇನ್ನು ಕೆಲವು ಅಮೂಲಗಳು.

೧೨. ಅವುಗಳ ಪಕ್ಕದಲ್ಲಿ ಲಕ್ಷೋಪಲಕ್ಷವಾಗಿ ಶಂಖಗಳೂ ಚಕ್ರಗಳೂ ಮಹಾಕಾರವುಳ್ಳವಾಗಿ, ಕಮಲಗಳಂತೆಯೇ ಕಿಕ್ಕಿರಿದಿರುವುವು.

ಶ್ರೀರಾಮನು ಹೇಳಿದನು :—

೧೩. ನೀವು ಹೇಳಿದಂತಹ ಪರಿವಾರವನ್ನುಳ್ಳ ಒಂದು ಮಹಾ ಶಿಲೆಯು ಶಾಲಗ್ರಾಮ ಕ್ಷೇತ್ರದಲ್ಲಿರುವ ಶ್ರೀ ಹರಿಮಂದಿರದಲ್ಲಿರುವುದು. ಅದನ್ನು ನಾನು ನೋಡಿರುವೆನು.

(ಸ್ವಯಂ ತೀರ್ಥಯಾತ್ರಾಯಾಂ ಶಾಲಗ್ರಾಮ ಕ್ಷೇತ್ರೇ ದೃಷ್ಟಾಂ ಶಿಲಾಂ ಗುರುವಾಕ್ಯಾತ್ ಸ್ಮರ್ರ ರಾಮಃ ಸೈವಾತ್ರ ಭಗವತಾ ಜಗತ್ಕಲ್ಪನಾ ಸಹಿತ

ಶ್ರೀ ವಸಿಷ್ಠ ಉವಾಚ:—

ಏವಮೇತದ್ವಿಜಾನಾಸಿ ದೃಷ್ಟವಾನಸಿ ತಾಂ ಶಿಲಾಂ ।
ಯೋ ಯಶ್ಚ ತತ್ರ ವೈ ಪ್ರಾಣಃ ಸಮುಸ್ತಾದೃಗನಂತರಃ ॥ ೧೪ ॥

ಮಯಾತ್ವಿಯಮಪೂರ್ವೈವ ಶಿಲೇಹ ಕಥಿತಾ ತವ
ಯಸ್ಯಾಮಂತರ್ಮಹಾಕುಕ್ಷೌ ಸರ್ವಮಸ್ತಿ ಚ ನಾಸ್ತಿ ಚ ॥ ೧೫ ॥

ಚಿಚ್ಛಿಲೈಷಾ ಮಯೋಕ್ತಾ ತೇ ಯಸ್ಯಾ ಮಂತರ್ಜಗಂತಿ ವೈ ।
ಘನತ್ವೈಕಾತ್ಮಕತ್ವಾದಿ ವಶಾದೇಷಾ ಶಿಲೈವ ಚಿತ್ ॥ ೧೬ ॥

ಬ್ರಹ್ಮ ದೃಷ್ಟಾಂತತ್ವೇನ ಉದಾಹೃತೇತಿ ಮನ್ಯಮಾನ ಆಹ–ಸತ್ಯಮೇತ ನಿತಿ ತಾ. ಪ್ರ.)

ಶ್ರೀ ವಸಿಷ್ಠನು ಹೇಳಿದನು:—

೧೪. ನಾನು ಹೇಳುವ ಶಿಲೆಯನ್ನು ನೀನು ಬಲ್ಲೆ. ನೋಡಿದ್ದೀಯೆ, ನಿಜ. (ಆದರದು ನೀನು ಹೇಳಿದ ಶಿಲೆಯಲ್ಲ.) ಅದು ಯಾವ ಯಾವದು ಇರುವುದೋ ಅದಕ್ಕೆಲ್ಲ ಪ್ರಾಣವಾಗಿರುವುದು. ಅನಂತರ ಎಂದರೆ ಇನ್ನೂ ಯಾವುದಕ್ಕೂ ಅವಕಾಶವಿಲ್ಲದಂತೆ ಚಿದ್ಘನವಾಗಿರುವುದು. ಯಾವುದೊಂದೂ ವಿಕಾರವಿಲ್ಲದೆ ಯಾವಾಗಲೂ ಒಂದೇರೀತಿಯಾಗಿರುವುದು.

೧೫. ನಾನು ನಿನಗೆ ಹೇಳಿದ ಅಪೂರ್ವವಾದ ಶಿಲೆಯು ಇದು. ಅದರ ಗರ್ಭವು ಬಲುದೊಡ್ಡದು. ಅದರಲ್ಲಿ ಎಲ್ಲವೂ ಇರುವುದು: ಯಾವುದೂ ಇಲ್ಲ.

೧೬. ಚಿತ್ತೆಂಬುದೇ ಈ ಶಿಲೆಯು, ಇದನ್ನೇ ನಾನು ಹೇಳಿದುದು. ಇದರಲ್ಲಿ ಜಗತ್ತು ಜಗತ್ತುಗಳು ತುಂಬಿರುವುವು. ಏಕ ಘನವಾಗಿ, ಏಕಾತ್ಮವಾಗಿರುವುದರಿಂದ ಈ ಚಿತ್ತೂ ಶಿಲೆಯೇ!

(ಆದಿಪದಾತ್ ಅಭೇದ್ಯತ್ವ-ಏಕರಸತ್ವ,-ಕೂಟಸ್ಥತ್ವಾದಿ ಪರಿಗ್ರಹಃ-ತಾ.ಪ್ರ)

ಅಪ್ಯತ್ಯಂತಘನಾಂಗಾಯಾಃ ಸುನೀರಂಧ್ರಾಕೃತೇರಪಿ ।
ವಿದ್ಯತೇಽಂತರ್ಜಗದ್ವೃಂದಂ ವ್ಯೋಮ್ನೀವ ವಿಪುಲಾನಲಃ ॥ ೧೭ ॥

ದ್ಯೌಃಕ್ಷಮಾವಾಯುರಾಕಾಶಂ ಪರ್ವತಾಸ್ಸರಿತೋ ದಿಶಃ ।
ಸಂತಿತಸ್ಯಾಂ ಶಿಲಾಯಾಂಚಸುಷಿರಂ ನಮನಾಗಪಿ ॥ ೧೮ ॥

ಅಸ್ಯಾಮೇವಘನಾಂಗಾತ್ಮ ಜಗತ್ಪದ್ಮಂ ವಿಜೃಂಭತೇ ।
ಏತಸ್ಮಾದ್ವಸ್ತುನೋನಾನ್ಯದನ್ಯಚ್ಛುದ್ಧಾತ್ಮಕಂ ಚ–ವಾ ॥ ೧೯ ॥

ಶಂಖಪದ್ಮಾದಿಕಂ ಲೋಕಂ ಪಾಷಾಣೇ ಲಿಖ್ಯತೇ ಯಥಾ ।
ಭೂತಂ ಭವದ್ಭವಿಷ್ಯಚ್ಚ ಶಿಲಾಯಾಂ ಶಾಲಾಭಂಜಿಕಾ ।
ತಥಾಸ್ತಿತತ್ರ ತತ್ಸರ್ವಂ ಸಂಸ್ಥಾನಂ ವಸ್ತುತೋ ಯಥಾ ॥ ೨೦ ॥

---

೧೭. ಈ ಚಿಚ್ಛಿಲೆಯು ಅತ್ಯಂತ ಘನವಾದ (ನಿಬಿಡವಾಗಿರುವ) ದೇಹವುಳ್ಳದು: ಇದರಲ್ಲಿ ಒಂದು ರಂಧ್ರವೂ ಕೂಡ ಇಲ್ಲ. ಆದರೂ ಇದರ ಗರ್ಭದಲ್ಲಿ ಆಕಾಶದಲ್ಲಿ ಬೇಕಾದಷ್ಟು ಗಾಳಿಯಿರುವಂತೆ, ಜಗತ್ತಿನ ಸಮೂಹವು ಇರುವುದು.

(ಅಪಿಶಬ್ದಾಭ್ಯಾಂ ಸೂಚಿತೋ ವಿರೋಧೋ ಮಾಯಯಾ ಪರಿಹರ್ತವ್ಯಃ – ತಾ. ಪ್ರ.)

೧೮. ಅದರಲ್ಲಿ ಒಂದು ಛಿದ್ರವು ಕೂಡ ಇಲ್ಲದಿದ್ದರೂ, ಅದರಲ್ಲಿ ಅಂತರಿಕ್ಷ, ಪೃಥ್ವೀ, ವಾಯು, ಆಕಾಶ, ಪರ್ವತಗಳು, ನದಿಗಳು, ದಿಕ್ಕುಗಳೂ ಇರುವುವು.

೧೯. ನಿಬಿಡವಾದ ಈ ಶಿಲೆಯಲ್ಲಿಯೇ ಜಗತ್ಪದ್ಮವು ವಿಜೃಂಭಿಸುವುದು. ಶುದ್ಧಾತ್ಮಕವಾದ ಬ್ರಹ್ಮಕ್ಕಿಂತ ಇದು ಅನ್ಯವಲ್ಲದಿದ್ದರೂ (ಮಾಯಾ ಬಲದಿಂದ) ಬೇರೆಯಾಗಿರುವಂತೆ ತೋರುವುದು.

೨೦. ಕಲ್ಲಿನಲ್ಲಿ ಶಂಖ ಪದ್ಮ ಮೊದಲಾದ ಚಿತ್ರಗಳನ್ನು ಕೆತ್ತುವಂತೆ, ಶಿಲೆಯಲ್ಲಿ ಶಾಲಭಂಚಿಕೆಯನ್ನು ಬಿಡಿಸುವಂತೆ, ಈ ಚಿಚ್ಛಿಲೆಯಲ್ಲಿ ಭೂತ, ಭವಿಷ್ಯತ್ತು ವರ್ತಮಾನಗಳೆಲ್ಲವೂ ವಸ್ತುರೂಪವಾಗಿ ಅಲ್ಲಿ ಇರುವುವು.

ಉಪಲಾಂತಸ್ಸಂನಿವೇಶೋ ನಾನಾತಾಪ್ಯೇಕಪಿಂಡತಾ ।
ಯಥಾದತ್ತೇ ತಥೈಷಾ ಚಿತ್ಪಿಂಡಾಕಾರೈಕಿಕಾಂ ಘನಾಂ ॥ ೨೧ ॥

ಯಥಾಪದ್ಮಃ ಶಿಲಾಕೋಶಾದಭಿನ್ನಸ್ತದ್ವಪುರ್ಮಯಃ ।
ತಥಾಸರ್ಗಶ್ಚಿತ್ತೋರೂಪಾತ್ ಅಭಿನ್ನೋಽಪಿ ವಪುರ್ಮಯಃ ॥ ೨೨ ॥

ಸುಷುಪ್ತಾವಸ್ಥಯಾ ಚಕ್ರ ಪದ್ಮಲೇಖಾಶ್ಮಿಲೋದರೇ ।
ಯಥಾಸ್ಥಿತಾಶ್ಚಿತೇರಂತಸ್ತಥೇಯಂ ಜಗದಾವಲೀ ॥ ೨೩ ॥

ಶಿಲಾಂತಃಪದ್ಮಲೇಖಾಲೀ ಮರೀಚಾಂತಶ್ಚಮತ್ಕೃತಿಃ ।
ನೋದೇತಿ ನಾಸ್ತಮಾಯಾತಿ ಯಥಾಸರ್ಗಸ್ತಥಾ ಚಿತೌ ॥ ೨೪ ॥

---

೨೧. ಶಿಲೆಯಲ್ಲಿ ಕೆತ್ತಿರುವ ಚಿತ್ರಗಳು ನಾನಾ ಆಗಿದ್ದರೂ ಏಕಾಶ್ರಯಗಳಾದ್ದರಿಂದ, ಏಕಪಿಂಡತೆಯನ್ನು ಭಜಿಸುವಂತೆ, ಈ ಚಿತ್ಪಿಂಡವಾದ ಲೋಕಲೋಕವೆಲ್ಲವೂ ಒಂದೇ ಒಂದಾದ ಘನತೆಯನ್ನು, ಏಕಪಿಂಡತೆಯನ್ನು ಹೊಂದುವುದು.

೨೨. ಶಿಲೆಯಲ್ಲಿ ಕೊರೆದಿರುವ ಪದ್ಮವು ಬೇರೆ ಆಕಾರವಿದ್ದರೂ ಶಿಲಾಮಯವೇ ಆಗಿದ್ದು ಅದರಿಂದ ಯಾವರೀತಿಯಲ್ಲೂ ಭಿನ್ನವಾಗದಿರುವಂತೆ, ಈ ಸೃಷ್ಟಿಯೂ ಚಿತ್ತೇ ಆಗಿರುವುದರಿಂದ, ಬೇರೆಯಾಗಿರುವ.ಆಕಾರವಿದ್ಧರೂ ವಾಸ್ತವವಾಗಿ ಅಭಿನ್ನವು.

೨೩. ಶಿಲೆಯ ಗರ್ಭದಲ್ಲಿ ಮುಂದೆ ಚಿತ್ರಿತವಾಗುವ ಚಕ್ರ ಪದ್ಮಾದಿಗಳೆಲ್ಲವೂ ಸುಷುಪ್ತವಾಗಿರುವಂತೆ, ಚಿತ್ತಿನಲ್ಲಿಯೂ ಜಗದಾವಲಿಗಳು ಸುಷುಪ್ತವಾಗಿರುವುವು.

೨೪. ಶಿಲೆಯೊಳಗಿರುವ ಪದ್ಮಗಳ ಸಾಲುಗಳೂ ಮೆಣಸಿನೊಳಗಿರುವ ಖಾರವೂ ಉದಯವೂ ಆಗದೆ ಅಸ್ತವೂ ಆಗದೆ ಯಾವಾಗಲೂ ಇರುವಂತೆ ಚಿತ್ತಿನಲ್ಲಿ ಸೃಷ್ಟಿಯು ಇರುವುದು.

ಯಥಾಪುರಂಧ್ರ್ಯಾಂ ಮತ್ರ್ಯೋಂತಃ ಮಜ್ಜಾವಾ ಬಿಲ್ವಗಾ ಯಥಾ ।
ತಥಾನಂತವಿಕಾರಾಢ್ಯಾ ಚಿತೌ ಬ್ರಹ್ಮಾಂಡಮಂಡಲೀ || ೨೫ ||

ವಿಕಾರಾದಿ ತದೇವೇತಿ ಮುಧೈವೋಕ್ತಿರನರ್ಥಿಕಾ ।
ತತ್ತಾಂ ಸಮುಪಯಾತ್ಯಾಶು ಜಲಬಿಂದುರಿವಾಂಭಸಿ || ೨೬ ||

ಅನಂತತ್ವಾಚ್ಚಿತೇರೇತದ್ವಿ ಕಾರಾದಿಚಿತೇರಿತಿ ।
ಉಕ್ತ್ಯಾಸಪದ್ಯತೇ ಯಚ್ಚ ತಲ್ಲಯೇನ ವಿಲೀಯತೇ || ೨೭ ||

---

೨೫. ಸುಚರಿತ್ರೆಯಾದ ಸ್ತ್ರೀಯ (ಮನಸ್ಸಿನ)ಲ್ಲಿರುವ ಅವಳ ಕಾಂತನಂತೆ, ಬಿಲ್ವಫಲದಲ್ಲಿರುವ ಮಜ್ಜೆಯಂತೆ ಅನಂತಾನಂತ ವಿಕಾರಗಳಿಂದ ಕೂಡಿರುವ ಬ್ರಹ್ಮಾಂಡ ಮಂಡಲಗಳೆಲ್ಲವೂ ಚಿತ್ತಿನಲ್ಲಿಯೇ ಇರುವುವು.

೨೬. ವಿಕಾರಾದಿಗಳೂ ಚಿತ್ತೇ ಎಂಬುದು ಅರ್ಥವಿಲ್ಲದ ವ್ಯರ್ಥವಾದ ಮಾತೇ ಸರಿ! ಅವು ಸಮುದ್ರದಲ್ಲಿರುವ ಕಾಣುವ ಜಲಬಿಂದುವಿನಂತೆ, ಒಂದೇ ಕ್ಷಣದಲ್ಲಿಯೇ ಅದರಲ್ಲಿಯೇ ಅಡಕವಾಗಿ ಅದೇ ಆಗಿಹೋಗುವುದು.

(ಯದಾ ವಿಕಾರಿಣಾಂ ಬ್ರಹ್ಮಾಂಡಾಣಾಂ ಚಿನ್ಮಾತ್ರತ್ವಂ ತದಾ ತದ್ವಿಕಾರ ಭುವನ ಶರೀರಾದಿ ಭೇದಾನಾಂ ಚಿನ್ಮಾತ್ರತ್ವ ಮರ್ಥಸಿದ್ಧಂ-ಇತಿ ತದುಕ್ತಿರರ್ಥ ಶೂನ್ಯತ್ವಾನ್ಮುಧಾ ನಿಷ್ಫಲೈವ ಕುತೋ || ಅರ್ಥ ಶೂನ್ಯಾ ? ತತ್ರಾಹ-ತತ್ತಾಮಿತಿ। ಯತ ಏತದ್ವಿಕಾರಾದಿ ಆಶು ಬ್ರಹ್ಮಾಂಡಾನಾಂ ಚಿನ್ಮಾತ್ರತಾ ದರ್ಶನಕ್ಷಣ ಏವ ತತ್ತಾಂ ಚಿನ್ಮಾತ್ರತಾಂ ಸಮುಪಯಾತಿ ನ ಪೃಥಗಣು ಮಾತ್ರ ಮಪ್ಯವಶಿಷ್ಯತೇ–ಇತಿ ಹೇತೋಃ ।

೨೭. ಚಿತ್ತು ಅನಂತವಾಗಿರುವುದು: ಅದರಿಂದ ಈ ವಿಕಾರಾದಿಗಳೆಲ್ಲವೂ ಚಿತ್ತಿನವೇ ! ಈ ವಿಕಾರಗಳು ಹುಟ್ಟುವುದೂ ಉಕ್ತಿಯಿಂದಲೇ ! ಆ ಉಕ್ತಿಯು ವಿಲೀನವಾಗುತ್ತಲೇ ಅವೂ ವಿಲೀನವಾಗುವುವು.

(ಸ ಭೂರಿತಿ ವ್ಯಾಹರತ್ । ಭುವಮಸೃಜತ । ಏತ ಇತಿವೈ ಪ್ರಜಾಪತಿ ರ್ದೇವಾನ ಸೃಜತ । ಅಸೃಗ್ರಮಿತಿ ಮನುಷ್ಯಾ । ಇಂದವ ಇತಿ ಪಿತೃ। ಇತ್ಯಾದಿ ಶ್ರುತ್ಯಾ ಭುವನಾದಿ ಸರ್ಗಸ್ಯ ನಾಮಪೂರ್ವಕತ್ವೋಕ್ತೇರೇವ ನಾಮಲಯೇನ ಲಯೋಽಪ್ಯೂಹ್ಯಃ-ತಾ. ಪ್ರ.)

ಬ್ರಹ್ಮೈವೇದಂ ವಿಕಾರಾದಿ ವಿಕಾರಾದ್ಯರ್ಥವರ್ಜಿತಂ ।
ವರ್ಜನಾವರ್ಜನೇಽರ್ಥಸ್ಯ ಬ್ರಹ್ಮೈವಾನಂತತಾವಶಾತ್ ॥ ೨೮ ॥

ಬ್ರಹ್ಮಸ್ಥಿತಂ ವಿಕಾರಾದಿ ಬ್ರಹ್ಮೈವೋತ್ಪಾದಿತಂ ಕ್ರಮಾತ್ ।
ಅತ್ರಾನ್ಯಾರ್ಥಮಿದಂ ವಿದ್ಧಿ ಮೃಗತೃಷ್ಣಾಂಭಸಾ ಸಮಂ ॥ ೨೯ ॥

ಬೀಜಂ ಪುಷ್ಪಫಲಾಂತಸ್ಥಂ ಬೀಜಾಂಸತನ್ಸಾನ್ಯದಾತ್ಮಕಂ ।
ಯಾದೃಶೀ ಬೀಜಸತ್ತಾ ಸಾ ಭವಂತೀ ಯಾತ್ಯಥೋತ್ತರಂ ॥ ೩೦ ॥

ಚಿದ್ಘನೇ ಚಿದ್ಘನತ್ವಂ ಯತ್ಸ ಏವ ತ್ರಿಜಗತ್ಕ್ರಮಃ ।
ಏಕತ್ವಯೇತಯೋರ್ದ್ವಿತ್ವಮೇಕಾಭಾವೇದ್ವಯೋಃ ಕ್ಷತಿಃ ॥ ೩೧ ॥

---

೨೮. ಈ ವಿಕಾರಾದಿ ಸರ್ವವೂ ಬ್ರಹ್ಮವೇ ! ಅದರಿಂದ ವಿಕಾರಾದಿಗಳು ಬೇರೆ ಎನ್ನುವ ಮಾತಿಗೆ ಅರ್ಥವಿಲ್ಲ. ಅರ್ಥವನ್ನು ವರ್ಜಿಸಿದರೂ ಇಟ್ಟುಕೊಂಡರೂ ಬ್ರಹ್ಮವು ಅನಂತವಾಗಿರುವುದರಿಂದ, ಅರ್ಥವು ಅದನ್ನೇ ಹೇಳಬೇಕು.

೨೯. ಬ್ರಹ್ಮವು ವಿಕಾರಾದಿಯಾಗಿ ಇರುವುದು. ಬ್ರಹ್ಮವೇ ವಿಕಾರಾದಿಗಳಾಗಿ ಉತ್ಪಾದಿತವಾಗುವುದು. ಅದರಿಂದ ಬ್ರಹ್ಮವಲ್ಲದ ಇನ್ನೇನಾದರೂ ಇದ್ದರೆ ಅದು ಮೃಗತೃಷ್ಣೆಯಲ್ಲಿರುವ ಜಲದಂತೆಯೇ ಸರಿ.

೩೦. ಬೀಜದಲ್ಲಿ ಪುಷ್ಪಫಲಗಳು ಇರುವುವು. ಬೀಜದಲ್ಲಿ ಬೀಜವಲ್ಲದ ಇನ್ನೇನೂ ಇರುವುದಿಲ್ಲ. ಬೀಜ ಸತ್ತೆಯು ಯಾವುಮೋ ಅದೇ ಮುಂದೆ ದೊಡ್ಡದಾಗಿ ಪುಷ್ಪಫಲಾದಿಗಳಾಗುವುದು.

(ಪುಷ್ಪಫಲ ಪರ್ಯಂತೇ ಸ್ವಕಾರ್ಯೇ ಬೀಜವತ್ಸರ್ವತ್ರ ಚಿತ್ಸತ್ತಾನುವೃತ್ತಿ ದರ್ಶನಾದಪಿ ಸರ್ವಂ ಚಿದೇವೇತ್ಯಾಹ–ಬೀಜೇತ್ಯಾದಿನಾ । ಅಂಕುರಾದಿ ಪೂರ್ವ ಪೂರ್ವ ವಿಕಾರೇಷು ಭವಂತೀ ವಿದ್ಯಮಾನೈವಾಥ ಉತ್ತರಕಾಲಂ ಕಾಂಹಿಡ ಶಾಖಾ ಪಲ್ಲವಾದಿ ಯಾತಿ–ತಾ. ಪ್ರ.)

೩೧. ಚಿದ್ಘನದಲ್ಲಿ ಚಿದ್ಘನತ್ವವು ಯಾವುದೋ ಅದೇ ತ್ರಿಜಗತ್ತಾಗಿ ಆಗುವುದು. ಚಿತ್ತಿನ ಏಕತ್ವವು ಚಿತ್ತು ಜಗತ್ತು ಎಂಬ ಎರಡರ ಕಾರಣವಾಗಿರುವುದು: ಆ ಏಕವೂ ಇಲ್ಲದಿಲ್ಲರಲು ಎರಡಕ್ಕೂ ಹಾನಿಯು ಬರುವುದು.

ಜಗದನ್ಯಭವೋದ್ಭೂತಿರ್ನ ಕದಾಚಿತ್ತದೀದೃಶಂ ।
ಚಿದಚಿನ್ನಕದಾಚಿಚ್ಚ ದ್ವಯಮಂತರ್ಮಿಥೋಽದ್ವಯಂ ॥ ೩೨ ॥

ಮಹಾಶಿಲಾಂತರೇ ಭೇಧೋಲೇಖಾತ್ಮಾಸ್ತಿ ಯಥಾ ಬಹು ।
ತದನ್ಯಾನನ್ಯಮಜ್ಜಾದಿ ಚಿದ್ಘನೇ ತ್ರಿಜಗತ್ತಥಾ ॥ ೩೩ ॥

ರೇಖೋಪರೇಖಾವಲಿತಾ ಯಥೈಕಾ ಪೀವರೀ ಶಿಲಾ ।
ತಥಾತ್ರೈಲೋಕ್ಯವಲಿತಂ ಬ್ರಹ್ಮೈಕಮಿತಿದೃಶ್ಯತೇ ॥ ೩೪ ॥

ಏತಚ್ಛಿಲಾಂತರಬ್ಜಾದಿ ಯಥಾನಿತ್ಯಂ ಸುಷುಪ್ತಕಂ ।
ನಾಸ್ತಮೇತಿ ನಚೋದೇತಿ ತಥಾಹಂತಾ ಜಗದ್ಗತಿಃ ॥ ೩೫ ॥

ಯಥಾಶಿಲಾಂತರ್ಲೇಖಾದಿ ಭಿದ್ಯತೇ ನ ಶಿಲಾಂತರಾತ್ ।
ತತ್ಸಾರತ್ವಾಜ್ಜಗತ್ಕರ್ತೃ ಕರ್ತೃತ್ವಾದಿ ಜಗಚ್ಛ್ರಿತಿಃ ॥ ೩೬ ॥

---

೩೨. (ಅದರಿಂದ) ಜಗತ್ತು ಬೇರೊಂದರಿಂದ ಹುಟ್ಟಿತು ಎಂಬುದು ಯಾವಾಗಲೂ ಇಲ್ಲ. ಚಿತ್ತು ಯಾವಾಗಲಾದರೂ ಅಚಿತ್ತಾಗುವುದಿಲ್ಲ. ದ್ವಯವಾಗಿ ಕಂಡರೂ ನಿಜವಾಗಿ ಅದು ಅದ್ವಯವು.

೩೩. ಮಹಾ ಶಿಲೆಯ ಗರ್ಭದಲ್ಲಿ ಚಿತ್ರರೂಪವಾಗಿ ಭೇದವು ಬೇಕಾದಷ್ಟು ಇದ್ದರೂ ಅದು ಶಿಲೆಯೇ ಹೇಗೋ ಹಾಗೇ ಮಜ್ಜಾದಿಯೂ ಅನ್ಯವೂ ಅಲ್ಲ. ಅನನ್ಯವೂ ಅಲ್ಲ. ಚಿದ್ಘನದಲ್ಲಿರುವ ತ್ರಿಜಗತ್ತೂ ಹಾಗೇ ಅನ್ಯವೂ ಅಲ್ಲ: ಅನನ್ಯವೂ ಅಲ್ಲ.

೩೪. ದೊಡ್ಡ ಬಂಡೆಯು ಒಂದೇ ಒಂದಾಗಿದ್ದರೂ ರೇಖೆ, ಉಪರೇಖೆಗಳಿಂದ ಕೂಡಿರುವಂತೆ ಬ್ರಹ್ಮವು ಒಂದೇ ಒಂದಾಗಿದ್ದರೂ ತ್ರೈಲೋಕ್ಯಗಳಿಂದ ಕೂಡಿರುವಂತೆ ಕಾಣುವುದು.

೩೫. ಶಿಲೆಯ ಗರ್ಭದಲ್ಲಿ (ಮುಂದೆ ಶಿಲ್ಪಿ ಕರ್ಮದಿಂದ ಪ್ರಕಟವಾಗುವ) ಪದ್ಮಾದಿಗಳು ಸುಷುಪ್ತಾವಸ್ಥೆಯಲ್ಲಿದ್ದು, ಉದಯವೂ ಅಸ್ತವೂ ಇಲ್ಲದೆ ಇರುವಂತೆ ಜಗದ್ಗತಿಗೆ ಕಾರಣವಾದ ಅಹಂತೆಯೂ ಬ್ರಹ್ಮದಲ್ಲಿ ಸುಷುಪ್ತವಾಗಿರುವುದು.

೩೬. ಶಿಲೆಯಲ್ಲಿರುವ ಲೇಖಾದಿಗಳು ಶಿಲೆಗಿಂತ ಹೇಗೆ ಭಿನ್ನವಲ್ಲವೋ

ಯಥಾಶಿಲಾಂತರಬ್ಜಾನಾಂ ಸ್ಪಂದಾಸ್ಪಂದಭವಾಭವಾಃ ।
ವಿಷಯತ್ವಂ ನಗಚ್ಛಂತಿ ಕರ್ತಾರೋ ಜಗತಸ್ತಥಾ ॥ ೩೭ ॥

ನೇದಂ ಕದಾಚಿತ್ ಕ್ರಿಯತೆ ನ ಕದಾಚನ ನಶ್ಯತಿ ।
ಅದ್ರಿವತ್‌ಪ್ರಭವೋಲ್ಲಾಸ ವಿಲಾಸಾವೇದನಾತ್ಮಕಂ ॥ ೩೮ ॥

ಯಥಾ ಯತ್ರ ಯದಾಕಾರಂ ತಥಾ ತತ್ರ ತದೇವಹಿ ।
ಬ್ರಹ್ಮಸತ್ತಾತ್ಮಕಂ ಸರ್ವಂ ಸುಷುಪ್ತಸ್ಥಮಿವ ಸ್ಥಿತಂ । ॥ ೩೯ ॥

ಅವೆರಡೂ ಒಂದೇ ಸತ್ತೆಯಿಂದ ಆದವೋ, ಹಾಗೆಯೇ ಜಗತ್ಕರ್ತೃವೂ ಕರ್ತೃತ್ವಾದಿ ವಿಶಿಷ್ಟವಾದ ಜಗತ್ತೂ ಚಿತಿಯೇ ಅಲ್ಲವೆ ಬೇರೆಯಲ್ಲ.

(ಜಗತ್ಕರ್ತೃ ಜೀವೇಶ್ವರ ರೂಪಂ ತದೀಯಂ ಕರ್ತೃತ್ವಾದಿ ಜಗಚ್ಚ ಚಿ-ತಿಶ್ಚಿದೇವ ।-ತಾ. ಪ್ರ.)

೩೭. ಶಿಲಾಂತರದಲ್ಲಿರುವ ಕಮಲಾದಿಗಳ ವ್ಯಾಪಾರಾದಿಗಳೂ ಉತ್ಪತ್ತಿಲಯಗಳೂ ಇಂದ್ರಿಯ ಗೋಚರವಾಗುವಂತೆ ಪೃಥಕ್ಕಾಗಿ ವಿಷಯತ್ವವನ್ನು ಹೇಗೆ ಹೊಂದಲಾರವೋ ಹಾಗೆಯೇ ಜಗತ್ತಿನ ಕರ್ತೃಗಳು ಕೂಡ (ಜೀವೇಶ್ವರರು) ಪೃಥಕ್ಕಾಗಿ ಇರಲಾರರು.

(ಶಿಲಾ ಯಥಾ ತತ್ವದರ್ಶನೇ ವಿಷಯತ್ವಂ ನ ಗಚ್ಛತಿ ತಥಾ ಆತ್ಮ ತತ್ತ್ವದರ್ಶನೇಽಪಿ ಕರ್ತಾರ ಇತ್ಯರ್ಥಃ ।-ತಾ. ಪ್ರ.)

೩೮. ಇದಂಪದ ವಾಚ್ಯವಾದೀ ಜಗತ್ತು ಯಾವಾಗಲೂ ಸೃಷ್ಟಿಯಾಗುವುದಿಲ್ಲ: ನಾಶವೂ ಆಗುವುದಿಲ್ಲ. (ಅದರಿಂದ) ಬೆಟ್ಟದಂತೆ (ಬ್ರಹ್ಮವು) ಪ್ರಭವ, ಉಲ್ಲಾಸ, ವಿಲಾಸಗಳನ್ನು ನೋಡಿಕೊಂಡಿರುವುದು.

(ಅದ್ರಿವತ್ ಗಿರಿಕೂಟವತ್ ಅವಿಕಾರಿತ್ವಾತ್-ತಾ. ಪ್ರ.)

೩೯. ಯಾವುದು ಎಲ್ಲಿ ಆಕಾರವಾಗಿ ಕಂಡರೂ ಸರ್ವ ಸತ್ತಾತ್ಮಕವಾದ ಬ್ರಹ್ಮವು ತಾನು ಸುಷುಪ್ತಿಯಲ್ಲಿರುವಂತೆ ಇದ್ದು ಕೊಂಡಿದ್ದರೂ, ಆಯಾ ರೂಪವಾಗಿ (ಜೀವೇಶ್ವರ ಸಂಕಲ್ಪಾನುಸಾರವಾಗಿ) ಕಾಣಿಸಿಕೊಳ್ಳುವುದು.

ಭೂರಿಭಾವವಿಕಾರಾಢ್ಯೋ ಯೋಽಯಂ ಜಗದ್ಗುರುಭ್ರಮಃ ।
ಸುಷುಪ್ತಮೇವ ತದ್ವಿದ್ಧಿ ಶಿಲಾಂತಃ ಪಂಕಜಾದಿವತ್ ॥ ೪೦ ॥

ನಿತ್ಯಂ ಸುಷುಪ್ತಪದಮೇವ ಜಗದ್ವಿಲಾಸಃ ।
ಸಮ್ಯಕ್ ಪ್ರಶಾಂತ ಸಮಚಿದ್ಘನ ಖಾತ್ಮಕತ್ವಾತ್ ।
ಪದ್ಮಾಶ್ಶಿಲಾಂತರಿವ ಸರ್ಗದಶಾತ್ ಸ್ವಸಾರಾ ।
ದೃಷ್ಟ್ವಾ ನ ದೇಹಮುಪಯಾಂತಿ ಕದಾಚಿದೇವ ॥ ೪೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಶಿಲಾಕೋಶೋಪದೇಶೋ" ನಾಮ ಷಟ್‌ಚತ್ವಾರಿಂಶಃ ಸರ್ಗಃ

(ಅತ ಏವ ಶಿಲಾ ನಾನಾ ಶಿಲ್ಪಿನಾಂ ವಿರುದ್ಧಮಾನ ಸಂಕಲ್ಪನಾ ಭೇದ ಇವ ಬ್ರಹ್ಮಾಪಿ ನಾನಾ ಜೀವ ವಿರುದ್ಧ ಕಲ್ಪನಾ ಭೇದೇಽಪಿ ತತ್ತದ್ರೂಪ ಮೇವಾವ ತಿಷ್ಠತೇ, ಇತ್ಯಾಹ–ತಾ. ಪ್ರ.)

೪೦. ನಾನಾ ರೂಪಗಳಿಂದ ಭಾವ ವಿಕಾರಗಳಿಂದ ಕೂಡಿಕೊಂಡಿರುವ ಜಗತ್ತೆಂಬ ಮಹಾ ಭ್ರಾಂತಿಯು ಶಿಲಾಂತಸ್ಥವಾಗಿರುವ ಪಂಕಜಾದಿಗಳಂತೆ (ಬ್ರಹ್ಮದಲ್ಲಿ) ಸುಷುಪ್ತವಾಗಿ ಇತ್ತು (ಎಂದುಕೋ)

(ಸುಷುಪ್ತಸ್ಥಂ-ಯಥಾ ಪ್ರತಿಜೀವಂ ವಿಚಿತ್ರ ಸ್ವಾಪ್ನಾರ್ಥ ಕಲ್ಪನಾ ಭೇದಂ ಅವಿರೋಧೇನ ಸಹಿತೇ ತದ್ವದಿತ್ಯರ್ಥಃ। ಸುಷುಪ್ತಂ–ಅನುನ್ಮಿಷಿತ ವಾಸನಾ ಮಾತ್ರಮೇವ-ತಾ. ಪ್ರ.)

೪೧. ಈ ಜಗದ್ವಿಲಾಸವು ಚೆನ್ನಾಗಿ ಪ್ರಶಾಂತವಾಗಿರುವ, (ಅವಿಕಾರಿ ಯಾಗಿರುವುದರಿಂದ) ಸಮವೇ ಆಗಿರುವ ಚಿದ್ಘನದ, ಚಿದಾಕಾಶ ರೂಪವೇ ಆಗಿ ರುವುದರಿಂದ, ನಿಜವಾಗಿಯೂ ಇದು ಸುಷುಪ್ತ ಪದವಿಯಲ್ಲಿರುವದೆಂದೇ ಹೇಳ ಬೇಕು. ಶಿಲಾಂತಃ ಪದ್ಮಗಳಂತೆ ಸರ್ಗದಶೆಗೆ ಬಂದಾಗ ಪೃಥಕ್ಕಾಗಿ ತಮ್ಮದೇ ಬೇರೆಯಾದ ನಾಮರೂಪಗಳಿಂದ ವ್ಯವಹಾರ ಯೋಗ್ಯವಾಗಿದ್ದರೂ, ಯಾವಾ ಗಲೂ ಅದಕ್ಕೆ ಸ್ವತಂತ್ರವಾದ ಸ್ಥಿತಿಯೇ ಇಲ್ಲ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಶಿಲಾಕೋಶೋಪದೇಶ" ಎಂಬ
ನಲವತ್ತಾರನೆಯ ಸರ್ಗವು

ಸಪ್ತಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಚಿತ್ತತ್ತ್ವಸ್ಯ ಫಲಸ್ಯೇವ ಚಿತಃ ಸ್ವಾಪಾಪರಕ್ರಮಾತ್ ।
ಸ್ವಸತ್ತಾಸಂನಿವೇಶೇನ ಯಃ ಸ ಸರ್ಗ ಇತಿ ಸ್ಥಿತಃ ॥ ೧ ॥

ದೇಶಕಾಲಕ್ರಿಯಾದೀನಾಮಪಿ ತನ್ಮಯರೂಪತಃ ।
ಇದಮನ್ಯದಿದಂ ಚಾನ್ಯದಿತಿ ನಾತ್ರೋಪಪದ್ಯತೇ ॥ ೨ ॥

ನಲವತ್ತೇಳನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಚಿತ್ತಿನ ಸಂಕಲ್ಪದಿಂದ ಚಿತ್ತತ್ತ್ವದಲ್ಲಿಯೇ ಫಲಿಸುವ ಸತ್ತಾ ಸನ್ನಿವೇಶದಿಂದ ಯಾವುದು ಪ್ರತ್ಯೇಕವಾಗಿರುವಂತೆ ಕಾಣುವುದೋ ಅದೇ ಸೃಷ್ಟಿಯು.

(ಬಿಲ್ವ ದೃಷ್ಟಾಂತವಶಾತ್ ಅಚಿದ್ರೂಪಮೇವ ತದಂತರ್ಬೀಜ ಮಜ್ಜಾದೀನಾಮಿವ ಸ್ವಗತ ಭೇದೇನ ತತ್ರ ತತ್ಸಮ ಸತ್ತಾಕ ಸರ್ಗೋದ್ಭವಶ್ಚ ಅತ್ರೋಕ್ತ ಇತಿ ತಾತ್ಪರ್ಯ ಭ್ರಮೋಮಾಭೂದಿತಿ ತತ್ತಾತ್ಪರ್ಯಂ ವರ್ಣಯತಿ । ಚಿದ್ರೂಪಂ ತತ್ತ್ವಂ ಯಾವತ್ ಸ್ವಸ್ವರೂಪ ಪ್ರತಿ ಸಂಧಾನ ಶೂನ್ಯಲತಾವದೇವ ಸರ್ಗ ಗರ್ಭಮಿತಿ ದ್ಯೋತನಾಯ ಅಚೇತನ ಫಲದೃಷ್ಟಾಂತಃ । ಸರ್ಗಶ್ಚ ಚಿತಃ ಪ್ರಸಿದ್ಧ ಸ್ವಾಪಾದಪರಃ ಸ್ವಾಪಃ ಸ್ವಪ್ನ ಏವ ಯುಗ ವತ್ಸರಾದಿ ಕ್ರಮಾತ್ ಸತ್ತಾ ಕಲ್ಪಿತ ಸನ್ನಿವೇಶೇನ ಪ್ರವೃತಃ ನಚಿತ್ಸಮ ಸತ್ತಾಕಃ ಸ್ವಗತ ಭೇದ ಇತ್ಯರ್ಥಃ -ತಾ.ಪ್ರ.)

೨. (ಪದಾರ್ಥ ಪದಾರ್ಥಗಳಿಗೆ ಭೇದವು ತೋರುವುದಕ್ಕೆ ಕಾರಣವಾದ) ದೇಶ ಕಾಲ ಕ್ರಿಯಾದಿಗಳೂ ಸಹ ಚಿನ್ಮಯವೇ ಆದುದರಿಂದ ಇದು ಬೇರೆ, ಇದು ಬೇರೆ, ಎನ್ನುವ ಮಾತು ಸಲ್ಲುವುದಿಲ್ಲ.

ಸಮಸ್ತಶಬ್ದಶಬ್ದಾರ್ಥ ವಾಸನಾ ಕಲನಾವಿದಃ ।
ಏಕಾತ್ಮತ್ವಾದಸಚ್ಛೇದಮಿತಿ ಸಂಕಥ್ಯತೇ ಕಥಂ ॥ ೩ ॥

ಫಲಸ್ಯಾಂತಸ್ಸನಿವೇಶೋ ನಾಮಾನುಕ್ರಮತೋ ಯಥಾ ।
ಚಿತಃ ಸ್ವಸತ್ತಾಘನತಾ ನಾನಾನಾನಾ ಸ್ಥಿತಾ ತಥಾ ॥ ೪ ॥

ಅನಾನೈವಾಪಿ ನಾನೈವ ಕ್ಷುಬ್ಧೈವಾಕ್ಷುಭಿತೈವಚ ।
ಯಥಾಫಲಾಂತಃ ಸ್ವಾಸಕ್ತಾ ಚಿದಂತಃ ಸಿದ್ಧಯಸ್ತಥಾ ॥ ೫ ॥

ಜಗನ್ನಗರಮಾದರ್ಶೇ ಚಿತಃ ಸ್ವಂ ಪ್ರತಿಬಿಂಬಿತಂ ।
ಕಚತೀವಾಕಚದಪಿ ಶಿಲಾಂತಸ್ಸನ್ನಿವೇಶವತ್ ॥ ೬ ॥

---

೩. ಸಮಸ್ತವಾದ ಶಬ್ದಗಳೂ ಶಬ್ದಾರ್ಥಗಳೂ ಅವುಗಳಿಗೆ ಕಾರಣವಾದ ವಾಸನೆಗಳೂ ಸಹ ಅವುಗಳಿಂದ ಆಗುವ ಸಂಕಲ್ಪ ವಿಕಲ್ಪಗಳೂ ಸಹ ಏಕಾತ್ಮಕವಾದವುಗಳು ಎಂದಮೇಲೆ ಅವು ಅಸತ್ ಎನ್ನುವುದು ತಾನೇ ಹೇಗೆ ಸರಿ ?

(ವೇದಿತುರವಸ್ಥಾ ತ್ರಯೇಪಿ ಏಕಾತ್ಮತ್ವಾತ್ ಸತ್ಯತ್ವೇ ಅತ್ಯಂತಾಸತಸ್ತೇನ ವೇದನಾ ದರ್ಶನಾದಿತ್ಯರ್ಥಃ–ತಾ. ಪ್ರ.)

೪. ಚಿತ್ ಶಕ್ತಿಯ ಸ್ವಸತ್ತಾ ಘನತೆಯು ಯಾವುದುಂಟೋ ಅದೇ ನಾಮಾನುಕ್ರಮದಿಂದ ಫಲಿತವಾದ ಜಗತ್ತಿನಲ್ಲಿ ನಾನಾ ಸನ್ನಿವೇಶಗಳಲ್ಲಿ ನಾನಾ, ಅನಾನಾ, ಆಗಿ ಇರುವುದು.

೫. ಆ ಚಿತ್ಸತ್ತೆಯೇ ಅನಾನಾ ಆಗಿದ್ದರೂ ನಾನಾ ಆಗಿರುವಂತೆ, ಅಕ್ಷುಭಿತವಾದರೂ ಕ್ಷುಬ್ಧವಾದಂತೆ, ಹಣ್ಣಿನೊಳಗೆ ಇರುವ ರಸದಂತೆ, ವಿವಿಧ ಸನ್ನಿವೇಶಗಳನ್ನು ಕಲ್ಪಿಸುವುದು.

೬. ಚಿತ್ತಿನ ಕನ್ನಡಿಯಲ್ಲಿ ಪ್ರತಿಬಿಂಬಿಸಿದ ಚಿತ್ತೇ ಜಗನ್ನಗರವು. ಶಿಲಾಂತರಂಗದಲ್ಲಿರುವ (ಶಿಲ್ಪಿ ವಾಸನಾ ಜನ್ಯವಾದ) ಸಂನಿವೇಶದಂತೆ ಇದೂ ಭಾಸವಾಗದಿದ್ದರೂ ಭಾಸವಾದಂತೆ ಇರುವುದು.

ಪರಮೇ ಚಿನ್ಮಣೌ ಸಂತಿ ಜಗತ್ಕೋಟಿ ಶತಾನ್ಯಪಿ ।
ಚಿಂತಾಮಣಾವನಂತಾನಿ ಫಲಾನೀವಾರ್ಪಿತಾನ್ಯಲಂ ॥ ೭ ॥

ಚಿತ್ಸಮುದ್ಗಕಏವೇದಂ ತದಂಗೋತ್ಕೀರ್ಣ ಮಾತತಂ ।
ಜಗನ್ಮೌಕ್ತಿಕಮಾಭಾತಿ ತದಂಶಮಯಮನ್ಯವತ್ ॥ ೮ ॥

ಅಹೋರಾತ್ರಂ ವಿಕರರ್ಯ ವೇದನಾವೇದನಾನ್ಯಲಂ ।
ಚಿದಾದಿತ್ಯಸ್ಸ್ವತೋ ಭಾಸ್ವಾನ್ ಜಗದ್ದ್ರವ್ಯಾಣಿ ದರ್ಶಯೇತ್ ॥ ೯ ॥

ಸಮುದ್ರಕೋಟರಾವರ್ತ ಪಯಸ್ಸ್ಪಂದ ವಿಲಾಸವತ್ ।
ಅನಾನೈವಚ ನಾನಾ ಚಿತ್ ಶಿಲಾಂತಸ್ಸನ್ನಿವೇಶವತ್ ॥ ೧೦ ॥

---

೭. ಪರಮೋತ್ಕೃಷ್ಟವಾದ ಚಿತ್ತೆಂಬ ಮಣಿಯಲ್ಲಿ ಕೋಟಿಶತ ಜಗತ್ತುಗಳು ಇರುವುವು. ಚಿಂತಾಮಣಿಯಲ್ಲಿ ಅನಂತವಾದ ವರ (ಫಲ) ಗಳು ಇರುವುದಿಲ್ಲವೆ ? ಹಾಗೆ.

(ಮಾಯಿಕಾನಂತ ಶಕ್ತಿ ಮತ್ತ್ವಾದ್ವಾ ಚಿಂತಾಮಣೌ ಚಿಂತಕಮನೋರಥ ಫಲಾನೀವ ಚಿತಿ ಸರ್ವಂ ಜಗದಸ್ತೀತಿ ಶ್ರುತಿಷು ಆರನಾಭಿ ದರ್ಶನೋಪನ್ಯಾಸಾದಿತಿ ಭಾವಃ —ತಾ. ಪ್ರ.)

೮. ಚಿತ್ತೆಂಬ ಮುತ್ತಿನ ಚಿಪ್ಪಿನಲ್ಲಿ, ಅದರಲ್ಲಿಯೇ ಹುಟ್ಟಿ ಬೆಳೆದಿರುವ ಜಗತ್ತೆಂಬ ಮುತ್ತಿನ ಮಣಿಯು ಮೆರೆಯುತ್ತಿರುವುದು. ಆ ಜಗತ್ತು ಹೀಗೆ ಚಿನ್ಮಯವೇ ಆಗಿದ್ದರೂ ಅಚಿತ್ತಿನಂತೆ ಕಾಣುತ್ತಿರುವುದು.

೯. ಅಹೋ ರಾತ್ರಗಳಲ್ಲಿಯೂ ವೇದನ, ಅವೇದನಗಳನ್ನು ಹರಡುತ್ತ, ಚಿದಾದಿತ್ಯನು ತನ್ನ ಬೆಳಕಿನಿಂದ ಜಗತ್ತೆಂಬ ದ್ರವ್ಯಗಳನ್ನೂ ಬೆಳಗುತ್ತ ಪ್ರಕಾಶಿಸುತ್ತಿರುವನು.

೧೦. ಜಲವೊಂದೇ ಸಮುದ್ರ, ಅದರೊಳಗಿರುವ ಡೊಳ್ಳು, (ಮಡು), ಸುಳಿ, ಪ್ರವಾಹ, ಮೊದಲಾದ ಜಲ ವ್ಯಾಪಾರಗಳಿಂದ ಬೇರೆ ಬೇರೆಯಾಗಿ ತೋರುವಂತೆ, ಶಿಲಾಂತಃ ಪ್ರದೇಶದಲ್ಲಿ (ಸುಷುಪ್ತವಾಗಿರುವ) ಚಿತ್ರಾದಿಗಳಂತೆ ಅನಾನಾ ಆದ ಚಿತ್ತು ನಾನಾ ಆಗಿ ತೋರುವುದು.

ಯದಸ್ತಿ ತಚ್ಛಿತಿ ಶಿಲಾಶರೀರೇ ಶಾಲಭಂಜಿಕಾ ।
ಯನ್ನಾಸ್ತಿತಚ್ಛಿತಿ ಶಿಲಾಶರೀರೇ ಶಾಲಭಂಜಿಕಾ ॥ ೧೧ ॥

ಭಾವಾಭಾವೇಷು ಯತ್ಸತ್ಯಂ ಚಿನ್ಮಜ್ಜಾಕಲ್ಪಮೇವ ತತ್ ।
ಮಜ್ಜಾಸಾರಾಪದಾರ್ಥಶ್ರೀಃ ತನ್ಮಯಂಸ್ಯಾತ್ತದೇವಹಿ ॥ ೧೨ ॥

ಪದ್ಮನಾನಾದಿಶಬ್ದಾರ್ಥಃ ತ್ಯಕ್ತ್ವಾಯದ್ವಚ್ಛಿಲೋದರಂ ।
ನಾನಾತದ್ವದಿದಂ ನಾನಾ ತದೇತನ್ಮಯಮದ್ವಯಂ ॥ ೧೩ ॥

ನಾನಾಪ್ಯೇಕತಯಾಽನಾನಾ ಪದ್ಮಬಿಂಬಂ ಶಿಲೋದರಂ ।
ಯಥಾತದವಿಭಾಗಾತ್ಮ ತಥೇದಂ ಚಿದ್ಘನಾಂತರಂ ॥ ೧೪ ॥

---

೧೧. ಯಾವುದಾದರೂ ಇದೆ ಎಂದರೆ ಅದು ಶಿಲೆಯಲ್ಲಿ [ಕೆತ್ತಿರುವ] ಶಾಲ ಭಂಜಿಕೆಯಂತೆ: ಯಾವುದಾದರೂ ಇಲ್ಲವೆಂದರೆ ಅದು ಶಿಲೆಯಲ್ಲಿ [ಕೆತ್ತಬೇಕಾಗಿರುವ] ಶಾಲ ಭಂಜಿಕೆಯಂತೆ.

೧೨. ಭಾವ, ಅಭಾವ ಇವುಗಳಲ್ಲಿ ಯಾವುದು ಸತ್ಯವಾದುದೋ ಅದು ಚಿದ್ಬಿಲ್ವ ಫಲದಲ್ಲಿರುವ ಮಜ್ಜೆಗೆ ಸಮವಾದುದು. ಜಗತ್ತು ಜಗತ್ತುಗಳಲ್ಲಿರುವ ಪದಾರ್ಥಗಳೆಲ್ಲ ಮಜ್ಜಾಸಾರಕ್ಕೆ ಸಮವಾದುದು. ಅದರಿಂದ ಎಲ್ಲವೂ ಚಿನ್ಮಯವೇ !

೧೩. ಶಿಲಾಗರ್ಭವನ್ನು ಮರೆತರೆ ಪದ್ಮಗಳು ಅನೇಕವಾಗಿವೆ ಎಂಬ ಅರ್ಥವು ನಿಜವಾದುದು. 'ನಾನಾ' ಎಂಬುದೂ ಹಾಗೆಯೇ ಚಿತ್ತನ್ನು ಮರೆತಾಗಲೇ ! ಅದರಿಂದ 'ನಾನಾ' ಆಗಿ ತೋರುತ್ತಿದ್ದರೂ ಅದು ನಿಜವಾಗಿಯೂ ಚಿನ್ಮಯವೇ ! ಚಿನ್ಮಯವಾದುದರಿಂದ ಅದ್ವಯವೇ !

೧೪. ಪದ್ಮವು ನಾಮರೂಪದಿಂದ ಪ್ರತ್ಯೇಕವಾಗಿ ಕಂಡರೂ ವಾಸ್ತವ್ಯವಾಗಿ ಶಿಲೋದರವೇ ಹೇಗೋ ಹಾಗೆಯೇ ನಾನಾ ಕೂಡ ಅದರ ಆಧಾರವಾದ ಚಿತ್ತಿನ ಕಡೆಯಿಂದ ನೋಡಿದಾಗ 'ಅನಾನಾ'ನೇ ! ಆ ನಾನಾ ನಿಜವಾಗಿ ವಿಭಾಗವನ್ನು ಪಡೆದಿಲ್ಲ. ಮತ್ತು ಅದು ಚಿದ್ಘನದ ರೂಪಾಂತರವೇ !

ಯಥಾಮಲಪಯಃಕೋಶಃ ಸ್ಥಲಧಿಯಾಂತು ಭಾನುಭಾಃ।
ಸನ್ನೇವಾಸನ್ನಿವೈವಂ ಚಿನ್ನೈವ ತ್ವಂ ಸದಸದ್ವಪುಃ ॥ ೧೫ ॥

ಯಥಾಸಮ್ಯಕ್ ಪಯೋರಾಶಿಃ ಕೋಟರೇ ಕಲನೋನ್ಮುಖಂ।
ದ್ರವತ್ವಾತ್ ಸ್ಪಂದತೇಽಸ್ಪಂದಂ ತಥೇದಂ ಚಿದ್ಘನಾಂತರಂ ॥ ೧೬ ॥

ಚಿಚ್ಛಿಲಾಶ ಶಂಖ ಪದ್ಮಾದ್ಯಾಃ ತನ್ಮಯತ್ವೇಽಪ್ಯ ಸನ್ಮಯಃ।
ಜಗದ್ವಿದ್ಧಿ ಸಪದ್ಮಾದಿ ಪದಾರ್ಥಂ ಚಿಚ್ಛಿಲಾಂತರಂ ॥ ೧೭ ॥

ಮಹಾಶಿಲಘನೋಽಪ್ಯೇಷ ಚಿದ್ಘನಸ್ಥಂ ಶಿಲೋದರಂ।
ಅರಂಧ್ರೋ ನಿರ್ವ್ರಯೋಽಜ್ಯೋಽಜಸ್ಸಂ ಶಾಂತಸ್ಸನ್ನಿವೇಶವತ್ ॥ ೧೮ ॥

---

೧೫. (ಅಜ್ಞಾನಿಗಳ ಕಣ್ಣಿಗೆ) ನಿರ್ಮಲವಾದ ಜಲರಾಶಿಯಾಗಿ ಕಾಣುವ (ಮರೀಚಿಕೆಯು, ಈ ಸ್ಥಲದಲ್ಲಿ ಮರೀಚಿಕೆಯು ಕಾಣುತ್ತದೆಯೆಂಬ) ಜ್ಞಾನವುಳ್ಳವರಿಗೆ ಬಿಸಿಲು ಹೀಗೆ ಕಾಣಿಸುತ್ತದೆ ಎಂದು ಹೇಗೆ ತಿಳಿದಿರುವುದೋ ಹಾಗೆಯೇ ಚಿತ್ತೂ ಕೂಡ ಸತ್ ಆಗಿದ್ದರೂ ಅಸತ್ ಹಾಗೆ ತೋರುವುದು. ಆದರೂ ನೀನು ಸದ್ವಪುವೂ ಅಲ್ಲ: ಅಸದ್ವಪುವೂ ಅಲ್ಲ: ಚಿನ್ಮಯನು.

(ಸನ್ನೇವ ಆತಪಾದಿರಸಜ್ಜಲಾದಿರಿವೇತಿ ಸದಸದ್ವಪುರ್ಯಥಾ ಭಾತಿ ಏವಂ ಚಿತ್ಸ್ವಭಾವಃ ತ್ವಮಪಿ ಭಾಸಿ। ವಸ್ತುತಸ್ತು ತ್ವಂ ನೈವ ಸದಸದ್ವಪುರಿತ್ಯರ್ಥಃ।–ತಾ. ಪ್ರ.)

೧೬. ಸಮುದ್ರದ ಮಧ್ಯದಲ್ಲಿ ಜಲರಾಶಿಯು ತಾನು ದ್ರವವಾದುದರಿಂದ ಚಲಿಸುವುದು. ಆದರೂ ಅದು ಚಲಿಸುವುದಕ್ಕೆ ಅಲ್ಲಿ ಅವಕಾಶವಿಲ್ಲದಿರುವುದರಿಂದ ಅದು ನಿಶ್ಚಲವಾಗಿಯೇ ಇರುವುದು. ಅದರಂತೆಯೇ ಚಿದ್ಘನದ ವ್ಯಾಪಾರವೂ (ಎಂದು ತಿಳಿ.)

೧೭. ಚಿಚ್ಛಿಲೆಯಲ್ಲಿ ಕಾಣುವ ಶಂಖ ಪದ್ಮಾದಿಗಳೆಲ್ಲ ತನ್ಮಯವಾಗಿದ್ದರೂ ಅತನ್ಮಯವಾಗಿರುವಂತೆ ಜಗತ್ತೆಂಬ ಪದ್ಮಾದಿ ಪದಾರ್ಥಗಳು ಚಿನ್ಮಯವಾಗಿದ್ದರೂ ಅಚಿನ್ಮಯವಾಗಿ ಕಾಣುವುವು.

೧೮. ಈ ಚಿಚ್ಛಿಲೆಯು ಮಹಾ ಘನವಾದುದು. ಆದರೂ ಇದೂ ಚಿದ್ಘನವೇ! ಇದು ಅರಂಧ್ರವಾದುದು ನಿರ್ವ್ರಯವಾದುದು. ಸ್ವಚ್ಛವೂ ಅಜವೂ ಆದುದು. ಇತರ ಸನ್ನಿವೇಶಗಳೆಲ್ಲವೂ ಇದರಲ್ಲಿ ಸಂಕ್ರಾಂತವಾಗಿರುವುವು.

ತಪತೀದಂ ಜಗದ್ಬ್ರಹ್ಮ ಶರತ್ಕಾಲ ಇವಾಮಲಂ ।
ಸ್ಫುರತೀದಂ ಜಗದ್ಬ್ರಹ್ಮ ಸೌಮ್ಯಸ್ಸೋಮ ಇವದ್ರುಮಃ ॥ ೧೯ ॥

ಬ್ರಹ್ಮಣೀದಂ ಸುಷುಪ್ತಾಭಂ ನಾಸ್ತ್ಯನಾಶಂ ಶಿಲಾಬ್ಜವತ್ ।
ಬ್ರಹ್ಮತ್ವಂ ಬ್ರಹ್ಮಣಿಯಥಾ ತಥೈವೇದಂ ಜಗತ್ಸ್ಥಿತಂ ॥ ೨೦ ॥

ನಾನಯೋರ್ವಿದ್ಯತೇಭೇದಃ ತರುಪಾದಪಯೋರಿವ ।
ಯಾನೀಮಾನಿಜಗಂತೀಹ ನಾನ್ಯತ್ವಾನಿ ಚಿದಾಕೃತೇಃ ॥ ೨೧ ॥

---

೧೯. ಶರತ್ಕಾಲವು ಬರಲು ಸೂರ್ಯನು ಪ್ರಕಾಶಿಸುವಂತೆ ಜಗದ್ರೂಪವಾಗಿ ಬ್ರಹ್ಮವು ಪ್ರಕಾಶಿಸುತ್ತಿರುವುದು: ಈ ಜಗದ್ರೂಪವಾದ ಬ್ರಹ್ಮವು, ಶರತ್ಕಾಲದಲ್ಲಿ ಸೌಮ್ಯನಾದ ಚಂದ್ರನಂತೆ, ಸೋಮದ್ರುಮದಂತೆ, ಮೆರೆಯುತ್ತಿರುವುದು.

(ಯಥಾ ಶರತ್ಕಾಲಃ ತಪತಿ, ಅಮೃತದ್ರುಮಃ ಸೋಮಃ ಸ್ಫುರತೀತಿ, ಕಾಲಾತ್ಮ ಯೋರೇವ ಸೂರ್ಯ ಸೋಮಯೋಃ ಅವಾಂತರ ಭೇದಕಲ್ಪನಯಾ ಕ್ರಿಯಾಕಾರಕ ಭಾವೇನ ವ್ಯಪದೇಶಸ್ತಥಾ ಬ್ರಹ್ಮ ಜಗತ್ಪ್ರಕಾಶಯತಿ. ಜಗದಾತ್ಮನಾ ಸ್ಫುರತೀತಿ ಚ ವ್ಯಪದೇಶ ಇತ್ಯಾಹ-ತಪತೀತಿ । ಸೌಮ್ಯಃ ನಯನಾನಂದಃ । -ತಾ. ಪ್ರ.)

೨೦. ಈ ಜಗತ್ತು ಬ್ರಹ್ಮದಲ್ಲಿ ,ಸುಷುಪ್ತವಾಗಿರುವಂತೆ ಇರುವುದರಿಂದ, ಶಿಲಾ ಪದ್ಮದಂತೆಯೇ ಇದೂ ಇಲ್ಲವೆಂದರೆ ಇಲ್ಲ: ಅಥವಾ ಅನಾಶವಾಗಿರುವುದು ಎಂದರೆ ಹೌದು. ಈ ಜಗತ್ತು ಬ್ರಹ್ಮದಲ್ಲಿರುವ ಬ್ರಹ್ಮತ್ವದಂತೆ (ನೋಡುವವನಿಲ್ಲದಿದ್ದರೆ ಇಲ್ಲವಾಗುವುದು.)

(ಏವಂ ಚ ಬ್ರಹ್ಮಾತ್ಮನಾ ಜಗನ್ನಿತ್ಯ ನಿಷ್ಟಂ ನಿತ್ಯಸ್ಥಿತಮಿತವಾ ಉತ್ಪ್ರೇಕ್ಷಿತುಂ ಶಕ್ಯಮಿತ್ಯಾಶಯೇನಾಹ-ಬ್ರಹ್ಮಣೀತಿ । ವಾಸನಾ ಮಾತ್ರ ರೂಪತ್ವಾತ್ ಸುಷುಪ್ತಾಭಂ । ಯಥಾ ಶಿಲಾಬ್ಜಂ ಅಬ್ಜಾತ್ಮನಾ ನಿತ್ಯಮಸತ್, ಶಿಲಾತ್ಮನಾ ನಿತ್ಯ ಸತ್ ತದ್ವದಿತ್ಯರ್ಥಃ ॥-ತಾ. ಪ್ರ.)

೨೧. ಜಗತ್ತು, ಬ್ರಹ್ಮ, ಇವೆರಡಕ್ಕೂ ಭೇದವೆಲ್ಲಿಯದು? ತರು, ಪಾದಪ ಎಂಬ ಶಬ್ದಗಳಲ್ಲಿ ರೂಪಭೇದವೇ ಹೊರತು ಅರ್ಥ ಭೇದವು ಹೇಗೆ ಇಲ್ಲವೋ

ಭಾವಾಭಾವಾದಿ ನಾಸ್ತ್ಯೇಷಾಂ ತಸ್ಯಾ ಇವ ಕದಾಚನ ।
ಬ್ರಹ್ಮೈವ ಜಗದಾಭಾಸಂ ಮರುತಾಪೋ ಯಥಾ ಜಲಂ ॥ ೨೨ ॥

ಬ್ರಹ್ಮೈ ವಾಲೋಕನಾಚ್ಛುದ್ಧ ಭವತ್ಯಂಬು ಯಥಾತಪಃ ।
ಮೇರ್ವಾದೇ ಸ್ತೃಣಗುಲ್ಮಾದೇಃ ಚಿತ್ತಾದೇರ್ಜಗತೋಽಪಿಚ ॥ ೨೩ ॥

ಹಾಗೆಯೇ ಇಪೂ! ಈ ಜಗತ್ತುಗಳು ಎಷ್ಟೆಷ್ಟು ಇವೆಯೋ ಅಷ್ಟೂ ಚಿದಾಕೃತಿಗಳೇ ಅಲ್ಲದೆ ಇನ್ನೇನೂ ಅಲ್ಲ.

೨೨. ಆ ಚಿತ್ತಿಗೆ ಹೇಗೋ ಹಾಗೆಯೇ ಈ ಬ್ರಹ್ಮಾಂಡಗಳಿಗೂ ಯಾವಾಗಲೂ ಭಾವವೂ ಇಲ್ಲ: ಅಭಾವವೂ ಇಲ್ಲ. ಮರುಭೂಮಿಯ ತಾಪವೇ ಜಲವಾಗಿ ಕಾಣುವಂತೆ, ಬ್ರಹ್ಮವೇ ಜಗತ್ತಿನಲ್ಲಿ ಭಾಸವಾಗುವುದು.

೨೩. ಮರುಭೂಮಿಯ ಜಲವನ್ನು ತಿಳಿದುನೋಡಿದರೆ ಅದು ಬಿಸಿಲೇ ಆಗಿರುವಂತೆ, ಮೇರು ಪರ್ವತವಾಗಲಿ, ತೃಣಗುಲ್ಮಾದಿಗಳೇ ಆಗಲಿ, ಚಿತ್ತಾದಿಗಳಾಗಲಿ, ಜಗತ್ತೇ ಆಗಲಿ, ಯಾವುದೇ ಆದರೂ ತಿಳಿದುನೋಡಿದರೆ (ಅಲೋಕನ) ಅದು ಶುದ್ಧವಾದ ಬ್ರಹ್ಮವೇ ಆಗುವುದು.

(ನಮಗೆ ಜ್ಞಾನವು ಲಭಿಸುವುದು ಇಂದ್ರಿಯಗಳಿಂದ. ಅದರಲ್ಲಿಯೂ ಮುಖ್ಯವಾಗಿ ಕಣ್ಣು ಕಿವಿಗಳಿಂದ. ಹೀಗೆ ಇಂದ್ರಿಯ ಜನ್ಯಜ್ಞಾನವನ್ನು ಮನಸ್ಸು ಸವಿಸಾಕರಣಮಾಡುವುದು. ಬುದ್ಧಿಯು ನಿಶ್ಚಯಿಸುವುದು. ಆದರೆ ಮನೋಬುದ್ಧಿಗಳು ಜ್ಞಾನವನ್ನು ದೇಶಕಾಲ ಕರ್ತೃಕರ್ಮ ಸಂಬಂಧಿಯಾಗಿ ಅರಿಯಬಲ್ಲವೇ ಹೊರತು ದೇಶಕಾಲ ಕರ್ತೃಕರ್ಮಗಳಿಗೆ ಅತೀತವಾಗಿರುವುದನ್ನು ಅರಿಯಲಾರವು. ಅದರಿಂದಲೇ ನ ತತ್ರ ಮನೋ ಗಚ್ಛತಿ। ನ ವಾಕ್ ಮೊದಲಾದ ಶ್ರುತಿಯು ಹುಟ್ಟಿದುದು. ಅದರಿಂದ ಸಮ್ಯಾಗಾಲೋಕನದಲ್ಲಿ "ದೇಶಕಾಲಕರ್ತೃ ಕರ್ಮಗಳ ಸಂಬಂಧವಿಲ್ಲದೆ ಮನೋಬುದ್ಧಿಗಳು ಗ್ರಹಿಸಲಾರವು" ಎಂಬ ನಿಶ್ಚಯ ಜ್ಞಾನವು ಹುಟ್ಟುವುದು. ಆಗ ದೇಶಕಾಲಗಳ ಮಿತಿಗೆ ಒಳಪಡದೆ, ಕರ್ತೃ ಕರ್ಮ ಸಂಬಂಧವಿಲ್ಲದೆ ಇದ್ದರೂ, ಅಸ್ತಿ, ಭಾತಿ, ಪ್ರೀತಿ, ರೂಪವಾದ ಮತ್ತೊಂದು ಇರುವುದು ಎಂಬ ಸಮ್ಯಗ್ಜ್ಞಾನವು ದೃಢಪಡುವುದು. ಆಗ ನಮಗೆ ಸಾಕ್ಷಾತ್ಕಾರವಾಗುವುದು ಈ ಇಂದ್ರಿಯಗಳಿಂದಲ್ಲ. ಮೊದಲನೆಯ ಕೂಟಸ್ಥ ಸಾಕ್ಷಾತ್ಕಾರವಾದಾಗ "ಬ್ರಹ್ಮಣಃ ಕೋಶೋಽಸಿಮೇಧಯಾಪಿಹಿತಃ" ಎಂಬ ತ್ರಿಶಂಕುವಿನ ವೇದಾನುವಚನವು ಅನುಭವಕ್ಕೆ ಬರುವುದು. "ತಾನು ಎಂದುಕೊಳ್ಳುತ್ತಿರುವ ದೇಹದ ಒಳಗೆ ಕರ್ಮ

ಕಾರಿಯೆಂದು ನಾವೆಂದುಕೊಂಡಿರುವ ಚೇತನವು ಕರ್ಮಸಾಕ್ಷಿಯೇ ಹೊರತು ಕರ್ಮಕಾರಿಯಲ್ಲ: ಕರ್ತೃಕರ್ಮ ಸಂಬಂಧವು ಆರೋಪಿತವಲ್ಲದೆ ಸಹಜವಲ್ಲ. ಕೆಮಿಸ್ಟ್ರಿಯ ಕೆಟಲಿಟಿಕ್ ಏಜೆಂಟಿನಂತೆ ತಾನು'' ಎಂಬುದರ ಅರಿವಾಗಿ, ದೇಹದ ಹೊರಗೆಯೂ 'ತಾನು' ಚೇತನದಂತೆಯೇ ಇರುವ ಅಥವಾ ಸಜಾತೀಯವಾದ ಚೇತನವೊಂದು ವ್ಯಾಪಿಸಿಕೊಂಡಿರುವುದರ ಅನುಭವವಾಗುವುದು.

ಆ ಅನುಭವವು ದೃಢವಾಗುತ್ತ ಬಂದ ಹಾಗೆಲ್ಲ ''ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ" ಎಂಬ ನಾರಾಯಣನ ದರ್ಶನವಾಗುವುದು. ನಾರಾಯಣನ ದರ್ಶನವಾಗುತ್ತಿದ್ದ ಹಾಗೆಯೇ ಆ ನಾರಾಯಣ ಸಮುದ್ರದಲ್ಲಿ ''ಅಸ್ಮಿನ್ ಮಹತ್ಯರ್ಣವೇಽಂತರಿಕ್ಷೇ ಭವಾ ಅಧಿ। ನೀಲಗ್ರೀವಾಃ ಶಿತಿಕಂಠಾಃ ಶರ್ವಾಃ'' ಇತ್ಯಾದಿಯಾಗಿರುವ ಮಹಾರುದ್ರರ ದರ್ಶನವಾಗುವುದು.

ಆಗ ರುದ್ರಗಣದಲ್ಲಿ ತಾನೂ ಒಬ್ಬ ರುದ್ರನಾಗುವನು. ಆಗ ವೇದಗಳ ಅರ್ಥವು ಹೊಳೆಯುವುದು. ಜ್ಞಾನವು ಮನೋಬುದ್ಧಿಗಳ ಸಂಪರ್ಕವಿಲ್ಲದೆ ಲಭಿಸುವುದು. ಅದು ''ಬುದ್ಧೇಸ್ತು ಪರತಸ್ತು ಸಃ'' ಎಂದು ಗೀತೆಯಲ್ಲಿ ಹೇಳಿರುವುದು ಅದರ ದರ್ಶನವಾದಾಗ "ಭಿದ್ಯತೇ ಹೃದಯ ಗ್ರಂಥಿಶ್ಛಿದ್ಯಂತೇ ಸರ್ವ ಸಂಶಯಾಃ ‖ ಕ್ಷಿಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇಪರಾವರೇ ಆಗಿ, ತಾನು ತಾನು ಎಂದುಕೊಳ್ಳುತ್ತಿದ್ದುದು ಒಂದು ಜ್ಞಾನ; ಆ ಜ್ಞಾನವು ಪ್ರತ್ಯೇಕವಲ್ಲ ಎಂದು ಅನುಭವದಿಂದ ತಿಳಿದಾಗ ''ಜೀವೋ ಬ್ರಹ್ಮೈವ ನಾಪರಃ'' ಎಂಬ ಶ್ರುತಿಯ ಜ್ಞಾನವಾಗುವುದು. ಅಲ್ಲಿ ಮಹಾ ವಾಕ್ಯಗಳು ತಾವಾಗಿ ಬಂದು ತಮ್ಮ ಅರ್ಥವನ್ನು ತಿಳಿಸಿಕೊಡುವುವು. ಇತಿ ಶಿವಂ)

(ಮೇರ್ವಾದಿ ಸ್ಥೂಲತಮೋಽಪಿ ಪದಾರ್ಥಃ ತತ್ವದೃಶಾ ಆಲೋಕನಾತ್ ಶುದ್ಧಂ ಅಸ್ಥೌಲ್ಯಾದಿ ಧರ್ಮಕಂ ಬ್ರಹ್ಮೈವ ಭವತಿ। ಯಥಾ ಕರಕಾದ್ಯಂಬು ಕೇವಲಂ ಪಯೋಭವತಿ ತದ್ವತ್। ಅತೋಬಹಿಸ್ತೃಣಂ ಗುಲ್ಮಾದೇಃ ಬ್ರಹ್ಮಾಂಡಾಂತಸ್ಯ ಅಂತಶ್ಚಿತ್ತಾದೇಃ ಹಿರಣ್ಯಗರ್ಭಾಂತಸ್ಯಾಪಿ ಚ ಜಗತಃ ಪರಮಂ ಯದಂಬ್ವಿವ ಉತ್ತರೋತ್ತರಂ ಸೂಕ್ಷ್ಮತಮಂ ಭೂತ ಸೂಕ್ಷ್ಮ ವ್ಯಾಕೃತಾಕ್ಷರಾಂತಂ ತದ್ವಿಭಾಗೇನಾಂತೇ ಯದ್ರೂಪಂ ಪರಿಶಿಷ್ಯತೇ ತದೇವ ಪರಂ ವಿದುಃ ಬ್ರಹ್ಮವಿದಃ – ಇತಿ ಪರೇಣಾನ್ವಯಃ ‖ —ತಾ. ಪ್ರ.)

ಕರಕಾಂಬುವಿಭಾಗೇನ ಯದ್ರೂಪಂ ತತ್ಪರಂ ವಿದುಃ ।
ತತ್ಸಮೂಹಸ್ತದೇವೋಚ್ಚೈಃ ಚಿತ್ತಂ ಮೇರುತೃಣಾದಿಕಂ ॥ ೨೪ ॥

ಯತ್ಸೌಕ್ಷ್ಮ್ಯೇಽಪಿ ಹಿ ಸಾರಾತ್ಮ ಸ್ಥೌಲ್ಯೇ ಸಾರತರಂ ಹಿ ತತ್ । ॥ ೨೫ ॥

ಯಥಾ ರಸಾತ್ಮಿಕಾ ಶಕ್ತಿಃ ಪರಮಾಣುತಯಾಽನಘ ।
ಸ್ಥಿತಾಜಗತ್ಪದಾರ್ಥೇಷು ಪಾಯಸೀ ಬ್ರಹ್ಮತಾ ತಥಾ ॥ ೨೬ ॥

ರಸಶಕ್ತಿರ್ಯಥಾ ನಾನಾ ತೃಣಗುಲ್ಮಲತಾಂಭಸಾಂ ।
ತಥಾನಾನಾತಯೋದೇತಿ ಸೈವಾ ಸೈವೇವ ಬ್ರಹ್ಮತಾ ॥ ೨೭ ॥

---

೨೪. ಕರಕಾಂಬು ವಿಭಾಗದಿಂದ (ಎಂದರೆ ಆಲಿಕಲ್ಲು ಸ್ಥೂಲವಾಗಿ ಕಣ್ಣಿಗೆ ಕಂಡರೂ ನಿಜವಾಗಿ ಅದು ಜಲವಿಕಾರವೇ ಎಂಬ ಜ್ಞಾನವಾದಾಗ ಆಗುವಹಾಗೆ) ಯಾವ ರೂಪವು ಅವಶಿಷ್ಟವಾಗಿ ಉಳಿಯುವುದೋ ಅದೇ ಪರ ರೂಪವೆಂದು ಬಲ್ಲವರು ಹೇಳುವರು ಪಂಚಭೂತಗಳ ಸಮೂಹವೇ ಪಂಚೀ ಕೃತ ಅಪಂಚೀಕೃತ ರೂಪವಾಗಿ ಎಲ್ಲವನ್ನೂ ಆವರಿಸಿರುವುದು. ಚಿತ್ತದಿಂದ ಹಿಡಿದು ಮೇರು–ತೃಣಾದಿ ಪರ್ಯಂತವಾಗಿ ಸಮಸ್ತವೂ ಈ ಭೂತಗಳಿಂದಲೇ ಆಗಿರುವುದು.

೨೫. ಸೂಕ್ಷ್ಮವಾಗಿದ್ದಾಗ ಯಾವ ಸಾರವು ಇತ್ತೋ ಅದೇ ಸ್ಥೂಲವಾದಾಗ ವಿಸ್ತಾರವಾಗಿ ಕಾಣುವುದು.

೨೬. ಪರಮಾಣುರೂಪವಾಗಿ ಜಗತ್ಪದಾರ್ಥಗಳಲ್ಲೆಲ್ಲ ಇರುವ ರಸಾತ್ಮಕ ಶಕ್ತಿಯೇ ಪಯಶ್ಶಕ್ತಿರೂಪವಾದ ಬ್ರಹ್ಮವು.

(ಪಾಯಸೀ ಸ್ಥೂಲ ಜಲನಿಷ್ಠಾ ಸತೀ ಯೋಗ್ಯೇತಿ ಶೇಷಃ। ಸ್ಥೂಲವೈಚಿತ್ರ್ಯೇಣ ಸತ್ತಾವಾಂತರಸಾಮಾನ್ಯಾತ್ಮನಾ ಸತ್ತಾವೈಚಿತ್ರ್ಯೇಽಪಿ ಏತಾಂದೃಶಾಃ ದೃಷ್ಟಾಂತಾಃ ಕಲ್ಪ್ಯಾ–ಇತ್ಯಾಶಯೇನಾಹ. —ತಾ. ಪ್ರ)

೨೭. ರಸಶಕ್ತಿಯೇ ನಾನಾ ತೃಣ, ಗುಲ್ಮ, ಲತಾದಿಗಳಲ್ಲಿಯೂ ನೀರಿನಲ್ಲಿಯೂ ನಾನಾ ರೂಪವಾಗಿ ಉದಯಿಸಿದರೂ ರಸರೂಪವಾಗಿದ್ದರೂ ಅ–ರಸ ರೂಪವಾಗಿದ್ದರೂ ರಸಶಕ್ತಿಯೇ ಆಗಿರುವಂತೆ, ಬ್ರಹ್ಮವೇ ಎಲ್ಲವೂ ಆಗಿರುವುದು.

ಯೈಷಾರೂಪವಿಲಾಸಾನಾಂ ಆಲೋಕಪರಮಾಣುತಾ ।
ಗುಣಗುಣ್ಯರ್ಥ ಸತ್ತಾತ್ಮರೂಪಿಣ್ಯಾಸಾಂ ಪರಾತ್ಮತಾ ॥ ೨೮ ॥

ಚಿತಿ ಚಿತ್ತೇಽಸ್ತಿ ಮೇರ್ವಾದಿ ತದಭಿವ್ಯಂಜನಾತ್ಮನಿ ।
ಪಿಚ್ಛಪಕ್ಷೌಘಕಾಠಿನ್ಯಂ ಮಯೂರಾಂಡರಸೇ ಯಥಾ ॥ ೨೯ ॥

ಚಿತಿ ತತ್ತ್ವೇಽಸ್ತಿ ನಾನಾತಾ ತದಭಿವ್ಯಂಜನಾತ್ಮನಿ ।
ವಿಚಿತ್ರಪಿಚ್ಛಪಕ್ಷೌಘಪುಂಜೋ ಮಯೂರಾಂಡರಸೇ ಯಥಾ ॥ ೩೦ ॥

---

೨೮. ನೀಲಪೀತಾದಿ ರೂಪವಿಲಾಸಗಗಳು ಯಾವುದುಂಟೋ ಅವೆಲ್ಲಕ್ಕೂ ಆಲೋಕಪರಮಾಣುವೇ ಕಾರಣವು. ಗುಣ, ಗುಣಿ ಎಂಬ ವ್ಯತ್ಯಾಸಕ್ಕೆ ಕಾರಣವಾಗಿರುವ ಆತ್ಮರೂಪವಾದ ಪರಾತ್ಮವೇ ಈ ರೂಪವಿಲಾಸಗಳಿಗೂ ವೈಚಿತ್ರ್ಯಕ್ಕೂ ಕಾರಣವು.

೨೯. ಮಯೂರದ ಅಂಡದಲ್ಲಿರುವ ರಸದಲ್ಲಿ ವಿಚಿತ್ರವಾದ ಬಾಲದ ಗರಿಗಳ ಕಾಠಿನ್ಯವೂ ಇರುವಂತೆ, ಅಭಿವ್ಯಂಜನ ಕ್ಷೇತ್ರವಾದ ಚಿತ್ತಿನಲ್ಲಿಯೂ ಚಿತ್ತದಲ್ಲಿಯೂ ಮೇರ್ವಾದಿಗಳೆಲ್ಲವೂ ಇರುವುವು.

೩೦. ಮಯೂರಾಂಡರಸದಲ್ಲಿ ವಿಚಿತ್ರವಾದ ಬಾಲದ ಗರಿಗಳೆಲ್ಲವೂ ಇರುವಂತೆ, ಪ್ರಕಟವಾಗುವುದಕ್ಕೆ ಸಿದ್ಧವಾಗಿ ಬಹಿರ್ಮುಖವಾಗಿರುವ ಚಿತ್ತತ್ತ್ವದಲ್ಲಿ ನಾನಾತೆ ಇರುವುದು.

(ಆವಿರ್ಭಾವ ದಶಾಯಾಂ ಕಾರ್ಯಾತ್ಮನಾ ಕಾರಣ ಮೇವಾಸ್ತಿ ಇತಿವತ್ ತಿರೋಭಾವದಶಾಯಾಮಪಿ ಕಾರಣಾತ್ಮನಾ ಕಾರ್ಯಮಪ್ಯಸ್ತ್ಯೇವ ಇತಿ ಏತದಪಿ ದೃಷ್ಟಾಂತೇನ ಉಪಪಾದಯತಿ– ಚಿತೇತಿ। ಸರ್ವಥಾ ತಿರೋಭಾವೇ ಮಾಯಾಶಬಲ ಚಿತಿ ಅರ್ಧತಿರೋಭಾವೇ ಚಿತ್ತೇ ಮೇರ್ವಾದಿ ಸ್ಥೂಲಕಾರ್ಯಜಾತಮಸ್ತಿ । ಯಥಾ ಪಿಚ್ಛಾನಿ ಪಕ್ಷೌಘಾಃ ಕಾಠಿನ್ಯಂ ಚ ಮಯೂರೋಪಾದಾನ ಭೂತೇ ತದಂಡರಸೇ ಸಂತಿ ತದ್ವದಿತ್ಯರ್ಥಃ —ತಾ. ಪ್ರ)

ಯಥಾ ನಾನಾತ್ಮಿಕೇ ಹ್ಯೇವ ಬರ್ಹ್ಯಂಡರಸಬರ್ಹಿತೇ ।
ವಿವೇಕದೃಷ್ಟ್ಯಾ ದೃಷ್ಟೇ ತೇ ತಥಾ ಬ್ರಹ್ಮಜಗತ್ಸ್ಥಿತಂ ॥ ೩೧ ॥

ಸನಾನಾತೋಽಪ್ಯನಾನಾತೋ ಯಥಾಂಡರಸಬರ್ಹಿಣಃ ।
ಅದ್ವೈತದ್ವೈತಸತ್ತಾತ್ಮಾ ತಥಾಬ್ರಹ್ಮ ಜಗದ್ಭ್ರಮಃ ॥ ೩೨ ॥

---

೩೧. ಮಯೂರಾಂಡ ರಸವೇ ವಿಜೃಂಭಿಸಿ ಬೆಳೆದಾಗ (ಗರಿ, ಕೊಕ್ಕು, ಮಾಂಸ, ಮೊದಲಾದ) ನಾನಾ ಪದಾರ್ಥಗಳಾಗುವುವು ಎಂಬುದನ್ನು ತಿಳಿಯ ಬಲ್ಲ ವಿವೇಕವನ್ನು ಉಳ್ಳವನಿಗೆ ಮಯೂರವು ಹೇಗೆ ಅಂಡರಸ ವಿಕಾರವೋ ಹಾಗೆಯೇ ಬ್ರಹ್ಮವೇ ಈ ಜಗತ್ತಾಗಿರುವುದು.

೩೨. ಅಂಡರಸದಲ್ಲಿರುವ ಮಯೂರವು ನಾನಾತ್ವವುಳ್ಳುದೂ ಹೌದು: ನಾನಾತ್ವವಿಲ್ಲದುದೂ ಹೌದು: ಎಂಬುದು ಹೇಗೋ ಹಾಗೆಯೇ ಬ್ರಹ್ಮದಲ್ಲಿ ಕಾಣುವ ಜಗದ್ಭ್ರಮವು ಅದ್ವೈತ ದ್ವೈತ ಸತ್ತೆಗಳೆರಡೂ ಉಳ್ಳುದು.

(ತರ್ಹಿ ಕಿಂ ದ್ವೈತಾದ್ವೈತಾತ್ಮಕಮೇವ ಬ್ರಹ್ಮ ಅಸ್ತು ಯಥಾ ಬ್ರಹ್ಮ ವಾಸ್ತವಂ ಜಗದಿತಿಚ ಭ್ರಮಃ ತಥಾದ್ವೈತಾದ್ವೈತಾತ್ಮಕಂ। ನೈತಾವತಾವೈಷಮ್ಯ ಪ್ರಸಕ್ತಿಃ । ಯಥಾ ಸದಸತೋಃ ಸತ್ತಾಸಮತಾಯಾಮವಸ್ಥಿತಿಸ್ತಥಾ ತನ್ನಿರೂ ಪಣಾದಿತ್ಯರ್ಥಃ ।

(ಭೇದಾಭೇದವನ್ನು ಕುರಿತು ಹೇಳುವ ವೇದಾಂತವೊಂದುಂಟು. ಸುಮಾರು ಕ್ರಿ. ಶ. ೩೦೦ ರಲ್ಲಿ ಜಲಂಧರದಲ್ಲಿ ಪಾರ್ಶ್ವ (ಪೂರ್ಣಕ), ವಸುಮಿತ್ರ, ಇವರಿಬ್ಬರ ಅಧ್ಯಕ್ಷತೆಯಲ್ಲಿ ಸೇರಿದ ಬೌದ್ಧ ಭಿಕ್ಷುಸಭೆಯ ಐದುನೂರು ಭಿಕ್ಷುಗಳು ನವಧರ್ಮ ಎಂಬ ಒಂಭತ್ತು ಗ್ರಂಥಗಳನ್ನು ಮಹಾಯಾನದ ಆಧಾರವಾಗಿ ಅಂಗೀಕರಿಸಿದರು. ಅವುಗಳಲ್ಲಿ ಒಂದಾದ ಲಂಕಾವತಾರಸೂತ್ರವು, ಬೌದ್ಧ ಆರ್ಯದೇವನು ಖಂಡಿಸಿದ ನಾಲ್ಕು ಅಬೌದ್ಧಶಾಸ್ತ್ರಗಳನ್ನು ಹೇಳುತ್ತದೆ. ಅವು "(೧) ಏಕತ್ವವನ್ನು ಹೇಳುವ ಸಾಂಖ್ಯರು (೨) ಭೇದವಾದಿಗಳಾದ ವೈಶೇಷಿಕರು (೩) ಅಭೇದ ಭೇದ ಎರಡನ್ನೂ ಒಪ್ಪುವ ನಿರ್ಗ್ರಂಥ ಪುತ್ರರು (೪) ಎರಡನ್ನೂ ಒಪ್ಪದ ಜ್ಞಾತಿ ಪುತ್ರರು" ಮುಂದೆ ಈ ಭೇದಾಭೇದವಾದವು ಭಾಗವತಮತ ವಾಯಿತು.

ಯಥಾ ಸದಸತೋಽಸ್ಸತ್ತಾ ಸಮತಾಯಾಮವಸ್ಥಿತಿಃ ।
ಯತಸ್ಸದಸತೋರೂಪಂ ಭಾವಸ್ಥಂ ವಿದ್ಧಿ ತಂ ಪರಂ ॥ ೩೩ ॥

ನಾಽನಾನಾನಾತ್ಮಕಮಿದಂ ತ್ವನುಭೂತಂ ನ ಸಂಭವಸ್ ।
ಚಿಜ್ಜಗದ್ವಲನಂ ಪಶ್ಯ ಬರ್ಹ್ಯಂಡೇ ರಸಬರ್ಹಿಣಂ ॥ ೩೪ ॥

ಶಂಕರಾಚಾರ್ಯರ ಅಭಿಪ್ರಾಯವನ್ನು ನಿರಾಕರಿಸಿ ಶಂಕರಾಚಾರ್ಯರಿಗಿಂತಲೂ ಪ್ರಾಚೀನರಾದ ಭರ್ತೃ ಪ್ರಪಂಚರೇ ಮೊದಲಾದವರಿಂದ ಸ್ಥಾಪಿಸಲ್ಪಟ್ಟ ಬ್ರಹ್ಮ ಪರಿಣಾಮ ವಾದವನ್ನು ಸ್ಥಾಪಿಸಿದ ಭಾಸ್ಕರಾಚಾರ್ಯರದು (ಎಂಟನೆಯ ಶತಮಾನ) ಔಪಾಧಿಕ ಭೇದಾಭೇದವಾದ. ಯಾದವ ಪ್ರಕಾಶಾಚಾರ್ಯರದು ಸ್ವಾಭಾವಿಕ ಭೇದಾಭೇದವಾದ.

(ಸದಸತ್ಕಾರ್ಯವಾದವೆಂಬ ಭೇದಾಭೇದ ವಾದವನ್ನು ಜೈನ, ಪಾತಂಜಲ, ಕುಮಾರಿಲಾದಿಗಳು ಒಪ್ಪಿರುವರು.)

(ನನುವೈಷಮ್ಯ ಪರಿಹಾರಾಯ ಸತ್ತಾ ಸಮತಾ ಯಾಮೇವ ಅವಸ್ಥಾನಮಿತಿ ಕುತಃ । ಅಭಾವ ಮಾತ್ರತಾಪತ್ತಿ ಲಕ್ಷಣ ಶೂನ್ಯತ್ವೇಽಪಿ ವೈಷಮ್ಯ ಪರಿಹಾರಾತ್ ಇತ್ಯಾಶಂಕ್ಯ ಆಹ-ಯತ ಇತಿ । ರೂಪಂ ತತ್ವಂ ಭಾವಸ್ಥಂ ಸದ್ವಸ್ತು ಪರ್ಯವಸನ್ನಂ ನ ಶೂನ್ಯನಿಷ್ಠ । ಅಭಾವಸ್ಯಾಪಿ ಸದಧೀನ ನಿರೂಪಣತ್ವಾತ್ । ತಂ ಭಾವಂ ಚ ಪರಂಬ್ರಹ್ಮೈವ ವಿದ್ಧಿ —ತಾ. ಪ್ರ.)

೩೩. ಸಮತೆಯಲ್ಲಿ ಸತ್, ಅಸತ್, ಎರಡರ ಸತ್ತೆಗಳೂ ಬೆರೆತಿರುವುವು. ಈ ಸತ್, ಅಸತ್ ಎಂಬ ಎರಡೂ ರೂಪಗಳು ಭಾವಸ್ಥವು. ಆತ್ಮನು ಆ ಎರಡರಿಂದ ಆಚೆ ಇರುವನು.

೩೪. ಈ ಜಗತ್ತು ನಾನಾ ಆಗಿಯೂ ಅನಾನಾ ಆಗಿಯೂ ಇರುವುದು ಅನುಭವಕ್ಕೆ ಬಂದಿದ್ದರೂ ಇದು ಎರಡೂ ಆಗಿರಲಾರದು: ಅದರಿಂದ ಚಿತ್ತಿನಿಂದಲೇ ಈ ಜಗತ್ತು ಹರಡಿರುವುದು: ಮಯೂರಾಂಡದಲ್ಲಿರುವ ರಸಮಯೂರದಂತೆ ಇದು.

ಯಥಾ ಜಗತಿ ಚಿತ್ತತ್ತ್ವಂ ಚಿತ್ತತ್ತ್ವೇ ಯಜ್ಜಗತ್ತಥಾ ।
ನಾನಾನಾನಾತ್ಮಕೈಕಂ ಚ ಮಯೂರಾಂಡರಸೇ ಯಥಾ ॥ ೩೫ ॥

ನಾನಾಪದಾರ್ಥಭ್ರಮಪಿಚ್ಛಪೂರ್ಣಾ ।
ಜಗನ್ಮಯೂರಾಂಡರಸಶ್ಚಿದಾದ್ಯಾ ॥
ಮಯೂರರೂಪಂ ತ್ವಮಯೂರಮಂತಃ ।
ಸತ್ತಾಪದಂ ವಿದ್ಧಿ ಕುತೋಽಸ್ತಿ ಭೇದಃ । ॥ ೩೬ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಚಿದ್ಘನೋಪದೇಶೋ" ನಾಮ ಸಪ್ತಚತ್ವಾರಿಂಶಃ ಸರ್ಗಃ

---

೩೫. ಅದರಿಂದ ಜಗತ್ತಿನಲ್ಲಿರುವ ಚಿತ್ ತತ್ತ್ವವು ಮಯೂರದಲ್ಲಿರುವ ಅಂಡರಸದ ಹಾಗಿರುವುದು. ಚಿತ್ ತತ್ತ್ವದಲ್ಲಿ ಜಗತ್ತು ಅಂಡದಲ್ಲಿರುವ ಮಯೂರದಂತಿರುವುದು. ಅದರಿಂದ ನಾನಾ, ಅನಾನಾ ಎಂಬ ಎರಡೂ ಒಂದೇ !

೩೬. ನಾನಾ ಪದಾರ್ಥರೂಪವಾಗಿ ತೋರಿಬರುತ್ತಿರುವ ಜಗದ್ಭ್ರಾಂತಿಯಿದು ಸುಂದರವಾದ ಬಾಲದಿಂದ ಮುದ್ದಾದ ಮಯೂರದಂತೆ! ಇದಕ್ಕೆ ಕಾರಣವಾಗಿ ಇದರಲ್ಲಿಯೇ ಇರುವ ಆದ್ಯವಾದ ಚಿತ್ತು ಮಯೂರದಲ್ಲಿರುವ ಅಂಡರಸವು. ಈ ಮಯೂರದ ರೂಪವು ಮಯೂರ ರೂಪವಾಗಿಯೇ ಅಂಡರಸದಲ್ಲಿರಲಿಲ್ಲ; ಆದರೆ ಮಯೂರವಾಗುವ ಸತ್ತೆಯು ಆ ಅಂಡದಲ್ಲಿ ಇರುವಂತೆ, ಜಗತ್ಸತ್ತೆಯೂ ಚಿತ್ತಿನಲ್ಲಿರುವುದೆಂದು ತಿಳಿ. ಅದರಿಂದ ಭೇದವೆಲ್ಲಿಯದು ?

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಚಿದ್ಘನೋಪದೇಶ" ಎಂಬ
ನಲವತ್ತೇಳನೆಯ ಸರ್ಗವು.

ಅಷ್ಟಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಯತ್ರಾನುದಿತರೂಪಾತ್ಮ ಸರ್ವಮಸ್ತೀದಮಾತತಂ ।
ಮಯೂರಇವ ಬೀಜೇಽಂತಸ್ತದಹಂತಾ ದಿಗಾದಿ ಚ ॥ ೧ ॥

ಯತ್ರ ನಾಭ್ಯುದಿತಂ ಕಿಂಚಿತ್ತತ್ರ ಸರ್ವಂ ಚ ವಿದ್ಯತೇ ।
ತದತ್ರಾಪ್ಯಂಗಿರಾಃ ಸ್ವರ್ಗಸುಖಸಾರೇಣ ಬಿಂಬತಿ ॥ ೨ ॥

ನಲವತ್ತೆಂಟನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು:—

೧. ಆತ್ಮನು ಎಲ್ಲಿ ಅನುದಿತರೂಪನಾಗಿ ತಾನೇ ತಾನಾಗಿ ಸಚ್ಚಿದಾನಂದ ಘನನಾಗಿರುವನೋ ಅಲ್ಲಿ ಈ ಜಗದ್ವೈಚಿತ್ರ್ಯವೆಲ್ಲವೂ ಅಂಡದಲ್ಲಿರುವ ಮಯೂರದಂತೆ ಇರುವುದು. ಆ ಆತ್ಮದಲ್ಲಿಯೇ ಅಹಂತಾ, ದಿಗಾದಿಗಳೆಲ್ಲ ಇರುವುವು.

(ಮಯೂರರಸ ದೃಷ್ಟಾಂತಾತ್ ತಿರೋಭೂತ ಜಗದ್ವೈಚಿತ್ರ್ಯಗರ್ಭಂ ಚಿದಚಿತ್ಸಂವಲಿತಂ ಬೀಜಶಕ್ತಿಮತ್ ಅವ್ಯಾಕೃತಮೇವ ತತ್ತ್ವಂ, ನ ತತಃ ಪರಂ ಶುದ್ಧಮಸ್ತೀತಿ ವ್ಯಾಮೋಹೋ ಮಾಭೂದಿತಿ ತದಧಿಷ್ಠಾನಂ ನಿರ್ವಿಶೇಷ ಭೂಮಾನಂದ ರೂಪಂ ನಿಷ್ಕೃಷ್ಯ ಪರಿಚಾಯಯಿತುಂ ಶ್ರೀ ವಸಿಷ್ಠ ಉವಾಚ–ಯತ್ರೇತಿ। ಬೀಜೇ ಅಂಡೇ ಅಂತರ್ಮಯೂರ ಇವವರ್ಣಿತಂ, ಅಂತಃ ಅಹಂತಾದಿ, ಬಹಿರ್ದಿಗಾದಿ ವಿಯದಾದಿ ಚ ಸರ್ವಂ ಜಗತ್ ಯತ್ರ ಶುದ್ಧೇ ಕಾಲತ್ರಯೇಽಪಿ ಅನುದಿತರೂಪಾತ್ಮ ಅನುತ್ಪನ್ನ ಸ್ವರೂಪಮೇವಾಸ್ತಿ ತದೇವೋಕ್ತ ದೃಷ್ಟಾಂತ ತಾತ್ಪರ್ಯ ವಿಷಯೋ ನ ಶಬಲಮಿತ್ಯರ್ಥಃ। —ತಾ. ಪ್ರ.)

೨. ಎಲ್ಲಿ ಯಾವುದೂ ಇನ್ನೂ ಉದಯವಾಗಿಯೇ ಇಲ್ಲವೋ ಅಲ್ಲಿಯೂ ಸರ್ವವೂ ಇದ್ದೇ ಇರುವುದು. ಅದರಂತೆಯೇ ಅಂಗಿರಾಃ (ಪ್ರಾಣವು) ಸ್ವರ್ಗ ಸುಖ ಸಾರಭೋಗಾಭಿಲಾಷಾ ರೂಪವಾಗಿ ಪ್ರಕಟವಾಗಲು ಸಿದ್ಧವಾಗಿರುವುದು.

ತಥಾ ಚ ಮುನಯೋ ದೇವಾ ಗಣಾಸ್ಸಿದ್ಧಾ ಮಹರ್ಷಯಃ ।
ಆಸ್ವಾದಯಂತಃ ಸ್ವರೂಪಂ ಸದಾ ತುರ್ಯಪದೇ ಸ್ಥಿತಾಃ ॥ ೩ ॥

(ಯತ್ರ ಪರಮಾರ್ಥಕಃ ಕಿಂಚಿನ್ನಾಭ್ಯುದಿತಂ ತತ್ರೈವ ಸರ್ವಂ ಜಗತ್-ಅವಿದ್ಯಯಾ ವಿದ್ಯತೇ । ತದೇವ ಅತ್ರ ಅಸ್ಮಿನ್ ದೇಹೇಽಪಿ, ಅಂಗಿರಾಃ-ಅಂಗಾನಾಂ ರಸಭೂತಃ ಪ್ರಾಣಃ ಸರ್ವ-ಸ್ವರ್ಗಾದಿವೈಷಯಿಕ ಸುಖಸಾರೇಣ ಚಿತ್ತ ವೃತ್ತಿ ಭೇದೇನ ವಿಚಿತ್ರ ಭೋಗಾಕಾರತಯಾ ಸ್ಫಟಿಕಮುಕುರಾದೌ ಚಂದ್ರಇವ ಬಿಂಬತಿ। ತಥಾ ಚ ವಿಷಯಸುಖಾನುಭವ ಬಲಾತ್ ತದ್ಬಿಂಬಭೂತ ನಿರತಿಶಯಾ ನಂದಂ ಸದ್ಭಾವೋಽನುಮೇಯಃ-ಇತ್ಯರ್ಥಃ- —ತಾ. ಪ್ರ.)

(ತಾತ್ಪರ್ಯ ಪ್ರಕಾಶಕರು ಹೇಳುವುದು ವ್ಯಕ್ತಿಗತಪ್ರಾಣವೆಂಬಂತಿದೆ; ಆದರೆ ನಮಗೆ "ಇಲ್ಲಿ ಹೇಳಿರುವುದು ಪ್ರಶ್ನೋಪನಿಷತ್ತಿನ ಮೂರನೆಯ ಅಧ್ಯಾಯದಲ್ಲಿ ಹೇಳಿರುವ ಪ್ರಾಣ ಎನ್ನಿಸುತ್ತದೆ. "ಆತ್ಮನಃ ಏಷ ಪ್ರಾಣೋ ಜಾಯತೇ । ಯಥೈಷಾ ಪುರುಷೇ ಛಾಯಾ" ಇತ್ಯಾದಿಯಾಗಿ ಆ ಪ್ರಶ್ನವನ್ನೆಲ್ಲ ಇಲ್ಲಿ ಅನು ಸಂಧಾನಮಾಡಿ. ಆಚಾರ್ಯರು ಈ ಮೇಲಿನ ವಾಕ್ಯಕ್ಕೆ ಹೀಗೆ ಭಾಷ್ಯಮಾಡಿದ್ದಾರೆ. "ಆತ್ಮನಃ ಪರಸ್ಮಾತ್ ಪುರುಷಾತ್, ಅಕ್ಷರಾತ್, ಸತ್ಯಾತ್, ಏಷ ಉಕ್ತಃ ॥ ಪ್ರಾಣೋ ಜಾಯತೇ । ಕಥಮಿತ್ಯತ್ರ ದೃಷ್ಟಾಂತಃ । ಯಥಾ ಲೋಕ ಏಷಾ ॥ ಪುರುಷೇ ಶಿರಃಪಾಣ್ಯಾದಿಲಕ್ಷಣೇ ನಿಮಿತ್ತೇ ಛಾಯಾ ನೈಮಿತ್ತಿಕೀ ಜಾತೇ ತದ್ವತ್ ಏತಸ್ಮಿನ್ಬಹ್ಮಣೀ ಏತತ್ಪ್ರಾಣಾಖ್ಯಂ ಛಾಯಾಸ್ಥಾನೀಯಂ ಅನ್ಯತರರೂಪಂ ತತ್ವಂ ಸತ್ಯೇ ಪುರುಷೇ ಆತತಂ ಸಮರ್ಪಿತಮಿತ್ಯೇತತ್ ।" ಇತ್ಯಾದಿ.)

೩. ಹೀಗೆಯೇ ಆ ಆತ್ಮನಲ್ಲಿ ಮುನಿ, ದೇವ, ಸಿದ್ಧ ಮಹರ್ಷಿಗಳು ಸದಾ ತುರ್ಯದಲ್ಲಿ ಇದ್ದುಕೊಂಡು ಆತ್ಮಾನಂದವನ್ನು ಅನುಭವಿಸುತ್ತಿರುವರು.

(ಸರ್ವ ಸಾಧಾರಣ್ಯೇನ ತತ್ಸದ್ಭಾವೇ ಅನುಮಾನ ಪ್ರಮಾಣಮುಕ್ತ್ವಾ ವಿದುಷಾಮನುಭವ ಪ್ರಮಾಣಂ ಅಪ್ಯಾಹ. —ತಾ. ಪ್ರ.)

(ಅದೇ ಪ್ರಶ್ನೋಪನಿಷತ್ತಿನಲ್ಲಿ ಹೇಳಿರುವ ಷೋಡಶಕಲ ಪುರುಷನ ವಿಚಾರವನ್ನಿಲ್ಲಿ ಚಿಂತಿಸಿ.)

ಏತೇ ಯೇ ಸ್ತಬ್ಧನಯನ ದೃಷ್ಟಯೋ ನಿರ್ನಿಮೇಷಿಣಃ ।
ತೇ ದೃಶ್ಯದರ್ಶನಾಸಂಗ ಸ್ಪಂದತ್ಯಾಗೇ ವ್ಯವಸ್ಥಿತಾಃ ॥ ೪ ॥

ನಾಸ್ಥಿತಾ ಭಾವನಾ ಯೇಷಾಂ ಸ್ಥಿತಾನಾಮಪಿ ಕರ್ಮಸು ।
ಸಂವಿತ್ಸಂವೇದ್ಯಸಂಬಂಧ ಸ್ಪಂದತ್ಯಾಗೇ ಚ ಯೇ ಸ್ಥಿತಾಃ ॥ ೫ ॥

ಪ್ರಾಣೋನಸ್ಪಂದತೇ ಯೆಷಾಂ ಚಿತ್ರಸ್ಥವಪುಷಾಮಿವ ।
ಮನೋನಸ್ಪಂದತೇ ಯೆಷಾಂ ಚಿತ್ರಸ್ಥವಪುಷಾಮಿವ ॥ ೬ ॥

---

೪. ಯಾರು ಭ್ರೂ ಮಧ್ಯದಲ್ಲಿ ದೃಷ್ಟಿಯಿಟ್ಟು ನಿಶ್ಚಲವಾಗಿ ರೆಪ್ಪೆ ಹೊಡೆಯದೆ ನೋಡುವರೋ, ದೃಶ್ಯ ದರ್ಶನಗಳಲ್ಲಿ ಆಸಕ್ತಿಯನ್ನು ಬಿಟ್ಟು ಪ್ರಾಣವನ್ನು ನಿಶ್ಚಲವಾಗಿ ನಿಲ್ಲಿಸಿರುವರೋ (ಅವರು ಇದನ್ನು ನೋಡಬಲ್ಲರು.)

೫. ವ್ಯವಹಾರದಲ್ಲಿ ಮುಳುಗಿದ್ದರೂ ಸಂಕಲ್ಪವು ಯಾರಿಗೆ ಇರುವುದಿಲ್ಲವೋ, ಸಂವಿತ್, ಸಂವೇದ್ಯಗಳ ಸಂಬಂಧವನ್ನು ತಪ್ಪಿಸಿ, ಪ್ರಾಣ ವ್ಯಾಪಾರವು ಸುಸ್ಥಿತವಾಗುವಂತೆ ಯಾರು ಮಾಡಿಕೊಂಡಿದ್ದಾರೋ ಅವರು ಇದನ್ನು ನೋಡಬಲ್ಲರು.

(ಇದಂತು ಅನಾರೂಢ ಷಷ್ಠಾದಿ ಭೂಮಿಕಾನಾಂ । ಆರೂಢ ಷಷ್ಠ ಭೂಮಿಕಾಸ್ತು ವ್ಯವಹರಂತೋಽಪಿ ಸಮ್ಮೂಹಿತೈಃ ಪೂರ್ವ ಭೂಮಿಕಾಗತೈಃ ತುಲ್ಯಮಾತ್ಮಸುಖಂ ಸದೈವಾಸ್ವಾದಯಂತೀತ್ಯಾಹ–ಕರ್ಮಸು ವ್ಯವಹಾರೇಷು ಸ್ಥಿತಾನಾಮಪಿ ಯೇಷಾಂ ಷಷ್ಠಾದಿಭೂಮಿಕಾ ಗತಾನಾಂ ಬಾಹ್ಯಾರ್ಥ ಸತ್ಯತಾ ಭಾವನಾ ನಾ ಆಸ್ಥಿತಾ ಈಷದಪಿ ನಸ್ಥಿತಾ । ಯೇಚ ಪೂರ್ವ ಭೂಮಿಕಾಗತಾ ಸ್ಸಂವಿತ್ ಸಂವೇದ್ಯ ಸಂಬಂಧ ತ್ಯಾಗ ಲಕ್ಷಣ ಸಮಾಧೌಸ್ಥಿತಾಃ ! ಯೇಷಾಂ ಪ್ರಾಣೋ ಮನಶ್ಚ ನ ಸ್ಪಂದತೇ । ತೇಚ ಚಿತ್ತ ಚೇತ್ಯ ಸಮಾಸಂಗಯೋಃ ತ್ಯಾಗೋ ಯಸ್ಮಿಂಸ್ತಥಾವಿಧೇ ಭೂಮಾನಂದ ಪದೇ ತುಲ್ಯತಯಾ ಸ್ಥಿತಾ ಇತಿ ಸಾರ್ಧದ್ವಯಸ್ಯ ಅರ್ಥಃ ॥ —ತಾ. ಪ್ರ.

೬. ಚಿತ್ರಗತವಾದ ಪುರುಷರಲ್ಲಿ ಹೇಗೋ ಹಾಗೆ ಪ್ರಾಣವು ಯಾರಲ್ಲಿ ಸ್ವತಂತ್ರವಾಗಿ ವ್ಯಾಪಾರ ಮಾಡುವುದಿಲ್ಲವೋ (ಅವರು ಇದನ್ನು ನೋಡಬಲ್ಲರು.)

ಚಿತ್ತಚೇತ್ಯಸಮಾಸಂಗತ್ಯಾಗೇ ತೇ ಸ್ವಪದೇ ಸ್ಥಿತಾಃ ।
ಸ್ಪಂದಾತ್ಸಂಸಾಧಯಂತ್ಯರ್ಥಂ ತೇನಾಂಶೇನೇಶ್ವರೋ ಯಥಾ || ೭ ||

---

೭. (ಅಂಥವರು) ಚಿತ್ತ, ಚೇತ್ಯ ಇವುಗಳ ಸಂಬಂಧವನ್ನು ತಪ್ಪಿಸಿ ಸ್ವತಂತ್ರವಾಗಿ ಆತ್ಮಪದದಲ್ಲಿ ನಿಲ್ಲುವರು. ಈಶ್ವರನು ಹೇಗೆ ತನ್ನ ಒಂದು ಅಂಶದಿಂದಲೇ ವ್ಯಾಪಾರಮಾಡಬೇಕಾದುದನ್ನು ಮಾಡುವನೋ ಅದರಂತೆಯೇ ಇವರೂ ತಮ್ಮ ಪ್ರಾಣದ ಒಂದಂಶವನ್ನು ನಿಯೋಗಿಸಿ ಬೇಕಾದುವನ್ನು ಮಾಡಬಲ್ಲವರಾಗುವರು.

(ಷಷ್ಠ್ಯಾದಿ ಭೂಮಿಕಾಗತಾ ಅಂತರ್ಬ್ರಹ್ಮಾಕಾರಾ ಖಂಡ ವೃತ್ತಿ ಧಾರಾ ಸ್ಪಂದಾತ್ ತೇನ ಅಂಶೇನ ನಿರತಿಶಯಾನಂದಾಸ್ವಾದನ ಲಕ್ಷಣಂ ಪರಮ ಪುರುಷಾರ್ಥಂ ಯಥಾ ಸಂಸಾಧಯಂತಿ ತಥೈವ ಬಹಿಶ್ಚಿತ್ತ ಚೇತ್ಯಾದಿ ಸ್ಪಂದಾತ್ ವ್ಯವಹಾರ ಸಂಸ್ಥಿತಿಮಪಿ ಕುರ್ವಂತಿ। ಯಥಾ ಜಗದೀಶ್ವರೋ ಅಂತಃ ಸದೈವ ಸ್ವರೂಪಾನಂದ ಪ್ರತಿಷ್ಠೋಽಪಿ ಬಹಿರ್ಮಾಯಯಾ ಜಗದ್ವ್ಯವಸ್ಥಾಂ ಪಾಲಯತಿ ತದ್ವದಿತ್ಯರ್ಥಃ —ತಾ. ಪ್ರ.)

ಚಿತ್ತಚೇತ್ಯ ಸಂಬಂಧವನ್ನು ತಪ್ಪಿಸುವುದು ಎಂದರೆ, ಚೇತ್ಯದರ್ಶನದಿಂದ ಚಿತ್ತನಲ್ಲಿ ಆಗುವ ವಿಕಾರಗಳನ್ನು ತಪ್ಪಿಸುವುದು. ನಿರ್ವಿಕಾರವೆಂದರೆ, ವಿಕಾರವಾಗುವುದೇ ಇಲ್ಲವೆಂದು ಅರ್ಥವಲ್ಲ: ವಿಕಾರಗಳಿಂದ ಹಾನಿಯನ್ನು ಪಡೆಯುವುದಿಲ್ಲ ಎಂದು ಅರ್ಥ. ಅದರಿಂದ ಭಗವದ್ಗೀತಾ ಭಾಷ್ಯದಲ್ಲಿ ಆಚಾರ್ಯರು ಹೇಳಿರುವಂತೆ ಕರ್ತೃತ್ವಾದಿ ಧರ್ಮಗಳು ಆತ್ಮನಿಗೆ ಸಂಬಂಧಪಟ್ಟವಲ್ಲ: ಅವು ಅಂತಃಕರಣಧರ್ಮಗಳು. ಅಲ್ಲಿರುವ ಅವಿದ್ಯಾಲೇಶ ಸಂಬಂಧದಿಂದ ವ್ಯಾಪಾರಗಳು ನಡೆದರೂ ಅವು ಅಭಿಮಾನಮೂಲಕವಲ್ಲವಾಗಿ ಬಂಧಕಗಳಲ್ಲ. ಅದರಿಂದ, ಈಗ ಅಸ್ಮಾದೃಶರಿಗೆ ಆಗುವಂತೆ ಚೇತ್ಯದರ್ಶನದಿಂದ ಉಂಟಾಗುವ ರಾಗದ್ವೇಷ ಮೂಲಕ ಪ್ರವೃತ್ತಿಯು ಎಲ್ಲಿ ಹುಟ್ಟುವುದಿಲ್ಲವೋ ಎಂದರೆ ಎಲ್ಲಿ ಚೇತ್ಯಪರತಂತ್ರತೆ ಇಲ್ಲವೋ, ಎಲ್ಲಿ ಅಂತಃಕರಣವೃತ್ತಿಯು ಸ್ವತಂತ್ರವಾಗಿ ಹುಟ್ಟುವುದೋ, ಅದು ಚಿತ್ತಚೇತ್ಯ ಸಂಬಂಧತ್ಯಾಗವೆನ್ನುವುದು.

ಅಂಥವರ ವ್ಯಾಪಾರವೂ ಕೂಡ ಕ್ರೀಡೆಯಂತೆ, ಸುಖಪ್ರದವೇ ಆಗುವುದರಿಂದ ಅಂಥವರಿಗೆ ಹಾನಿಯು ಏನೂ ಇಲ್ಲ. ಆಟವನ್ನು ಆಡುವಾಗ ಕ್ರೀಡಾರ್ಥ

ತಥೈವಚಿತ್ತಚೇತ್ಯಾದಿ ಸ್ಪಂದಾತ್ ಕುರ್ವಂತಿ ಸಂಸ್ಥಿತಿಂ ॥ ೮ ॥

ಯಥಾಹ್ಲಾದಯತಿ ಸ್ವಸ್ಥಂ ಪಲ್ಲವಂ ರಶ್ಮಿರೈಂದವಃ ।
ತಥಾತ್ಮಾಹ್ಲಾದಯತ್ಯಂತಃ ದೃಶ್ಯದರ್ಶನ ಸಂಗಮೇ ॥ ೯ ॥

ವಾಗಿ ಆಡುವವರು ಕೆಲವರು, ಜಯಾರ್ಥಿಗಳಾಗಿ ಆಡುವವರು ಕೆಲವರು. ಮೊದಲನೆಯ ಜಾತಿಯಲ್ಲಿ "ಯೋಗಃ ಕರ್ಮಸು ಕೌಶಲಂ'' ಎಂಬ ಸೂತ್ರದ ಸುಂದರ ಭಾಷ್ಯವನ್ನು ನೋಡಬಹುದು. ಆಗ ಅವರಿಗೆ ಜಯಾಪಜಯಗಳೆರಡೂ ಸುಖಪ್ರದಗಳು, ಜಯಾರ್ಥಿಗಳಂತೆ ಅವರಿಗೆ ಹೇಯೋಪಾದೇಯತೆಗಳು ಇಲ್ಲ. ಅದು ಸ್ವತಂತ್ರ ವೃತ್ತಿಯ ಗುರುತು.

ಈ ಸ್ವತಂತ್ರ ವೃತ್ತಿಯೇ ಕ್ರೀಡಾ.

ವ್ಯಾಪಾರವೆಂದರೆ ತನ್ನ ಅಂತಃಕರಣವು ಇಂದ್ರಿಯ ಕರಣಾದಿಗಳಲ್ಲಿ ಸೇರಿ ಅವುಗಳಿಂದ ಕೆಲಸ ಮಾಡುವುದು. ಅಂತಃಕರಣ, ಮನಸ್ಸು, ಇವುಗಳೆಲ್ಲ ಪ್ರಾಣೋಪಜೀವಿಗಳು. ಪ್ರಾಣವು ಆತ್ಮನ ಛಾಯೆ. ಅದರಿಂದ ವೃತ್ತಿಯು ಬಹಿರ್ಗತವಾಗುವುದೆಂದರೆ ಪ್ರಾಣವೇ ಹೊರಗೆ ಹೋಗುವುದು. ಅದರಿಂದಲೇ ಆಯಾಸವಾಗುವುದು. ಆದರೆ ಬ್ರಹ್ಮಜ್ಞನಿಗೆ ಪ್ರಾಣವು ಇಂದ್ರಿಯಕರಣಗಳ ಮೂಲಕ ಹೊರಗೆ ಹೋದಾಗಲೆಲ್ಲ ಯಜ್ಞವೇ ನಡೆಯುತ್ತಿರುವುದಾದ್ದರಿಂದ ಅಲ್ಲಿ ಪ್ರಾಣವು ವ್ಯಯವಾಗುವುದಕ್ಕೆ ಪ್ರತಿಯಾಗಿ ಸಂಚಯವೇ ಆಗುತ್ತಿರುವುದು. ಪ್ರಾಣವ್ಯಯವೇ ಆಯಾಸ: ಪ್ರಾಣ ಸಂಚಯವೇ ಆನಂದ. ಹೀಗಿರುವುದರಿಂದ ತನ್ನಂಶವಾದ ಪ್ರಾಣದಿಂದಲೇ ವ್ಯಾಪಾರ ಮಾಡುವುದು. ಆ ವ್ಯಾಪಾರದಿಂದಲೂ ಪ್ರಾಣ ಸಂಚಯವೇ ಆಗುವುದರಿಂದ ಅಲ್ಲಿ ಹಾನಿಯಿಲ್ಲ. "ಪೂರ್ಣಾತ್ ಪೂರ್ಣ ಮುದಚ್ಯತೇ । ಪೂರ್ಣಸ್ಯ ಪೂರ್ಣ ಮಾದಾಯ ಪೂರ್ಣ ಮೇವಾವ ಶಿಷ್ಯತೇ" ಏತಕ್ಕೆ ? ಹೇಗೆ ? ಎಂದರೆ ಪೂರ್ಣಮದಃ ಪೂರ್ಣಮಿದಂ.

ಈ ಸ್ವತಂತ್ರ ವೃತ್ತಿಯನ್ನು ಧ್ಯಾನಿಸುತ್ತ ''ಪ್ರಜಾಪ್ರತಿಯು ತನ್ನ ವಪೆಯನ್ನು ತೆಗೆದು ಹೋಮ ಮಾಡಿದನು'' ಎಂಬ ಶ್ರುತ್ಯರ್ಥವನ್ನು ಚಿಂತಿಸಿ.

೮-೯. ಚಂದ್ರನ ಕಿರಣಗಳು ಸ್ವಸ್ಥವಾಗಿ (ಎಂದರೆ ಪರಪ್ರೇರಣೆಯಿಲ್ಲದೆ ಸ್ವತಂತ್ರವಾಗಿ) ಸ್ವಭಾವಾನುಗುಣವಾಗಿ ಬಂದು, ಅವುಗಳ ಒಳಹೊಕ್ಕು ಚಿಗುರನ್ನು ಸಂತೋಷಪಡಿಸುವ ವ್ಯಾಪಾರವನ್ನು ಮಾಡುವಂತೆ, ಸ್ವತಂತ್ರವಾಗಿ ನಡೆಯುವ

ಬಿಂಬಾದ್ದೂರಂ ಪ್ರಯಾತಸ್ಯ ಭಿತ್ತಾವಪತಿತಸ್ಯ ಚ ।
ಯದಿಂದೋಸ್ತೇಜಸೋರೂಪಂ ತದ್ರೂಪಂ ಶುದ್ಧ ಸಂವಿದಃ ॥ ೧೦ ॥

ನ ದೃಶ್ಯಂ ನೋಪದೇಶಾರ್ಹಂ ನಾತ್ಯಾಸನ್ನಂ ನ ದೂರಗಂ ।
ಕೇವಲಾನುಭವಪ್ರಾಪ್ಯಂ ಚಿದ್ರೂಪಂ ಶುದ್ಧಮಾತ್ಮನಃ ॥ ೧೧ ॥

ನ ದೇಹೋ ನೇಂದ್ರಿಯಪ್ರಾಣೌ ನ ಚಿತ್ತಂ ನಚ ವಾಸನಾ ।
ನ ಜೀವೋ ನಾಪಿಚ ಸ್ಪಂದೋ ನ ಸಂವಿತ್ತಿರ್ನವೈ ಜಗತ್ ॥ ೧೨ ॥

ಚಿತ್ತ ಚೇತ್ಯಾದಿ ವ್ಯಾಪಾರಗಳನ್ನು ಮಾಡುತ್ತ ಸಂಸ್ಥಿತಿಯನ್ನು ನಿರ್ವಹಿಸುವರು. ಮತ್ತು ಅಂಥವರಲ್ಲಿ ದೃಶ್ಯ ದರ್ಶನ ಸಂಯೋಗದಿಂದ ಆತ್ಮಾನಂದವೇ ಲಭಿಸುವುದು.

(ತೇಷಾಂ ವ್ಯವಹಾರೇ ದೃಶ್ಯೇಷು ಬಾಹ್ಯ ವಿಷಯೇಷು ದರ್ಶನಾನಾಂ ಬುದ್ಧಿವೃತ್ತಿನಾಂ ಸಂಗಮೇ ತ್ರಿಪುಟ್ಯಾಮಭಿವ್ಯಕ್ತೋ ನಿರತಿಶಯನಂದಾತ್ಮಾಂತ ಹ್ಲಾದಯತ್ಯೇವ ಇತಿ ಸರ್ವೋಽಪಿ ವ್ಯವಹಾರಃ ಸುಖರೂಪಏವ, ಯಥಾ ಐಂದವೋ ರಶ್ಮಿಸ್ತರು ಪಲ್ಲವ ಮಂತಃ ಪ್ರವಿಶ್ಯ ಹ್ಲಾದಯತಿ ತದ್ವದಿತ್ಯರ್ಥಃ ॥ –ತಾ. ಪ್ರ.)

೧೦. ಬಿಂಬದಿಂದ ಹೊರಟು, ಇನ್ನೂ ಗೋಡೆಯ ಮೇಲೆ ಬೀಳದಿರುವ, ಚಂದ್ರನ ಪ್ರಕಾಶವು ಹೇಗೆ ಇರುವುದೋ ಹಾಗೆ ಶುದ್ಧ ಸಂವಿತ್ತುಳ್ಳವರು ಇರುವರು.

(ಅಂತಃ ಸ್ವರೂಪ ಸುಖಂತು ತೇಷಾಂ ಸುತರಾಂ ನಿರ್ವಿಕ್ಷೇಪ ಮಿತ್ಯತ್ರಾಪಿ ದೃಷ್ಟಾಂತ ಮಾಹ ಬಿಂಬಾದಿತಿ । ಬಿಂಬನಿತ್ಯಾಂತರಾಲೀಕಸ್ಯ ಶುದ್ಧನಭಸ್ಥಸ್ಯ ಇಂದೋಸ್ತೇಜಸಃ ಚಂದ್ರಿಕಾಯಾ ಯದ್ರೂಪಂ ತದೇವ ಪರಮಾತ್ಮನೋ ನಿರ್ವಿಕ್ಷೇಪಾಹ್ಲಾದ ರೂಪಂ ತೈರನುಭೂಯತೇ —ತಾ. ಪ್ರ.)

೧೧. ಆತ್ಮನ ಚಿದ್ರೂಪವು ಹೇಗಿರುವುದು ಎಂದರೆ, ಅದು ದೃಶ್ಯವಲ್ಲ. ಅದನ್ನು ಕುರಿತು ಉಪದೇಶಮಾಡುವುದು ಸಾಧ್ಯವಿಲ್ಲ. ಅದು ಬಹಳ ಸಮೀಪದಲ್ಲಿಲ್ಲ; ದೂರದಲ್ಲಿಲ್ಲ; ಅನುಭವದಿಂದ ಮಾತ್ರ ಲಭಿಸುವುದು ಅದು.

೧೨. ಆ ಚಿತ್ತು ಜಡವಾದ ದೇಹವಲ್ಲ; ವ್ಯಾಪಾರ ಸಾಧನಗಳಾದ ಇಂದ್ರಿಯಗಳಲ್ಲ: ವ್ಯಾಪಾರ ಮಾಡಿಸುವ ಪ್ರಾಣವಲ್ಲ: ವ್ಯಾಪಾರಕ್ಕೆ ಪ್ರೇರಿಸುವ ಚಿತ್ತ

ನ ಸನ್ನಾಸನ್ನಮಧ್ಯಂ ಚ ಶೂನ್ಯಾಶೂನ್ಯಂ ನಚೈವ ಹಿ ।
ನ ದೇಶಕಾಲವಸ್ತ್ವಾದಿ ತದೇವಾಸ್ತಿ ನಚೇತರತ್ ॥ ೧೩ ॥

ಏತೈಸ್ಸರ್ವೈಃ ವಿನಿರ್ಮುಕ್ತಂ ಹೃದಿ ಕೋಶಶತೇನ ಚ ।
ಯತ್ರೈತತ್ಸ್ಪಂದತೇ ದೃಶ್ಯಂ ತತ್ತದಾತ್ಮಪದಂ ಭವೇತ್ ॥ ೧೪ ॥

ಯಚ್ಚ ನಾದ್ಯಂ ನ ಕಲ್ಪಾಂತಂ ನ ವಸ್ತ್ವಾದ್ಯನಿಲಾದಿಭಿಃ ।
ಇಹ ಚಾಮುತ್ರ ಸದ್ರೂಪಾದನ್ಯಥಾ ಭವತಿ ಕ್ವಚಿತ್ ॥ ೧೫ ॥

ವಲ್ಲ! ಅದನ್ನು ಆಡಿಸುವ ವಾಸನೆಯುಲ್ಲ. ಇವೆಲ್ಲಕ್ಕೂ ನಾಯಕನಾದ ಜೀವನಲ್ಲ. ಅವನ ವ್ಯಾಪಾರವೂ ಅಲ್ಲ. ಅವನ ಸ್ವರೂಪವಾದ ಪ್ರತ್ಯೇಕ ಸಂವಿತ್ತಲ್ಲ. ಅವನಿಗೆ ಅಧಿಷ್ಠಾನವಾಗಿರುವ ಜಗತ್ತೂ ಅಲ್ಲ.

೧೩. ಅದು ಸತ್ ಅಲ್ಲ. ಅಸತ್ ಅಲ್ಲ. ಮಧ್ಯವಲ್ಲ. ಶೂನ್ಯವಲ್ಲ. ಅಶೂನ್ಯವಲ್ಲ. ಎಲ್ಲವನ್ನೂ ಪರಿಮಿತಗೊಳಿಸುವ ದೇಶ ಕಾಲ ವಸ್ತು ಆದಿಗಳೊಂದೂ ಅಲ್ಲ. ಅದು ಅದಾಗಿಯೇ ಇರುವುದು; ಇನ್ನೊಂದೂ ಅಲ್ಲ.

೧೪. ಮೇಲೆ ಹೇಳಿದ ಇವೆಲ್ಲದರಿಂದ ವಿನಿರ್ಮುಕ್ತನಾಗಿ, ಇರುವ, ಹೃದಯದಲ್ಲಿ ಬ್ರಹ್ಮಾಂಡಗಳನ್ನು ಅನೇಕವಾಗಿಟ್ಟುಕೊಂಡು ಇರುವ, ಎಲ್ಲಿ ಈ ದೃಶ್ಯಸಂಪತ್ತು ಉದಯಿಸುವುದೋ ಆ ಸ್ಥಾನವನ್ನು ಆತ್ಮಪದವೆಂದು ತಿಳಿ.

೧೫. ಯಾವುದು ಆದ್ಯವಲ್ಲವೋ ಯಾವುದು ಕಲ್ಪಾಂತವಲ್ಲವೋ, ಯಾವುದೋ ವಾಯುಮೊದಲಾದ ಭೂತಗಳಿಂದ ಆದ ವಸ್ತುಗಳಲ್ಲವೋ, ಯಾವುದು ಯಾವುದು ಅನಿಲಾದಿ ಪಂಚಭೂತಗಳ ಕಾರ್ಯಗಳಿಂದ, ಇಲ್ಲಿಯಾಗಲೀ ಅಲ್ಲಿಯಾಗಲೀ, ತನ್ನ ಸ್ವರೂಪದಿಂದ ಅನ್ಯಥಾ ಆಗುವುದಿಲ್ಲವೋ ಅದು ಆತ್ಮವು.

(ಏವಂ ಕೋಶಶತೇನ ಹೃದಿ ಚಿತ್ತೇ ಯತ್ರ ಯಸ್ಮಿನ್ ಸತಿ ಏತದ್ದೃಶ್ಯ ಮಾವಿರ್ಭಾವ ತಿರೋಭಾವಾಭ್ಯಾಂ ಸ್ಪಂದತೇ ತತ್ಸನ್ಮಾತ್ರಮೇವ ಆತ್ಮಪದಂ ಭವೇತ್ ಸಂಭಾವಿತಮಿತ್ಯರ್ಥಃ। ಏವಂಕಾರ್ಯಕಾರಣ ವಿಲಕ್ಷಣಂ ತತ್ ಸಂಭಾವನೀಯಮಿತ್ಯಾಹ:- ಯಚ್ಚೇತಿ। ಯದ್ಬ್ರಹ್ಮ ಆದ್ಯಂ ಮಹಾಕಲ್ಪಾದಿಕಾಲೇ ಭವಮವ್ಯಾಕೃತಾಖ್ಯಂ ಕಾರಣಂ। ತಥಾಕಲ್ಪಾಂತಂ ಪ್ರಾಕೃತಾದಿ ಪ್ರಲಯರೂಪಂಚ ನ, ಸರ್ಗಕಾಲೋಽಪಿ ಇಹ ಏತಸ್ಮಿನ್ ಲೋಕೇ ಅಮುತ್ರ ಪರಲೋಕೇ ವಾ ಅನಿಲಾದಿಭಿಃ

ಜಾಯಂತೇ ಚ ಮ್ರಿಯಂತೇ ಚ ದೇಹಕುಂಭಾಸ್ಸಹಸ್ರಶಃ ।
ಸಬಾಹ್ಯಾಭ್ಯಂತರಸ್ಯಾಸ್ಯ ನಾತ್ಮಾಕಾಶಸ್ಯ ಖಂಡನಾ ॥ ೧೬ ॥

ತಚ್ಚ ದೇಹಾದಿಸಕಲಮಾತ್ಮೈವಾತ್ಮವಿದಾಂವರ ।
ಕೇವಲಂ ಬೋಧವೈರೂಪ್ಯಾದೀ ಷತ್ಪೃಥಗಿವ ಸ್ಥಿತಂ ॥ ೧೭ ॥

ವಿಷ್ವಗಾತ್ಮಮಯಂ ವಿಶ್ವಂ ಜ್ಞಾತಂ ಬುದ್ಧ್ಯಾ ಸುಸಿದ್ಧಯಾ।
ಪ್ರಜ್ವಲನ್ನಪಿ ಕಾರ್ಯೇಷು ನಿರ್ವಾಣೋ ನಿರ್ಮಮೋ ಭವ ॥ ೧೮ ॥

ಯದಿದಂ ದೃಶ್ಯತೇ ಕಿಂಚಿಜ್ಜಗತ್ಸ್ಥಾವರ ಜಂಗಮಂ ।
ತತ್ಸರ್ವಂ ಬ್ರಹ್ಮ ನಿರ್ಧರ್ಮ ನಿರ್ಗುಣಂ ನಿರ್ಮಲಾತ್ಮಕಂ ॥ ೧೯ ॥

ನಿರ್ವಿಕಾರ ಮನಾದ್ಯಂತಂ ನಿತ್ಯಂ ಶಾಂತಂ ಸಮಾತ್ಮಕಂ ॥ ೨೦ ॥

ಶೋಷಣದಹನಕ್ಲೇದನಾದಿ ವಿಕಾರೈಃ ಕ್ವಚಿತ್ ಸದ್ರೂಪಾದನ್ಯಥಾ ನಭವತೀತಿ ಸ ವಿಕಾರವಸ್ತು ಆದಿಪದಾತ್ ತದ್ವಿಕಾರಾಶ್ಚ ಯನ್ನಭವತೀತ್ಯರ್ಥಃ—ತಾ. ಪ್ರ)

೧೬. ದೇಹಗಳೆಂಬ ಮಡಿಕೆಗಳು ಸಾವಿರಗಟ್ಟಲೆಯಾಗಿ ಹುಟ್ಟಿ ಹುಟ್ಟಿ ಸಾಯುತ್ತಿರುವುವು. ಆದರೆ ಆ ದೇಹಗಳ ಒಳ ಹೊರಗೆಲ್ಲ ತುಂಬಿರುವ ಆತ್ಮಾಕಾಶಕ್ಕೆ ಆ ಜನನ ಮರಣಗಳಿಂದ ಏನೂ ಕ್ಷತಿಯಿಲ್ಲ.

೧೭. ಎಲೈ ಆತ್ಮವಿತ್ತರಲ್ಲಿ ಶ್ರೇಷ್ಠನಾದವನೇ, ಆ ದೇಹಾದಿಗಳೂ ಕೂಡ ಆತ್ಮವೇ! ಬೋಧವು ಸರಿಯಾಗಿಲ್ಲವಾದುದರಿಂದ ಏನೋ ಬೇರೆಯಾಗಿರುವಂತೆ ತೋರುವುವು.

೧೮. ಈ ವಿಶ್ವವು ಎಲ್ಲೆಲ್ಲಿಯೂ ಆತ್ಮಮಯವೇ ಆಗಿರುವುದು. ಸಿದ್ಧವಾದ ಬುದ್ಧಿಯಿಂದ ಇದನ್ನು ತಿಳಿದು, ಕಾರ್ಯಗಳಲ್ಲಿ ಉತ್ಸಾಹದಿಂದ ವಿಜೃಂಭಿಸುತ್ತಿದ್ದರೂ ನಿಸ್ಸಂಗನೂ ನಿರ್ಮಮನೂ ಆಗಿರು.

೧೯–೨೦. ಸ್ಥಾವರ ಜಂಗಮಾತ್ಮಕವಾಗಿ ಕಂಡುಬರುವ ಈ ಜಗತ್ತೆಲ್ಲವೂ ಬ್ರಹ್ಮವೇ! ಆ ಬ್ರಹ್ಮವು ನಿರ್ಧರ್ಮವು, ನಿರ್ಗುಣವು, ನಿರ್ಮಲವು, ನಿರ್ವಿಕಾರವು, ಅನಾದ್ಯಂತವು, ನಿತ್ಯವು, ಶಾಂತವು, ಸಮವು.

ಕಾಲಕ್ರಿಯಾ ಕರಣ ಕರ್ತೃನಿದಾನಕಾರ್ಯ ।
ಜನ್ಮಸ್ಥಿತಿಪ್ರಲಯ ಸಂಸ್ಮರಣಾದಿ ಸರ್ವಂ ॥
ಬ್ರಹ್ಮೇತಿ ದೃಷ್ಟವತ ಏವ ತವಾತ್ಮದೃಷ್ಟ್ಯೈ
ಭೂಯೋಽಪಿ ಕಿಂಭ್ರಮಣಮಂಗ ಸಮಂಗಏವ ॥ ೨೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಬ್ರಹ್ಮೈಕಾತ್ಮಪ್ರತಿಪಾದನಂ" ನಾಮ ಅಷ್ಟಚತ್ವಾರಿಂಶಃ ಸರ್ಗಃ

---

೨೧. ಕಾಲ, ಕ್ರಿಯಾ, ಕರಣ, ಕರ್ತೃ, ಕಾರಣ, ಕಾರ್ಯ, ಜನ್ಮ, ಸ್ಥಿತಿ, ಲಯ, ಸಂಸ್ಮರಣ, ಮೊದಲಾದ ಎಲ್ಲವೂ ಬ್ರಹ್ಮವೇ ಎಂದು ಅರಿತೇ ಇರುವ ನಿನಗೆ ಆತ್ಮಪದವು ಸಿದ್ಧವಾಗಿರಲು, ನೀನೇ ಬ್ರಹ್ಮವಾಗಿರಲು, ಇನ್ನು ನಿನಗೆ ಭ್ರಮಣವು ಎಲ್ಲಿಯದು ?

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಬ್ರಹ್ಮೈಕಾತ್ಮಪ್ರತಿಪಾದನ" ಎಂಬ
ನಲವತ್ತೆಂಟನೆಯ ಸರ್ಗವು

ಏಕೋನಪಂಚಾಶಃ ಸರ್ಗಃ

ಶ್ರೀ ರಾಮ ಉವಾಚ :—

ಯದಿನಾಸ್ತಿ ವಿಕಾರಾದಿ ಬ್ರಹ್ಮ್ರ ಬ್ರಹ್ಮಣಿ ಬೃಂಹಿತೇ ।
ತದಿದಂ ಕಥಮಾಭಾತಿ ಭಾವಾಭಾವಮಯಂ ಜಗತ್ ॥ ೧ ॥

ಶ್ರೀ ವಸಿಷ್ಠ ಉವಾಚ:—

ಅಪುನಃಪ್ರಾಗವಸ್ಥಾನಂ ಯತ್ಸ್ವರೂಪವಿಪರ್ಯಯಃ ।
ತದ್ವಿಕಾರಾದಿಕಂ ತಾವತ್ಕ್ಷೀರಾದಿಷು ವರ್ತತೇ ॥ ೨ ॥

ನಲವತ್ತೊಂಭತ್ತನೆಯ ಸರ್ಗವು

ಶ್ರೀರಾಮನು ಕೇಳಿದನು :—

೧. ಎಲೈ ಬ್ರಹ್ಮನೆ, ಬೃಂಹಣಗೊಂಡು (ದೊಡ್ಡದಾದ) ಬ್ರಹ್ಮದಲ್ಲಿ ವಿಕಾರಾದಿಗಳು ಒಂದೂ ಇಲ್ಲ ಎನ್ನುವುದಾದರೆ, ಈ ಭಾವ–ಅಭಾವ ಮಯವಾದ ಜಗತ್ತು ಅಲ್ಲಿ ಕಾಣುವುದು ಹೇಗೆ ?

(ವಿಕಾರಾರಂಭಾಭ್ಯಾಂ ವಿವರ್ತಸ್ಯ ಲಕ್ಷಣತೋ ಭೇದಂ ಜಿಜ್ಞಾಸಮಾನೋ ರಾಮಃ ಪೃಚ್ಛತಿ :–ಯದೀತಿ । ಆದಿ ಪದಾದಾರಂಭಪರಿಗ್ರಹಃ ಬೃಂಹಿತೇ ನಿತ್ಯ ನಿರತಿಶಯವೃದ್ಧಿಮತಿ, ತ್ರಿವಿಧಪರಿಚ್ಛೇದಶೂನ್ಯೇ ಇತಿ ಯಾವತ್ ॥ –ತಾ. ಪ್ರ.)

ಶ್ರೀ ವಸಿಷ್ಠನು ಹೇಳಿದನು:—

೨. ಸ್ವರೂಪವನ್ನು ಬದಲಾಯಿಸಿಕೊಂಡು ಮತ್ತೆ ಮೊದಲಿದ್ದಂತೆ ಆಗದಿರುವಿಕೆಯು ಯಾವುದೋ ಅದು ವಿಕಾರವು. ಇದನ್ನು ಹಾಲು ಮೊದಲಾದವುಗಳಲ್ಲಿ ನೋಡಬಹುದು.

(ಕಾರಣದಲ್ಲಿ ಕಾರ್ಯವು ಆಗುವುದನ್ನು ಶಾಸ್ತ್ರಜ್ಞರು ಐದು ಪ್ರಕಾರ ಎನ್ನುವರು. (೧) ಅತಿರೋಹಿತ ಪ್ರಾಗವಸ್ಥ ಎಂದರೆ ಕಾರಣದ ಸ್ವರೂಪವು ಕಾರ್ಯ

ಪಯಸ್ತಾಂ ಪುನರಭ್ಯೇತಿ ದಧಿತ್ವಾನ್ನಪುನಃ ಪಯಃ ॥ ೩ ॥

ಬುದ್ಧಮಾದ್ಯಂತ ಮಧ್ಯೇಷು ಬ್ರಹ್ಮ ಬ್ರಹ್ಮೈವ ನಿರ್ಮಲಂ ।
ಕ್ಷೀರಾದೇರಿವ ತೇನಾಸ್ತಿ ಬ್ರಹ್ಮಣೋ ನ ವಿಕಾರಿತಾ ॥ ೪ ॥

ಅನಾದ್ಯಂತ ವಿಭಾಗಸ್ಯ ನಚೈಷೋಽವಯವಿ ಕ್ರಮಃ ।
ಸಮಸ್ಯಾದ್ಯಂತಯೋರ್ಯೇಯಂ ದೃಶ್ಯತೇ ವಿಕೃತಿಃ ಕ್ಷಣಾತ್ ।
ಸಂವಿದ ಸ್ಸಂಭ್ರಮಂ ವಿದ್ಧಿ ನಾವಿಕಾರೇಽಸ್ತಿ ವಿಕ್ರಿಯಾ ॥ ೫ ॥

ದಲ್ಲಿ ಕಾಣುತ್ತಿರುವುದು—ಮೃತ್ತಿನಿಂದ ಘಟವಾಗುವಂತೆ. (೨) ಪ್ರತಿಬದ್ಧ ಪ್ರಾಗವಸ್ಥ ಕಾರಣದ ಸ್ವರೂಪವೇ ಬದಲಾಯಿಸಿದರೂ ಬೇಕೆಂದರೆ ಪೂರ್ವಾವಸ್ಥೆಗೆ ಬರುವುದು-ನೀರು ಗಟ್ಟಿಯಾಗಿ ಆಲಿಕಲ್ಲು ಆಗುವುದು : ಕರಗಿದರೆ ಮತ್ತೆ ನೀರಾಗುವುದು. (೩) ಪ್ರಚ್ಛನ್ನ ಪ್ರಾಗವಸ್ಥ ಮೊದಲಿನ ಅವಸ್ಥೆಯನ್ನು ಮುಚ್ಚಿಕೊಂಡು ಬೇರೆಯಾಗಿ ತೋರುವುದು. ಹಗ್ಗವು ಸರ್ಪವಾಗಿ ಕಾಣುವಂತೆ. (೪) ಅಪ್ರಚ್ಛನ್ನ ಪ್ರಾಗವಸ್ಥ ಮೊದಲಿನ ಅವಸ್ಥೆಯು ಕಾಣಿಸುತ್ತಿದ್ದರೂ ಪ್ರತ್ಯೇಕವಾದ ಇನ್ನೊಂದಾಗಿ ತೋರುವುದು: ಜಲದಲ್ಲಿ ತರಂಗಗಳಾಗಿರುವ ಹಾಗೆ. (೫) ವಿನಷ್ಟ ಪ್ರಾಗವಸ್ಥ ಮೊದಲಿನ ಅವಸ್ಥೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ಬೇರೆಯಾಗುವುದು: ಹಾಲು ಮೊಸರಾಗುವಂತೆ. ಇವುಗಳಲ್ಲಿ ಕೊನೆಯದು ಮಾತ್ರ ಜನ್ಮಾದಿ ಭಾವವಿಕಾರಗಳನ್ನೊಳಗೊಂಡ ಪರಿಣಾಮುವಾದವು. ಮಿಕ್ಕವು ವಿವರ್ತಭೇದಗಳು ಎಂಬ ಆಶಯದಿಂದ ಕೊನೆಯದಾಗಿ ಪರಿಣಾಮವಾಗುವ ವಿಕಾರವನ್ನು ವಸಿಷ್ಠನು ಹೇಳಿದನು:—ಎಂಬು ಭಾವ –ತಾ. ಪ್ರ.)

೩. ಹಾಲು ಮೊಸರಾದರೆ ಮತ್ತೆ ತನ್ನ ಮೊಸರುತನವನ್ನು ಬಿಟ್ಟು ಹಾಲುತನವನ್ನು ಹೊಂದುವುದಿಲ್ಲ.

೪. ಬ್ರಹ್ಮವು ಹಾಗಲ್ಲ. ಆದಿ, ಅಂತ, ಮಧ್ಯಗಳಲ್ಲಿ ಬ್ರಹ್ಮವು ನಿರ್ಮಲವಾದ ಬ್ರಹ್ಮನಾಗಿಯೇ ತಿಳಿಯುತ್ತಿರುವುದು. ಕ್ಷೀರಾದಿಗಳಲ್ಲಿ ಆಗುವಂತೆ ಬ್ರಹ್ಮದಲ್ಲಿ ಯಾವ ವಿಕಾರವೂ ಕಾಣುವುದಿಲ್ಲ.

೫. ಆದಿ, ಅಂತಗಳೆಂಬ ವಿಭಾಗವು ಬ್ರಹ್ಮದಲ್ಲಿ ಇಲ್ಲವಾದ ಕಾರಣ ಇದರಲ್ಲಿ ಅವಯವಿಯಲ್ಲಿ ಕಾಣುವ ಹಸ್ತಪಾದಾದಿ ಕ್ರಮವೂ ಇಲ್ಲ.

ನ ಸಂವೇದ್ಯಂ ನ ಸಂವಿತ್ತಿಸ್ತತ್ರ ಬ್ರಹ್ಮಣಿ ವಿದ್ಯತೇ ।
ತದ್ಬ್ರಹ್ಮಶಬ್ದಕಥಿತಂ ನಿಃಸಂಬಂಧಚಿದಾತ್ಮವತ್ ॥ ೬ ॥

ಯಾದೃಗಾದ್ಯಂತಯೋರ್ವಸ್ತು ತಾದೃಗೇವ ತದುಚ್ಯತೇ ।
ಮಧ್ಯೇ ಯಸ್ಯ ಯದನ್ಯತ್ವಂ ತದಬೋಧಾದ್ವಿಜೃಂಭಿತಂ ॥ ೭ ॥

(ಆದಿ ಅಂತಗಳಲ್ಲಿ ಸಮವಾಗಿರುವ ಬ್ರಹ್ಮದಲ್ಲಿ ಥಟ್ಟನೆ ಕಾಣುವ ವಿಕಾರವು ಯಾವುದುಂಟೋ ಅದು ಆ ಬ್ರಹ್ಮದಲ್ಲಿ ಆದ ವಿಕಾರವಲ್ಲ: ಬ್ರಹ್ಮವು ಅವಿಕಾರವಾದುದರಿಂದ ಅದರಲ್ಲಿ ವಿಕಾರವೆಂಬುದು ಇಲ್ಲ. ಆದರೆ ಕಾಣುವುದಲ್ಲ ಎಂದರೆ ಅದು ಸಂವಿತ್ತಿನ ಸಂಭ್ರಮವು. (ರಜ್ಜು ಸರ್ಪದಂತೆ ಭ್ರಾಂತಿ ಮೂಲವು.)

(ಅಸ್ತು ತರ್ಹಿ ಪರಮಾಣುಭಿಃ ದ್ವ್ಯಣುಕಾದೀನಾಂ ಇವ ಅವಯವ್ಯಾರಂಭ ಕ್ರಮಃ ತತ್ರಾಹ–ಅನಾದ್ಯಂತೇತಿ । ಆದ್ಯಂತ ಲಕ್ಷಣ ದೈಶಿಕ ಪರಿಚ್ಛೇದ ವತ್ಸು ಕ್ರಿಯಾ ಸಂಯೋಗಾದಿ ವಿಭಾಗವತ್ಸು ಚ ಅವಯವೇಷು ಅವಯವ್ಯಾರಂಭ ಕ್ರಮ ಸ್ಸ್ಯಾತ್ ನ ತದ್ವಿಲಕ್ಷಣಸ್ಯ ಬ್ರಹ್ಮಣಃ ಸ ಇತ್ಯರ್ಥಃ । ಏತೇನ ಬಹೂನಾಂ ಸಂಯುಕ್ತಾನಾಂ ಸಮವೇತಾನಾಂ ವಾ ಸ್ವೇಷು ಸ್ವಾಶ್ರಯ ಸಮವೇತೇ ವಾ ಸಮವಾಯೇ ನೈಕಕಾರ್ಯ ಜನಕತ್ವಂ ಆರಂಭಕತ್ವಂ ಯಥಾ ತಂತೂನಾಂ ಪಟಂ ಪ್ರತಿ । ಯಥಾವಾ ಕಾರಣಗುಣಾನಾಂ ಕಾರ್ಯಗುಣಂ ಪ್ರತಿ ಇತಿ ವೈಶೇಷಿಕಾದ್ಯಭಿಮತ ಲಕ್ಷಣಂ ಸೂಚಿತಂ । ತಥಾ ಚ ಕಣಾದಸೂತ್ರಂ ! ದ್ರವ್ಯಾಣಿ ದ್ರವ್ಯಾಂತರ ಮಾರಭಂತೇ ಗುಣಾಶ್ಚ ಗುಣಾಂತರಂ ॥ ಇತಿ–ಬ್ರಹ್ಮಣಿ ಜಗತಸ್ತು ಪರಿಶೇಷಾತ್ ವಿವರ್ತತ್ವಮೇವ ಸಿದ್ಧಮಿತಿ ತಲ್ಲಕ್ಷಣೇನ ದ್ಯೋತಯತಿ–ಸಮಸ್ಯೇತಿ । ವಿಕೃತಿರನ್ಯಥಾ ಭಾವಃ । ಸಂಭ್ರಮಂ ವಿವರ್ತಂ । ತಥಾಚಾದ್ಯಂತಯೋಃ ಸಮೇ ತದಸಂಸ್ಪರ್ಶಿ ವೈಷಮ್ಯ ಪ್ರತಿಭಾಸೋ ವಿವರ್ತ ಇತಿ ತಲ್ಲಕ್ಷಣಮಿತಿ ಭಾವಃ ॥ ತಾ. ಪ್ರ.)

೬. ಬ್ರಹ್ಮದಲ್ಲಿ ಸಂವಿತ್ ಇಲ್ಲ: ಸಂವೇದ್ಯವಿಲ್ಲ: ನಿಸ್ಸಂಬಂಧವೂ ಚಿದಾತ್ಮಕವೂ ಆದ ಬ್ರಹ್ಮದಲ್ಲಿ ಇವು ಎಲ್ಲಿಂದ ಬರಬೇಕು ?

೭. ಯಾವ ವಸ್ತುವೇ ಆಗಲೀ ಆದಿ-ಅಂತಗಳಲ್ಲಿ ಹೇಗಿರುವುದೋ ಅದೇ ಅದರ ಸ್ವರೂಪವೆಂದು ಹೇಳಬೇಕು. ಮಧ್ಯದಲ್ಲಿ ಅನ್ಯತ್ವವು ತೋರಿಬಂದರೆ ಅದು ಅಜ್ಞಾನದ ವಿಜೃಂಭಣವು.

ಆತ್ಮಾ ತ್ವಾದ್ಯಂತಮಧ್ಯೇಷು ಸಮಃ ಸರ್ವತ್ರ ಸರ್ವದಾ ।
ಸ್ವಮಪ್ಯನ್ಯತ್ವಮಾಯಾತಿ ನಾತ್ಮತತ್ತ್ವಂ ಕದಾಚನ ॥ ೮ ॥

ಅರೂಪತ್ವಾತ್ತಥೈಕತ್ವಾ ನ್ನಿತ್ಯತ್ವಾದಯಮೀಶ್ವರಃ ।
ವಶಂ ಭಾವವಿಕಾರಾಣಾಂ ನ ಕದಾಚನ ಗಚ್ಛತಿ ॥ ೯ ॥

ಶ್ರೀ ರಾಮ ಉವಾಚ:—

ವಿದ್ಯಮಾನೇ ಸದೈಕಸ್ಮಿನ್ಬ್ರಹ್ಮಣ್ಯೇಕಾಂತನಿರ್ಮಲೇ ।
ಸಂವಿದ್ಭ್ರಮಸ್ವರೂಪಾಯಾ ಅವಿದ್ಯಾಯಾಃ ಕ ಆಗಮಃ ॥ ೧೦ ॥

ಶ್ರೀ ವಸಿಷ್ಠ ಉವಾಚ:—

ಬ್ರಹ್ಮತತ್ವಮಿದಂ ಸರ್ವಮಾಸೀದಸ್ತಿ ಭವಿಷ್ಯತಿ ।
ನಿರ್ವಿಕಾರ ಮನಾದ್ಯಂತಿಂ ನಾವಿದ್ಯಾಸ್ತೀತಿ ನಿಶ್ಚಯಃ ॥ ೧೧ ॥

---

೮. ಆತ್ಮವಾದರೋ ಆದಿ ಮಧ್ಯ ಅಂತಗಳಲ್ಲಿ ಸರ್ವತ್ರ, ಸರ್ವದಾ, ಸಮನು, ಆತ್ಮ ತತ್ತ್ವವು ಸ್ವತ್ತ್ವವನ್ನು ಬಿಟ್ಟು ಅನ್ಯತ್ವವನ್ನು ಯಾವಾಗಲೂ ಹೊಂದುವುದಿಲ್ಲ.

೯. ರೂಪವಿಲ್ಲದಿರುವುದರಿಂದ, ಏಕೈಕವಾಗಿರುವುದರಿಂದ, ನಿತ್ಯವಾಗಿರುವುದರಿಂದ ಆತ್ಮನು ಈಶ್ವರನು. ಅದರಿಂದ ಪರವಶನಂತೆ ಭಾವವಿಕಾರಗಳಿಗೆ ಯಾವಾಗಲೂ ವಶನಾಗುವುದಿಲ್ಲ.

ಶ್ರೀ ರಾಮನು ಕೇಳಿದನು:—

೧೦. ಸದಾ ಏಕೈಕವಾಗಿ, ಏಕಾಂತವಾಗಿ ನಿರ್ಮಲವಾಗಿರುವ ಬ್ರಹ್ಮದಲ್ಲಿ ಸಂವಿತ್-ಭ್ರಮ-ರೂಪವಾಗಿರುವ ಅವಿದ್ಯೆಯು ಬರುವುದೆಂತು?

ಶ್ರೀ ವಸಿಷ್ಠನು ಹೇಳಿದನು:—

೧೧. ಈ ಬ್ರಹ್ಮ ತತ್ತ್ವವು ಅಖಂಡವಾಗಿ ಇತ್ತು: ಇರುವುದು: ಇರುತ್ತದೆ. ಅದು ನಿರ್ವಿಕಾರವು. ಆದ್ಯಂತ ರಹಿತವು. ಅದರಲ್ಲಿ ಅವಿದ್ಯೆಯು ಇಲ್ಲವೆಂಬುದೇ ನಿಶ್ಚಯವು.

ಯಸ್ತು ಬ್ರಹ್ಮೇತಿ ಶಬ್ದೇನ ವಾಚ್ಯವಾಚಕಯೋಃ ಕ್ರಮಃ ।
ತತ್ರಾಪಿ ನಾನ್ಯತಾಭಾವಮುಪದೇಷ್ಟುಂ ಕ್ರಮೋ ಹ್ಯಸೌ ॥ ೧೨ ॥

ತ್ವಮಹಂ ಜಗದಾಶಾಶ್ಚ ದ್ಯೌರ್ಭೂಶ್ಚಾಪ್ಯನಲಾದಿ ವಾ ।
ಬ್ರಹ್ಮಮಾತ್ರಮನಾದ್ಯಂತಂ ನಾವಿದ್ಯಾಸ್ತಿ ಮನಾಗಪಿ ॥ ೧೩ ॥

ನಾಮ್ನೈವೇದಮವಿದ್ಯೇತಿ ಭ್ರಮಮಾತ್ರಮಸದ್ವಿದುಃ ।
ನ ವಿದ್ಯತೇ ಯಾ ಸಾ ಸತ್ಯಾ ಕೀದೃಗ್ರಾಮ ಭವೇತ್ಕಿಲ ॥ ೧೪ ॥

ಶ್ರೀ ರಾಮ ಉವಾಚ:—

ಉಪಶಮಪ್ರಕರಣೇ ಹ್ಯಸ್ತನೇ ತು ತ್ವಯೇರಿತಂ ।
ಅವಿದ್ಯೇಯಂ ತಥೇತ್ಥಂ ಚ ವಿಚಾರ್ಯತ ಇತಿ ಪ್ರಭೋ ॥ ೧೫ ॥

---

೧೨. ಬ್ರಹ್ಮವೆಂಬ ಶಬ್ದದಿಂದ ತೋರಿಬರುವ ವಾಚ್ಯ, ವಾಚಕ, ಕ್ರಮವು, ಯಾವುದುಂಟೋ ಅದು 'ಅನ್ಯವಾದುದು ಇನ್ನೊಂದಿಲ್ಲ' ಎಂದು ತೋರಿಸುವುದಕ್ಕಾಗಿಯೇ ಹುಟ್ಟಿದುದು.

೧೩. ನೀನು, ನಾನು, ಜಗತ್ತು, ದಿಕ್ಕುಗಳು, ಅಂತರಿಕ್ಷ, ಭೂಮಿ, ಬೆಂಕಿ ಮೊದಲಾದ ಸರ್ವವೂ ಆದ್ಯಂತ ರಹಿತವಾದ ಬ್ರಹ್ಮವೇ ಆಗಿರಲು, ಅವಿದ್ಯೆಯು ಯಾವ ಪ್ರಕಾರದಿಂದಲೂ ಇಲ್ಲವೇ ಇಲ್ಲ.

೧೪. ಅವಿದ್ಯೆಯೆಂಬುದು ನಾಮಮಾತ್ರದಿಂದ ಉಂಟು. ಅದು ಭ್ರಾಂತಿಯಲ್ಲದೆ ಇನ್ನೇನೂ ಅಲ್ಲ: ಅದರಿಂದ ಅದನ್ನು ಅಸತ್ ಎನ್ನುವರು. ಯಾವುದು ಇಲ್ಲವೇ ಇಲ್ಲವೋ ಅದೆಂತು ಸತ್ಯವಾದೀತು ? ರಾಮ.

ಶ್ರೀ ರಾಮನು ಕೇಳಿದನು :—

೧೫. ಪ್ರಭುವೆ, ನಿನ್ನೆ ಉಪಶಮ ಪ್ರಕರಣದಲ್ಲಿ, ಇದು ಅವಿದ್ಯೆಯು ಇದನ್ನು ಕುರಿತು ವಿಚಾರ ಮಾಡಬೇಕು ಎಂದು ಹೇಳಿದಿರಲ್ಲವೇ?

ಶ್ರೀ ವಸಿಷ್ಠ ಉವಾಚ:—

ಏತಾವಂತಮಬುದ್ಧಸ್ತ್ವಮಭೂಃ ಕಾಲಂ ರಘೂದ್ವಹ ।
ಕಲ್ಪಿತಾಭಿಃ ಕಿಲೈತಾಭಿರ್ಬೋಧಿತೋಸಿ ಸ್ವಯುಕ್ತಿಭಿಃ ॥ ೧೬ ॥

ಅವಿದ್ಯೇಯಮಯಂ ಜೀವ ಇತ್ಯಾದಿಕಲನಾಕ್ರಮಃ ।
ಅಪ್ರಬುದ್ಧಪ್ರಬೋಧಾಯ ಕಲ್ಪಿತೋ ವಾಗ್ವಿದಾಂ ವರೈಃ ॥ ೧೭ ॥

ಅಪ್ರಬುದ್ಧಂ ಮನೋ ಯಾವತ್ತಾವದೇವ ಭ್ರಮಂ ವಿನಾ ।
ನ ಪ್ರಬೋಧಮುಪಾಯಾತಿ ತದಾಕ್ರೋಶಶತೈರಪಿ ॥ ೧೮ ॥

ಯುಕ್ತ್ಯೈವ ಬೋಧಯಿತ್ವೈಷ ಜೀವ ಆತ್ಮನಿ ಯೋಜ್ಯತೇ ।
ಯದ್ಯುಕ್ತ್ಯಾ ಸಾಧ್ಯತೇ ಕಾರ್ಯಂ ನ ತದ್ಯತ್ನಶತೈರಪಿ ॥ ೧೯ ॥

ಶ್ರೀ ವಸಿಷ್ಠನು ಹೇಳಿದನು :—

೧೬. ಇಷ್ಟು ಕಾಲವೂ ನೀನು ಅಬುದ್ಧನಾಗಿದ್ದೆಯಾಗಿ, ಎಲೈ ರಘುಶ್ರೇಷ್ಠನೆ, ಹೀಗೆ ಸ್ವಂತವಾಗಿ ಯುಕ್ತಿಗಳನ್ನು ಕಲ್ಪಿಸಿಕೊಂಡು ನಿನಗೆ ಬೋಧಿಸಲಾಯಿತು.

೧೭. ಇದು ಅವಿದ್ಯೆ, ಇವನು ಜೀವ, ಎಂಬ ಕಲ್ಪನೆಗಳು ಯಾವುವು ಉಂಟೋ, ಅವುಗಳನ್ನೆಲ್ಲ ವಾಕ್ಯಕೋವಿದರು ಅಪ್ರಬುದ್ಧರಿಗೆ ಬೋಧವುಂಟಾಗಲೆಂದು ಕಲ್ಪಿಸಿಕೊಂಡಿರುವರು.

೧೮. ಮನಸ್ಸು ಎಲ್ಲಿಯವರೆಗೂ ಅಪ್ರಬುದ್ಧವಾಗಿ ಇರುವುದೋ ಅದುವರೆಗೆ ಭ್ರಮಮೂಲವಾಗಿಯೇ ಬೋಧವು ನಡೆಯಬೇಕು. ಇಲ್ಲದಿದ್ದರೆ ಅದಕ್ಕೆ ಹಿಡಿದಿರುವ ಭ್ರಮೆಯು ತೊಲಗಿ, ಅದು ಪ್ರಬುದ್ಧವಾಗುವುದಿಲ್ಲ. ಎಷ್ಟು ಆಕ್ರೋಶ ಮಾಡಿದರೂ ಫಲವಿಲ್ಲ.

೧೯. ಅದರಿಂದ ಯುಕ್ತಿಯಿಂದ ಬೋಧನ ಮಾಡಿ, ಜೀವನನ್ನು ಆತ್ಮನಲ್ಲಿ ಯೋಜಿಸಬೇಕು. ಯುಕ್ತಿಯಿಂದ ಆಗುವ ಕಾರ್ಯವು ನೂರು ಯತ್ನಗಳಿಂದಲೂ ಆಗುವುದಿಲ್ಲ.

ಸರ್ವಂ ಬ್ರಹ್ಮೇತಿ ಯೋ ಬ್ರೂಯಾತ್ ಅಪ್ರಬುದ್ಧಸ್ಯ ದುರ್ಮತೇಃ ।
ಸ ಕರೋತಿ ಸುಹೃದ್ವೃತ್ತ್ಯಾ ಸ್ಥಾಣೋರ್ದುಃಖನಿವೇದನಂ ॥ ೨೦ ॥

ಯುಕ್ತ್ಯಾ ಪ್ರಬೋಧ್ಯತೇ ಮೂಢಃ ಪ್ರಾಜ್ಞಸ್ತತ್ತ್ವೇನ ಬೋಧ್ಯತೇ ।
ಮೂಢಃ ಪ್ರಾಜ್ಞತ್ವಮಾಯಾತಿ ನ ಯುಕ್ತ್ಯಾ ಬೋಧನಂ ವಿನಾ ॥ ೨೧ ॥

ಏತಾವಂತಮಬುದ್ಧಸ್ತ್ವ ಕಾಲಂ ಯುಕ್ತ್ಯಾ ಪ್ರಬೋಧಿತಃ ।
ಇದಾನೀಂ ಸಂಪ್ರಬುದ್ಧಸ್ತ್ವಂ ಮಯಾ ಯೇನಾವಬೋಧ್ಯಸೇ ॥ ೨೨ ॥

ಬ್ರಹ್ಮಾಹಂ ತ್ರಿಜಗದ್ಬ್ರಹ್ಮ ತ್ವಂ ಬ್ರಹ್ಮ ಖಲು ದೃಶ್ಯಭೂಃ ।
ದ್ವಿತೀಯಾ ಕಲನಾ ನಾಸ್ತಿ ಯಥೇಚ್ಛಸಿ ತಥಾ ಕುರು ॥ ೨೩ ॥

---

೨೦. ಅಪ್ರಬುದ್ಧನಾಗಿ, ಸಮ್ಯಗ್ಜ್ಞಾನಶೂನ್ಯನಾದ ದುರ್ಮತಿಗೆ ಸರ್ವವೂ ಬ್ರಹ್ಮವೇ ಎಂಬ ಮಹಾ ವಾಕ್ಯವನ್ನು ಉಪದೇಶ ಮಾಡಿದವನು, ಮೋಟು ಮರವನ್ನು ಕಂಡು, ಇದು ಸ್ನೇಹಿತನೆಂದು ತನ್ನ ದುಃಖವನ್ನು ಹೇಳಿಕೊಂಡವನಿಗೆ ಸಮನಾಗುವನು.

೨೧. ಮೂಢನಿಗೆ ಯುಕ್ತಿಗಳನ್ನು ಹೇಳಿ ತಿಳಿಸಬೇಕು: ಪ್ರಾಜ್ಞನಿಗೆ ತತ್ತ್ವವನ್ನು ಹೇಳಬೇಕು. ಯುಕ್ತಿಯಾಗಿ ಹೇಳದಿದ್ದರೆ ಮೂಢನೆಂದಿಗೂ ಪ್ರಾಜ್ಞನಾಗುವುದಿಲ್ಲ.

೨೨. ಇದುವರೆಗೂ ನೀನು ಅಪ್ರಬುದ್ಧನಾಗಿದ್ದೆಯೆಂದು ನಿನಗೆ ಯುಕ್ತಿಯಿಂದ ಬೋಧಿಸಿದೆವು. ಈಗ ನೀನು ಸಂಪ್ರಬುದ್ಧನಾಗಿರುವೆಯಾಗಿ ಈಗ ನಿನಗೆ ತತ್ವವನ್ನು ಹೇಳುತ್ತಿರುವೆವು.

೨೩. ನಾನೂ ಬ್ರಹ್ಮ, ತ್ರಿಜಗತ್ತೂ ಬ್ರಹ್ಮ, ನೀನೂ ಬ್ರಹ್ಮ, ದೃಶ್ಯವಾಗಿರುವ ಇದೆಲ್ಲವೂ ಬ್ರಹ್ಮವೇ ! ಅದನ್ನು ಬಿಟ್ಟು ಎರಡನೆಯದರ ಕಲ್ಪನೆಯೂ ಇಲ್ಲ. ಅದರಿಂದ ತೋರಿದ ಹಾಗೆ ಮಾಡು.

(ಐಚ್ಛಿಕೇನ ವ್ಯವಹಾರೇಣ ನ ವಾಸ್ತವಬ್ರಹ್ಮತ್ವ ಹಾನಿರಿತಿ ಭಾವಃ —ತಾ. ಪ್ರ.)

ಅಸಂವೇದ್ಯಮಹಾಸಂವಿತ್ಕೋಟಿಮಾತ್ರಂ ಜಗತ್ತ್ರಯಂ ।
ಏಕಪ್ರತ್ಯಯವಾನಂತಃ ಕುರ್ವನ್ನಪಿ ನ ಲಿಪ್ಯಸೇ ॥ ೨೪ ॥

ಭಾರೂಪಶ್ಚೇತನೋ ವ್ಯಾಪಿ ಪರಮಾತ್ಮಾಹಮಿತ್ಯಯಂ ।
ರಾಘವಾನುಭವಾಂತಸ್ತ್ವಂ ತಿಷ್ಠನ್ಗಚ್ಛನ್ ಶ್ವಸನ್ಸ್ವಪನ್ ॥ ೨೫ ॥

ನಿರ್ಮಮೋ ನಿರಹಂಕಾರೋ ಬುದ್ಧಿಮಾನಸಿ ಸಾಧು ಚೇತ್ ।
ತದ್ಬ್ರಹ್ಮಾವೇದನಂ ಶಾಂತಂ ಸರ್ವಭೂತಸ್ಥಿತಂ ಭವ ॥ ೨೬ ॥

ತದನಾದ್ಯಂತಮಾಭಾಸಂ ಸತ್ತ್ವಮೇವ ಪರಂ ಪದಂ ।
ಸ್ಥಿತೋಸಿ ಸರ್ವಗೈಕಾತ್ಮಶುದ್ಧ ಸಂವಿನ್ಮಯಾತ್ಮಕಃ ॥ ೨೭ ॥

ಯದ್ಬ್ರಹ್ಮಾತ್ಮಾಪಿ ತುರ್ಯಶ್ಚ ಯಾವಿದ್ಯಾ ಪ್ರಕೃತಿಶ್ಚ ಯಾ ।
ತದಭಿನ್ನಸದೈಕಾತ್ಮ ಯಥಾ ಕುಂಭಶತೇಷು ಮೃತ್ ॥ ೨೮ ॥

---

೨೪. ಈ ಜಗತ್ತ್ರಯವೂ ಅಸಂವೇದ್ಯ ಮಹಾ ಸಂವಿತ್ತಿನಲ್ಲಿ ಮುಗಿಯುವುದು. ಈ ಬ್ರಹ್ಮವೇ ಸರ್ವವೆಂಬ ಏಕ ಪ್ರತ್ಯಯವನ್ನು ಉಳ್ಳವನಾಗಿದ್ದರೆ, ನೀನು ಏನು ಮಾಡಿದರೂ ನಿನಗೆ ಅದು ಅಂಟುವುದಿಲ್ಲ.

೨೫ ರಾಘವ, ನೀನು ನಿಂತಿರು, ಓಡಾಡುತ್ತಿರು, ಉಸಿರಾಡುತ್ತಿರು, ನಿದ್ದೆ ಮಾಡುತ್ತಿರು, ಏನು ಮಾಡುತ್ತಿದ್ದರೂ, ಪ್ರಕಾಶವಾಗಿ, ಚೇತನವಾಗಿ, ವ್ಯಾಪಕವಾಗಿ, ಇರುವ ಪರಮಾತ್ಮನೇ ನಾನು ಎಂಬುದನ್ನು ಒಳಗೆ ಅನುಭವ ಮಾಡುತ್ತಿರು.

೨೬. ಮಮತಾ ಶೂನ್ಯನಾಗಿ, ಅಹಂಕಾರವಿಲ್ಲದವನಾಗಿ, ಬುದ್ಧಿಮಂತನಾಗಿದ್ದೀಯೆ, ನಿನಗೆ ಸರಿಯೆಂದು ತೋರಿದರೆ, ಶಾಂತವೂ ಸರ್ವಭೂತಸ್ಥಿತವೂ ಆದ ಬ್ರಹ್ಮವೇ ನೀನೆಂದು ಅನುಭವ ಮಾಡಿಕೊ.

೨೭. ಆ ಬ್ರಹ್ಮವು ಆದಿ ಅಂತಗಳಲ್ಲಿದ್ದು ಎಲ್ಲವನ್ನೂ ಬೆಳಗುವುದು: ಸತ್ತ್ವರೂಪವಾದುದು. ಪರಮ ಪದವು. ಆ ಬ್ರಹ್ಮವಾಗಲು ನೀನು ಸರ್ವಗನಾಗಿ ಏಕಾತ್ಮನಾಗಿ ಶುದ್ಧ ಸಂವಿನ್ಮಯನಾಗಿ ಇರುವೆ.

೨೮. ಮಡಕೆಗಳು ನೂರಾರು ಇದ್ದರೂ ಅವುಗಳಲ್ಲಿರುವ ಮಣ್ಣು ಒಂದೇ ಆಗಿರುವಂತೆ, ಯಾವುದು ಬ್ರಹ್ಮಾತ್ಮವೋ ಅದು ತುರ್ಯವಾಗಲಿ, ವಿದ್ಯೆಯಾಗಲಿ, ಪ್ರಕೃತಿಯಾಗಲಿ, ಒಂದೇ ! ಅಭಿನ್ನವಾಗಿ ಸದಾ ಏಕಾತ್ಮವಾಗಿಯೇ ಇರುವುದು.

ನಾತ್ಮನಃ ಪ್ರಕೃತಿರ್ಭಿನ್ನಾ ಘಟಾನ್ಮೃನ್ಮಯತಾ ಯಥಾ ।
ಸನ್ಮೃನ್ಮಾತ್ರಂ ಯಥಾ ಚಾಂತರಾತ್ಮೈವಂ ಪ್ರಕೃತಿಃ ಸ್ಥಿತಾ || ೨೯ ||

ಆವರ್ತಃ ಸಲಿಲಸ್ಯೇವ ಯಃ ಸ್ಪಂದಸ್ತ್ವಯಮಾತ್ಮನಃ ।
ಪ್ರೋಕ್ತಃ ಪ್ರಕೃತಿಶಬ್ದೇನ ತೇನೈವೇಹ ಸ ಏವ ಹಿ || ೩೦ ||

ಯಥೈಕಃ ಸ್ಪಂದಪವನೌ ನಾಮ್ನಾ ಭಿನೌ ನ ಸತ್ತಯಾ ।
ತಥೈಕಮಾತ್ಮಪ್ರಕೃತಿ ನಾಮ್ನಾ ಭಿನ್ನೇ ನ ಸತ್ತಯಾ || ೩೧ ||

ಅಬೋಧಾದೇತಯೋರ್ಭೇದೋ ಬೋಧೇನೈವ ವಿಲೀಯತೇ ।
ಅಬೋಧಾತ್ಸನ್ಮಯೋ ಯಾತಿ ರಜ್ಜ್ವಾಂ ಸರ್ಪಭ್ರಮೋ ಯಥಾ || ೩೨ ||

ಚಿತ್ಕ್ಷೇತ್ರೇ ಕಲನಾ ಬೀಜಂ ಯದೇತತ್ಪತತಿ ಸ್ಫುರನ'
ಚಿತ್ತಾಂಕುರಂ ತದೇತಸ್ಮಾದ್ಭಾವಿಸಂಸಾರ ಖಂಡಕಃ || ೩೩ ||

---

೨೯. ಘಟವು ಬೇರೆ, ಮೃನ್ಮಯತೆಯು ಬೇರೆ ಹೇಗಲ್ಲವೋ ಹಾಗೆಯೇ, ಆತ್ಮವೂ ಪ್ರಕೃತಿಯೂ ಬೇರೆ ಬೇರೆಯಲ್ಲ. ಸತ್ತಾದ ಮೃತ್ತೇ ಘಟವಾಗಿಯೂ ಇರುವಂತೆ ಆತ್ಮವೇ ಪ್ರಕೃತಿಯಾಗಿಯೂ ಇರುವುದು.

೩೦. ನೀರಿನಲ್ಲಿರುವ ಸುಳಿಯಂತೆ, ವ್ಯಾಪಾರಾತ್ಮಕವಾದ ಆತ್ಮನನ್ನೇ ಪ್ರಕೃತಿಯೆನ್ನುವರು. ಆದರಿಂದ ಆತ್ಮ, ಪ್ರಕೃತಿ, ಎರಡೂ ಒಂದೇ!

೩೧. ಬೀಸುವದೂ ಗಾಳಿಯೂ ಹೇಗೆ ಹೆಸರಿನಿಂದ ಬೇರೆಯಾದರೂ ಸತ್ತಾ ಮಾತ್ರದಿಂದ ಒಂದೆಯೋ ಹಾಗೆಯೇ ಆತ್ಮ ಪ್ರಕೃತಿಗಳು ಹೆಸರಿನಿಂದ ಬೇರೆ ಬೇರೆಯೇ ಹೊರತು ನಿಜವಾಗಿ ಭಿನ್ನ ಸತ್ತೆಗಳಲ್ಲ.

೩೨. ಇವೆರಡೂ ಬೇರೆ ಬೇರೆಯೆನ್ನುವುದು ಅಜ್ಞಾನದಿಂದ. ಜ್ಞಾನದೆಶೆಯಲ್ಲಿ ಆ ಭೇದವು ಲಯವಾಗುವುದು. ಭೇದವು, ರಜ್ಜುವಿನಲ್ಲಿ ಸರ್ಪವು ಕಾಣುವಂತೆ ಅಜ್ಞಾನದಿಂದ ಆಗುವ ಕಾರ್ಯವು.

೩೩. ಚಿತ್ ಕ್ಷೇತ್ರದಲ್ಲಿ ಬಿದ್ದ ಸಂಕಲ್ಪವೆಂಬ ಬೀಜವು ಮೊಳೆತು ಚಿತ್ತವೆಂಬ ಮೊಳಕೆಯನ್ನು ತೋರುವುದು. ಅದೇ ಮುಂದೆ ಸಂಸಾರವೆಂಬ ವನವಾಗುವುದು.

ಏಕದೇವಾತ್ಮವಿಜ್ಞಾನಾಪ್ದಗ್ಧಂ ಸದ್ವಾಸನಾಜಲೈಃ ।
ಸಂಸಕ್ತಮಪಿ ಯತ್ನೇನ ನ ಭವತ್ಯಂಕುರಕ್ಷಮಂ ॥ ೩೪ ॥

ನೋಚೇತ್ಪತತಿ ಚಿತ್ಕ್ಷೇತ್ರೇ ಕಲನಾಬೀಜಕಂ ತತಃ ।
ಚಿತ್ತಾಂಕುರಾ ನ ಜಾಯಂತೇ ಸುಖದುಃಖಲವದ್ರುಮಾಃ ॥ ೩೫ ॥

ದ್ವಿತ್ವಂ ಜಗತ್ಯಸದುಪಾತ್ತಮಬೋಧಜಾತಂ ।
ಬೋಧಕ್ಷಯಂ ಜಹಿಹಿ ಬೋಧಮುಪಾಗತೋಽಸಿ ।
ಆತ್ಮೈಕಭಾವವಿಭವೇನ ಭವಾಭಯಾತ್ಮಾ ।
ನಾಸ್ತ್ಯೇವ ದುಃಖಮಿತಿ ನಃ ಪರಮಾರ್ಥಸಾರಃ ॥ ೩೬ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಸಂಸೃತಿವಿಚಾರಯೋಗೋ" ನಾಮ ಏಕೋನಪಂಚಾಶಃ ಸರ್ಗಃ

---

೩೪. ಈ ಮೊಳಕೆಯನ್ನು ಆತ್ಮವಿಜ್ಞಾನವೆಂಬ ಬೆಂಕಿಯಿಂದ ಸುಟ್ಟರೆ, ಅದಕ್ಕೆ ಸದ್ವಾಸನಾ ಎಂಬ ಜಲವನ್ನು ಎಷ್ಟು ಹೊಯ್ದರೂ ಅದು ಮತ್ತೆ ಮೊಳೆಯಲಾರದು.

೩೫. ಅದರಿಂದ, ಚಿತ್ತೆಂಬ ಕ್ಷೇತ್ರದಲ್ಲಿ ಸಂಕಲ್ಪವೆಂಬ ಬೀಜವು ಬೀಳದೆಯೇ ಇದ್ದರೆ, ಸುಖದುಃಖಗಳೆಂಬ ಫಲಗಳನ್ನು ಕೊಡುವ ಮರಗಳ ಕಾರಣವಾದ ಚಿತ್ತಾಂಕುರವೇ ಹುಟ್ಟುವುದಿಲ್ಲ.

೩೬. ಜಗತ್ತು ಬೇರೆಯೊಂದುಂಟು ಎಂಬ ದ್ವೈತವು ಅಜ್ಞಾನದಿಂದ ಹುಟ್ಟುವುದು. ಆದರೂ ಅದು ಅಸತ್ತೇ! ಆ ದ್ವೈತ ಭ್ರಾಂತಿರೂಪವಾದ ಅಜ್ಞಾನವನ್ನು ಬಿಡು. ಈಗ ನೀನು ಜ್ಞಾನವಂತನಾಗಿದ್ದೀಯೆ! ಆತ್ಮನು ಏಕನು, ಅದ್ವಿತೀಯನು ಎಂಬ ಭಾವವನ್ನು ಬೆಳೆಸಿಕೊಂಡು ಅಭಯಾತ್ಮನಾಗು. ದುಃಖವಿಲ್ಲವೇ ಇಲ್ಲ ಎಂಬುದೇ ನಮ್ಮ ಉಪದೇಶದ ಪರಮಾರ್ಥವು: ಸಾರವು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಸಂಸೃತಿವಿಚಾರಯೋಗ" ಎಂಬ
ನಲವತ್ತೊಂಭತ್ತನೆಯ ಸರ್ಗವು.

ಪಂಚಾಶಃ ಸರ್ಗಃ

ಶ್ರೀ ರಾಮ ಉವಾಚ:—

ಜ್ಞಾತಂ ಜ್ಞಾತವ್ಯಮಖಿಲಂ ದೃಷ್ಟಂ ದ್ರಷ್ಟವ್ಯಮುಕ್ಷತಂ ।
ಪರೇಣ ಪರಿಪೂರ್ಣಾಃ ಸ್ಮೋ ಬಹ್ಮಜ್ಞಾನಾಮೃತೇನ ತೇ ॥ ೧ ॥

ಪೂರ್ಣಾತ್ಪೂರ್ಣಮಿದಂ ಪೂರ್ಣಂ ಪೂರ್ಣಾತ್ಪೂರ್ಣಂ ಪ್ರಸೂಯತೇ ।
ಪೂರ್ಣೇನಾಪೂರಿತಂ ಪೂರ್ಣಂ ಸ್ಥಿತಾ ಪೂರ್ಣೇಚ ಪೂರ್ಣತಾ ॥ ೨ ॥

ಐವತ್ತನೆಯ ಸರ್ಗವು

ಶ್ರೀ ರಾಮನು ಕೇಳಿದನು :—

೧. ತಿಳಿಯಬೇಕಾದುದೆಲ್ಲವೂ ತಿಳಿಯಿತು. ಕಾಣಬೇಕಾದುದನ್ನು ಸಂಪೂರ್ಣವಾಗಿ ಕಂಡಾಯಿತು. ನಿನ್ನನುಗ್ರಹದಿಂದ ಲಭಿಸಿದ ಉತ್ತಮೋತ್ತಮವಾದ ಬ್ರಹ್ಮಜ್ಞಾನಾಮೃತದಿಂದ ಪರಿಪೂರ್ಣರಾಗಿರುವೆವು.

(ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ । ಇತಿಶ್ರುತೇಃ ತತ್ವಸಾಕ್ಷಾತ್ಕಾರೇಣ ಸ್ವಯಂ ಛಿನ್ನಸಂಶಯೋಪಿ ರಾಮಃ ಪರೇಷಾಮುಪಕಾರಾಯ ತತ್ಸಂಶಯಪದಂ ಪ್ರಷ್ಟುಕಾಮಃ ಪ್ರಥಮಂ ಸ್ವಾನುಭವಮಭಿಲಪ್ಯ ದರ್ಶಯತಿ —ತಾ. ಪ್ರ.)

೨. ಪೂರ್ಣದಿಂದ ದೃಶ್ಯವೆಲ್ಲವೂ ಪೂರ್ಣವಾಗಿರುವುದು. ಪೂರ್ಣವು ಪೂರ್ಣದಿಂದಲೇ ಪೂರ್ಣವನ್ನು ಪಡೆಯುವುದು. ಪೂರ್ಣದಿಂದ ತುಂಬಿ ಎಲ್ಲವೂ ಪೂರ್ಣವೇ ಆಗಿರುವುದು. ಪೂರ್ಣದಲ್ಲಿ ಪೂರ್ಣತೇಯು ಇದ್ದೇ ಇರುವುದು.

(ಸ್ವಾನುಭವೇನ-ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ। ಪೂರ್ಣಸ್ಯಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೇ । ಇತಿ ಶ್ರುತಿಂ ಸಂವಾದಯತಿ । ಪೂರ್ಣಾದಿತಿ । ಪೂರ್ಣಾತ್ ಬ್ರಹ್ಮಣಃ ಸಕಾಶಾತ್ ಉಪಾಧೌಪ್ರವಿಶ್ಯ

ಲೀಲಯೇದಂ ತು ಪೃಚ್ಛಾಮಿ ಭೂಯೋ ಬೋಧಾಭಿವೃದ್ಧಯೇ |
ಬಾಲಸ್ಯೇವ ಪಿತಾ ಬ್ರಹನ್ನ ಕೋಪಂ ಕರ್ತುಮರ್ಹಸಿ || ೩ ||

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ |
ವಿದ್ಯಮಾನಮಪಿ ಬ್ರಹ್ಮನ್ ದೃಶ್ಯಮಾನಮಪಿ ಸ್ಫುಟಂ || ೪ ||

ಕಥಂ ಮೃತಸ್ಯ ವೈ ಜಂತೋರ್ವಿಷಯಂ ಸ್ವಂ ನ ಪಶ್ಯತಿ |
ಜೀವಿತಶ್ಚ ಕಥಂ ಸರ್ವಂ ವಿಷಯಂ ಸ್ವಂ ಪ್ರಪಶ್ಯತಿ || ೫ ||

ಕಥಂ ಘಟಾದಿಬಾಹ್ಯತ್ವಮಿಂದ್ರಿಯಾಣಿ ಜಡಾನ್ಯಪಿ |
ಶರೀರೇನುಭವತ್ಯಂತಃ ಪುನರ್ನಾನುಭವಂತ್ಯಪಿ || ೬ ||

ಆನಖಾಗ್ರಾತ್ ಪೂರ್ಣಮಿದಂ ಜೀವರೂಪಂ ಪರಮಾರ್ಥತಃ ಪೂರ್ಣಂ ಬ್ರಹ್ಮೈವ ಯತಃಪೂರ್ಣಾತ್ಯದ್ವಿಯಾದಾದಿಕ್ರಮೇಣ ಪ್ರಸೂಯತೇ ವ್ಯಷ್ಟಿಸಮಷ್ಟ್ಯುಪಾಧಿರೂಪಂ ತದಪಿ ಪೂರ್ಣಮೇವ ಪ್ರಸೂಯತೇ | ತದ್ಯಥಾ ಮಹಾವಾಕ್ಯೋತ್ಥೇನ ಅಹಂಬ್ರಹ್ಮಾಸ್ಮೀತಿ ಜ್ಞಾನೇನ ಸಮೂಲೋಪಾಧಿ ಪರಿಚ್ಛೇದಾಪನಯಾತ್ ಪೂರ್ಣೇನ ಬ್ರಹ್ಮಣಾ ಪೂರ್ಣಮೇವ ಜೀವತತ್ವಂ ಅಖಂಡೈಕ್ಯೇನ ಆಪೂರಿತಂ ತದಾ ಕಲ್ಪಿತಾ ಪೂರ್ಣತಾ ಭ್ರಮಸ್ಯ ಅಪಗಮಾತ್ ಪೂರ್ಣಸ್ಯ ಪೂರ್ಣತೈವ ಪ್ರಾಕ್‌ಸ್ಥಿತೈವ ಅವಸ್ಥಿತಾ ಇತ್ಯರ್ಥಃ —ತಾ. ಪ್ರ.)

೩. ಬ್ರಹ್ಮರ್ಷೇ, ನನಗೆ ಜ್ಞಾನವು ಇನ್ನೂ ಬೆಳೆಯಲೆಂದು ಲೀಲೆಯಿಂದ ಇನ್ನೂ ಒಮ್ಮೆ ಪ್ರಶ್ನವನ್ನು ಕೇಳುವೆನು. ತಂದೆಯು ಮಗನನ್ನು (ಸಹಿಸುವಂತೆ, ನೀನೂ ಸಹಿಸಿಕೊ) ಕೋಪವನ್ನು ಮಾಡಬೇಡ.

೪-೫. ಕಿವಿ, ಕಣ್ಣು, ಕೈಗಳು, ನಾಲಗೆ, ಮೂಗು, ಮೊದಲಾದುವು ಇದ್ದರೂ ನಮಗೆ ಕಾಣುತ್ತಿದ್ದರೂ ಮೃತನಿಗೆ ವಿಷಯ ಜ್ಞಾನವಾಗುವುದಿಲ್ಲವೇಕೆ? ಬದುಕಿರುವವನಿಗೆ ಈ ವಿಷಯ ಜ್ಞಾನವಾಗುವುದೆಂತು ?

೬. ಘಟಾದಿರೂಪವಾಗಿರುವ ಬಾಹ್ಯ ವಿಷಯಗಳನ್ನು ಇಂದ್ರಿಯಗಳು ಜಡವಾದರೂ ಶರೀರದಲ್ಲಿ ಅನುಭವಿಸುವುದೆಂತು ? ಅನುಭವಿಸದಿರುವುದೆಂತು ?

ಅಯಃಶಲಾಕೋಪಮಯೋರ್ಘಟಾದೀಂದ್ರಿಯಯೋಃ ಕಿಲ ।
ಆಶ್ಲಿಷ್ಟಯೋರಂತರಸೌ ಕಥಂ ತನ್ನೋದಿತಾ ಮಿಥಃ　　|| ೭ ||

(ಯದಿ ಕಶ್ಚಿತ್ ಬ್ರೂಯಾತ್ । ಚಕ್ಷುರಾದೀಂದ್ರಿಯಾಣಿ ಸ್ವಯಃ ಬಹಿರ್ನಿಗತ್ಯ ಘಟಾದೀನಾಂ ಬಾಹ್ಯತ್ವಮನುಭೂಯ ಅಂತಃ ಪ್ರವಿಶ್ಯ ಕಥಯಂತೀತಿ ತತ್ರಾಹ–ಜಡಾನೀತಿ । ನತೇಷಾಂ ಪೃಥಕ್ ಚೇತನತ್ವಂ ಕಥನ ಸಾಮರ್ಥ್ಯಂ ವಾ ಅಸ್ತೀತಿ ಭಾವಃ । ಯದಿ ಕಶ್ಚಿತ್ ಬ್ರೂಯಾತ್ ಇಂದ್ರಿಯಾಣಿ ಬಾಹ್ಯಾರ್ಥಂ ಹೃದಿ ನೀತ್ವಾ ಸ್ಥಾಪಯಂತೀತಿ ತತ್ರಾಪ್ಯಾಹ–ಪುನರಿತಿ । ಹೃದ್ಯರ್ಥಸ್ಥಾಪನೇ ಪುನಃ ಪುನಃ ಹೃದಿ ತದನುಭವಃ ಸ್ಯಾದ್ಘಟಾದೇ ರ್ಹೃದಯಾದ್ಯ ದ್ಬಹಿರ್ನಿಸ್ಸಾರಣಾದರ್ಶನಾದಿತಿ ಭಾವಃ ||

೭. ಕಬ್ಬಿಣದ ಸಲಾಕೆಗಳೆರಡರಂತೆ, (ಭಿನ್ನ ಭಿನ್ನ ದೇಶದಲ್ಲಿರುವ) ಘಟಾದಿ ವಿಷಯಗಳಿಗೂ (ಚಕ್ಷುರಾದಿ) ಇಂದ್ರಿಯಗಳಿಗೂ ಯಾವ ಸಂಬಂಧವೂ ಕಾಣಿಸುವುದಿಲ್ಲ: ಹೀಗಿರಲು ಒಳಗೆ ಅವುಗಳಿಗೆ ಯಾವ ಸಂಬಂಧವುಂಟಾಗಿ ಇಂದ್ರಿಯಗಳು ವಿಷಯ ಜ್ಞಾನವನ್ನು ಪಡೆಯುವುವು ?

(ನನು ಘಟಾದಿ ವಿಷಯ ಜಾತಂ ಕರ್ತೃ, ಪ್ರಥಮಂ, ಚಕ್ಷುರಾದಿ–ಇಂದ್ರಿಯ ಜಾತಂ ಸ್ವದೇಶಮಾಕರ್ಷತಿ । ತಚ್ಚಾ ಕೃಷ್ಟಮಿಂದ್ರಿಯಂ ವಿಷಯಂ ಸಂವೇಷ್ಟ್ಯ ಅಂತರ್ಹೃದಿಸ್ಥಾಯ ಭೋಕ್ತ್ರೇ ಕೇನ ಚಿದಂಶೇನ ಅಂತರ್ನಯತಿ; ಘ್ರಾಣ ಮಿವ ಗಂಧಂ, ಇತಿಕಲ್ಪನಾಮಾಶಂಕ್ಯಾಹ–ಅಯ ಇತಿ । ವಿಷಯಾಃ ಸಂಶ್ಲಿಷ್ಯ ಇಂದ್ರಿಯಾಣಿ ಆಕರ್ಷಯೇಯುಃ, ನ ಅಸಂಶ್ಲಿಷ್ಯ । ಅಸಂಶ್ಲಿಷ್ಟರಜ್ವಾದೀನಾಂ ಘಟಾದ್ಯಾಕರ್ಷಕತ್ವೇ ಅದರ್ಶನಾತ್ । ನಚ ಗೋಲಕಪ್ರದೇಶಾ ಉಪಸರ್ಪಿಣಾಂ ಘಟಾದೀನಾಂ ತತ್ಸಂಶ್ಲೇಷಃ ಸಂಭವತಿ । ನಾಪಿ ಇಂದ್ರಿಯಾಣಾಂ ರಜ್ಜುವತ್ ಘಟ ಸಂಬಂಧಃ ತದಾಕರ್ಷಕತ್ವಂವಾ ಪ್ರಸಿದ್ಧಂ । ಭಿನ್ನಪ್ರದೇಶನಿಖಾತ ಅಯಃ ಶಲಾಕಾದ್ವಯವತ್ ಭಿನ್ನದೇಶತ್ವಾತ್ ಇತ್ಯಾಹ–ಅಶ್ಲಿಷ್ಟಯೋಃ ಇತಿ । ಅಶ್ಲಿಷ್ಟಯೋಃ ಘಟಾದೀಂದ್ರಿಯಯೋಃ ಮಿಥಃ ಅಸೌ ತ್ವದುಚ್ಯಮಾನಾ ತನ್ನೋದಿತಾಪರಸ್ಪರಾಕರ್ಷಣಾಶೀಲತಾ ತತ್ರಾಪಿ ನೇತ್ರಾದಿ ಅಲ್ಪವಿವರಾಂತರ್ಘಟಾದಿಸ್ಥೂಲ ಪ್ರವೇಶಕತಾ ಕಥಂ ಸರ್ವಾನುಭವವಿರುದ್ಧಾ ಇತ್ಯರ್ಥಃ —ತಾ. ಪ್ರ.)

ಜಾನನ್നಪಿ ಯದೇತಾನ್ಸ್ವೈ ವಿಶೇಷಾ್ ಶತಧಾ ಪುನಃ ।
ಪೃಚ್ಛಾಮಿ ತದಶೇಷೇಣ ಕಥಯಸ್ವಾನುಕಂಪಯಾ ॥ ೮ ॥

ಶ್ರೀ ವಸಿಷ್ಠ ಉವಾಚ;—

ಇಂದ್ರಿಯಾವ್ಯಪಿ ಚಿತ್ತಾದಿ ಘಟಾದ್ಯಪಿ ನ ಕಿಂಚನ ।
ಪೃಥಕ್ ಸಂಭವತೀಹಾಂಗ ನಿರ್ಮಲಾಚ್ಚೇತನಾದೃತೇ ॥ ೯ ॥

ಗಗನಾದಪಿ ಯಾಚ್ಛಾ ಚಿತ್ತಯಾ ರೂಪಂ ಸ್ವಮಾತ್ಮನಾ ।
ಚಿತ್ತ್ವಾತ್ಪುರ್ಯಷ್ಟಕತ್ವೇನ ಭಾವವೃತ್ತ್ಯೈವ ಭಾವಿತಂ ॥ ೧೦ ॥

ತದೇವ ಚ ಪ್ರಕೃತಿತಾಂ ಗತಂ ಜಗದವಸ್ಥಿತೇಃ ।
ತಸ್ಯಾ ಅವಯವಾಜ್ಜಾತಮಿಂದ್ರಿಯಾದಿ ಘಟಾದಿ ಚ ॥ ೧೧ ॥

---

೮. ಇವೆಲ್ಲವನ್ನೂ ನಾನು ಬಲ್ಲವನಾದರೂ ಮತ್ತೆ ಮತ್ತೆ ನೂರಾರುಸಲ ಕೇಳುತ್ತಿರುವೆನು. ದಯವಿಟ್ಟು ಸಂಪೂರ್ಣವಾಗಿ ಹೇಳಬೇಕು.

ಶ್ರೀ ವಸಿಷ್ಠನು ಹೇಳಿದನು:—

೯. ಇಂದ್ರಿಯಾದಿಗಳಾಗಲೀ ಚಿತ್ತಾದಿಗಳಾಗಲೀ, ಘಟಾದಿವಿಷಯಗಳಾಗಲೀ, ನಿರ್ಮಲವಾದ ಚೇತನಕ್ಕಿಂತ ಭಿನ್ನವಾಗಿ ಒಂದೂ ಇಲ್ಲ.

[ಅತ್ಯಲ್ಪಮಿದಮುಚ್ಯತೇ ಯದ್ಗೋಲಕಾತಿರಿಕ್ತಾನಿ ಇಂದ್ರಿಯಾಣಿ ನ ಸಂತೀತಿ। ಯತಃ ಸಮ್ಯಗ್ವಿಮರ್ಶೇ ಚಿದ್ವ್ಯತಿರೇಕೇಣ ಪ್ರಮಾತೃ ಪ್ರಮಾಣ ಪ್ರಮೇಯ ವಿಭಾಗಾಃ ಕೇಪಿ ನ ನಿರೂಪಯಿತುಂ ಕೇನಾಪಿ ವಾದಿನಾ ಶಕ್ಯಂತೇ ಇತ್ಯಾಶಯೇನ ವಸಿಷ್ಠಃ ಸಮಾಧತ್ತೇ–ಇಂದ್ರಿಯಾದೀತಿ. —ತಾ. ಪ್ರ.]

೧೦. ಆಕಾಶಕ್ಕಿಂತಲೂ ಸ್ವಚ್ಛವಾಗಿರುವ ಚಿತ್ತು ಯಾವುದುಂಟೋ ಅದೇ, ತನ್ನ ಚಿತ್ತ್ವದಿಂದಲೇ, ಪುರ್ಯಷ್ಟಕರೂಪವಾಗಿ ತಾನೇ ಭಾವಿಸಿಕೊಂಡು ತಾನೇ ಪುರ್ಯಷ್ಟಕವಾಗಿರುವುದು.

೧೧. ಆ ಪುರ್ಯಷ್ಟಕವೇ ಜಗತ್ತಿನ ಸ್ಥಿತಿಗಾಗಿ ಪ್ರಕೃತಿಯಾಗಿರುವುದು. ಆ ಪ್ರಕೃತಿಯ ಅವಯವಗಳಾಗಿ ಇಂದ್ರಿಯಗಳೂ ಘಟಾದಿವಿಷಯಗಳೂ ಹುಟ್ಟಿರುವುವು.

ಪುರ್ಯಷ್ಟಕತ್ವಮಾಯಾತಂ ಯಚ್ಚಿತ್ತಂ ಸ್ವಸ್ವಭಾವತಃ ।
ಸ್ವಏವಾವಯವಸ್ತಸ್ಮಿನ್ಘಟಾದಿ ಪ್ರತಿಬಿಂಬತಿ ॥ ೧೨ ॥

ಶ್ರೀ ರಾಮ ಉವಾಚ:—

ಜಗತ್ಸಹಸ್ರನಿರ್ಮಾಣಮಹಿಮ್ನೋ ದರ್ಪಣಸ್ಯ ಚ।
ಪುರ್ಯಷ್ಟಕಸ್ಯ ಭಗವನ್ರೂಪಂ ಕಥಯ ಕೀದೃಶಂ ॥ ೧೩ ॥

[ಮಾಯಾಂ ತು ಪ್ರಕೃತಿಂ ವಿದ್ಧಿ ಮಾಯಿನಂ ತು ಮಹೇಶ್ವರಂ। ಅಸ್ಯಾವಯವ ಭೂತೈಸ್ತು ವ್ಯಾಪ್ತಂ ಸರ್ವಮಿದಂಜಗತ್॥ ಶ್ರುತಿಃ

೧೨. ಯಾವ ಚಿತ್ತವು ಸ್ವಸ್ವಭಾವದಿಂದಲೇ (ವ್ಯಷ್ಟಿ) ಪುರ್ಯಷ್ಟಕವಾಗಿರುವುದೋ, ಆ ಚಿತ್ತದಲ್ಲಿಯೇ ಅದರ ಅವಯವಗಳೇ ಆದ ಘಟಾದಿಗಳು ಅದರಲ್ಲಿಯೇ ಪ್ರತಿಬಿಂಬಿಸುವುವು.

(ಏವಂಚ ಇಂದ್ರಿಯ ದ್ವಾರಾ ಬಹಿರ್ನಿರ್ಗತೇನ ಪುರ್ಯಷ್ಟಕ ಘಟಕೇನ ಚಿತ್ತೇನ ಘಟಾದಿ ವ್ಯಾಪ್ತ್ಯಾ ಸ್ವವೃತ್ತಿ ಪ್ರತಿಬಿಂಬಿತ ಘಟಾದೇಃ ಬಾಹ್ಯತ್ವಾಕಾರೇಣೈವ ಹೃದಯೇ ನೀತ್ವಾ ಪ್ರದರ್ಶನಂ ತಥೈವ ಕಾಲಾಂತರೇ ಸ್ಮೃತಿಃ ಸ್ವಪ್ನೇ ಚಾಂತರ್ಗತಸ್ಯೈವ ಬಾಹ್ಯತ್ವೇನ ಅನುಭವಶ್ಚ ಇತಿ ಸರ್ವ ಮುಪಪನ್ನಮಿತ್ಯಾ ಶಯೇನಾಹ ಪುರ್ಯಷ್ಟಕತ್ವಮಿತಿ । ಏವಂ ರೀತ್ಯಾ ಪುರ್ಯಷ್ಟಕತ್ವಮಾಯಾತಂ ಚಿದ್ರೂಪಂ ತತ್ಪಮೇವ ಪುರ್ಯಷ್ಟಕಸ್ಯ ಚಿತ್ತಾದಿ ಘಟಿತಸ್ವಭಾವತಃ ಸ್ವಯಮೇವ ಸ್ವಃ ಚಿತ್ತವೃತ್ತ್ಯಾಖ್ಯೋ ಅವಯವೋ ಭವತಿ । ತಸ್ಮಿನ್ ಅವಯವೇ ಘಟಾದಿ ಬಾಹ್ಯಂ ಬಾಹ್ಯಾಕಾರೇಣೈವ ಪ್ರತಿಬಿಂಬತಿ । ಮೃತದೇಹೇತು ಪುರ್ಯಷ್ಟಕಘಟಿತಸ್ಯ ಲಿಂಗಾತ್ಮನೋ ಜೀವಸ್ಯ ಸ್ವಕಲ್ಪನಯೈವ ಲೀಲೋಪಾಖ್ಯಾನ ದರ್ಶಿತ ರೀತ್ಯಾ ನಿರ್ಗಮನಾನ್ನ ದರ್ಶನಾದಿ ಸಾಮರ್ಥ್ಯಂ ಇತಿ ಸರ್ವದೋಷ ಪರಿಹಾರ ಇತಿ ಭಾವಃ । —ತಾ. ಪ್ರ.)

ಶ್ರೀ ರಾಮನು ಕೇಳಿದನು:-

೧೩. ಜಗತ್ಸಹಸ್ರಗಳನ್ನು ನಿರ್ಮಾಣ ಮಾಡಬಲ್ಲ ಮಹಿಮೆಯುಳ್ಳ ಕನ್ನಡಿಯಾಗಿರುವ ಆ ಪುರ್ಯಷ್ಟಕರೂಪವೆಂತಹುದು ? ಎಲೈ ಭಗವಂತನೇ, ಹೇಳು.

ಶ್ರೀ ವಸಿಷ್ಠ ಉವಾಚ:—

ಅನಾದ್ಯಂತಂ ಜಗದ್ಬೀಜಂ ಯದ್ಬ್ರಹ್ಮಾಸ್ತಿ ನಿರಾಮಯಂ ।
ಭಾರೂಪಂ ಶುದ್ಧಚಿನ್ಮಾತ್ರಂ ಕಲಾಕಲನವರ್ಜಿತಂ ॥ ೧೪ ॥

ಕಲನೋನ್ಮುಖತಾಂ ಯಾತಮಂತರ್ಜೀವ ಇತಿ ಸ್ಮೃತಃ ।
ಸಜೀವಃ ಖಲು ದೇಹೇಸ್ಮಿಂಶ್ಚಿನೋತಿ ಸ್ಪಂದತೇ ಸ್ಫುಟಂ ॥ ೧೫ ॥

ಅಹಂಭಾವಾದಹಂಕಾರೋ ಮನನಾನ್ಮನ ಉಚ್ಯತೇ ।
ಬೋಧನಿಶ್ಚಯತೋ ಬುದ್ಧಿರಿಂದ್ರದೃಷ್ಟೇಸ್ತಥೇಂದ್ರಿಯಂ ॥ ೧೬ ॥

ಶ್ರೀ ವಸಿಷ್ಠನು ಹೇಳಿದನು :—

೧೪. ಜಗತ್ತಿನ ಬೀಜವಾಗಿರುವುದು ಯಾವುದೋ ಅದು ಆದಿ-ಅಂತಗಳಿಲ್ಲದೆ ನಿರಾಮವಾಗಿರುವ ಬ್ರಹ್ಮವು. (ಆದಿ-ಅಂತಗಳಿಲ್ಲದೆ ನಿರಾಮಯವಾಗಿರುವ ಬ್ರಹ್ಮವು ಯಾವುದೋ ಅದೇ ಈ ಜಗತ್ತಿನ ಬೀಜವು.) ಅದು ಕೇವಲ ಪ್ರಕಾಶ ರೂಪವಾದುದು. ಶುದ್ಧವಾಗಿರುವ ಚಿತ್ತೇ ಅದು. ಅದರಲ್ಲಿ ಭಾಗಗಳಿಲ್ಲ: ಸಂಕಲ್ಪ ವಿಕಲ್ಪಗಳಿಲ್ಲ.

೧೫. (ಆ ಶುದ್ಧ ಚಿನ್ಮಾತ್ರವು) ಸಂಕಲ್ಪದ ಕಡೆಗೆ ತಿರುಗುತ್ತಿದ್ದ ಹಾಗೆಯೇ ಜೀವವೆನ್ನಿಸಿಕೊಳ್ಳುವುದು. ಆ ಜೀವವೇ ಈ ದೇಹದಲ್ಲಿ ಬೆಳೆಯುವುದು. ವ್ಯಾಪಾರ ಮಾಡುವುದು.

(ತದ್ಬ್ರಹ್ಮ ವಿಯದಾದಿ ಭೂತಸೂಕ್ಷ್ಮಂ ಸೃಷ್ಟ್ವಾ ತೇನ ಅಪಂಚೀಕೃತೇನ ಲಿಂಗಂ ಪಂಚೀಕೃತೇನ ಬ್ರಹ್ಮಾಂಡಂ ಚ ಸೃಷ್ಟ್ವಾ ತದಂತಃಪ್ರತಿಬಿಂಬಲಕ್ಷಣ ಕಲನೋನ್ಮುಖತಾಂ ಯಾತಂ ಸತ್ ಸೂತ್ರ ಪ್ರಾಣಾನಾಂ ಅಭಿಮಾನೇನ ಧಾರಣಾಜ್ಜೀವ ಇತಿ ಸ್ಮೃತೋಽಭೂದಿತ್ಯರ್ಥಃ । ಚಿನೋತಿ ವಾಸನೋಪಚಯೇನ ಅಂಗೋಪಚಯೇನ ಚ ಉಪಚಿತೋ ಭವತಿ । ಉಪಚಿತಶ್ಚ ಬಾಹ್ಯಾಂತರ್ವ್ಯಾಪಾರಾತ್ಮನಾ ಸ್ಪಂದತೇ ಚೇತ್ಯರ್ಥಃ —ತಾ. ಪ್ರ.)

೧೬. ಅಹಂಭಾವದಿಂದ ಅಹಂಕಾರವೆಂದೂ ಮನನದಿಂದ ಮನವೆಂದೂ ನಿಶ್ಚಯ ಜ್ಞಾನದಿಂದ ಬುದ್ಧಿಯೆಂದೂ ಇಂದ್ರ ದೃಷ್ಟಿಯಿಂದ ಇಂದ್ರಿಯವೆಂದೂ

ದೇಹಭಾವನಯಾ ದೇಹೋ ಘಟಭಾವನಯಾ ಘಟಃ ।
ಏಷ ಏವ ಸ್ವಭಾವಾತ್ಮಾ ಜನೈಃ ಪುರ್ಯಷ್ಟಕಂ ಸ್ಮೃತಃ ॥ ೧೭ ॥

ಜ್ಞತ್ವ ಕರ್ತೃತ್ವ ಭೋಕ್ತೃತ್ವ ಸಾಕ್ಷಿತ್ವಾದ್ಯಭಿಪಾತಿನಿ ।
ಯಾ ಸಂವಿಜ್ಜೀವ ಇತ್ಯುಕ್ತಾ ತದ್ಧಿ ಪುರ್ಯಷ್ಟಕಂ ವಿದುಃ ॥ ೧೮ ॥

ಕಾಲೇಕಾಲೇ ತತೋ ಜೀವಸ್ತ್ವನ್ಯೋಽನ್ಯೋ ಭವತಿ ಸ್ವತಃ ।
ಭಾವಿತಾಕಾರಯಾನಂತವಾಸನಾಕಣಿಕೋದಯಂ ॥ ೧೯ ॥

ಪುರ್ಯಷ್ಟಕಸ್ವಭಾವೇನ ಕಾಲೇನಾಕಾರಮೃಚ್ಛತಿ ।
ಯಥಾವಾಸನತಃ ಸೇಕಾದ್ಬೀಜಂ ಪಲ್ಲವತಾಮಿವ ॥ ೨೦ ॥

---

೧೭. ದೇಹ ಭಾವನೆಯಿಂದ ದೇಹವೆಂದೂ ಘಟವೆಂದುಕೊಂಡರೆ ಘಟವಾಗಿಯೂ, (ಯಾವುದರಲ್ಲಿ ಅಭಿಮಾನವು ಹುಟ್ಟಿದರೆ ಅದಾಗಿ) ಈ ಸ್ವಭಾವಾತ್ಮವಾಗಿರುವ ಪುರ್ಯಷ್ಟಕವೇ ಜನರಿಂದ ವ್ಯವಹಾರಪಡುತ್ತಿರುವುದು.

೧೮. (ಜ್ಞಾನೇಂದ್ರಿಯ ವ್ಯಾಪಾರದಿಂದ ಇದಕ್ಕೆ) ಜ್ಞತ್ವವೂ, (ಕರ್ಮೇಂದ್ರಿಯ ವ್ಯಾಪಾರದಿಂದ) ಕರ್ತೃತ್ವವೂ (ವ್ಯಾಪಾರ ಫಲ ಸುಖದುಃಖಗಳಿಗೆ ಆಶ್ರಯನಾಗಿರುವುದರಿಂದ) ಭೋಕ್ತೃತ್ವವೂ (ಎಲ್ಲದರಲ್ಲಿಯೂ ಉದಾಸೀನನಾಗಿರುವುದರಿಂದ) ಸಾಕ್ಷಿತ್ವವೂ ಮೊದಲಾದ ನಾಮುಗಳೆಲ್ಲವನ್ನೂ ಪಡೆಯುವ ಸಂವಿತ್ತು ಯಾವುದುಂಟೋ ಅದೇ ಜೀವವು. ಅದೇ ಪುರ್ಯಷ್ಟಕವು ಎಂದು ಬಲ್ಲವರು ಹೇಳುವರು.

೧೯. ಈ ಜೀವವೇ ಕಾಲವಾಸನೆಗೊಳಪಟ್ಟು ಕಾಲಕಾಲಕ್ಕೆ ತಕ್ಕಂತೆ ಆಕಾರಗಳನ್ನು ಭಾವಿಸಿಕೊಳ್ಳುತ್ತಾ ಅನಂತ ವಾಸನಾ ಕಣಗಳನ್ನು ಕಲ್ಪಿಸಿಕೊಂಡು, ಅದಕ್ಕನುಸಾರವಾದ ಆಕೃತಿಗಳನ್ನು ಪಡೆಯುತ್ತಾ ತಾನಾಗಿಯೇ ಒಂದು ಪ್ರಪಂಚವನ್ನು ಹರಡಿಕೊಳ್ಳುವನು.

೨೦. ಬೀಜಕ್ಕೆ ಅನುಕೂಲವಾದ ವಾತಾವರಣವು ದೊರೆತು ಬಿಸಿಲೂ ನೀರೂ ಸಿಕ್ಕಿದರೆ, ಅದು ಚಿಗುರೊಡೆದು ಬೆಳೆಯುವಂತೆ, ಪುರ್ಯಷ್ಟಕವೇ ತನ್ನ ಸ್ವಭಾವಕ್ಕನುಗುಣವಾಗಿ ಕಾಲವಶವಾಗಿ, ವಾಸನಾನುಸಾರವಾಗಿ ಆಕಾರವನ್ನು ಪಡೆಯುವುದು.

ಆಕಾರೋಽಹಂ ಶರೀರಾದಿ ಸ್ಥಾವರಾದಿ ಚರಾದಿ ಚ ।
ನಾಹಮುದ್ಯಶ್ಚಿದಾತ್ಮೇತಿ ಮಿಥ್ಯಾ ಜ್ಞಾನೇನ ಚೇತತಿ ॥ ೨೧ ॥

ಭ್ರಮತ್ಯೇವ ಜಗಜ್ಜೀವೋ ವಾಸನಾವಲಿತಶ್ಚಿರಂ ।
ಊರ್ಧ್ವಾರ್ಧೋಗಮನ್ಯೈರಬ್ಧೌ ಕಾಷ್ಠಂ ವೀಚಿಹತಂ ಯಥಾ ॥ ೨೨ ॥

ಕಶ್ಚಿದ್ವಿಶುದ್ಧಜಾತಿತ್ವಾದ್ಭವ ಬಂಧಾದನಂತರಂ ।
ಬುದ್ಧ್ವೈವಾತ್ಮಾನಂ ಸಮುಭ್ಯೇತಿ ಪದಮಾದ್ಯಂತವರ್ಜಿತಂ ॥ ೨೩ ॥

---

೨೧. (ನಾನು ಆದ್ಯನು, ಚಿದಾತ್ಮನು, ಎಂಬುದನ್ನು ಮರೆತು,) ನಾನು ಚಿದಾತ್ಮನಲ್ಲ ಎಂದುಕೊಂಡು ನಾನು ಸಾಕಾರನು, ಸ್ಥಾವರ ಜಂಗಮಾತ್ಮಕವಾದ ದೇಹವುಳ್ಳವನು, ನಾನೇ ದೇಹವು, ಎಂಬ ಮಿಥ್ಯಾಜ್ಞಾನದಿಂದ ವ್ಯವಹರಿಸುವನು.

೨೨. ಸಾಗರದಲ್ಲಿ ಬಿದ್ದಿರುವ ಕಡ್ಡಿಯು ತರಂಗಗಳಿಗೆ ಸಿಕ್ಕಿ ಮೇಲೆ ಕೆಳಗೆ ಎದ್ದೆದ್ದು ಬೀಳುವಂತೆ, ಜಗತ್ತಿನಲ್ಲಿರುವ ಜೀವನು ವಾಸನಾವಶನಾಗಿ, ಚಿರಕಾಲ ಅಲೆಯುತ್ತಿರುವನು.

(ದೇಹವಾಸನಾ, ಲೋಕವಾಸನಾ ಶಾಸ್ತ್ರವಾಸನಾ, ಎಂದು ವಾಸನೆಗಳು ಮೂರು ವಿಧ. ದೇಹ ವಾಸನೆಯೆನ್ನುವುದು ದೇಹವೇ ತಾನು ಎನ್ನುವಿಕೆ. ಲೋಕವು ತನ್ನದು ಮುಂತಾದುದು ಲೋಕ ವಾಸನೆ. ಶಾಸ್ತ್ರವನ್ನು ಉದ್ಧರಿಸುವುದು ಮುಂತಾದುದು ಶಾಸ್ತ್ರವಾಸನೆ.)

೨೩. ಯಾವನಾದರೊಬ್ಬನು ಹುಟ್ಟುವಾಗಲೇ ವಾಸನಾತೀತವಾದ ಶುದ್ಧ ಜನ್ಮವನ್ನೆತ್ತಿ, ಆತ್ಮನನ್ನು ತಿಳಿದುಕೊಂಡು ಭವಬಂಧವನ್ನು ನೀಗಿಕೊಂಡು ಆದ್ಯಂತಗಳಿಲ್ಲದ ಪರಮಪದವನ್ನು ಪಡೆಯುವನು.

(ಕಶ್ಚಿತ್ ಸನಕಾದಿತುಲ್ಯಃ ಕಲ್ಪಾದಾವೇವ ಪ್ರಾಕ್ಕಲ್ಪೀಯ ಭವಬಂದಾದನಂತರ ಮಾದ್ಯೇ ಜನ್ಮನ್ಯೇವೇತ್ಯರ್ಥಃ । ಅಯಂ ಚ ಸರ್ವೋ ವಿಭಾಗಃ ಸಾತ್ವಿಕ ರಾಜಸಾದಿ ಜೀವ ಭೇದ ವರ್ಣನೇ ಉತ್ಪತ್ತಿ ಪ್ರಕರಣೇ ವ್ಯಾಖ್ಯಾತಃ ॥—ತಾ. ಪ್ರ)

ಕಶ್ಚಿತ್ಕಾಲೇನ ಬಹುನಾ ಭುಕ್ತಯೋನಿಗಣಾತುರಃ ।
ಆತ್ಮಜ್ಞಾನವಶಾದೇತಿ ಪರಮಂ ಪದಮಾತ್ಮನಃ ॥ ೨೪ ॥

ಏವಂರೂಪಶ್ಚ ಸುಮತೇ ಜೀವೋ ಯಾತಃ ಶರೀರತಾಂ ।
ನೇತ್ರಾದಿನಾ ಘಟಾದ್ಯಂತರ್ಯಥಾ ವೇತ್ತಿ ತಥಾ ಶೃಣು ॥ ೨೫ ॥

ಚಿತ್ತ್ವಸ್ಯ ಕಲನಾಂತಸ್ಯ ಸಂಪ್ರಯಾತಸ್ಯ ಜೀವತಾಂ ।
ಮನಃ ಷಷ್ಠೇಂದ್ರಿಯಗ್ರಾಮೋ ದೇಹೋಯಮವತಿಷ್ಠತೇ ॥ ೨೬ ॥

ಯದಾನ್ಯಃ ಸರ್ವದೇಹೇಭ್ಯಃ ಖೇ ಪತತ್ಯಕ್ಷರೂಪಿಣಾ ।
ತದಾತಜ್ಜೀವಸಂಸ್ಪರ್ಶಾಜ್ಜೀವಾತ್ಮೈಕತ್ವ ಮೃಚ್ಛತಿ ॥ ೨೭ ॥

---

೨೪. ಇನ್ನೊಬ್ಬನು ನಾನಾ ಯೋನಿಗಳಲ್ಲಿ ಜನ್ಮವನ್ನು ಅನುಭವಿಸಿ ಬಹು ಕಾಲಾನಂತರ ಆತ್ಮಜ್ಞಾನವನ್ನು ಸಂಪಾದಿಸಿ ಅದ್ವಿತೀಯ ಆತ್ಮಪದವನ್ನು ಪಡೆಯುವನು.

೨೫. ಹೀಗೆ, ಎಲೈ ಸುಮತಿಯೆ, ಶರೀರವೇ ತಾನು ಎಂಬ ಬುದ್ಧಿಯನ್ನು ಪಡೆದ ಜೀವನು ನೇತ್ರಾದಿ ಇಂದ್ರಿಯಗಳಿಂದ ಘಟಾದಿ ಅರ್ಥಜ್ಞಾನವನ್ನು ಹೇಗೆ ಪಡೆಯುವನು ಎಂಬುದನ್ನೂ ಹೇಳುವೆನು ಕೇಳು.

೨೬. ಸ್ವಸಂಕಲ್ಪ ಬಲದಿಂದಲೇ ಜೀವತ್ವವನ್ನು ಹೊಂದಿದ ಚಿತ್ತ್ವಕ್ಕೆ ಮನಸ್ಸೇ ಆರನೆಯದಾಗಿರುವ ಇಂದ್ರಿಯ ಗ್ರಾಮರೂಪವಾದ ಈ ದೇಹವು ಪ್ರಾಪ್ತವಾಗುವುದು.

(ಚಿತ್ತ್ವಸ್ಯ ಚೈತನ್ಯಸ್ಯ ಕಲನಾಂತಸ್ಯ ಪುರ್ಯಷ್ಟಕೇ ಪ್ರತಿಬಿಂಬತಯಾ ಪರಿಚ್ಛೇದಸ್ಯ ಆನಖಾಗ್ರೇಭ್ಯಃ ವ್ಯಾಪ್ತ್ಯಾ ಪರಿಮಾತ್ಮತಯಾ ಅವತಿಷ್ಠತೇ । ತೇನ ಸದಾ ಜೀವ ಚೈತನ್ಯಂ ದೇಹ ಪರಿಮಿತಂ ದೇಹಾಂತರ್ಗತಮೇವ ಸುಖದುಃಖಾದಿ ಸಂಬಂಧಾತ್ ಅನುಭವತಿ ನ ಬಾಹ್ಯಂ —ತಾ. ಪ್ರ.)

೨೭. ಯಾವಾಗ (ತನಗಿಂತ ಬೇರೆಯಾದುದು ಎಂದುಕೊಂಡಿರುವ ಘಟಾದಿ) ಅನ್ಯ ಪದಾರ್ಥಗಳನ್ನು (ನೋಡಬೇಕಾಗಿ ಬರುವುದೋ ಆಗ) ಯಾವ ದೇಹದಲ್ಲಿಯೇ ಇದ್ದರೂ ಜೀವನು ಇಂದ್ರಿಯ ದ್ವಾರಾ ಆಕಾಶದಲ್ಲಿ ವ್ಯಾಪಾರ ಮಾಡುವನು. ಹಾಗೆ ಜೀವ ವ್ಯಾಪಾರಕ್ಕೆ ವಿಷಯಭೂತವಾದ ಘಟಾದಿಗಳಲ್ಲಿ ಚಿತ್ತೇ ವ್ಯಾಪಿಸಿ ತಾದಾತ್ಮ್ಯವನ್ನು ಪಡೆದು ಅದಾಗಿ ಗೋಚರಿಸುವುದು.

ಬಾಹ್ಯಾರ್ಥವೇದನೇ ನಿತ್ಯಂ ಸಂಬಂಧೋಽಕ್ಷಸ್ಯ ಕಾರಕಃ ।
ಸಮನ್ವಿತಸ್ಯ ಚಿತ್ತೇನ ನ ಮುಕ್ತಸ್ಯ ಕದಾಚನ ॥ ೨೮ ॥

ಯದ್ಯದಚ್ಛತರಂ ತಸ್ಮಿನ್ನಭಃಸ್ಥಂ ಪ್ರತಿಬಿಂಬತಿ ।
ಜೀವೇನ ಭವತಿ ಶ್ಲಿಷ್ಟೋ ಬಹಿರ್ಜಿವೋಪ್ಯಜೀವತಿ ॥ ೨೯ ॥

ನಿಘೃಷ್ಟನವರತ್ನಾಭೇ ಯದಾ ನಯನತಾರಕೇ ।
ತದಾ ತಯೋರ್ಬಾಹ್ಯಗತಃ ಪದಾರ್ಥಃ ಪ್ರತಿಬಿಂಬತಿ ॥ ೩೦ ॥

ಜೀವೇನ ಭವತಿ ಶ್ಲಿಷ್ಟಃ ಪ್ರತಿಬಿಂಬತಯಾ ತತಃ ।
ಜೀವಜ್ಞೇಯತ್ವಮಾಯಾತಿ ಬಾಹ್ಯಂ ವಸ್ತ್ವಿತಿ ರಾಘವ ॥ ೩೧ ॥

೨೮, ಹೊರಗಿರುವ ಪದಾರ್ಥಗಳನ್ನು ತಿಳಿದುಕೊಳ್ಳಲು ಯಾವಾಗಲೂ ಇಂದ್ರಿಯ ಸಂಬಂಧವೇ ಕಾರಣವು. ಈ ಇಂದ್ರಿಯ ಸಂಬಂಧದಿಂದ ಉಂಟಾಗುವ ಬಾಹ್ಯ ಜ್ಞಾನವು ಚಿತ್ತದಿಂದ ಕೂಡಿರುವವನಿಗೇ ಹೊರತು ಚಿತ್ತದಿಂದ ಮುಕ್ತನಾದವನಿಗಲ್ಲ.

೨೯. ಇಂದ್ರಿಯ ವ್ಯಾಪಾರರೂಪವಾಗಿ ಪ್ರಕಟವಾಗುವ ಅಂತಃಕರಣ ವೃತ್ತಿಯು ಸ್ವಚ್ಛವಾದಂತೆಲ್ಲ, ಅದರಲ್ಲಿ ಬಹಿರಾಕಾಶದಲ್ಲಿರುವ ಘಟಾದಿಗಳು ಪ್ರತಿಬಿಂಬಿಸುವುವು : ಪ್ರತಿಬಿಂಬಿತವಾದವಕ್ಕೆ ಜೀವಸಂಗವುಂಟಾಗುವುದು. ಹೀಗೆ ಜೀವಚೈತನ್ಯವು ದೇಹದಿಂದ ಬಹಿರಾಕಾಶಕ್ಕೆ ಹೋಗಿ ಅಲ್ಲಿ ವ್ಯಾಪಾರ ಮಾಡಿದರೂ, ಅಲ್ಲಿ ಪ್ರಾಣವೂ ಹೋಗಿ ನಿಂತಿರುವುದಿಲ್ಲವಾದ್ದರಿಂದ, (ಪ್ರಾಣವಿರುವ ಕಡೆಯೇ ವ್ಯಾಪಾರದ ಅರಿವಾಗುವುದರಿಂದ) ತಾನು ಒಳಗೆ ತಿಳಿದುಕೊಂಡೆನು ಎಂದುಕೊಳ್ಳುವನು.

೩೦. ಕಣ್ಣಾಲಿಗಳು ಯಾವಾಗ ಹೊಸದಾಗಿ ಸಾಣೆ ಹಿಡಿದಿರುವ (ನೀಲ) ರತ್ನದಂತೆ ಹೊಳೆಯುವುವೋ, ಆಗ ಅವುಗಳಲ್ಲಿ ಬಾಹ್ಯದಲ್ಲಿರುವ ಘಟಾದಿ ಪದಾರ್ಥಗಳು ಪ್ರತಿಬಿಂಬಿಸುವುವು.

(ತಯೋಃ ತಾರಕಯೋಃ ಘಟ ಪ್ರತಿಬಿಂಬ ಸಹಿತಾ ಚಿತ್ತವೃತ್ತಿಃ ಪ್ರವಿಶತೀತಿ ಬಾಹ್ಯಗತೋ ಘಟಾದಿ ಪದಾರ್ಥಃ ಪ್ರತಿಬಿಂಬತಿ ಇತ್ಯುಚ್ಯತೇ—ತಾ.ಪ್ರ.)

೩೧. ಹೀಗೆ, ರಾಘವ, ಪ್ರತಿಬಿಂಬಿಸಿ ಜೀವ ಸಂಸರ್ಗವನ್ನು ಹೊಂದಿದ ಬಾಹ್ಯ ಪದಾರ್ಥವು ಜೀವಜ್ಞೇಯತ್ವವನ್ನು ಪಡೆಯುವುದು.

ಯತ್ಸಂಶ್ಲೇಷಮುಪಾಯಾತಿ ತದ್ಬಾಲೋಽಪಿ ಹಿ ವಿಂದತಿ ।
ಪಶುರ್ವಾ ಸ್ಥಾವರೋ ವಾಪಿ ಜೀವಃ ಕಸ್ಮಾನ್ನವೇತ್ಸ್ಯತಿ ॥ ೩೨ ॥

ಅಚ್ಛಸ್ಯ ನಯನಸ್ಯಾಥೋ ರಶ್ಮಯೋ ಜೀವವೇಷ್ಟಿತಾಃ ।
ಕ್ರೋಡೀಕುರ್ವಂತ್ಯಲಂ ದೃಶ್ಯಂ ಜೀವಸ್ತತ್ತ್ವೇನ ವಿಂದತಿ ॥ ೩೩ ॥

ಏಷ ಏವ ಕ್ರಮಃ ಸ್ಪರ್ಶೇ ಸಂಬಂಧಃ ಪ್ರತ್ಯಯೋದ್ಭವಃ ।
ರಸೇ ಗಂಧೇ ಚ ಕಥಿತೋ ಜೀವಸಂಸ್ಪರ್ಶಸಂಭವಃ ॥ ೩೪ ॥

[ಜೀವನು ಜ್ಞಾತಾ–ಬಾಹ್ಯ ಪದಾರ್ಥವು ಜ್ಞೇಯ- ಜ್ಞಾತೃಜ್ಞೇಯಗಳ ಸಂಬಂಧವು ಜ್ಞಾನ. ಇದೇ ತ್ರಿಪುಟಿ. ಈ ತ್ರಿಪುಟಿಯು ಬಾಧಿತವಾದರೆ ಆಗ ವೃತ್ತಿಯು ಕೇವಲ ಜ್ಞಾನಾಕಾರವಾಗಿ ಜ್ಞಾತಾ, ಜ್ಞೇಯ ಎರಡೂ ಒಂದೇ ವೃತ್ತಿಯ ಎರಡು ಕೊನೆಗಳಾಗುವುವು. ಆಗ ಆ ವೃತ್ತಿಯಲ್ಲಿ ಬ್ರಹ್ಮವು ಪ್ರಕಟವಾಗುವುದು. ಇದೇ ಪ್ರಜ್ಞಾನಂ ಬ್ರಹ್ಮ ಎಂಬ ಋಗ್ವೇದ ಮಹಾ ವಾಕ್ಯದ ವ್ಯಾಖ್ಯಾನ.]

(ಅನಯಾರೀತ್ಯಾ ಘಟಾದಿ ಬಾಹ್ಯಂವಸ್ತು ಬಹಿರವಭಾಸಮೇವ ಅಂತರ್ಹೃದಿ ಅಹಂಕಾರ ಸಂವಲಿತ ಜೀವಜ್ಞೇಯತ್ವಮಾಯಾತಿ —ತಾ. ಪ್ರ.)

೩೨. ಸ್ಥಾವರವಾಗಲಿ, ಜಂಗಮವಾಗಲಿ, ಬಾಲನೇ ಆಗಲಿ ಸಂಸ್ಪರ್ಶಗೋಚರವಾದುದನ್ನು ಅರಿಯಬಹುದು ಎನ್ನುವಾಗ ಇನ್ನು ಜೀವನು ತಿಳಿಯುವುದರಲ್ಲಿ ವಿಶೇಷವೇನು ?

೩೩. ಸ್ಫುಟವಾಗಿರುವ ಕಣ್ಣಿನ ಕಿರಣಗಳು (ವೃತ್ತಿಗಳು) ಜೀವ ಚೈತನ್ಯವನ್ನು ಹೊತ್ತುಕೊಂಡು ಹೋಗಿ ದೃಶ್ಯವನ್ನು ಆಲಿಂಗಿಸುವುವು. ಅನಂತರ ಜೀವನು ಆ ದೃಶ್ಯವನ್ನು ಅರಿಯುವನು.

೩೪. ಇದೇ ಕ್ರಮವೇ ಇತರ ಇಂದ್ರಿಯಗಳ ವ್ಯಾಪಾರದಲ್ಲಿಯೂ ನಡೆಯುವುದು. ಇದರಿಂದಲೇ ಅರಿವುಂಟಾಗುವುದು. ರಸ, ಗಂಧಗಳಲ್ಲಿ (ಆಪಃ ಪೃಥ್ವೀ ಭೂತಗಳಲ್ಲಿ) ಜೀವನಿಗೆ ಅರಿವುಂಟಾಗುವುದು ಹೀಗೆ.

ಶಬ್ದಸ್ತ್ವಾಕಾಶ ನಿಷ್ಠತ್ವಾತ್ಕರ್ಣಾಕಾಶಗತಃ ಕ್ಷಣಾತ್ ।
ಜೀವಾಕಾಶಂ ವಿಶತ್ಯಂತರಿತ್ಥ ಮಿಂದ್ರಿಯಸಂವಿದಃ ॥ ೩೫ ॥

ಶ್ರೀ ರಾಮ ಉವಾಚ:—

ದೃಶ್ಯತೇ ಮಾನಸಾದರ್ಶೇ ಯಂತ್ರದಾರ್ವೌದರೇಷು ತತ್ ।
ಪ್ರತಿಬಿಂಬಿತಮೇತನ್ಮೇ ಬ್ರೂಹಿ ಬ್ರಹ್ಮನ್ ಕಿಮಾತ್ಮಕಂ ॥ ೩೬ ॥

ಶ್ರೀ ವಸಿಷ್ಠ ಉವಾಚ:—

ಅತ್ಯಂತಜಡಯೋರೇವ ಜೀವಯೋರಿವ ತನ್ಮಿಥಃ ।
ಪ್ರತಿಬಿಂಬಂ ದೃಶೋ ಭ್ರಾಂತಿಂ ವಿದ್ಧಿ ವೇದ್ಯವಿದಾಂ ವರ ॥ ೩೭ ॥

ತಾವನ್ಮಾತ್ರಂ ಜಗತ್ತ್ವೇತದ್ವಿಶ್ವಾಸೋ ಮಾ ತವಾಸ್ತ್ವಿಹ ।
ಅಹಮಿತ್ಯಾದಿಸ್ತರಂಗೋ ವರ್ತಮಾನಂ ಸದಾ ಜಲಂ ॥ ೩೮ ॥

---

೩೫. ಆದರೆ ಶಬ್ದವು ಮಾತ್ರ ಆಕಾಶ ನಿಷ್ಠವಾದುದರಿಂದ ಕರ್ಣಾಕಾಶವನ್ನು ಸೇರುತ್ತಿದ್ದ ಹಾಗೆಯೇ ಜೀವಾಕಾಶವನ್ನು ಸೇರುವುದರಿಂದ ಕೂಡಲೇ ಅಲ್ಲಿ ಅರಿವನ್ನುಂಟುಮಾಡುವುದು.

(ಪಂಚಭೂತಗಳಲ್ಲಿ ಎರಡನೆಯದಾದ ವಾಯುವಿನಲ್ಲಿ ಸ್ಪರ್ಶಗುಣವಿದೆ. ಆಕಾಶದಲ್ಲಿ ಶಬ್ದ ಗುಣವು: ಅದರಿಂದ ಶಬ್ದವು ಸ್ಪರ್ಶಕ್ಕಿಂತ ಸೂಕ್ಷ್ಮವು.)

ಶ್ರೀ ರಾಮನು ಕೇಳಿದನು:—

೩೬. ಎಲೈ ಬ್ರಹ್ಮಜ್ಞನೆ, ಮನಸ್ಸು, ಕನ್ನಡಿ, ಯಂತ್ರ, ಮರ, ಚಿಗುರು ಮೊದಲಾದ ಪ್ರತಿಬಿಂಬಗಳನ್ನು ತೋರಿಸುವುವೂ ಅವವುಗಳ ಸ್ವರೂಪವೇನು ಹೇಳು.

ಶ್ರೀ ವಸಿಷ್ಠನು ಹೇಳಿದನು:—

೩೭. ವೇದ್ಯವನ್ನು ಬಲ್ಲವರಲ್ಲಿ ಶ್ರೇಷ್ಠನೇ, ಅತ್ಯಂತ ಜಡವಾಗಿರುವ (ಘಟಪಟಾದಿ)ಗಳು ಹೇಗೆಯೋ (ವ್ಯಷ್ಟಿಸಮಷ್ಟಿ) ಜೀವರೂ ಹಾಗೆಯೇ ಪ್ರತಿಬಿಂಬವಾಗಿರಲು ಅವುಗಳಿಗೆ ಭೇದವೆಂಬುದು ಕೇವಲ ಭ್ರಾಂತಿಯೇ ಸರಿ.

೩೮. ಈ ಜಗತ್ತು ಎನ್ನುವುದು ಇಷ್ಟು ಮಾತ್ರವೇ ಸರಿ. ಅದರಿಂದ ಇದರಲ್ಲಿ ನಿನಗೆ ವಿಶ್ವಾಸವು ಇಲ್ಲದಿರಲಿ. ''ಅಹಂ'' ಮೊದಲಾದುವುಗಳೆಲ್ಲ ತರಂಗಗಳು. ಯಾವಾಗಲೂ ಇರತಕ್ಕದ್ದು ನೀರು.

ಪರಾಂಭೋಧೌ ತು ನಾಸ್ತ್ಯೇವ ದೇಶಕಾಲಕ್ರಿಯಾದಿಕಂ ।
ತನ್ಮಯೈಕತಯಾ ನಿತ್ಯಮಾತ್ಮಾ ಸರ್ವತ್ರ ಸರ್ವಗಃ ॥ ೪೯ ॥

ನಿತ್ಯಮಸಕ್ತಮತಿರ್ಮುದಿತಾತ್ಮಾ
ಶಾಂತಮೃಷಾಸುಖದುಃಖವಿದಂತಃ ।
ತಿಷ್ಠ ನಿವಿಷ್ಟಮತಿಃ ಸಮತಾಯಾ
ಮಸ್ತಸಮಸ್ತಭವಾಮಯಮಾಯಃ ॥ ೫೦ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಅಕ್ಷಸಂವೇದನವಿಚಾರಯೋಗೋ" ನಾಮ ಪಂಚಾಶಃ ಸರ್ಗಃ

---

೪೯. ಪರಾಂಬೋಧಿಯಲ್ಲಿ ದೇಶ ಕಾಲ ಕ್ರಿಯಾ ಮೊದಲಾದುವುಗಳು ಯಾವವೂ ಇಲ್ಲವೇ ಇಲ್ಲ, ಸರ್ವತ್ರುವೂ ಇರುವ ಸರ್ವದಲ್ಲಿಯೂ ಇರುವ ಆತ್ಮನು ನಿತ್ಯನು. ಅವುಗಳಲ್ಲಿಲ್ಲಾ ಎಂದರೆ ದೇಶ ಕಾಲ ಕ್ರಿಯಾ ರೂಪವಾದ ವಿಕಾರ ಹೇತುಗಳಲ್ಲಿಯೂ ಅವುಗಳಿಂದ ಆಗಿರುವ ವಿಕಾರಗಳಲ್ಲಿಯೂ ತಾನೇ ತಾನಾಗಿ ತುಂಬಿರುವನು.

೫೦. ಯಾವಾಗಲೂ ಏತರಲ್ಲಿಯೂ ಅಸಕ್ತವಾಗಿರುವಂತೆ ಬುದ್ಧಿಯನ್ನು ಇಟ್ಟುಕೊಂಡು ಸಂತೋಷಚಿತ್ತನಾಗಿರು. ಮೃಷಾಭೂತವಾದ ಸುಖದುಃಖಗಳೆಂಬ ವೇದನಗಳು ನಿನಗೆ ಇಲ್ಲದಿರಲಿ. ಸಮಸ್ತ ಸಂಸಾರರೂಪವಾದ ಮಾಯೆಯನ್ನೂ ಉಪಸಂಹಾರ ಮಾಡಿಕೊಂಡು ಬ್ರಹ್ಮನಿಷ್ಠನಾಗಿ ಬ್ರಹ್ಮಣಿಸ್ಥಿತನಾಗಿ ನಿಲ್ಲು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಅಕ್ಷಸಂವೇದನವಿಚಾರಯೋಗ" ಎಂಬ
ಐವತ್ತನೆಯ ಸರ್ಗವು.

ಏಕಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ನಪುನರ್ಭವತಃ ಪೂರ್ವಂ ಸಂಪನ್ನಾಶ್ಚಕ್ಷುರಾದಯಃ ।
ಯಥಾ ಕಮಲಜಸ್ಯೈತತ್ಸರ್ವಮೇವ ತ್ವಯಾ ಶ್ರುತಂ ॥ ೧ ॥

ಬ್ರಹ್ಮಪುರ್ಯಷ್ಟಕಸ್ಯಾದಾವರ್ಥಸಂವಿದ್ಯಥೋದಿತಾ ।
ಪುರ್ಯಷ್ಟಕಸ್ಯ ಸರ್ವಸ್ಯ ತಥೈವೋದೇತಿ ಸರ್ವದಾ ॥ ೨ ॥

ವಿದ್ಧಿ ಪುರ್ಯಷ್ಟಕಂ ಜೀವೋ ಯೋ ಗರ್ಭಸ್ಥೇಂದ್ರಿಯೋದಯಃ ।
ಯದ್ಯಥಾ ಭಾವಯತ್ಯಾಶು ತತ್ತಥಾ ಪರಿಪಶ್ಯತಿ ॥ ೩ ॥

ಐವತ್ತೊಂದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. (ಸಮಷ್ಟಿ ಜೀವಸ್ವರೂಪನಾದ) ಚತುರ್ಮುಖನು ಹುಟ್ಟುವುದಕ್ಕೆ ಪೂರ್ವವಾಗಿ (ಸೃಷ್ಟಿಯು ಹೇಗೆ ಇರಲಿಲ್ಲವೋ) ಹಾಗೆಯೇ ನೀನು ಹುಟ್ಟುವುದಕ್ಕಿಂತ ಮುಂಚೆಯೂ (ನಿನ್ನ) ಚಕ್ಷುರಾದಿಗಳು ಯಾವವೂ ಇರಲಿಲ್ಲ ಎಂಬುದನ್ನು ನೀನು ಬಲ್ಲೆಯಷ್ಟೆ?

೨. ಸಮಷ್ಟಿ ಜೀವನಾದ ಬ್ರಹ್ಮನಿಗೆ ಪುರ್ಯಷ್ಟಕಗಳು ಹುಟ್ಟುವುದಕ್ಕೆ ಮೊದಲು ಹೇಗೆ ಇದು ಬೇಕು ಎಂಬ ಅರ್ಥ ಸಂವಿತ್ತು ಹುಟ್ಟಿತೋ ಹಾಗೆಯೇ ಯಾವಾಗಲೂ ವ್ಯಷ್ಟಿ ಜೀವನದಲ್ಲಿಯೂ ಪುರ್ಯಷ್ಟಕ ಸಂಬಂಧವಾದ ಅರ್ಥ ಸಂವಿತ್ತು ಉದಯಿಸಿ ಅನಂತರ ಪುರ್ಯಷ್ಟಕವು ಉತ್ಪತ್ತಿಯಾಗುವುದು.

೩. ಗರ್ಭಸ್ಥನಾಗಿರುವ ಜೀವನು (ತನ್ನ ಆರನೆಯ ತಿಂಗಳಲ್ಲಿ) ಇಂದ್ರಿಯಗಳು ಉದಯವಾದ ಮೇಲೆ ಪುರ್ಯಷ್ಟಕವನ್ನು ಹೇಗೆ ಹೇಗೆ ಭಾವಿಸುವನೋ ಹಾಗೆ ಹಾಗೆಯೇ ಅದನ್ನು ಅವನು ಕಾಣುವನು.

ಇಂದ್ರಿಯಾಣೀಂದ್ರಿಯಾರ್ಥಾಖ್ಯಂ ವಿದ್ಧಿ ಸಂವೇದನಂ ಸ್ವಕಂ ।
ಸಂಪನ್ನಂ ಚ ತಥಾ ತತ್ತೇ ಪ್ರೋಕ್ತಮಾದ್ಯಮನಃ ಸ್ಥಿತೌ ॥ ೪ ॥

(ಅದ್ವೈತ ವೇದಾಂತದಲ್ಲಿ ಬ್ರಹ್ಮಭಿನ್ನವಾದ ಇನ್ನೊಂದು ವಸ್ತುವಿಲ್ಲ. ಬ್ರಹ್ಮವು ಇಂದ್ರಿಯಗೋಚರವಾದುದಲ್ಲ. ಅದರಿಂದ ಇಂದ್ರಿಯ ಗೋಚರವಾಗುವ ವಸ್ತುಗಳೆಲ್ಲ ಖಂಡ ಸತ್ಯಗಳು. ಬ್ರಹ್ಮವು ಅಖಂಡ ಸತ್ಯ. ಖಂಡ ಸತ್ಯವನ್ನು ಅಂಗೀಕರಿಸಿದರೆ ಸತ್ಯಗಳು ನಾನಾ ಆಗಿ ಅವ್ಯವಸ್ಥಾ ಪ್ರಸಂಗವು ಬರುವುದಿಲ್ಲವೆ ಎಂದರೆ-ವೃಕ್ಷವೊಂದೇ ಒಂದರಲ್ಲಿ ಎಷ್ಟೋ ಲಕ್ಷೋಪಲಕ್ಷ ಪತ್ರಗಳು ಇದೆಯೆಂದು ಪತ್ರ ಸತ್ಯತ್ವವನ್ನು ಅಂಗೀಕರಿಸಿದಂತೆ ಇದು. ಹೀಗಿರುವುದರಿಂದ ವ್ಯವಹಾರಿಕ ಸತ್ತಾ ಮತ್ತು ವ್ಯವಹಾರಿಕ ಸತ್ಯತ್ವ ಇವುಗಳನ್ನು ಅಂಗೀಕರಿಸುವುದರಿಂದ ಅದ್ವೈತವು ಅವುಗಳನ್ನು ಕಾಣುವವನು ದ್ರಷ್ಟಾ ಅವನ ದೃಷ್ಟಿಯನ್ನು ಹಿಡಿದು ದೃಕ್ ದೃಶ್ಯಗಳಲ್ಲಿ ದೃಕ್ ಸತ್ಯ ದೃಶ್ಯ ಖಂಡ ಸತ್ಯ ಎಂಬ ಸಿದ್ಧಾಂತಕ್ಕೆ ಬಂದಿದೆ.)

೪. ನಿನಗೆ ಈ ಮೊದಲೇ ಹೇಳಿದಂತೆ ಹಿರಣ್ಯಗರ್ಭನ ಮನಸ್ಸಿನ ವಿಚಾರದಲ್ಲಿ ಆದಂತೆಯೇ ಸ್ವಸಂವೇದನವನ್ನೇ ಇಂದ್ರಿಗಳು ಇಂದ್ರಿಯಾರ್ಥಗಳಾಗಿ ಕಾಣುವುದು ಎಂದು ತಿಳಿ.

(ತ್ರಿಪುಟಿಯಲ್ಲಿ ಜ್ಞಾತಾ, ಜ್ಞಾನ, ಜ್ಞೇಯಗಳು ಇದ್ದೇ ಇರುವುವು. ಹಿಂದೆ ತ್ರಿಪುಟಿಯನ್ನು ಭೇದಿಸಿದರೆ ಬ್ರಹ್ಮ ದರ್ಶನವಾಗುವುದು ಎಂದು ಹೇಳಿದೆ. ತ್ರಿಪುಟೀ ಭೇದವೆಂದರೆ ಬೇರೆ ಬೇರೆಯಾಗಿ ಕಾಣುತ್ತಿರುವ ಜ್ಞಾತಾ ಜ್ಞಾನ ಜ್ಞೇಯಗಳನ್ನು ಒಟ್ಟುಗೂಡಿಸಿ ನೋಡುವುದು. ಆಗ ತ್ರಿಕೋಣಾ ಕೃತಿಯಂತಿದ್ದ ತ್ರಿಪುಟಿಯು ಸರಳ ರೇಖೆಯಾದಂತಾಗಿ, ಜ್ಞಾನದ ಈ ಕೊನೆ ಜ್ಞಾತಾ, ಆ ಕೊನೆ ಜ್ಞೇಯವಾಗುವುದು. ಹೀಗಾಗುವುದರಿಂದ ಜ್ಞಾತಾ-ಜ್ಞೇಯಗಳು ಬೇರೆ ಬೇರೆಯಾಗಿರುವುದು ತಪ್ಪಿ ಈ ಎರಡರ ನಡುವೆ ಇರುವ ಜ್ಞಾನವೇ ಪ್ರಧಾನವಾಗುವುದು. ಇಂದ್ರಿಯ ಗೋಚರವಾಗುವ ಜ್ಞಾತೃ ಜ್ಞೇಯಗಳಿಗಿಂತ ಅತೀಂದ್ರಿಯವಾದ ಜ್ಞಾನವೇ ಶ್ರೇಷ್ಠವೆಂದು ಅದಕ್ಕೆ ಪ್ರಾಧಾನ್ಯವು. ಹೀಗೆ ಪ್ರಧಾನವಾದ ಜ್ಞಾನವು ತನ್ನಲ್ಲಿರುವ ವ್ಯಕ್ತಿ ಸಂಬಂಧ ಪರಿಚ್ಛಿನ್ನತ್ವವನ್ನು ನೀಗಿಕೊಂಡರೆ ಬ್ರಹ್ಮವೇ ಆಗುವುದು. ಅದರಿಂದ ಬ್ರಹ್ಮವೇ ಪರಿಚ್ಛೇದವೆಂಬ ಮುಸುಕನ್ನು ಎಳೆದುಕೊಂಡು ಜೀವವಾಗಿ, ಇನ್ನೊಂದು ಪರಿಚ್ಛೇದವನ್ನು ಮಾಡಿಕೊಂಡು ಇಂದ್ರಿಯವಾಗಿ, ಪರಿ

ಶುದ್ಧಾ ಸಂವಿತ್ಸಂಭವಂತೀ ಸಂವೇದನಮನಿಂದಿತಂ ।
ತತೋಽಹಂವೇದನಾನಂತ ಜೀವಪುರ್ಯಷ್ಟಕಾನ್ವಿತಾ ॥ ೫ ॥

ಚ್ಛೇದಾಂತರದಿಂದ ಇಂದ್ರಿಯ ವಿಷಯವೂ ಆಗುವುದು. ಸರ್ವಂ ಖಲ್ವಿದಂ ಬ್ರಹ್ಮ ಎಂಬ ಶ್ರುತಿಯು ಹೇಳುವಂತೆ ಭೂತಂ, ಭವ್ಯಂ, ಭವತ್ ಎಲ್ಲವೂ ಕೂಡ ಬ್ರಹ್ಮವೇ ಆಗಿರುವುದು. "ಸಚ್ಚತ್ಯಚ್ಚ ಎಲ್ಲವೂ ಬ್ರಹ್ಮವೇ !" ಎನ್ನುವುದು ಹೇಗೆ ಎಂದರೆ, ಅದೇ ಮಾಯೆ. ಆ ಮಾಯೆಯೂ ಕೂಡ ಏಕ ಮೇವಾದ್ವಿತೀಯಂ ಆದ ಬ್ರಹ್ಮಕ್ಕಿಂತ ಭಿನ್ನವಾಗಿರಲಾರದು. ಬ್ರಹ್ಮವು ಷೋಡಶಕಲವಾದರೆ ಈ ವಿಶ್ವವೂ ಹಿರಣ್ಯಗರ್ಭನೂ ಎಲ್ಲವೂ ಸೇರಿ ಅದರಲ್ಲಿ ಚತುರ್ಥಾಂಶ. ಹದಿನಾರು ನಾಲ್ಕು ಆದುದು ಹೇಗೆ ಎಂದರೆ ಅದೇ ಮಾಯೆ. ಅದು ವಸಿಷ್ಠರು ಹೇಳುವಂತೆ ಚಿತ್ತು ತಾನಾಗಿ ಕಲ್ಪಿಸಿಕೊಂಡ ಒಂದು ಅವಸ್ಥೆ. ವಸಿಷ್ಠ ವಚನ ಪ್ರಕಾರವಾಗಿ ಅದು ಬಾಲಕನು ಮಾಡಿಕೊಳ್ಳುವ ವೇತಾಲೋತ್ಥಾಪನ. ಅದರಿಂದ ಭ್ರಾಂತಿ. ಅದರಿಂದ ಚಿತ್ತು ಚಿತ್ತವಾದಾಗಲೇ ಅದಕ್ಕೆ ಸಂಕಲ್ಪವಶವಾಗಬೇಕಾದ ನಿಯಮವು ಪ್ರಾಪ್ತವಾಯಿತು. ಆದ್ದರಿಂದ ಸಮಷ್ಟಿಯಲ್ಲಿ ಹೇಗೋ ಹಾಗೇ ವ್ಯಷ್ಟಿಯಲ್ಲಿಯೂ ಉತ್ಪತ್ತಿಯಾಗುತ್ತಿದ್ದ ಹಾಗೆಯೇ ನಿಯಮಗಳಿಗೆ ಒಳಪಡುವ ನಿಯತಿಯು ಬಂತು ಅದರಂತೆ ನಡೆಯುವ ಪ್ರಸಂಗವೂ ಬಂದು ಈ ಜಗತ್ತು ಹರಡಿರುವುದು. ಇಷ್ಟು ಭಾರಿಯಾಗಿರುವಂತೆ ತೋರಿದರೂ ನಿಜವಾಗಿ ಇದು ಮನೋಮೂಲವು. ಮನಸ್ಸನ್ನು ಉಪಸಂಹಾರ ಮಾಡಿದರೆ ಆಯಾ ಜೀವನ ವ್ಯವಹಾರವೆಲ್ಲವೂ ಶಾಂತವಾಗುವುದು. ಅದರಂತೆಯೇ ಹಿರಣ್ಯಗರ್ಭನ ಮನಸ್ಸು ತಿರೋಧಾನವಾದರೆ ಈ ಸೃಷ್ಟಿಯು ಪ್ರಲಯವಾಗುವುದು. ಆದರೆ ಸೃಷ್ಟಿ ಬೀಜವಾದ ಚಿತ್ಕಲನವು ಚಿತ್ತಿನಲ್ಲಿ ಇದ್ದೇ ಇರುವುದರಿಂದ ಒಂದು ಕಡೆ ಪ್ರಲಯವಾಗುತ್ತಿದ್ದರೆ ಇನ್ನೊಂದು ಕಡೆ ಉದಯವಾಗುತ್ತಿರಲೇಬೇಕು. ಅದರಿಂದ ಜೀವನಿಗೆ ಜೀವತ್ವ ಮೋಕ್ಷವನ್ನು ಮಾತ್ರ ಹೇಳುವುದು. ಮನಸ್ತ್ವವಿರುವವರೆಗೂ ಸ್ಥಿತಿ–ಸಂಹಾರ. ಮನಸ್ತ್ವವು ತಿರೋಧಾನವಾದರೆ ಮುಕ್ತಿ ಅದರಿಂದ ಮನಸ್ಸು ಇರುವವರೆಗೂ ಅದರ ಕಲನವೇ ಇಂದ್ರಿಯ–ಇಂದ್ರಿಯಾರ್ಥ ಎರಡೂ ಆಗುವುದು ಎಂದು ಸಿದ್ಧಾಂತ.)

೫. ಸೃಷ್ಟಿ ಪೂರ್ವದಲ್ಲಿ ಶುದ್ಧವಾಗಿ ಸಂಕಲ್ಪ ದೂಷಿತವಾಗದೆ ಅನಿಂದಿತವಾಗಿದ್ದ ಸಂವಿತ್ತೇ ಸಂಭವಕ್ಕೆ ಒಳಪಟ್ಟುಕೊಂಡು ಅಹಂ ಎಂಬ ಪರಿಚ್ಛಿನ್ನ ಜ್ಞಾನವನ್ನು ಕಲ್ಪಿಸಿಕೊಂಡು ಜೀವ ಪುರ್ಯಷ್ಟಕವಾಗುವುದು. ಹಾಗೆ ಪರಿಚ್ಛಿನ್ನ ಜೀವತ್ವವನ್ನು ಆರೋಪಿಸಿಕೊಂಡರೂ ಅದು ಶುದ್ಧ ಸಂವಿತ್ಸ್ವರೂಪವಾದ ಚಿತ್ತೇ!

ನ ತ್ವೇಕತ್ವಾದನಂತತ್ವಾದವೇದ್ಯತ್ವಾದನಾಮಯೇ ।
ಅಭಾವತಾದನೇಕತ್ವಾದಶೂನ್ಯತ್ವಾತ್ಪರಾ ಸ್ಥಿತಾ || ೬ ||

ಚೇತ್ಯಾದಿಬುದ್ಧ್ಯಾ ತತ್ಕಿಂಚಿನ್ನ ಮನಸ್ತಾಂ ಚ ಗಚ್ಛತಿ ।
ನ ಚ ಜೀವತ್ವಮಾಯಾತಿ ನ ಚ ಪುರ್ಯಷ್ಟಕಾತ್ಮಿಕಾ || ೭ ||

ನಾ ವಿದ್ಯಾದಿವಿಲಾಸೋಸ್ತಿ ಸೋಸ್ತಿ ನಾಸ್ತೀವ ಯಃ ಸದಾ ।
ಪರಮಾತ್ಮೇತಿ ಕಥಿತೋ ಮನಃಷಷ್ಠೇಂದ್ರಿಯಾತಿಗಃ || ೮ ||

ತಸ್ಮಾತ್ಸಂಪದ್ಯತೇ ಜೀವಶ್ಚಿನ್ಮೂರ್ತಿರ್ಮನನಾತ್ಮಕಃ ।
ಭ್ರಮಃ ಕೇವಲಮಿತ್ಯದ್ಯ ಉಪದೇಶಾಯ ಗೀಯತೇ || ೯ ||

(ಅರಸಾದವನು ಆಳಿನ ವೇಷ ಹಾಕಿಕೊಂಡರೂ ಅರಸಾಗಿಯೇ ಇರುವಂತೆ ಜೀವತ್ವ ಪ್ರಾಪ್ತಿಯಾದರೂ ಚೇತನದ ಬ್ರಹ್ಮತ್ವವು ಹೋಗುವುದಿಲ್ಲ.)

೬. ಏಕವಾಗಿರುವುದರಿಂದ, ಅನಂತವಾಗಿರುವುದರಿಂದ, ಅವೇದ್ಯವಾಗಿರುವುದರಿಂದ, ಅನಾಮಯವಾದ ಆ ಚಿತ್ತಿನಲ್ಲಿ ಅದಕ್ಕಿಂತ ಭಿನ್ನವಾದುದು ಯಾವುದೂ ಇಲ್ಲ. ಹೀಗೆ ಇನ್ನು ಯಾವುದೂ ಇಲ್ಲದಿದ್ದರೂ (ದೇಶ ಕಾಲಾದಿ ಪರಿಚ್ಛೇದಗಳಿಂದ ಆದ) ಅನೇಕತ್ವವು ತುಂಬಿರುವುದರಿಂದ, ಆ ಪರಾ ಚಿತ್ತು ಅಶೂನ್ಯವಾಗಿಯೂ ಇರುವುದು.

೭. ಚೇತ್ಯಾದಿಯಾಗಿ ಇಂದ್ರಿಯ ಗೋಚರವಾಗುತ್ತಿದ್ದರೂ (ಆ ಚಿತ್ತು ತನ್ನ ಸ್ವರೂಪವನ್ನು ಬಿಟ್ಟು ಪ್ರತ್ಯೇಕವಾದ) ಮನಸ್ತ್ವವನ್ನಾಗಲೀ, ಜೀವತ್ವವನ್ನಾಗಲೀ ಪುರ್ಯಷ್ಟಕತ್ವವನ್ನಾಗಲೀ ಹೊಂದುವುದಿಲ್ಲ.

೮. ಮನಸ್ಸೆಂಬ ಆರನೆಯ ಇಂದ್ರಿಯಕ್ಕೆ ಅತೀತನಾಗಿರುವ, ಪರಮಾತ್ಮನೆಂಬ ಶಬ್ದಕ್ಕೆ ವಾಚ್ಯನಾಗಿರುವ ಪರವಸ್ತುವು ಇದ್ದೇ ಇದೆ. ಮೂಢರು ಇಲ್ಲ–ಇಲ್ಲ–ನಾಸ್ತಿ ನಾಸ್ತಿ ಎನ್ನುವುದೂ ಇದನ್ನೇ! ಶುದ್ಧವಾದ ಪರಬ್ರಹ್ಮದಲ್ಲಿ ಅವಿದ್ಯಾವಿಲಾಸಗಳು ಇಲ್ಲ.

೯. ಅದರಿಂದ, ''ಜೀವನು ಚಿನ್ಮೂರ್ತಿಯು. ಮನನ ಮಾಡುತ್ತಿರುವುದರಿಂದ ಜೀವನು ಎನ್ನಿಸಿಕೊಳ್ಳುವನು. ಜೀವನು ಪ್ರತ್ಯೇಕನಾಗಿರುವನು ಎನ್ನು

ಯತಃ ಕುತಶ್ಚಿತ್ಸಂಪನ್ನೋ ತ್ವವಿದ್ಯಾಮಯ ಆಮಯೇ ।
ಉಪದೇಶ್ಯೋಪದೇಶೇನ ಪ್ರವಿಲೀನೇ ವಿಚಾರಣಾತ್ ॥ ೧೦ ॥

ಪ್ರಶಾಂತಸಕಲಾಕಾರಂ ಜ್ಞಾನಂ ತತ್ರಾವಶಿಷ್ಯತೇ ।
ಯತ್ರಾಕಾಶಮಪಿ ಸ್ಥೂಲಮಣಾವಿವ ಮಹಾಚಲಃ ॥ ೧೧ ॥

ಯತ್ರೋದ್ಯದಾಚಾರಮಪಿ ಸದಪ್ಯಸದಿವ ಸ್ಥಿತಂ ।
ಜಗಜ್ಜಾಲ್ವಿಷಯಾಂಸ್ತ್ಯಕ್ತ್ವಾ ಕಾಯೇ ತ್ವಂ ತಿಷ್ಠ ನಿರ್ಮಲೇ ॥ ೧೨ ॥

ಅಸನ್ಮಯಮವಿದ್ಯಾಯಾ ರೂಪಮೇವ ತದೇವ ಹಿ ।
ಯದ್ವೀಕ್ಷಿತಾಸತೀ ನೂನಂ ನಶ್ಯತ್ಯೇವ ನ ದೃಶ್ಯತೇ ॥ ೧೩ ॥

ವುದು ಕೇವಲ ಭ್ರಮೆಯು'' ಎಂಬುದು ಏರ್ಪಡುವುದು. (ಹಾಗಾದರೆ ಶಾಸ್ತ್ರದಲ್ಲಿ ಜೀವನನ್ನು ಅಂಗೀಕರಿಸುವುದು ಉಂಟಲ್ಲ ಎಂದರೆ ಅದು) ಕೇವಲ ಶಿಷ್ಯಾನುಗ್ರಹಾರ್ಥವಾಗಿ ಆಗಿರುವ ಕಲ್ಪನೆಯು ಅದು.

೧೦. ಅದರಿಂದ ಹೇಗೆ ಹೇಗೋ ಸಂಪ್ರಾಪ್ತವಾಗಿರುವ ಅವಿದ್ಯಾಮಯವಾದ ಈ ಸಂಸಾರ ರೋಗವು ಸದ್ಗುರುವಿನಿಂದ ಸಚ್ಛಾಸ್ತ್ರದ ಉಪದೇಶ ಪಡೆದು ವಿಚಾರಮಾಡಿ ನೋಡಿದರೆ ಅಗತ್ಯವಾಗಿ ನಾಶವಾಗುವುದು: ಈ ಅವಿದ್ಯಾ ವಿಲಾಸವು ನಾಶವಾಗಲು,

೧೧. ಸಕಲ ಆಕಾರವೂ ಪ್ರಶಾಂತವಾಗಿ, ಜ್ಞಾನವೊಂದೇ ಉಳಿಯುವುದು. ಆಗ ಸೂಕ್ಷ್ಮವಾದ ಆಕಾಶವೂ ಕೂಡ ಸ್ಥೂಲವಾಗುವುದು: ಆ ಜ್ಞಾನಕ್ಕೂ ಆಕಾಶಕ್ಕೂ ಹೋಲಿಸಿದರೆ ಅಣುವಿಗೂ ಮಹಾ ಪರ್ವತಕ್ಕೂ ಹೋಲಿಸಿದಂತಾಗುವುದು.

೧೨. ಅದರಿಂದ ಬೇಕು ಬೇಕಾದ ವ್ಯವಹಾರವಿದ್ದರೂ ಎಲ್ಲಿ ಎಲ್ಲವೂ ಇಲ್ಲದಂತಾಗುವುದೋ ಆ ಜೀವನ್ಮುಕ್ತ ಪದದಲ್ಲಿ, ಜಗತ್ಸಂಬಂಧಿಯಾದ ವಿಷಯಗಳನ್ನೆಲ್ಲ ಬಿಟ್ಟು, ನಿರ್ಮಲ ಜ್ಞಾನ ಶರೀರದಲ್ಲಿ ಇರು.

೧೩. ಅವಿದ್ಯೆಯ ರೂಪವೆನ್ನುವುದೇ ಅಸನ್ಮಯವಾದುದು: ಅದನ್ನು ಕಾಣಬೇಕೆಂದು ಹೊರಟ ಕೂಡಲೇ ನಾಶವೇ ಆಗುವುದು: ಕಾಣುವುದೇ ಇಲ್ಲ.

ಆಲೋಕಿತಂ ನಾಮ ಕಥಮವಸ್ತು ಕಿಲ ಲಭ್ಯತೇ ।
ಪ್ರಯತ್ನೇನಾಪಿ ಸಂಪ್ರಾಪ್ತಂ ಮೃಗತೃಷ್ಣಾಂಬುಕೈರಿವ ॥ ೧೪ ॥

ಅಸದೇವ ಸದೇವ ಸದಜ್ಞಾನಾದಸ್ಯ ಸತ್ಯತಾ ।
ಜ್ಞಾನಾದ್ಯಥಾಸ್ಥಿತಂ ವಸ್ತು ದೃಶ್ಯಕೇ ನಶ್ಯತಿ ಭ್ರಮಃ । ॥ ೧೫ ॥

ಅವಿದ್ಯಾಯಾ ವಿಚಾರೋಯಂ ಜೀವಪುರ್ಯಷ್ಟಕಾದಿಕಾ ।
ಅಪ್ಯತ್ಯಂತಮಸತ್ಯಾಯಾಃ ಕಲ್ಪನಾಕಲ್ಪಿತಾತ್ಮನಃ ॥ ೧೬ ॥

ತಸ್ಯಾಸ್ತು ಉಪದೇಶಾಯ ಸೇಯಂ ಜೀವಾದಿಕಲ್ಪನಾ !
ಕೃತಾ ಶಾಸ್ತ್ರೈಃ ಪ್ರಬೋಧಾಯ ತಾಂ ತ್ವಮೇಕಮನಾಃ ಶೃಣು ॥ ೧೭ ॥

ಜೀವತ್ವಮಿವ ಸಂಪ್ರಾಪ್ತಾ ಪುರ್ಯಷ್ಟಕ ಪದಸ್ಥಿತಾ ।
ಕಲಾ ಕಲಂಕಕಲಿತಾ ಚಿತಿರಾಬೋಧನೋನ್ಮುಖೀ ॥ ೧೮ ॥

---

೧೪. ಇಲ್ಲದಿರುವ ವಸ್ತುವು ಆಲೋಕನಾದಿ ಇಂದ್ರಿಯ ವ್ಯಾಪಾರಗಳಿಗೆ ಲಭ್ಯವಾಗುವುದೆಂತು ? ಪ್ರಯತ್ನ ಮಾಡಿದರೆ ತಾನೇ ಮರೀಚಿಕೆಯ ಜಲವು ದೊರೆಯುವುದೇ ?

೧೫. ಅಸತ್ತಾಗಿದ್ದರೂ ಸತ್ತಾಗಿ ತೋರುವುದಲ್ಲ ಎಂದರೆ ಹಾಗೆ ಸತ್ಯವಾಗಿ ತೋರುವುದು ಅಜ್ಞಾನದಿಂದ. ಯಾವಾಗ ಜ್ಞಾನವು ಲಭಿಸಿ ವಸ್ತುವು ಯಥಾ ಸ್ಥಿತವಾಗಿ ಕಂಡ ಕೂಡಲೇ ಭ್ರಾಂತಿಯು ನಾಶವಾಗುವುದು.

೧೬. ಜೀವ, ಪುರ್ಯಷ್ಟಕ, ಮೊದಲಾದ ಭ್ರಾಂತಿಯು, ಅತ್ಯಂತವಾಗಿ ಅಸತ್ತಾಗಿರುವ ಅವಿದ್ಯೆಯ ವಿಚಾರವು. ಆತ್ಮನ ಕಲ್ಪನೆಯಿಂದಲೇ ಕಲ್ಪಿತವು.

೧೭. ಹೀಗೆ ಜೀವಾದಿಗಳನ್ನು ಕಲ್ಪಿಸಿರುವುದು ನಿನಗೆ ಆ ಅವಿದ್ಯೆಯ ಸ್ವರೂಪವನ್ನು ತೋರಿಸಿಕೊಡುವುದಕ್ಕಾಗಿ. ಶಾಸ್ತ್ರಗಳು ಪ್ರಬೋಧವಾಗಲೆಂದು ಇದನ್ನೆಲ್ಲ ಕಲ್ಪಿಸಿರುವುವು. ಅದರಿಂದ ಅದನ್ನೆಲ್ಲ ಒಂದೇ ಮನಸ್ಸಿನಿಂದ ಕೇಳು.

೧೮. ಬಾಹ್ಯಾರ್ಥ್ಯದರ್ಶನದಲ್ಲಿ ಕುತೂಹಲಗೊಳ್ಳುವುದೆಂಬ ಕಲಂಕವನ್ನು ಪಡೆದು ಚಿತ್ತು, ಕಲೆಯಾಗಿ ಎಂದರೆ ಸಣ್ಣದೊಂದು ಭಾಗವಾಗಿ ಪುರ್ಯಷ್ಟಕದಲ್ಲಿ ನಿಂತು ಜೀವತ್ವವನ್ನು ಹೊಂದಿತು.

ಯದ್ಯಥಾ ಭಾವಯತ್ಯಾಶು ತತ್ತಥಾನುಭವತ್ಯಲಂ ।
ಸತ್ಯೋ ಭವತ್ವಸತ್ಯೋ ವಾ ಬಾಲೇನ ನಿಶಿ ಯಕ್ಷಕಃ ॥ ೧೯ ॥

ಪಂಚತನ್ಮಾತ್ರ ಕಲನಾಂ ಸಂಭಾವಯತಿ ಸತ್ತಯಾ ।
ತತ್ರಾಶ್ಮನಿ ತಥಾ ರಂಧ್ರಾಣ್ಯಪ್ರಪಶ್ಯತಿ ತಥೋದಿತಾನ್ ॥ ೨೦ ॥

ಏಭ್ಯ ಏವ ಸಮುತ್ಪನ್ನಂ ಬಹಿಃಸ್ಥಂ ಭೂತಪಂಚಕಂ ।
ಪಶ್ಯನ್ತ್ಯನನ್ಯದನ್ಯಾಭಂ ಶಾಖಾಶತಮಿವಾಂಕುರಃ ॥ ೨೧ ॥

ಇದಮಂತರಿದಂ ಬಾಹ್ಯಮಿತಿ ನಿಶ್ಚಯವಾಂಸ್ತತಃ ।
ಜೀವೋಭಾವಂ ಯಥಾದತ್ತೇ ತತ್ತಥಾ ದೃಢಯತ್ಯಥ ॥ ೨೨ ॥

---

೧೯. ಕತ್ತಲಿನಲ್ಲಿ ಬಾಲಕನು ಯಕ್ಷನನ್ನು ತನ್ನ ಭ್ರಾಂತಿಯಿಂದ ಕಾಣು ವಂತೆ, ಈ ಜೀವನು ಏನೇನು ಭಾವಿಸಿಕೊಂಡರೆ ಅದದು ತಾನು ಆಗಲಿ ಆಗದಿರಲಿ, ಆದೆನೆಂದುಕೊಳ್ಳುವನು.

೨೦. (ತಾನು ದೇಹಿಯು, ತನಗೆ ದೇಹವುಂಟು ಎಂದುಕೊಂಡು) ಪಂಚ ಭೂತಗಳ ಪಂಚೀಕರಣದಿಂದ ಆದ ದೇಹವನ್ನು ಪಡೆಯುವನು. ಹಾಗೆಯೇ ದೇಹದಲ್ಲಿ ಇಂದ್ರಿಯಗಳು ಉಂಟು ಎಂದುಕೊಂಡು ಆ ಇಂದ್ರಿಯಗಳು ಹುಟ್ಟುವು ದನ್ನೂ ಕಾಣುವನು.

೨೧. ಅಂತಸ್ಥವಾದ ಭೂತ ಪಂಚಕದಿಂದಲೇ ಬಹಿಃಸ್ಥವಾದ ಭೂತ ಪಂಚಕವೂ ಸಮುತ್ಪನ್ನವಾಯಿತು: ಒಂದು ಅಂಕುರದಿಂದಲೇ ನೂರಾರು ಶಾಖೆ ಗಳಾಗುವಂತೆ ಆಯಿತು. ಅವು ಹೀಗೆ ಅನನ್ಯವಾದರೂ ಜೀವನು ಅವುಗಳನ್ನು ಅನ್ಯವೆಂಬಂತೆ ನೋಡುವನು.

೨೨. ಇದು ಅಂತರ, ಇದು ಬಾಹ್ಯ, ಎಂಬ ನಿಶ್ಚಯವು ದೃಢವಾಗುವುದು. ಜೀವನು ಯಾವುದನ್ನು ಹೇಗೆಂದು ಭಾವಿಸುವನೋ ಅದು ಹಾಗೆಯೇ ದೃಢ ಪಡುವುದು.

ರಶ್ಮಿಜಾಲಮಿವೇಂದೋರ್ಯದಾತ್ಮನಃ ಪ್ರತಿಭಾಸನಂ ।
ಬಾಹ್ಯಸ್ಪರ್ಶತಯಾ ತೇನ ತದೇವಾಶೂರರೀಕೃತಂ ॥ ೨೩ ॥

ಮರಿಚಸ್ಯೇವ ಯತ್ತೈಕ್ಷ್ಣ್ಯಂ ಶೂನ್ಯತ್ವಮಿವ ಖಸ್ಯ ಯತ್ ।
ಆತ್ಮನೋ ವೇದನಂ ಯಚ್ಚ ತದೇವಾನ್ಯದಿವ ಸ್ಥಿತಂ ॥ ೨೪ ॥

ಅತ್ರೈವ ನಿಶ್ಚಯಂ ಬದ್ಧ್ವಾ ನಿಯಮಃ ಸುದೃಢೀಕೃತಃ ।
ಅನೇನೇತ್ಥಮನೇನೇತ್ಥ ಭಾವ್ಯಮತ್ಯವ ಖಂಡಿತಂ ॥ ೨೫ ॥

ಸ್ವಭಾವೇತರ ನಾಮಾಸೌ ಸ್ವಸಂಕಲ್ಪಮಯಾತ್ಮಕಃ ।
ಕಶ್ಚಿತ್ಕದಾಚಿದ್ಭವತಿ ಸ್ವಭಾವೇನೈವ ನಾನ್ಯಥಾ ॥ ೨೬ ॥

---

೨೩. ಹೀಗೆ, ಚಂದ್ರನಿಂದ ಹೊರಟ ಕಿರಣಗಳು ಆಕಾಶದಲ್ಲಿ ಊರ್ಜಿತವಾಗುವಂತೆ, ಆತ್ಮನ ಪ್ರತಿಭಾಸನವು ಬಾಹ್ಯ ಸ್ಪರ್ಶನದಿಂದ ಬಲು ಬೇಗನೆ ಊರ್ಜಿತವಾಗುವುದು.

(ಪ್ರತಿಭಾಸನ ಎಂದರೆ ವಿಷಯೇಂದ್ರಿಯ ಸಂಯೋಗದಿಂದ ಉಂಟಾಗುವ ಸುಖವು. ಬಾಹ್ಯ ಸ್ಪರ್ಶನವೆಂದರೆ ಹೊರಗಿರುವುದು ಎಂದುಕೊಳ್ಳುವುದು.)

೨೪. ಮೆಣಸಿನ ಸ್ವಭಾವವಾದ ಖಾರವು ಹೇಗೋ ಹಾಗೆ ತನ್ನ ಸ್ವಭಾವವಾಗಿ, ಬೇರೊಂದು ಇಲ್ಲದಿದ್ದಾಗ ಶೂನ್ಯದಂತೆ ಇದ್ದ ಆತ್ಮ ಸಂವೇದನವು ಯಾವುದಿತ್ತೋ ಅದು ಈಗ ಬೇರೊಂದು ಎಂಬಂತೆ ಪ್ರತ್ಯೇಕವಾಗಿರುವಂತೆ, ಕಂಡು, ಅದು (ಅಹಂಕಾರ ಧರ್ಮವಾಗುವುದು.)

೨೫. (ಜೀವನು)ಇದನ್ನೆಲ್ಲಾ ನಿಶ್ಚಯಪಡಿಸಿಕೊಳ್ಳುವನು. ಅದೇ ನಿಯಮವಾಗುವುದು. ಭಾವನೆಯು, ಇದರಿಂದ ಹೀಗೆ ಇದರಿಂದ ಹೀಗೆ ಎಂಬ ಖಂಡ ಖಂಡಜ್ಞಾನವು ಏರ್ಪಡುವುದು.

(ಅತ್ರ ಸಾಂಸಾರಿಕ ವಿಷಯ ಭೋಗೇಷ್ವೇವ ಪುರುಷಾರ್ಥ ಪರ್ಯವಸಾನ ನಿಶ್ಚಯಂ ಬದ್ಧ್ವಾ ಐಹಲೌಕಿಕ ಪಾರಲೌಕಿಕ ಕರ್ಮಾಚರಣ ನಿಯಮಃ ಸುದೃಢೀಕೃತಃ । ಅನೇನ ಲೌಕಿಕ ಕರ್ಮಣಾ । ಅನೇನ ವೈದಿಕ ಕರ್ಮಣಾ । ಅವಖಂಡಿತಂ ನಶ್ವರಂ ಸುಖಮುದ್ದಿಶ್ಯ ಇತ್ಯರ್ಥಃ —ತಾ. ಪ್ರ.)

೨೬. ಸ್ವಸಂಕಲ್ಪಮಯವಾಗಿಯೇ ಏರ್ಪಡುವ ಈ ನಿಯಮವು ಸ್ವಭಾ

ಆತ್ಮನ್ಯೈವೇದಮಖಿಲಂ ಸಂಪನ್ನಂ ದ್ವೈತ ಮದ್ವಯಂ ।
ಖಂಡೋ ಮಧುರಸೇನೇವ ಮೃದೇವ ಚ ಮಹಾಘಟಃ ॥ ೨೭ ॥

ಸಂನ್ನಿವೇಶವಿಕಾರಾದಿ ದೇಶಕಾಲಾದಿ ಸಂಭವಾತ್ ।
ಸಂಭತತ್ಯತ್ರ ನತ್ವೀಶೇ ದೇಶಕಾಲಾದ್ಯಸಂಭವಾತ್ ॥ ೨೮ ॥

ಇತಃ ಪುಷ್ಪಮಿತಃ ಪತ್ರಮಹಮಿತ್ಯುದಿತೋ ಯಥಾ ।
ಖಂಡೇ ಸ್ವಾತ್ಮನಿ ನಃ ಸತ್ತಾ ರಸೋಽದ್ವಿತ್ವೇ ದ್ವಿತಾಂ ವಹನ್ ॥ ೨೯ ॥

ವಕ್ಕೆ ಬೇರೆಯಾಗಿದ್ದರೂ ಈ ನಿಯಮವೂ ಹೀಗೆ ಯಾವಾಗಲೋ ಏರ್ಪಡುವುದೂ ಸ್ವಭಾವದಿಂದಲೇ ಹೊರತು ಬೇರೆ ಇನ್ನು ಯಾವುದರಿಂದಲೂ ಅಲ್ಲ.

(ತತ್ರೈಕಃ ಪ್ರಕೃತಿನಿಯಮಃ ಸ್ವಾಭಾವಿಕರಾಗಾದಿಕೃತಃ— ಇತರಸ್ತು ಶಾಸ್ತ್ರ ಕೃತಃ, ದ್ವಿವಿಧೋಽಪ್ಯಯಂ ಸಂಕಲ್ಪಮಯಾತ್ಮಕಃ । ತಯೋಃ ಕದಾಚಿತ್ ಕಶ್ಚಿದೇವ ಸ್ವಾಭಾವಿಕ ಪುರುಷ ಯತ್ನೇನೈವ ಇತರಂ ಜಿತ್ವಾ ಭವತಿ ನಾನ್ಯಥಾ ಇತ್ಯಥಃ —ತಾ. ಪ್ರ.)

೨೭. ಇರುವುದೆಲ್ಲವೂ ಅದ್ವಯವೇ ! ಆತ್ಮನಿಂದಲೇ ದ್ವೈತವಾಗಿ ಕಾಣುವ ದೃಶ್ಯಪ್ರಪಂಚವೆಲ್ಲವೂ ಬಂದಿರುವುದು. ಮಧುರಸವು ಖಂಡಶರ್ಕರೆಯಾದಂತೆ; ಮಣ್ಣಿನಿಂದ ಮಹಾಘಟವಾಗುವಂತೆ, ಇದೂ ಆಗಿರುವುದು.

೨೮. ದೇಶ ಕಾಲ ಆದಿಗಳು ಹುಟ್ಟಿಕೊಂಡು, ಸನ್ನಿವೇಶವನ್ನು ಬೇರೆಬೇರೆಯಾಗಿ ತೋರಿಸುವುದರಿಂದ ಈ ದ್ವೈತವು ಸಂಭವಿಸಿರುವುದು. ಆದರೆ, ದೇಶಕಾಲಾದಿಗಳು ಈಶ್ವರನಲ್ಲಿ ಸಂಭವವಿಲ್ಲವಾಗಿ ಅಲ್ಲಿ ಈ ದ್ವೈತವಿಲ್ಲ.

೨೯. ವೃಕ್ಷರಸವು ಎರಡಲ್ಲದ ಒಂದೇ ಆಗಿದ್ದರೂ ದ್ವಿತ್ವವನ್ನು ವಹಿಸಿಕೊಂಡು ವೃಕ್ಷದಲ್ಲಿ ಇಲ್ಲಿ ಹೂವಾಗಿ, ಅಲ್ಲಿ ಪತ್ರವಾಗಿ, ಉದಿಸುವಂತೆಯೇ ಅಹಂ ಎಂಬುದೂ ಆತ್ಮನಲ್ಲಿ ಹುಟ್ಟುವುದು: ಅದರಿಂದ ನಮ್ಮಲ್ಲಿರುವ 'ಸತ್ತಾ' ಯಾವುದೋ ಅದೇ ಬ್ರಹ್ಮವು.

ಇತಃ ಪಟ ಇತಃ ಕುಡ್ಯಮಹಮಿತ್ಯಾದಿತಸ್ತಥಾ ।
ಸರ್ವಾತ್ಮನಾತ್ಮನಿ ಬ್ರಹ್ಮ ವಿದ್ಧಿ ತಂ ದ್ವಿತ್ವಮಾಹರತ್ ॥ ೩೦ ॥

ಅದ್ಯಾಂಕುರೋಽಹ ಮದ್ಯಾರ್ಕರುಗಹಂ ತ್ವದ್ಯ ವಾರಿದಃ ।
ಯಥೇತಿ ತಿಷ್ಠತ್ಯಂಭೋದಸ್ತಥಾತ್ಮಾ ಸದಸದ್ವಪುಃ ॥ ೩೧ ॥

ಇತಿ ಭಾವ್ಯಮನೇನೇದಮಿತ್ಥಂ ಸರ್ವೇಶ್ವರೇ ತತಂ ।
ಕ್ರಮಂ ಖಂಡಯಿತುಂ ಲೋಕೇ ಕಸ್ಯ ನಾಮಾಸ್ತಿ ಶಕ್ತತಾ ॥ ೩೨ ॥

ಆದರ್ಶಸ್ವಚ್ಛ ಆಕಾಶೇ ನೈವ ಸ್ವಃ ಪ್ರತಿಬಿಂಬತಿ ।
ವ್ಯತಿರೇಕಾಸಂಭವತಃ ಕಚತ್ಯೇವ ಹಿ ಕೇವಲಂ ॥ ೩೩ ॥

ಬ್ರಹ್ಮಣಿ ತ್ವಾತ್ಮನಾತ್ಮೈವ ಸ್ಥಿತಃ ಕಚತಿ ಬಿಂಬತಿ ।
ದ್ವೈತೀಭವತ್ಯದೇಹೋಽಪಿ ಚಿನ್ಮಯತ್ವಾತ್ಸ್ವಭಾವತಃ ॥ ೩೪ ॥

---

೩೦. ಬ್ರಹ್ಮವೇ ದ್ವಿತ್ವವನ್ನು ವಹಿಸಿಕೊಂಡು ತನ್ನಲ್ಲಿಯೇ ಒಂದು ಕಡೆ ಪಟವಾಗಿ ಇನ್ನೊಂದು ಕಡೆ ಗೋಡೆಯಾಗಿ ಇನ್ನೊಂದು ಕಡೆ ಅಹಂ ಆಗಿ ತೋರಿಸಿಕೊಳ್ಳುವುದು. ಇವೆಲ್ಲವೂ ಅದರಲ್ಲಿಯೇ ಇರುವುದು.

೩೧. ಮೋಡವು ಒಂದು ಸಮಯದಲ್ಲಿ (ಗ್ರೀಷ್ಮದಲ್ಲಿ) ಸೂರ್ಯನಿಂದ ಹುಟ್ಟುವೆನೆಂದು, ಅದೇ ಮೋಡವೇ ವರ್ಷಾಕಾಲದಲ್ಲಿ ಮಳೆಗರೆಯುವ ಮೋಡ ವೆಂದೂ ಇನ್ನೊಂದು ವೇಳೆ ಭೂಮಿಯಲ್ಲಿ ಪ್ರವೇಶಿಸಿ ಅಂಕುರವೆಂದುಕೊಳ್ಳುವಂತೆ, ಆತ್ಮನು ಸದಸದ್ವಪುವಾಗಿರುವನು.

೩೨. ಸರ್ವೇಶ್ವರನಲ್ಲಿ ಹರಡುತ್ತಿರುವ ಭಾವಗಳು ಇವಿವು ಹೀಗೆ ಹೀಗೆಯೇ ಇರಬೇಕು ಎಂಬ ಕ್ರಮವನ್ನು ಬೇರೆ ಮಾಡಲು ಯಾರಿಗೆ ತಾನೇ ಶಕ್ತಿಯುಂಟು ?

೩೩. ಕನ್ನಡಿಯಂತೆ ಸ್ವಚ್ಛವಾಗಿರುವ ಆಕಾಶದಲ್ಲಿ ಸ್ವಭಾವವು ಪ್ರತಿಬಿಂಬಿಸುವುದು ಎನ್ನುವುದು ಇಲ್ಲವೇ ಇಲ್ಲ: ಬೇರೊಂದು ಇಲ್ಲವಾದ್ದರಿಂದ ಅದು ಅಲ್ಲಿ ಕೇವಲವಾಗಿ ಹೊಳೆಯುವುದು ಎನ್ನಬೇಕು.

೩೪. ಅದರಿಂದ ಬ್ರಹ್ಮದಲ್ಲಿ ಆತ್ಮವು ಆತ್ಮನಿಂದಲೇ ನಿಂತುಹೊಳೆಯುವುದು: ಪ್ರತಿಬಿಂಬಿಸುವುದು. ಸ್ವಭಾವದಿಂದಲೇ ಚಿನ್ಮಯವಾದುದರಿಂದ ದೇಹವೇ ಇಲ್ಲದಿದ್ದರೂ ದ್ವೈತೀಭಾವವನ್ನು ಹೊಂದುವುದು.

ಯದ್ಯಥೈವಾತ್ಮಕಚನಂ ವೇತ್ತಿ ತಂ ಭವತಾತ್ಮನಾ ।
ಅಸತ್ಯಮಪಿ ತನ್ನೇಹ ವ್ಯಭಿಚಾರೀ ಕದಾಚನ ॥ ೩೫ ॥

ಹೇಮತ್ವ ಕಟಕತ್ವೇ ದ್ವೇ ಸತ್ಯಾಸತ್ಯಸ್ವರೂಪಿಣೀ ।
ಹೇಮ್ನಿ ಭಾಂಡಗತೇ ಯದ್ವಚ್ಚಿತ್ತ್ವಾಚಿತ್ತ್ವೇ ತಥಾತ್ಮನಿ ॥ ೩೬ ॥

ಸರ್ವಗತ್ವಾಚ್ಚಿತೇಶ್ಚಿತ್ತ್ವಂ ನಿತ್ಯಂ ಮನಸಿ ವಿದ್ಯತೇ ।
ಹೇಮತ್ವಂ ಕಟಕಸ್ಯೇವ ಜಡಭಾವಃ ಸ್ಥಿತೋಽನ್ಯದಾ ॥ ೩೭ ॥

(ಕಚತಿ ಸರ್ವ ವಸ್ತು ಶಕ್ತ್ಯಾದಿರೂಪೇಣ ದೀಪ್ಯತೇ । ಜೀವರೂಪೇಣ ಪ್ರತಿಬಿಂಬತಿ । ಭೇದಕಲ್ಪನಯಾ ಚ ದ್ವೈತೀಭವತೀತ್ಯರ್ಥಃ —ತಾ. ಪ್ರ.)

(ದ್ವೈತವಲ್ಲದ್ದು ದ್ವೈತವಾಗುವುದು ದ್ವೈತೀಭಾವ.)

೩೫. ಆತ್ಮನ ಹೊಳೆವು ತಾನು ಏನು ಎಂದುಕೊಳ್ಳುವುದೋ ಅದೇ ಆಗುವುದು. ಆ ಆಗುವುದೂ ಅತ್ಮನಿಂದಲೇ ! ಅದು ಅಸತ್ಯವೇ ಆಗಿದ್ದರೂ ಅನಾತ್ಮವಾಗುವುದಿಲ್ಲ.

(ವ್ಯಭಿಚಾರಿಯೆಂದರೆ ಅನ್ಯಧರ್ಮವನ್ನು ಪಡೆಯುವುದು. ಇಲ್ಲಿ ಆತ್ಮವು ಹೀಗೆ ಅಸತ್ಯವಾಗಿರುವ ಮತ್ತೊಂದಾಗಿ ತೋರಿದರೂ ತನ್ನ ಸತ್ಯಧರ್ಮವನ್ನು ಬಿಡುವುದಿಲ್ಲ ಎಂದರ್ಥ.)

೩೬. ಕುಡಿಕೆಯಲ್ಲಿರುವ ಚಿನ್ನದಲ್ಲಿ ಹೇಮತ್ವ ಕಟಕತ್ವಗಳೆರಡೂ ಸತ್ಯವೂ ಹೌದು ಅಸತ್ಯವೂ ಹೌದು ಆಗಿರುವಂತೆ ಚಿತ್ತ್ವ, ಅಚಿತ್ತ್ವಗಳೆರಡೂ ಬ್ರಹ್ಮದಲ್ಲಿ ಸಂಭವವು.

(ಶಿಲಾ ಶಾಲಭಂಜಿಕಾ ನ್ಯಾಯವನ್ನು ಚಿಂತಿಸಿ)

೩೭. ಚಿತ್ತು ಸರ್ವಗತವಾದ್ದರಿಂದ ಚಿತ್ತ್ವವು ಯಾವಾಗಲೂ ಮನಸ್ಸಿನಲ್ಲಿ (ಚಿತ್ತದಲ್ಲಿ)ಯೂ ಇದ್ದೇ ಇದೆಯೆನ್ನಬೇಕು. ಕಡಗವು ಚಿನ್ನದಲ್ಲವೇನು ? ಹಾಗೆ. ಆದರೆ, ಚಿತ್ತು ಚಿತ್ತವಾಗಿರುವಾಗ ಅದರಲ್ಲಿ ಜಡ ಭಾವವು ಬಂದಿದೆಯೆನ್ನುವುದನ್ನೂ ಒಪ್ಪಬೇಕು.

ಚಿತ್ತ್ವಜಾಡ್ಯಾತ್ಮಕಂ ಚಿತ್ತಂ ದೃಢಂ ಭಾವಯತಿ ಸ್ವಯಂ ।
ಯಥಾ ಯದ್ಯೈವ ಯದ್ಭಾವಂ ತಥಾ ಭವತಿ ತತ್ತದಾ ॥ ೩೮ ॥

ಕಾಲೇ ಕಾಲೇ ಚಿತಾ ಜೀವಸ್ತ್ವನ್ಯೋಽನ್ಯೋ ಭವತಿ ಸ್ವಯಂ ।
ಭಾವಿತಾಕಾರವಾನಂತರ್ವಾಸನಾಕಲಿಕೋದಯಾತ್ ॥ ೩೯ ॥

ಸ್ವಪ್ನೇ ದೃಷ್ಟೋ ಯಥಾ ಗ್ರಾಮೋ ಯಾತಿ ಸತ್ತಾನ್ಯತೇಕ್ಷಣಾತ್ ।
ದೇಹಾದ್ದೇಹಂ ತಥಾ ಯಾತಿ ದೇಹೋಯಂ ಪ್ರತಿಭಾತ್ಮಕಃ ॥ ೪೦ ॥

ಪ್ರತಿಭಾಸೋ ಯಥಾಸ್ವಪ್ನೇ ನರಃ ಕುಡ್ಯಂ ಪಟೋ ಭವೇತ್ ।
ಭವತ್ಯಸತ್ಯಮೇವೇದಂ ದೇಹಾಂತರಮಿದಂ ಸ್ವತಃ ॥ ೪೧ ॥

ಅಸತ್ಯಮೇವ ಮ್ರಿಯತೇ ತ್ವಸತ್ಯಂ ಜಾಯತೇ ಪುನಃ ।
ಜೀವಃ ಸ್ವಪ್ರತಿಭಾಸೇನ ಸ್ವಪ್ನವತ್ಸ್ವಾನ್ಯರೂಪವತ್ ॥ ೪೨ ॥

---

೩೮. ಅದರಿಂದ ಹೀಗೆ ಚಿತ್‌ತ್ವ, ಜಡತ್ವ, ಎರಡನ್ನೂ ಒಳಗೊಂಡಿರುವ ಚಿತ್ತವು ಯಾವಾಗ ತಾನು ಏನೆಂದುಕೊಳ್ಳುವುದೋ ಆಗಲೇ ಅದೇ ಆಗುವುದು.

೩೯. ಹೀಗೆ ಜೀವನು ಆಯಾ ಕಾಲದಲ್ಲಿ ತನ್ನ ತನ್ನ ವಾಸನಾನುಸಾರವಾಗಿ, ತನ್ನಲ್ಲಿರುವ ಚಿತ್ ಶಕ್ತಿಯಿಂದ, ತಾನು ಏನು ಎಂದು ಭಾವಿಸಿಕೊಳ್ಳುವನೋ ಅದಕ್ಕನುಗುಣವಾಗಿ ಚೇತನಾಚೇತನಗಳಾಗುವನು.

೪೦. ಕನಸಿನಲ್ಲಿ ಕಂಡ ಗ್ರಾಮವು ಒಂದೇ ಕ್ಷಣದಲ್ಲಿ ವನಾದಿ ಅನ್ಯರೂಪವನ್ನು ಧರಿಸುವಂತೆ ದೇಹಧಾರಿಯಾದ ಜೀವನು ಒಂದು ದೇಹದಿಂದ ಇನ್ನೊಂದು ದೇಹವಾಗುವನು. ಹೇಗೆಂವರೆ, ಈ ದೇಹವೆಂಬುದೂ ಪ್ರಾತಿಭಾಸಿಕವೇ !

೪೧. ಕನಸಿನ (ಪ್ರಾತಿಭಾಸಿಕ) ಮನುಷ್ಯನು ಗೋಡೆಯಾದರೂ ಆಗಬಹುದು: ಪಟವಾದರೂ ಆಗಬಹುದು ಹೇಗೋ ಹಾಗೆಯೇ ಅಸತ್ಯವಾದ ಈ ದೇಹವು ಇನ್ನು ಯಾವುದಾದರೂ ದೇಹವೂ ಆಗಬಹುದು.

೪೨. ಅಸತ್ಯವಾಗಿಯೇ ಸಾಯುವನು: ಅಸತ್ಯವಾಗಿಯೇ ಹುಟ್ಟುವನು: ಮತ್ತೆ ಜೀವನು ತನ್ನ ಪ್ರಾತಿಭಾಸಿಕ ರೂಪದಿಂದ ಕನಸಿನಲ್ಲಿ ಹೇಗೋ ಹಾಗೇ, ಬೇರೆ ಬೇರೆ ರೂಪಗಳನ್ನು ಪಡೆಯುವನು.

ಕಾಲೇನೈತಾದೃಶಂ ರೂಪಮಿದಂ ನಾನ್ಯತ್ವಮೇತಿ ವೈ ।
ಪ್ರಕೃತಂ ನಿಶ್ಚಯಾರೂಢಂ ಭ್ರಮಂತ್ಯೇತೇ ಭವಃ ಸ್ವತಃ ॥ ೪೩ ॥

ವಸ್ತುದೃಷ್ಟಮದೃಷ್ಟಂ ಚ ಸ್ವಪ್ನೇ ಸಮನುಭೂಯತೇ ।
ಜೀವಸ್ವಪ್ನೇ ಜಗದ್ರೂಪಂ ವಿದ್ಧಿ ವೇದ್ಯವಿದಾಂವರ ॥ ೪೪ ॥

---

೪೩. (ಆದರೆ ಜೀವನು ದೇಶ ಕಾಲಾದಿಗಳಿಗೆ ಬದ್ಧನಾದುದರಿಂದ) ಕಾಲ ವಶನಾಗಿ ಇದು ಇದೇ ರೂಪವು: ಇದು ಇನ್ನೊಂದಲ್ಲ ಎಂದು ಆಯಾ ಕಾಲದಲ್ಲಿ ತಾನು ಏನಾಗಿರುವನೋ ಅದನ್ನೇ ನಿಜವೆಂದು ನಂಬಿಕೊಂಡಿರುವನು. ಈ ನಿಶ್ಚಯವಿರುವುದರಿಂದ, (ಹಿಂದೆ ಮುಂದುಗಳು ಮರೆತುಹೋಗುವುವು) ಸಂಸಾರವು ತಾನಾಗಿ ಮುಂದೆ ಮುಂದೆ ಹೋಗುತ್ತಿರುವುದು.

(ಏತಾದೃಶಮೇತದ್ದೇಹರೂಪಂ ಕಾಲೇನ ಅನ್ಯತ್ವಂ ದೇಹಾಂತರ ಭಾವಂ ಏತೀತಿ ನ । ಯತಃ ಪ್ರಕೃತಮಿದಂ ಶರೀರಂ ಬಾಲ್ಯಾದ್ಯವಸ್ಥಾ ಭೇದೇಪಿ ತದೇವೇದ ಮಿತಿ ಪ್ರತ್ಯಭಿಜ್ಞಾ ನಿಶ್ಚಯಾರೂಢಂ । ಏತೇ ಭೂತ ಭಾವಿ ದೇಹಾಸ್ತು ನ । ಪ್ರತ್ಯಭಿಜ್ಞಾನಾಭಾವಾದನ್ಯೋನ್ಯಾನ್ಯೇ ಸಂತಿ ನ ಸಂತೀತ್ಯಾದಿ ಭ್ರಾಂತಿಂ ಗಚ್ಛಂತಿ ಅತಸ್ತೇಷಾಂ ಸ್ವತೋ ಜೀವಿತ ಏವ ಭವೋ ವಾಸನಯಾ ಸಮುದ್ಭವ ಇತ್ಯರ್ಥಃ —ತಾ. ಪ್ರ.)

೪೪. ದೃಷ್ಟ ಅದೃಷ್ಟ ವಸ್ತುಗಳನ್ನೆಲ್ಲಾ ಸ್ವಪ್ನದಲ್ಲಿ ಅನುಭವಿಸುವಂತೆ ಜೀವ ಸ್ವಪ್ನದಲ್ಲಿ ಜಗದ್ರೂಪವೂ ಅನುಭೂತವಾಗುವುದೆಂದು, ಎಲೈ ವೇದ್ಯವನ್ನು ಬಲ್ಲವರಲ್ಲಿ ಶ್ರೇಷ್ಠನೆ, ತಿಳಿ.

(ನನು ಕದಾಪಿ ಪ್ರಾಗದೃಷ್ಟೇ ದೇವಾದಿ ಶರೀರಭಾವೇ ಕ್ವಾಸ್ಯವಾಸನಾ । ತತ್ರಾಹ-ವಸ್ತ್ವಿತಿ । ಇದಂತು ಜಗದ್ರೂಪಂ ಜೀವಸ್ವಪ್ನೇಽಂತರ್ಗತಂ ವಿದ್ಧಿ । "ತಸ್ಯ ತ್ರಯ ಆವಸಥಾಸ್ತ್ರಯಃ ಸ್ವಪ್ನಾಃ'' ಇತಿ ಶ್ರುತೇರಿತ್ಯರ್ಥಃ । ಇದಂತು ಸ್ವಪ್ನೇ ಅನನುಭೂತಸ್ಯಾಪಿ ದರ್ಶನಂ ಇಹಜನ್ಮನಿ ಅನನುಭೂತಾಭಪ್ರಾಯೇಣ । ''ದೃಷ್ಟಂ ಚಾದೃಷ್ಟಂ ಚ ಶ್ರುತಂ ಚಾನುಶ್ರುತಂಚ ಅನುಭೂತಂ ಚಾನನುಭೂತಂ ಚ ಸರ್ವಂ ಪಶ್ಯತಿ'' ಇತಿಶ್ರುತಿಮವಲಂಬ್ಯೋಕ್ತಂ । ವಸ್ತುತಸ್ತು ಅನಾದೌ ಸಂಸಾರೇ ನ ಅನನುಭೂತಂ ಕಿಂಚಿದಸ್ತೀತಿ ಮರಣ ಕಾಲೇ ಭಾವಿ ದೇಹಾರಂಭಕ ಕರ್ಮೋದ್ಬೋಧಿತ ವಾಸನಾನುಸಾರೇಣ ದೇಹಾಂತರೋದ್ಭವ ಇತಿ ಬೋಧ್ಯಂ —ತಾ. ಪ್ರ.)

ಅಜಾಗ್ರದ್ದೃಷ್ಟಿದೃಷ್ಟೋ ಯಃ ಸಾಭಿಧಾನಾದಿನೇರಿತಃ ।
ನ ಸ್ವಪ್ನೋ ವಿದ್ಯತೇ ತಸ್ಮಾದಚ್ಛಾತ್ಮಾ ಚಿತಿಮಾತ್ರಕಂ ॥ ೪೫ ॥

ಅದ್ಯಾಪೂರ್ವಾಭಿದಂ ಸ್ವಪ್ನೇ ಯಥಾ ಪಶ್ಯತಿ ನಾನ್ಯತಾ ।
ಅಗ್ರದೃಷ್ಟಂ ತಥೈವಾರ್ಥಂ ಚೇತನಂ ಚಿತ್ರುಪಶ್ಯತಿ ॥ ೪೬ ॥

ಪ್ರಾಕ್ತನೀ ವಾಸನಾದ್ಯಾಪಿ ಪೌರುಷೇಣಾವಜೀಯತೇ ।
ಹ್ಯಃ ಕುಕರ್ಮಾದ್ಯ ಯತ್ನೇನ ಪ್ರಯಾತಿ ಹಿ ಸುಕರ್ಮತಾಂ ॥ ೪೭ ॥

---

೪೫. ಅಜಾಗ್ರತ್ (ತುರ್ಯ) ದೃಷ್ಟಿಯಿಂದ ಕಂಡು, ಇದು ಬ್ರಹ್ಮ ಎಂದು ಸ್ವ-ಅಭಿಧಾನದಿಂದ ತಿಳಿದುಕೊಂಡವನಿಗೆ ಸ್ವಪ್ನವು ಇರುವುದೇ ಇಲ್ಲವಾಗಿ, ಶುದ್ಧ (ನಿರ್ಮಲ)ನಾದ ಆತ್ಮನು ಚಿನ್ಮಾತ್ರನೇ !

(ತರ್ಹಿ ವಾಕ್ಯಜನ್ಯ ಬ್ರಹ್ಮ ಸಾಕ್ಷಾತ್ಕಾರ ಲಭ್ಯ ಬ್ರಹ್ಮ ಭಾವೋಽಪಿ ದೇಹಾಂತರವತ್ ವಾಸನಾಮಯಃ ಸ್ವಪ್ನ ಏವ ಕಿಂ ನ ಸ್ಯಾತ್ ? ತತ್ರಾಹ । ಅಜಾಗ್ರದಿತಿ । ಯಃ "ಶಿವಮದ್ವೈತಂ ಚತುರ್ಥಂ ಮನ್ಯಂತೇ" ಇತಿ ಸ್ವಾಭಿಧಾನಾದಿನಾ ಈರಿತಃ ಅಜಾಗ್ರದ್ದೃಷ್ಟ್ಯಾ ತುರಿಯಯಾ ದೃಷ್ಟಃ ಪರಮಾತ್ಮಾ ತಸ್ಯ ಉಕ್ತಲಕ್ಷಣಃ ತ್ರಿವಿಧಃ ಸ್ವಪ್ನ ಏವ ನ ವಿದ್ಯತೇ ಜಾಗ್ರತಿ ಕದಾಪಿ ತದನುಭವಾಭಾವೇನ ತದ್ವಾಸನಾ ಅಪ್ರಸಿದ್ಧೇಸ್ತಸ್ಯ ವಾಸನಾಮಯತ್ವಾಯೋಗಾತ್ ತಸ್ಮಾದಸೌ ಅಚ್ಛಾತ್ಮಾ ಚೈತನ್ಯಮಾತ್ರಂ ಇತ್ಯರ್ಥಃ —ತಾ. ಪ್ರ.)

೪೬. ವರ್ತಮಾನ ಜನ್ಮದಲ್ಲಿ ಅದುವರೆಗೆ ಇಲ್ಲದುದನ್ನು ಕಂಡು, ಸ್ವಪ್ನದಲ್ಲಿಯೂ ಜಾಗ್ರತ್ತಿನಲ್ಲಿ ಕಂಡುದನ್ನು ಅಲ್ಲದೆ ಇನ್ನೇನನ್ನೂ ಹೇಗೆ ಕಾಣುವುದಿಲ್ಲವೋ, ಅದರಂತೆಯೇ ಚೇತನವಾದ ಚಿತ್ ಕೂಡ ತಾನು ಜೀವವಾಗುವುದಕ್ಕಿಂತ ಮುಂಚೆ ಏನನ್ನು ಕಂಡಿತ್ತೋ (ಆ ಸ್ವರೂಪವನ್ನೇ ಮತ್ತೆ) ಕಾಣುವುದು.

೪೭. (ಒಂದು ವೇಳೆ ಹಿಂದಿನ ವಾಸನೆಯೊಂದಿದ್ದರೆ, ಹೇಗೆ ಎಂದರೆ) ಆ ಪ್ರಾಕ್ತನ ವಾಸನೆಯನ್ನು ಅದ್ಯತನವಾಸನೆಯು ಪೌರುಷದಿಂದ ಗೆಲ್ಲಬಲ್ಲುದು. ನಿನ್ನೆ ಮಾಡಿದ ಪಾಪಕರ್ಮವನ್ನು ಇವೊತ್ತು ಮಾಡಿದ ಪುಣ್ಯಕರ್ಮವು ಗೆಲ್ಲಬಲ್ಲುದಲ್ಲವೆ ?

ಮೋಕ್ಷಾದೃತೇ ನ ಶಾಮ್ಯಂತಿ ಜೀವತಾಂ ಚಕ್ಷುರಾದಯಃ |
ಉನ್ಮಜ್ಜಂತಿ ನಿಮಜ್ಜಂತಿ ಕೇವಲಂ ದೇಶಕಾಲತಃ || ೪೮ ||

ಚಿತಃ ಸ್ವಕಲನಾತ್ತಸ್ಯ ದೇಹೋಽಗ್ರ ಇವ ತಿಷ್ಠತಿ |
ಪಂಚಾತ್ಮಭಾವಿತೋಽಸತ್ಯೋ ಮಹಾಯಕ್ಷಃ ಶಿಶೋರಿವ || ೪೯ ||

ಮನೋಬುದ್ಧಿರಹಂಕಾರಸ್ತಥಾ ತನ್ಮಾತ್ರಪಂಚಕಂ |
ಇತಿ ಪುರ್ಯಷ್ಟಕಂ ಪ್ರೋಕ್ತಂ ದೇಹೋಽಸಾವಾತಿವಾಹಿಕಃ || ೫೦ ||

ಅಮೂರ್ತ ಏವ ಚಿತ್ತಾತ್ಮಾ ಖತ್ವಮಸ್ಯಾಽತಿಪೀನತಾ |
ವಾತತಾಽಸ್ಯ ಮಹಾಗುಲ್ಮೋ ದೇಹತಾಽಸ್ಯ ಸುಮೇರುತಾ || ೫೧ ||

---

೪೮. ಜೀವಂತರಾಗಿರುವವರಿಗೆ ಚಕ್ಷುರಾದಿಗಳು ದೇಶ ಕಾಲಾದಿಗಳ ದೃಷ್ಟಿಗಳಿಂದ ಮುಳುಗುವುವು ಏಳುವುವೇ ಹೊರತು ಮೋಕ್ಷದಿಂದಲ್ಲದೆ ಇನ್ನು ಏತರಿಂದಲೂ ಸಂಪೂರ್ಣವಾಗಿ ಶಾಂತವಾಗುವುದಿಲ್ಲ.

೪೯. ಚಿತ್ತಿಗೆ ಸ್ವಸಂಕಲ್ಪವಶವಾಗಿಯೇ ದೇಹವು ಎದುರಿಗೇ ಇರುವುದು. ಮಗುವಿಗೆ ಮಹಾಯಕ್ಷವು ಹಿಡಿದಂತೆ, (ಚಿತ್ತವಾದ) ಚಿತ್ತಿಗೆ ಅಸತ್ಯವೂ ಪಂಚಾತ್ಮ ಭಾವಿತವೂ ಆದ ದೇಹ (ವಾಸನೆಯು) ಹಿಡಿದೇ ಇರುವುದು.

(ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದ ಮಯಗಳೆಂಬ ಪಂಚಾತ್ಮಗಳು)

೫೦. ಮನಸ್ಸು, ಬುದ್ಧಿ, ಅಹಂಕಾರ, ಪಂಚ ತನ್ಮಾತ್ರಗಳು, ಎಂಬ ಈ ಪುರ್ಯಷ್ಟಕವು ಆತಿವಾಹಿಕ ದೇಹ ಎನ್ನಿಸಿಕೊಳ್ಳುವುದು.

೫೧. ಚಿತ್ತಾತ್ಮವು ಅಮೂರ್ತವೇ ಆದರೂ ಇದರ ಆಕಾಶತ್ವವು ಬಹು ವಿಸ್ತಾರವಾದುದು. ಇದರ ವಾಯುತ್ವವು ಮಹಾ ಜಟಿಲವಾದುದು: ಇದರ ದೇಹತ್ವವು ಸುಮೇರುವಿಗೆ ಸಮನಾದುದು.

ವಿರಜಸ್ತ್ವ ಕ್ರಮೇಣೈವ ನಿರವಸ್ಥಸ್ತು ಮುಕ್ತಿಭಾಕ್ ।
ಸುಷುಪ್ತೈಕಾವಸ್ಥಾಽಸ್ಯ ಜಡಾಃ ಕ್ರೋಡೀಕೃತಾ ಯಯಾ ॥ ೫೨ ॥

ಸ್ವಪ್ನನಾಮ್ನೀ ತಥಾವಸ್ಥಾ ದೇಹಪ್ರತ್ಯಯಶಾಲಿನೀ ।
ಆಮೋಕ್ಷಂ ಭ್ರಮತೀಹಾಯಮಿತಿ ಸ್ಥಾವರಜಂಗಮೈಃ ॥ ೫೩ ॥

ಕದಾಚಿದ್ಧಿ ಸುಷುಪ್ತಸ್ಥಃ ಕದಾಚಿತ್ಸ್ವಪ್ನವತ್ಸ್ಥಿತಃ ।
ಆತಿವಾಹಿಕದೇಹೋಽಯಂ ಸರ್ವಸ್ಯೈವಾವತಿಷ್ಠತೇ ॥ ೫೪ ॥

[ತನ್ಮಾತ್ರರೂಪೋ ಲಿಂಗಾತ್ಮಾ ಅಮೂರ್ತ ಏವ । ಅಸ್ಯ ಖತ್ವಂ ಪಂಚೀಕೃತ ಆಕಾಶತ್ವಂ ಅತಿಪೀನತಾ ನಿರವಧಿಕಂ ಸ್ಥೌಲ್ಯಂ ತಚ್ಚ ನ ಸಂಭವತಿ । ನ ಹ್ಯಮೂರ್ತ ವಾಸನಾಕೋಟೀನಾಮಪಿ ಮೇಲನೇ ಸ್ಥೌಲ್ಯಂ ದೃಷ್ಟಂ ಯದಾಸ್ಯ ಖತ್ವಮೇವ ದುರ್ಲಭಂ ತದಾ ಸ್ಥೂಲವಾತತಾ ಸುಹಾರ್ ಗುಲ್ಮೋ ವೃಕ್ಷ ಇವ ಅತ್ಯಂತ ಮಸಂಭಾವಿತಾ । ಏವಂ ಸ್ಥೂಲ ತೇಜೋಜಲ ಪೃಥ್ವೀತ್ವಾಪಿ । ಏವಂಚ ಸ್ಥೂಲಭೂತಾನಾಮೇವ ಅಸಂಭವೇ ಅಸ್ಯಪರಿಮಾಣೋರಪಿ ಅತಿ ಸೂಕ್ಷ್ಮಸ್ಯ ದೇಹತಾ ಸುಮೇರುತಾ ಇವ ಅತ್ಯಂತಾಸಂಭಾವಿತಾ ಇತಿ ನ ಭೌತಿಕ ದೇಹಾಂತಂ ಪುರ್ಯಷ್ಟಕಂ ವರ್ಣ್ಯತ ಇತ್ಯರ್ಥಃ ॥ —ತಾ. ಪ್ರ.]

೫೨. ವೈರಾಗ್ಯವನ್ನು ಸಂಪಾದಿಸಿಕೊಡುವ ಮಾರ್ಗವನ್ನು ಹಿಡಿದು ಅವಸ್ಥಾ ತ್ರಯಗಳನ್ನು ದಾಟಿದರೆ ಈ ಲಿಂಗ ದೇಹವೇ ಮುಕ್ತಿಗೆ ಯೋಗ್ಯವಾಗುವುದು. ಆಗ ಆ ಲಿಂಗ ದೇಹಕ್ಕೆ ಸುಷುಪ್ತಿಯೆಂಬ ಒಂದೇ ಒಂದು ಅವಸ್ಥೆಯು ನಿಲ್ಲುವದು. ಆ ಅವಸ್ಥೆಯಲ್ಲಿ ಜಡಗಳು ಯಾವ ಯಾವದು ಇದ್ದರೂ ಅವೆಲ್ಲವೂ ನಿರ್ಮೂಲವಾಗುವುವು.

[ಸುಷುಪ್ತತಾ ಯಯಾ ಜಡಾಃ ಸರ್ವದೇಹಾದಿ ಪ್ರಪಂಚ ವಾಸನಾತ್ಮನಾ ಉಪಸಂಹೃತ್ಯ ಕ್ರೋಡೀಕೃತ್ಯ —ತಾ. ಪ್ರ.]

೫೩. ದೇಹವನ್ನು ಅವಲಂಬಿಸಿರುವ ಸ್ವಪ್ನವೆಂಬ ಅವಸ್ಥೆಯುಂಟು. ಅದು ವಾಸನಾನುಗುಣವಾಗಿ ಸ್ಥಾವರ ಜಂಗಮ ದೇಹಗಳನ್ನು ಧರಿಸುತ್ತಾ ಮೋಕ್ಷವಾಗುವವರೆಗೂ ತಿರುಗುತ್ತಲೇ ಇರುವುದು.

೫೪. ಈ ಆತಿವಾಹಿಕ ದೇಹವು ಕೆಲವು ವೇಳೆ ಸುಷುಪ್ತಿಯಲ್ಲಿರುವುದು:

ಯದಾ ಸುಷುಪ್ತಭಾವಸ್ಥೋ ಭಾವಿದುಃಸ್ವಪ್ನವೇಧಿತಃ ।
ತದಾ ಕಾಲಾನಲಸಮಸ್ತ್ರಿಷ್ಮತ್ಯನುದಿತಾಕೃತೀಃ ॥ ೫೫ ॥

ಸ್ಥಾವರಾದ್ಯಾಸ್ವವಸ್ಥಾಸು ಕಲ್ಪವೃಕ್ಷದಶಾಸು ಚ ।
ಭವತ್ಯೇವ ಸುಷುಪ್ತಸ್ಥೋ ಘನಮೋಹಶಿಲಾಘನಃ ॥ ೫೬ ॥

ಸುಷುಪ್ತತಾಽಸ್ಯ ಜಡತಾ ಸ್ವಪ್ನೋತ್ಥೇಯಂ ಹಿ ಸಂಸೃತಿಃ ।
ಯಃ ಪ್ರಬೋಧೋಽಸ್ಯ ಸಾ ಮುಕ್ತಿಸ್ತಜ್ಜಾಗ್ರದ್ಯಾ ತು ತುರ್ಯತಾ ॥ ೫೭ ॥

ಕೆಲವು ವೇಳೆ ಸ್ವಪ್ನದಲ್ಲಿರುವಂತೆ ಇರುವುದು. ಹೀಗೆ ಇದು ಎಲ್ಲದರಲ್ಲಿಯೂ ಇದ್ದೇ ಇರುವುದು.

೫೫. ಸುಷುಪ್ತವಾಗಿದ್ದ ಲಿಂಗ ಶರೀರವು ಭಾವಿ ದುಃಸ್ವಪ್ನಗಳಿಂದ ಎಚ್ಚರಗೊಂಡರೂ, ಇನ್ನೂ ಯಾವ ಆಕೃತಿಯನ್ನೂ ಹೊಂದದೆ ಕಾಲಾಗ್ನಿಗೆ ಸಮವಾಗಿ ಇರುವುದು.

[ಭಾವಿಭಿಃ ದುಸ್ಸ್ವಪ್ನೈಃ ವಾಸನಾತ್ಮನಾ ಅಂತಃ ಪ್ರವಿಷ್ಟೈಃ ಬೋಧಿತೋ ವಿದ್ಧ ಇವ, ಗತಸ್ಮೃತಿರಿವ, ಅನುದಿತಾಕೃತಿಃ ಚಿತ್ರುತಿಬಿಂಬ ಖಚಿತತ್ವಾದುಪಸಂಹೃತ ಜಗತ್ತ್ವಾಚ್ಚ ಕಾಲಾನಲಸಮೋ ದೀಪ್ತಸ್ತಿಷ್ಠತಿ । ಅನೇನಾಂತರ್ಜ್ಞಾನ ಶೂನ್ಯ ನೈಯಾಯಿಕಾದಿ ಸುಷುಪ್ತಿಃ ಪ್ರಯುಕ್ತಾ ॥ —ತಾ. ಪ್ರ.]

೫೬. (ದುಃಖಜನ್ಮಿಗಳಾದ) ಸ್ಥಾವರಾದಿಗಳಲ್ಲಿಯೂ (ಪುಣ್ಯ ಜನ್ಮಗಳಾದ) ಕಲ್ಪ ವೃಕ್ಷಾದಿಗಳಲ್ಲಿಯೂ ಇರುವ ಲಿಂಗ ಶರೀರವು ಸುಷುಪ್ತಿಯಲ್ಲಿದ್ದುಕೊಂಡು ಘನಮೋಹದಿಂದ ಶಿಲಾಘನದಂತೆ ಏನೂ ಅರಿಯದೆ ಇರುವುದು.

೫೭. ಲಿಂಗ ಶರೀರವು ಸುಷುಪ್ತಾವಸ್ಥೆಯಲ್ಲಿದ್ದಾಗ ಜಡತೆಯಿರುವುದು. ಸ್ವಪ್ನದಲ್ಲಿ ಎಚ್ಚರಗೊಂಡಾಗ ಸಂಸಾರವಾಗುವುದು. ಅಲ್ಲಿಂದಲೂ ಎಚ್ಚರವಾದಾಗ ಜಾಗ್ರತ್ತು, ತುರ್ಯಗಳು ಲಭಿಸಿ, ಜ್ಞಾನವು ಬಂದಾಗ ಮುಕ್ತಿಯು ಬರುವುದು.

ಜೀವಪ್ರಬೋಧಾನ್ಮುಕ್ತಿರ್ಹಿ ಪ್ರಬೋಧಾತ್ಪರಮಾತ್ಮತಾಂ ।
ಸೋಽಭ್ಯೇತಿ ಕ್ಷಾಲಿತಮಲಂ ತಾಮ್ರಂ ಕನಕತಾಮಿವ ॥ ೫೮ ॥

ಜೀವಪ್ರಬೋಧಾನ್ಮುಕ್ತಿರ್ಯಾ ಸಾ ಚೇಹ ದ್ವಿವಿಧೋಚ್ಯತೇ ।
ಏಕಾ ಜೀವನ್ಮುಕ್ತತೇತಿ ದ್ವಿತೀಯಾ ದೇಹಮುಕ್ತತಾ ॥ ೫೯ ॥

ಜೀವನ್ಮುಕ್ತಿರ್ಹಿ ತುರ್ಯತ್ವಂ ತುರ್ಯಾತೀತಂ ಪದಂ ತತಃ ।
ಬೋಧೋ ಜೀವಃ ಪ್ರಬೋಧೋಽಯಂ ಸ ಚ ಬುದ್ಧಿಪ್ರಯತ್ನತಃ ॥ ೬೦ ॥

ಜ್ಞಾತಪ್ರಮಾಣೋ ಜೀವೋಽಂತರ್ಯೋ ಜಾನಾತೀಹ ತನ್ಮಯಃ ।
ಪಶ್ಯತೀಮಂ ಭಯಂ ಚೈವ ಸುದೀರ್ಘಸ್ವಪ್ನವಿಭ್ರಮಂ ॥ ೬೧ ॥

---

೫೮. ಜೀವನು ಪ್ರಬೋಧವನ್ನು ಪಡೆಯಲು ಮುಕ್ತಿಯು ಲಭಿಸುವುದು. ಪ್ರಬೋಧದಿಂದ ಜೀವನು ಪರಮಾತ್ಮನಾಗುವನು. ತಾಮ್ರದಲ್ಲಿರುವ ಮಲವನ್ನು ಶೋಧಿಸಿದರೆ ಚಿನ್ನವಾಗುವುದಲ್ಲವೆ? ಅದರಂತೆ ಜೀವನಲ್ಲಿರುವ ಚಿತ್ತ ಕಲಂಕವನ್ನು ತೆಗೆದರೆ ಅವನು ಪರಮಾತ್ಮನೇ ಆಗುವನು.

೫೯. ಜೀವನು ಪ್ರಬೋಧವನ್ನು ಪಡೆದಾಗ ದೊರೆಯುವ ಮುಕ್ತಿಯು ಜೀವನ್ಮುಕ್ತಿ, ದೇಹಮುಕ್ತಿ ಎಂದು ಎರಡು ವಿಧವಾಗಿರುವುದು.

೬೦. ಜೀವನ್ಮುಕ್ತಿ ಎನ್ನುವುದು ತುರ್ಯಾವಸ್ಥೆಯು. ಅಲ್ಲಿಂದ ತುರ್ಯಾತೀತ ಪದವು ದೊರೆಯುವುದು. ಬುದ್ಧಿಯ ಪ್ರಯತ್ನದಿಂದ ಲಭಿಸಿದ ಬೋಧವು ಪ್ರಬೋಧವಾಗುವುದು. ಆಗ ಜೀವವೆಂದರೆ ಪ್ರಬೋಧ, ಪ್ರಬೋಧವೆಂದರೆ ಬ್ರಹ್ಮ ಎಂಬುದು ತಿಳಿಯುವುದು.

೬೧. ಪ್ರಮಾಣಗಳಿಂದ ನಿಶ್ಚಯವಾದ ಜ್ಞಾನವನ್ನು ಪಡೆದ ಜೀವನು ತಾನು ತನ್ಮಯನು ಎಂಬುದನ್ನು ಅರಿಯುವನು. ಅವನು ಬಹು ದೀರ್ಘ ಸ್ವಪ್ನದಂತಿರುವ ಈ ಭ್ರಾಂತಿಯನ್ನೂ ಈ ಸಂಸಾರದಲ್ಲಿರುವ ಭಯವನ್ನೂ ಭೇದಿಸುವನು.

(ತತ್ವತೋ ಯಾವಾನ್ ಯಶ್ಚೇತಿ ಜ್ಞಾತ ಪ್ರಮಾಣೋ ಜೀವಃ ಸರ್ವಾಂತರ್ಯೋ ಜಾನಾತಿ ಭಾಸಯತಿ ಸಾಕ್ಷೀ ತನ್ಮಯ ಏವ ಭವತೀತ್ಯರ್ಥಃ । ಯಸ್ತು ಅಜ್ಞಾತ ಪ್ರಮಾಣಸ್ಸೋಽಪಿ ಪರಮಾರ್ಥತಃ ಏವ ಅಜ್ಞಾನಾತ್ ಶಿಲಾವತ್

ಪಶ್ಯತೀಮಂ ಭಯಂ ಚೈವ ಸುದೀರ್ಘಸ್ವಪ್ನವಿಭ್ರಮಂ ।
ಮಿಥ್ಯೋದಿತಃ ಸ್ವಹೃದಯೇ ಸ್ವಸ್ಥ ಏವ ಶಿಲೀಕೃತೆ ॥ ೬೨ ॥

ಜೀವಾನಾಮಂತರೇ ತ್ವನ್ಯನ್ನ ಕಿಂಚಿಚ್ಚಿತ್ಕಲಾಂ ವಿನಾ ।
ತಾಮೇವಾನ್ಯತಯಾ ಪಶ್ಯನ್ಮುಧೈವ ಪರಿಶೋಚತಿ ॥ ೬೩ ॥

ಜೀವಾಣೋರಂತರೇ ತ್ವನ್ಯನ್ನ ಕಿಂಚಿತ್ಪರಮಾದೃತೇ ।
ಯತ್ರ ತತ್ರ ಜಗದ್ದೃಷ್ಟಮಹೋ ಮಾಯಾವಿಜೃಂಭಿತಂ ॥ ೬೪ ॥

ಸ್ಥಾಲ್ಯಂತಃ ಕ್ವಥದಂಬೂನಾಂ ಯಥಾ ನಾನಾ ಭ್ರಮೋದಯಃ ।
ಜೀವಾಣೂನಾಂ ತಥೈವಾಂತರ್ಮಿಥ್ಯಾಸಂಸರಣೋದಯಃ ॥ ೬೫ ॥

ದೃಢೀಕೃತೇ ಸ್ವಹೃದಯೇ ಸುದೀರ್ಘ ಸ್ವಪ್ನವಿಭ್ರಮಂ ತೀವ್ರಂ ಭಯಂ ಪಶ್ಯತೀತಿ ಪರೇಣಾನ್ವಯಃ ||)

೬೨. ಅಂತಹ ಪ್ರಮಾಣ ನಿಶ್ಚಯ ಜ್ಞಾನವಿಲ್ಲದವನು ಮಿಥ್ಯೋದಿತನು. ಅವನು ಶಿಲೆಯಂತೆ ಜಡವಾಗಿರುವ ತನ್ನ ಹೃದಯದಲ್ಲಿಯೇ ಬಹು ದೀರ್ಘಗಳಾದ ಸ್ವಪ್ನ ಭ್ರಾಂತಿಗಳನ್ನು ಕಂಡು ಭಯಪಡುವನು.

೬೩. ಜೀವರು ಪ್ರಬುದ್ಧರಾಗಲಿ ಅಪ್ರಬುದ್ಧರಾಗಲಿ, ಅವರಲ್ಲಿರುವ ಸತ್ತೆಯು ಚಿತ್ಕಲೆಯೇ ಅಲ್ಲದೆ ಇನ್ನೇನೂ ಅಲ್ಲ. ಆದರೂ ಅದನ್ನೇ ಅದಲ್ಲದಂತೆ ಎಂದರೆ ಜಡವಾಗಿ ಕಾಣುತ್ತ ವ್ಯರ್ಥವಾಗಿ ಶೋಕಿಸುವನು.

೬೪. ಅಣುರೂಪನಾಗಿರುವ ಜೀವನೊಳಗೆ ಇರುವದು ಪರಮುವಲ್ಲದೆ ಇನ್ನೇನೂ ಅಲ್ಲ. ಹಾಗಿದ್ದರೂ ಅಲ್ಲಿ ಜಗತ್ತನ್ನು ಕಾಣುವುದು ಯಾವುದುಂಟೋ ಅದು ಮಾಯೆಯ ವಿಜೃಂಭಣವು.

೬೫. ಸ್ಥಾಲಿಯೊಳಗೆಯೇ ಇದ್ದರೂ ಕುದಿಯುತ್ತಿರುವ ನೀರಿನಲ್ಲಿ ಹೇಗೆ ನಾನಾ ವಿಲಾಸಗಳನ್ನು ತೋರುವುದೋ ಜೀವಾಣುಗಳಲ್ಲಿಯೂ ಹಾಗೆಯೇ ತನ್ನೊಳಗೇ ಮಿಥ್ಯಾ ಸಂಸಾರದ ಉದಯವಾಗುವುದು.

ಬಂಧೋಽಸ್ಯ ವಾಸನಾಬಂಧೋ ಮೋಕ್ಷಃ ಸ್ಯಾದ್ವಾಸನಾಲಯಃ ।
ವಾಸನಾಂತೋಽಸ್ಯ ಸೌಷುಪ್ತೇ ಸ್ವಪ್ನೇ ವಿಸ್ಫುರತಿ ಸ್ಥಿತಿಃ ॥ ೬೬ ॥

ಘನವಾಸನಮೋಹೋಽಯಂ ಜೀವಃ ಸ್ಥಾವರತಾದಿಭಾಕ್ ।
ಮಧ್ಯಸ್ಥವಾಸನಸ್ತಿರ್ಯಕ್ಪುರುಷಸ್ತನುವಾಸನಃ । ॥ ೬೭ ॥

ಯದಾಂತರ್ಜೀವಿತೇನಾಂತೋ ಬಹಿರ್ಜಾತಾ ಘಟಾದಯಃ ।
ಜೀವೈಕ್ಯಾದುಭಯೋಃ ಸತ್ತಾ ಗ್ರಾಹ್ಯಗ್ರಾಹಕಯೋಸ್ತದಾ ॥ ೬೮ ॥

---

೬೬. ಬಂಧ ಬಂಧ ಎನ್ನುವುದು ವಾಸನಾ ಬಂಧವು. ಮೋಕ್ಷ ಮೋಕ್ಷ ಎನ್ನುವುದು ವಾಸನಾಲಯವು. ವಾಸನೆಯು ಸೂಕ್ಷ್ಮವಾದರೆ ಸುಷುಪ್ತಿಯು. ಸ್ವಪ್ನದಲ್ಲಿ ವಾಸನೆಯು ಪ್ರಬುದ್ಧವಾಗಿರುವುದು.

(ಅಸ್ಯ–ಜೀವಾಣೋಃ ಸೌಷುಪ್ತೇ ಸ್ಥಿತಿರ್ವಾಸನಾನಾಮಂತೋಽವಧಿಃ ತುರ್ಯಾ ತುರ್ಯಾತೀತಯೋಃ ನಿರ್ವಾಸನತ್ವಾತ್ । ಸ ಚ ಸ್ವಪ್ನೇ ಸ್ಫುರತಿ ವೈಚಿತ್ರ್ಯೇಣ ಸ್ಫುಟೀಭವತೀತ್ಯರ್ಥಃ —ತಾ. ಪ್ರ.)

೬೭. ವಾಸನೆಯು ಘನವಾಗಿ ಮೋಹವಾದರೆ, ಜೀವನು ಸ್ಥಾವರ ದೇಹಿ ಯಾಗುವನು. ವಾಸನೆಯು ಮಧ್ಯಸ್ಥವಾದರೆ ತಿರ್ಯಕ್ ಆಗುವನು. ವಾಸನೆಯು ಇನ್ನೂ ಹಗುರವಾದರೆ ಮನುಷ್ಯನಾಗುವನು.

೬೮. ಒಳಗೆ ಜೀವನಾಗಿರುವವನು ಯಾವಾಗ ಹೊರಗೆ ಘಟಾದಿಗಳಾಗಿ ಹುಟ್ಟಿದನೋ ಆಗ ಅಂತರ್ಜೀವ, ಬಹಿರ್ಜೀವಗಳಿಗೆ ಗ್ರಾಹ್ಯಗ್ರಾಹಕ ಸಂಬಂಧವು ಏರ್ಪಡುವುದು. ಆಗಲೂ ಇಬ್ಬರೂ ಜೀವರೇ ಆದ್ದರಿಂದ ಇಬ್ಬರ ಸತ್ತೆಯೂ ಒಂದೇ!

(ಯದಾ ಯಸ್ಮಿನ್ ಸುಷುಪ್ತಿ ವಿಚ್ಯುತಿ ಕಾಲೇ ದೇಹಾಂತಃ ಆನಖಾಗ್ರ ವ್ಯಾಪ್ತ ಪ್ರಮಾಣಾಹಂಭಾವ ಲಕ್ಷಣೇನ ಜೀವಿತೇನ ಏತಾವಾನ್ ದೇಹ ಪರಿಮಿತ ಏವ ಅಹಂ ಇತ್ಯಂತಃ ಪರಿಚ್ಛೇದೋ ಭವತಿ ತದಾ ಘಟಾದಯಃ ಪದಾರ್ಥಾಃ ಬಹಿರ್ಜಾತಾ ಸ್ಸಂಪನ್ನಾಃ । ತದಾ ಚಕ್ಷುರಾದಿ ದ್ವಾರಾನಿರ್ಗತಾಂತಃಕರಣ ದ್ವಾರಾ

ಆತ್ಮಾನಾತ್ಮಸಮಾಲೀಢೋ ಬಹಿರಂತರ್ಯದಾ ಚಿತಾ ।
ತದಾ ಗ್ರಾಹ್ಯಗ್ರಹಣಧೀರ್ಮೃಗತೃಷ್ಣೇವ ಸೋದಯಾ ॥ ೧೯ ॥

ನೇಹ ಸಂತ್ಯಜ್ಯತೇ ಕಿಂಚಿನ್ನೇಹ ಕಿಂಚಿನ್ನ ಗೃಹ್ಯತೇ ।
ಬಾಹ್ಯಾಂತರಕಲಾಕಾರಶ್ಚಿದಾತ್ಮೈಕಃ ಪ್ರಕಾಶತೇ ॥ ೨೦ ॥

ತ್ರಿಜಗಚ್ಚಿಚ್ಚಮತ್ಕಾರಸ್ತ್ವಲಂ ಭೇದವಿಕಲ್ಪನೈಃ ।
ಶೋಭಿತಾಃ ಸ್ಮಶ್ಚಿತಿ ಚಿರಾತ್ಸಬಾಹ್ಯಾಂತರ್ನ ವಿದ್ಯತೇ ॥ ೨೧ ॥

ನಿರ್ಗತೇನ ವೃತ್ತ್ಯವಚ್ಛಿನ್ನ ಜೀವೇನ ಘಟಾದೀನಾಂ ವ್ಯಾಪ್ತೌ ಘಟಮಹಂ ಜಾನಾಮೀತಿ ಗ್ರಾಹ್ಯಗ್ರಾಹಕಯೋಃ ವಾಸನಾತ್ಮಿಕಾ ಸತ್ತಾ ತತ್ತದ್ವೈಚಿತ್ರ್ಯೇಣ ಸ್ಫುಟೀಭವತೀತ್ಯರ್ಥಃ ॥ —ತಾ. ಪ್ರ.)

೧೯. ಚಿತ್ತು, ಆತ್ಮ, ಅನಾತ್ಮ, ಎಂಬ ಭೇದವನ್ನು ಪಡೆದು ಅಂತರ್ಬಹಿಯಲ್ಲೆಲ್ಲಾ ತುಂಬಿಕೊಂಡಾಗ, ಅಂತಃ ಜೀವನಾಗಿ ಬಹಿಃ ಅನಾತ್ಮನಾಗಿ ಕಾಣಿಸಿಕೊಂಡಾಗ, ಇದು ಗ್ರಾಹ್ಯ, ಇದು ಗ್ರಾಹಕ, ಇದು ಗ್ರಹಣ, ಎಂಬ ತ್ರಿಪುಟೀಪೂರ್ವಕವಾದ ಬುದ್ಧಿ ವೃತ್ತಿಯು ಮೃಗತೃಷ್ಣೆಯಂತೆ ಹುಟ್ಟುವುದು.

೨೦. ಇಲ್ಲಿ ಬಿಡುವುದೂ ಯಾವುದೂ ಇಲ್ಲ: ಹಿಡಿಯುವುದೂ ಯಾವುದೂ ಇಲ್ಲ. ಚಿದ್ಭಿನ್ನವಾದ ಇನ್ನೇನೂ ಇಲ್ಲವೇ ಇಲ್ಲ. ಬಾಹ್ಯ ಅಂತರಗಳಲ್ಲೆಲ್ಲಾ ಕಲಾಕಾರವಾಗಿ ಚಿದಾತ್ಮನೊಬ್ಬನೇ ಪ್ರಕಾಶಿಸುವುದು.

೨೧. ಹೀಗೆ ತ್ರಿಜಗತ್ತೂ ಚಿತ್ತಿನ ಚಮತ್ಕೃತಿಯೇ! ಅದರಿಂದ, ಭೇದವಿಕಲ್ಪಗಳನ್ನು ಕುರಿತು ಚಿಂತಿಸುವುದು ಸಾಕು. ನಾವು ಚಿತ್ತಿನಲ್ಲಿ ನಿಂತು ಬಹುಕಾಲವಾಯಿತು. ನಮಗೆ ಬಾಹ್ಯ, ಆಂತರಗಳೆಂಬುದು ಇಲ್ಲವೇ ಇಲ್ಲ.

(ಶೋಭಿತಾಃ ತತ್ತ್ವಬೋಧೇನ ವಿರಾಜಮಾನಾಃ । ಸಬಾಹ್ಯಾಭ್ಯಂತರಂ ಜಗಚ್ಚಿದ್ವ್ಯತಿರಿಕ್ತಂ ನ ವಿದ್ಯತೇ ಕಾಲತ್ರಯೇಽಪಿ ಇತ್ಯರ್ಥಃ ॥

ಅಬ್ಧಿರ್ಯಥಾ ಜಲಮಪಾಸ್ತಸಮಸ್ತಭೇದಃ |
ಸ್ವಾಪಚ್ಛಮೇವ ಸಕಲಂ ದ್ರವಮೇಕಶುದ್ಧಂ |
ಸರ್ವಂ ತಥೇದಮುಪಹಸ್ತಿತಭೇದಜಾತ |
ಮಾದ್ಯಂ ಪರಂ ಪದಮನಾಮಯಮೇವ ಬುದ್ಧಂ || ೭೨ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ''ಇಂದ್ರಿಯಾರ್ಥೋಪಲಂಭವಿಚಾರೋ'' ನಾಮೈಕಪಂಚಾಶಃ ಸರ್ಗಃ

---

೭೨. ಸಮುದ್ರವು ಹೇಗೆ ಯಾವ ಭೇದಗಳನ್ನೂ ಕಾಣದ ಜಲರಾಶಿಯೋ, ಆಕಾಶಕ್ಕಿಂತ ನಿರ್ಮಲವಾದ ದ್ರವವು ಏಕವಾಗಿ ಶುದ್ಧವಾಗಿ ಸಂಪೂರ್ಣವಾಗಿ ಸಮುದ್ರವಾಗಿರುವುದೋ, ಹಾಗೆಯೇ ಇದೆಲ್ಲವೂ ಸಮಗ್ರವಾಗಿ ಒಂದೇ ! ಅದರಲ್ಲಿ ಯಾವ ಭೇದವೂ ಇಲ್ಲವೇ ಇಲ್ಲ. ಆದ್ಯವೂ ಪರಮಪದವೂ ಅನಾಮಯವೂ ಬೋಧರೂಪವೂ ಆದ ಒಂದೇ ಒಂದು ಇರುವುದು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ಇಂದ್ರಿಯಾರ್ಥೋಪಲಂಭವಿಚಾರ" ಎಂಬ ಐವತ್ತೊಂದನೆಯ ಸರ್ಗವು.

ದ್ವಿಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಯೋಜೀವಸ್ಯಾದಿತಃ ಸ್ವಪ್ನೋ ನಾನಾಕಲನಕೋಮಲಃ ।
ತಮಿಮಂ ವಿದ್ಧಿ ಸಂಸಾರಂ ನ ಸತ್ಯಂ ನಾಪ್ಯಸನ್ಮಯಂ ॥ ೧ ॥

ನಪುಂಸ ಇವ ಜೀವಸ್ಯ ಸ್ವಪ್ನಃ ಸಂಭವತಿ ಕ್ವಚಿತ್ ।
ತೇನೈತೆ ಜಾಗ್ರತೋ ಭಾವಾ ಜಾಗತ್ಸ್ವಪ್ನಕೃತೋಽತ್ರ ಹಿ ॥ ೨ ॥

ಜೀವಸ್ವಪ್ನಮಿಮಂ ದೀರ್ಘಂ ಕ್ಷಿಪ್ರತಾಪ್ರತಿಭಾಸತಃ ।
ಅಸತ್ಯಮಪ್ಯವಸ್ತುತ್ವಾದ್ವಿದ್ಧಿ ವೇದ್ಯವಿದಾಂ ವರ ॥ ೩ ॥

ಐವತ್ತೆರಡನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಜೀವನ ಮೊದಲನೆಯ ಸ್ವಪ್ನವು ನಾನಾ ಸಂಕಲ್ಪಗಳಿಂದ ಸುಂದರವಾಗಿತ್ತು. ಅದೇ ಈ ಸಂಸಾರವು. ಅದು ಸತ್ಯವೂ ಅಲ್ಲ: ಅಸತ್ಯವೂ ಅಲ್ಲ.

(ಆದಿತಃ ಪ್ರಥಮ ಜೀವಸ್ಯ ಸರ್ವಜೀವಸಮಷ್ಟ್ಯಾತ್ಮನೋ ಯಃ ಸ್ವಪ್ನಃ ತಮೇವ ಇಮಮಸ್ಮಾಕಂ ಜಾಗ್ರದಿತಿ ಕಲ್ಪಿತಂ ಸಂಸಾರಂ ವಿದ್ಧಿ —ತಾ. ಪ್ರ.)

೨. ಮನುಷ್ಯರಿಗೆ ಹೇಗೋ ಹಾಗೆಯೇ ಜೀವನಿಗೂ ಸ್ವಪ್ನವು (ಕಾರಣವಿಲ್ಲದೆ) ಎಲ್ಲಿಯೂ ಯಾವಾಗಲೂ ಆಗುವುದಿಲ್ಲ. (ಸ್ವಪ್ನವು ಯಾವಾಗಲೂ ವಾಸನಾ ಪ್ರಚೋದಿತವು) ಅದರಂತೆಯೇ ಜಾಗ್ರತ್ತಿನಲ್ಲಿಯೂ ಜಾಗ್ರತ್ಸ್ವಪ್ನದಲ್ಲಿಯೂ ದೃಶ್ಯವಾಗುವ ಭಾವಗಳೆಲ್ಲವೂ ವಾಸನಾ ಪ್ರಚೋದಿತಗಳೇ!

೩. ಈ ಸಂಸಾರವೆಂಬ ಜೀವಸ್ವಪ್ನವು ದೀರ್ಘವಾಗಿರುವುದು. ನಿತ್ಯ ನಿತ್ಯದ ಸ್ವಪ್ನಗಳು ಎಚ್ಚರಿಕೆಯಾಗುತ್ತಿದ್ದ ಹಾಗೆಯೇ (ಅಪ್ರತಿಭಾಸತಃ) ಅಸತ್ಯವೆಂದು ಬೇಗನೆ ತಿಳಿದು ಹೋಗುವುವು. ಅದರಂತೆಯೇ ಈ ಸಂಸಾರಸ್ವಪ್ನವೂ ಅವಾಸ್ತವವೆಂದೇ ತಿಳಿ.

ಸ್ವಪ್ನಾತ್ಸ್ವಪ್ನಾಂತರಮಿವ ಗಚ್ಛತೋ ಜೀವಜೀವಕಾಃ ।
ಅಸತ್ಯಮೇವ ಪಶ್ಯಂತಿ ಘನಸತ್ಯತಯಾನಘ ॥ ೪ ॥

ಅಜಡೇ ಜಡತಾ ತಾತ ಜಡೇ ಚಾಜಡತೋದಿತಾ ।
ಅಸತ್ಯೇ ಸತ್ಯತಾ ಜೀವಜೀವಾನುಭವಮೋಹತಃ ॥ ೫ ॥

ಭಾನೋರಪ್ಯಂತರಖಿಲಂ ಪಶ್ಯಂತಸ್ತ್ರಿಜಗದ್ಭ್ರಮಂ ।
ಭ್ರಮಂತಿ ಸ್ವಪ್ನಸಂಭ್ರಾಂತಾ ಇವ ಜೀವಾ ಭಿದಾಲಿಭಿಃ ॥ ೬ ॥

(ಅಸತ್ಯತ್ವ–ಅವಸ್ತುತ್ವಾಭ್ಯಾಮಪಿ ತಸ್ಯ ಸ್ವಪ್ನತಾಂ ಸಾಧರ್ಮ್ಯ ವೈಧರ್ಮ್ಯಾ ನುಭವೇ ನಿಮಿತ್ತಂ ದರ್ಶಯತಿ–ಜೀವಸ್ವಪ್ನಮಿತಿ । ಅಸ್ಮದೀಯ ಸ್ವಪ್ನವತ್ ಕ್ಷಿಪ್ರಬಾಧ್ಯತಯಾ ಅಪ್ರತಿಭಾಸತೋ ಹೇತೋರ್ದೀರ್ಘಂ ತಥಾಚ ದೈರ್ಘ್ಯಮೇವ ವೈಧರ್ಮ್ಯ ಭ್ರಮ ಹೇತುರಿತಿ ಭಾವಃ । —ತಾ. ಪ್ರ.)

೪. ಎಲೈ ಅನಘನಾದ ರಾಘವನೆ, ಜೀವಜೀವರೆಲ್ಲರೂ ಸ್ವಪ್ನದಿಂದ ಸ್ವಪ್ನಕ್ಕೆ ಹೋಗುತ್ತ ಅಸತ್ಯವಾಗಿದ್ದರೂ ಆ ಸ್ವಪ್ನಗಳನ್ನೇ ಘನಸತ್ಯವೆಂದು ಕೊಳ್ಳುತ್ತಿರುವರು.

೫. ಜೀವಜೀವರೂ ತಮ್ಮ ತಮ್ಮ ಅನುಭವವನ್ನೇ ಸತ್ಯವೆಂದು ನಂಬಿ ಮೋಹಗೊಳ್ಳುತ್ತಿರುವುದರಿಂದ ಅಜಡದಲ್ಲಿ ಜಡಬುದ್ಧಿಯೂ ಜಡದಲ್ಲಿ ಅಜಡ ಬುದ್ಧಿಯೂ ಉದಯವಾಗಿರುವುದು.

೬. ಹೀಗೆ ಸ್ವಪ್ನಭ್ರಾಂತರಾದ ಈ ಜೀವರು ಭೇದ ಭೇದ ಸಮೂಹಗಳನ್ನು ಒಪ್ಪಿಕೊಂಡು, ಭಾನುಮಂಡಲದಲ್ಲಿ ತ್ರಿಜಗತ್ತುಗಳೂ ತುಂಬಿವೆಯೆಂದುಕೊಳ್ಳುತ್ತ ಭ್ರಾಂತಿಯಿಂದ ಭ್ರಾಂತಿಯಲ್ಲಿಯೇ ಮುನ್ನುಗ್ಗುವರು.

(ವಸ್ತು ಸ್ವಭಾವ ವೈಪರೀತ್ಯದರ್ಶನಾದಪ್ಯಸ್ಯ ಸ್ವಪ್ನತಾ ಇತ್ಯಾಹ............ ಜೀವಸ್ಯ ಸಮಷ್ಟೇರೇಕದೇಶಭೂತಾ ಯೇ ವ್ಯಷ್ಟಿಜೀವಾಃ ತದನುಭವ ಲಕ್ಷಣಾತ್ ಮೋಹತೋ ಭ್ರಾಂತಿಃ —ತಾ. ಪ್ರ.)

ಸರ್ವಗತ್ವಾದನಂತತ್ವಾತ್ಸ್ವಸ್ಯ ಜೀವಸ್ಯ ಜೀವಿತಃ ।
ಯದ್ಭಾವಯಂತಿ ಚೇತಂತಿ ತದೇವಾಶ್ವಿತಿ ಸತ್ಯವತ್ ॥ ೭ ॥

ಪುಂಡರೀಕಾಕ್ಷ ನಿರ್ದಿಷ್ಟಾಮಸಂಸಕ್ತಿಗತಿಂ ಶುಭಾಂ ।
ಯಾಮಾಲಿಂಗ್ಯ ಮಹಾಬಾಹೋ ಜೀವನ್ಮುಕ್ತೋ ಮಹಾಮುನಿಃ ॥ ೮ ॥

ಪಾಂಡೋಃ ಪುತ್ರೋಽರ್ಜುನೋ ನಾಮ ಸುಖಂ ಜೀವಿತಮಾತ್ಮನಃ ।
ಕ್ಷಪಯಿಷ್ಯತಿ ನಿರ್ದುಃಖಂ ತಥಾ ಕ್ಷೇಪಯ ಜೀವಿತಂ ॥ ೯ ॥

ಶ್ರೀ ರಾಮ ಉವಾಚ:—

ಭವಿಷ್ಯತಿ ಕದಾ ಬ್ರಹ್ಮನ್ಸೋಽರ್ಜುನಃ ಪಾಂಡುನಂದನಃ ।
ಕೀದೃಶೀಂ ಚ ಹರಿಸ್ತಸ್ಯ ಕಥಯಿಷ್ಯತ್ಯಸಕ್ತತಾಂ ॥ ೧೦ ॥

---

೭. ಜೀವನು ಪುರ್ಯಷ್ಟಕಗತನಾಗಿ ತಾನು ಅಲ್ಪನು ಇತ್ಯಾದಿ ಭ್ರಾಂತಿಗಳನ್ನು ಪಡೆದಿದ್ದರೂ, ಜೀವನಾಗಿರುವ ಚೇತನವು ಸರ್ವಗವೂ ಅನಂತವೂ ಆದುದರಿಂದ ಅವನು ಏನೇನು ಭಾವನೆ ಮಾಡುವನೋ ಅದೆಲ್ಲವೂ ಆ ಕೂಡಲೇ ಸತ್ಯವತ್ ಆಗಿ, ಅಸತ್ಯವಾಗಿದ್ದರೂ ಸತ್ಯದಂತೆ ತೋರಿ, ಅಲ್ಲಿ ವ್ಯಾಪಾರವು ನಡೆದು ಹೋಗುವುದು.

೮. ಪುಂಡರೀಕಾಕ್ಷನಾದ ಭಗವಂತನು ಅಸಂಸಕ್ತಿಯೋಗವೆಂಬ ಸದ್ಗತಿಯ ಶುಭ ಮಾರ್ಗವನ್ನು ಉಪದೇಶಿಸಿರುವನು. ಎಲೈ ಮಹಾನುಬಾಹುವೇ, ಮಹಾಮುನಿಯಾದ ಅರ್ಜುನನು ಅದನ್ನು ಅವಲಂಬಿಸಿ ಜೀವನ್ಮುಕ್ತನಾದನು.

೯. ಪಾಂಡುಪುತ್ರನಾದ ಅರ್ಜುನನು ಜೀವನ್ಮುಕ್ತನಾಗಿ ದುಃಖರಹಿತನಾಗಿ ಬಾಳುವನು. ಅವನಂತೆಯೇ ನೀನೂ ಜೀವಿತವನ್ನು ನಿರ್ದುಃಖವಾಗಿ ನಿರ್ವಹಿಸು.

ಶ್ರೀ ರಾಮನು ಕೇಳಿದನು:—

೧೦. ಆ ಪಾಂಡುನಂದನನಾದ ಅರ್ಜುನನು, ಎಲೈ ಬ್ರಹ್ಮನೆ, ಯಾವಾಗ ಹುಟ್ಟುವನು? ಶ್ರೀಹರಿಯು ಆತನಿಗೆ ಯಾವ ರೀತಿಯಾದ ಅಸಂಸಕ್ತಿಯನ್ನು ಹೇಳುವನು?

ಶ್ರೀ ವಸಿಷ್ಠ ಉವಾಚ:—

ಅಸ್ತಿ ಸನ್ಮಾತ್ರಮಾತ್ಮೇತಿ ಪರಿಕಲ್ಪಿತನಾಮಕಂ ।
ಸ್ಥಿತಮಾತ್ಮನ್ಯನಾದ್ಯಂತೇ ನಭಸೀವ ಮಹಾನಭಃ ॥ ೧೧ ॥

ದೃಶ್ಯತೇ ವಿಮಲೇ ತಸ್ಮಿನ್ನಯಂ ಸಂಸಾರವಿಭ್ರಮಃ ।
ಕಟಕಾದಿ ಯಥಾ ಹೇಮ್ನಿ ತರಂಗಾದಿ ಯಥಾಂಭಸಿ ॥ ೧೨ ॥

ಚತುರ್ದಶವಿಧಾ ಭೂತಜಾತಯಃ ಪ್ರಸ್ಫುರಂತ್ಯಲಂ ।
ತಸ್ಮಿನ್ಸಂಸಾರಜಾಲೇಸ್ಮಿನ್ ಜಾಲೇ ಶಕುನಯೋ ಯಥಾ ॥ ೧೩ ॥

ತತ್ರೈತೇ ಯಮಚಂದ್ರಾರ್ಕಶಕ್ರಾದ್ಯಾಃ ಶಂಸಿತಕ್ರಮಾಃ ।
ಭೂತಪಂಚಕಸಂಸಾರಲೋಕಪಾಲತ್ವಮಾಗತಾಃ ॥ ೧೪ ॥

ಶ್ರೀ ವಸಿಷ್ಠನು ಹೇಳಿದನು:—

೧೧. ಆಕಾಶದಲ್ಲಿ ಮಹಾಕಾಶವಿರುವಂತೆ, ಅನಾದ್ಯಂತವಾಗಿ ತಾನೇ ತಾನಾಗಿರುವ ಆತ್ಮನಲ್ಲಿ ನಾಮವೆಂಬ ಒಂದು ಪರಿಚ್ಛೇದಕ್ಕೆ ಒಳಪಟ್ಟ ಸನ್ಮಾತ್ರ ನೆಂಬ ಆತ್ಮನು ಇರುವನು.

(ಸ್ಥಿತಮಿತಿ । "ಸ್ವೇ ಮಹಿಮ್ನಿ ಪ್ರತಿಷ್ಠಿತಃ" ಇತಿ ಶ್ರುತೇಃ —ತಾ. ಪ್ರ.)

(ಮಹಾಕಾಶವೆನ್ನುವದು ಕಾರ್ಯೋನ್ಮುಖವಾಗಿ ವಾಯ್ವಾದಿ ಭೂತಗಳಾಗು ವುದಕ್ಕೆ ಸಿದ್ಧವಾಗಿರುವ ಆಕಾಶ.)

೧೨. ಚಿನ್ನದಲ್ಲಿ ಕಟಕಾದಿಗಳೂ, ಜಲದಲ್ಲಿ ತರಂಗಾದಿಗಳೂ ಆಗುವಂತೆ, ವಿಮಲನಾದ ಆತ್ಮನಲ್ಲಿ ಈ ಅಪಾರವಾದ ಸಂಸಾರಭ್ರಾಂತಿಯೆಲ್ಲವೂ ತೋರುವುದು.

೧೩. ಬಲೆಯಲ್ಲಿ ಸಿಕ್ಕಿರುವ ಹಕ್ಕಿಗಳಂತೆ ಸಂಸಾರವೆಂಬ ಈ ಬಲೆಯಲ್ಲಿ ಹದಿನಾಲ್ಕು ವಿಧವಾದ ಪ್ರಾಣಿಸಮೂಹಗಳು ಸಿಕ್ಕಿಕೊಂಡಿರುವುವು.

೧೪. ಶ್ರುತಿ ಸ್ಮೃತಿ ಪುರಾಣಗಳಲ್ಲಿ ಬೇಕಾದ ಹಾಗೆ ಹೊಗಳಿಸಿಕೊಂಡಿರುವ ಯಮ, ಚಂದ್ರ, ಸೂರ್ಯ, ಇಂದ್ರ ಮೊದಲಾದವರೆಲ್ಲರೂ ಭೂತಪಂಚಕಗಳಿಂದ ಆಗಿರುವ ಈ ಸಂಸಾರಮಂಡಲದಲ್ಲಿಯೇ ಲೋಕಪಾಲರಾಗಿರುವರು.

ಇದಂ ಪುಣ್ಯಮುಪಾದೇಯಂ ಹೇಯಂ ಪಾಪಮಿದಂ ತ್ವಿತಿ ।
ತೈಃ ಸ್ವಸಂಕಲ್ಪಘಟಿತಾದ್ವೇದನಾತ್ಸ್ವಾಪಿತಾ ಸ್ಥಿತಿಃ ॥ ೧೫ ॥

ತಸ್ಯಾದ್ಯ ಯಾವಧನಘ ಪ್ರವಾಹಪತಿತೇ ನಿಜೇ ।
ಕರ್ಮಣ್ಯಚಲಸಂಕಾಶಸ್ಥಿರಂ ಚಿತ್ತಮವಸ್ಥಿತಂ ॥ ೧೬ ॥

ಭಗವಾನ್ಸ ಯಮಃ ಕಿಂಚಿದ್ಗತೇ ಪ್ರತಿಚತುರ್ಯುಗೇ ।
ತಪಃ ಪ್ರಕುರುತೇ ಭೂತದಲನಾತ್ಪಾಪಶಂಕಯಾ ॥ ೧೭ ॥

ಕದಾಚಿದಷ್ಟೌ ವರ್ಷಾಣಿ ದಶ ದ್ವಾದಶ ವಾಪಿ ಚ ।
ಕದಾಚಿತ್ಪಂಚಸಪ್ತಾದಿ ಕದಾಚಿತ್ಷೋಡಶಾಪಿ ಚ ॥ ೧೮ ॥

---

೧೫. ಇದು ಪುಣ್ಯ, ಆದುದರಿಂದ ಇದನ್ನು ಸ್ವೀಕರಿಸಬೇಕು, ಇದು ಪಾಪ ಆದುದರಿಂದ ಇದನ್ನು ತಿರಸ್ಕರಿಸಬೇಕು, ಎಂದು ತಮ್ಮ ತಮ್ಮ ಅಧಿಕಾರಕ್ಕೆ ಅನುಗುಣವಾದ ಜ್ಞಾನದಿಂದ ಸಂಭವಿಸುವ ತಮ್ಮ ತಮ್ಮ ಸಂಕಲ್ಪಗಳಿಂದಲೇ ಒಂದು ಸ್ಥಿತಿಯನ್ನು ಕಲ್ಪಿಸಿಕೊಂಡಿರುವರು.

೧೬. ಪ್ರವಾಹದಂತಿರುವ ಈ ಸಂಸಾರದಲ್ಲಿ, ಅವರವರು ಯಾವುದು ಯಾವುದನ್ನು ತಮ್ಮ ತಮ್ಮ ಕರ್ಮಗಳಿಂದು ನಂಬಿಕೊಂಡಿರುವರೋ ಅದರದರಲ್ಲಿ ಅವರವರ ಚಿತ್ತವು ದೃಢವಾಗಿ ಅಚಲದಂತೆ ನಿಂತಿರುವುದು.

೧೭–೮. ಆ ಅಧಿಕಾರಾವಧಿಯಲ್ಲಿ ಚತುರ್ಯುಗಗಳಿಗೆ ಒಂದು ಸಾರಿ ಭಗವಂತನಾದ ಯಮನು ತನ್ನ ಪ್ರಾಣಿ ಸಂಹಾರ ಕರ್ಮದಿಂದ ತನಗೆ ಪಾಪ ಬಂದಿರುವುದೆಂಬ ಶಂಕೆಯಿಂದ ಅದನ್ನು ಕಳೆದುಕೊಳ್ಳಲು ತಪಸ್ಸನ್ನು ಮಾಡುವನು. ಕೆಲವು ಸಲ ಆ ತಪಸ್ಸು ಎಂಟು ವರ್ಷಗಳ ಕಾಲ ನಡೆಯುವುದು. ಇನ್ನೊಮ್ಮೆ ಹತ್ತು, ಹನ್ನೆರಡು, ಐದು, ಏಳು, ಹದಿನಾರು ವರ್ಷಗಳು ಕೂಡ ಆಗುವುದುಂಟು

(ಪ್ರತಿಚತುರ್ಯುಗಂ ಕಿಂಚಿದ್ಗತೇ ದ್ವಾಪರಾಂತೇ ವಾ —ತಾ. ಪ್ರ.)

ಉದಾಸೀನವದಾಸೀನೇ ತಸ್ಮಿನ್ನಿಯಮಸಂಸ್ಥಿತೌ ।
ನ ಹಿನಸ್ತಿ ಜಗಜ್ಜಾಲೇ ಮೃತ್ಯುರ್ಭೂತಾನಿ ಕಾನಿಚಿತ್ ॥ ೧೯ ॥

ತೇನ ನೀರಂಧ್ರಭೂತೌಘನಿಃಸಂಚಾರಂ ಮಹೀತಲಂ ।
ಭವತಿ ಪ್ರಾವೃಷಿ ಸ್ವೇದೀ ಕುಂಜರೋ ಮಶಕೈರಿವ ॥ ೨೦ ॥

ಅಥೈತಾನಿ ವಿಚಿತ್ರಾಣಿ ಭೂತಾನಿ ಬಹುಯುಕ್ತಿಭಿಃ ।
ಕ್ಷಪಯಂತಿ ಸುರಾ ರಾಮ ಭುವೋ ಭಾರನಿವೃತ್ತಯೇ ॥ ೨೧ ॥

ಏವಂ ಯುಗಸಹಸ್ರಾಣಿ ವ್ಯವಹಾರಶತಾನಿ ಚ ।
ಸಮತೀತಾನ್ಯನಂತಾನಿ ಭೂತಾನಿ ಚ ಜಗಂತಿ ಚ ॥ ೨೨ ॥

ವೈವಸ್ವತೋಽದ್ಯ ತು ಯಮೋ ಯ ಏಷ ಪಿತೃನಾಯಕಃ ।
ಅನೇನ ತ್ವಧುನಾ ಸಾಧೋ ಪರಿಕ್ಷೀಣೇಷು ಕೇಷುಚಿತ್ ॥ ೨೩ ॥

ಯುಗೇಷ್ವಘವಿಘಾತಾಯ ವರ್ಷಾಣಿ ದ್ವಾದಶಾತ್ಮನಾ ।
ವ್ರತಚರ್ಯೇಹ ಕರ್ತವ್ಯಾ ದೂರಾಸ್ತಜನಕರ್ಷಣಾ ॥ ೨೪ ॥

---

೧೯. ತಪಸ್ಸು ಮಾಡುವ ಆ ಕಾಲದಲ್ಲಿ ಮೃತ್ಯುವು ಉದಾಸೀನನಾಗಿದ್ದು ಕೊಂಡು ಈ ಜಗತ್ತೆಂಬ ಬಲೆಯಲ್ಲಿ ಸಿಕ್ಕಿಕೊಂಡಿರುವ ಪ್ರಾಣಿಗಳು ಯಾವುದನ್ನೂ ಕೊಲ್ಲುವುದಿಲ್ಲ.

೨೦. ಹಾಗೆ ಮೃತ್ಯುವು ಉದಾಸೀನನಾಗುವುದರಿಂದ, ವರ್ಷಾಕಾಲದಲ್ಲಿ ಬೆವರು ಕಾರುವ ಆನೆಯು ಸೊಳ್ಳೆಗಳಿಂದ ಮುಚ್ಚಿಹೋಗುವಂತೆ ಮಹೀತಲವು ಪ್ರಾಣಿಗಳಿಂದ ತುಂಬಿ ಹೋಗಿ ಸಂಚಾರಕ್ಕೂ ಎಡೆಯಿಲ್ಲದಂತಾಗುವುದು.

೨೧. ರಾಮ, ಆಗ ದೇವತೆಗಳು ಭೂಭಾರ ನಿವೃತ್ತ್ಯರ್ಥವಾಗಿ ಈ ಚಿತ್ರ ವಿಚಿತ್ರ ಪ್ರಾಣಿಗಳನ್ನು ಬಹು ಯುಕ್ತಿಗಳಿಂದ ಸಂಹಾರ ಮಾಡುವರು.

೨೨. ಹೀಗೆ ದೇವತೆಗಳು ಭೂಭಾರ ನಿವೃತ್ತಿಗಾಗಿ ಮಾಡುವ ಸಂಹಾರ ಕಾರ್ಯವು ಎಷ್ಟೋ ನೂರು ಸಲ, ಎಷ್ಟೋ ಸಹಸ್ರ ಯುಗಗಳಲ್ಲಿ ನಡೆದಿರುವುದು. ಎಷ್ಟೆಷ್ಟೋ ಜಗತ್ತುಗಳೂ ಪ್ರಾಣಿಗಳೂ ಈ ವ್ಯವಹಾರದಲ್ಲಿ ಧ್ವಂಸವಾಗಿ ಹೋಗಿರುವುವು.

೨೩-೪. ಈಗ ಯಮನಾಗಿರುವವನು ವೈವಸ್ವತನು. ಆತನೇ ಪಿತೃ

ತೇನೇಯಮುರ್ವೀ ನೀರಂಧ್ರಾ ಭೂತೈರ್ಮರ್ತ್ಯೈರಮೃತ್ಯುಭಿಃ ।
ದೀನಾ ಪ್ರಪನ್ನಾ ಗುಲ್ಮೀವ ಭಾರಭೂತೈರ್ಭವಿಷ್ಯತಿ ॥ ೨೫ ॥

ಭೂಭಾರಪರಿಭೂತಾಂಗೀ ಹರಿಂ ಶರಣಮೇಷ್ಯತಿ ।
ಕಾಂತಾ ದಸ್ಯುಪರಾಭೂತಾ ದೀನಾ ಪತಿಮಿವ ಪ್ರಿಯಾ ॥ ೨೬ ॥

ಹರಿರ್ದೇಹದ್ವಯೇನಾಥ ಮಹೀಮವತರಿಷ್ಯತಿ ।
ದೇವಾಂಶೈರಖಿಲೈಃ ಸಾರ್ಧಂ ನರನಾರಾಯಣಂ ಗತೈಃ ॥ ೨೭ ॥

ವಸುದೇವಸುತಸ್ತ್ವೇಕೋ ವಾಸುದೇವ ಇತಿ ಶ್ರುತಃ ।
ದೇಹೋ ಭವಿಷ್ಯತಿ ಹರೇರ್ದ್ವಿತೀಯಃ ಪಾಂಡವೋಽರ್ಜುನಃ ॥ ೨೮ ॥

ಪತಿಯು. ಕೆಲವು ಯುಗಗಳಾದ ಮೇಲೆ ಈತನು, ಎಲೈ ಸಾಧುವೆ, ಜನಸಂಹಾರವನ್ನು ಬಿಟ್ಟು, ತನ್ನ ಪಾಪವನ್ನು ಕಳೆದುಕೊಳ್ಳಲು, ಹನ್ನೆರಡು ವರ್ಷ ವ್ರತವನ್ನು ಆಚರಿಸಬೇಕಾಗುವುದು.

೨೫. ಆಗ ಭೂಮಿಯು, ಪೊದೆಗಳು ಬೆಳೆದು ಕಾಡು ದುರ್ಗಮವಾಗುವಂತೆ ಮೃತ್ಯುಭಯವಿಲ್ಲದ ಮನುಷ್ಯರೂ ಪ್ರಾಣಿಗಳು ತುಂಬಿಹೋಗಲು, ಆ ಭಾರದಿಂದ ದೀನಳಾಗುವಳು.

೨೬. ಕಳ್ಳರ ಕೈಗೆ ಸಿಕ್ಕಿ ಹೆಂಗುಸು ದೀನಳಾಗಿ ಗಂಡನಿಗೆ ಮೊರೆಯಿಡುವಂತೆ,ಆಗ ಭೂದೇವಿಯೂ ಭೂಭಾರದಿಂದ ತನ್ನ ದೇಹವೆಲ್ಲವೂ ಬಗ್ಗಿಹೋಗಿರುವುದೆಂದು ತನ್ನ ಪತಿಯಾದ ಶ್ರೀಹರಿಗೆ ಶರಣುಹೋಗುವಳು.

೨೭. ಆಗ ಶ್ರೀಹರಿಯು ನರನಾರಾಯಣರೆಂಬ ಎರಡು ದೇಹಗಳನ್ನು ತೆಗೆದುಕೊಂಡು ಭೂಮಿಯಲ್ಲಿ ಅವತಾರ ಮಾಡುವನು. ಎಲ್ಲಾ ದೇವತೆಗಳೂ ತಮ್ಮ ತಮ್ಮ ಅಂಶಗಳಿಂದ ಆತನ ಹಿಂದೆಯೇ ಬರುವರು.

೨೮. ಆ ಎರಡು ಅವತಾರಗಳಲ್ಲಿ ಒಂದು ರೂಪದಿಂದ ವಸುದೇವನ ಮಗನಾದ ವಾಸುದೇವನಾಗಿ ಹುಟ್ಟುವನು. ಶ್ರೀಹರಿಯ ಎರಡನೆಯ ರೂಪವು ಪಾಂಡವರಲ್ಲಿ ಅರ್ಜುನನಾಗುವುದು.

ಯುಧಿಷ್ಟಿರ ಇತಿ ಖ್ಯಾತೋ ಧರ್ಮಪುತ್ರೋ ಭವಿಷ್ಯತಿ ।
ಅಂಭೋಧಿಮೇಖಲಾಭೂಪಃ ಪಾಂಡೋಃ ಪುತ್ರಃ ಸ ಧರ್ಮವಿತ್ ॥ ೨೯ ॥

ದುರ್ಯೋಧನ ಇತಿ ಖ್ಯಾತಸ್ತಸ್ಯ ಭ್ರಾತಾ ಪಿತೃವ್ಯಜಃ ।
ಭವಿಷ್ಯತಿ ದೃಢದ್ವಂದ್ವೋ ಭೀಮೋ ಬಭ್ರುರಹೇರಿವ ॥ ೩೦ ॥

ಅನ್ಯೋನ್ಯಂ ಹರತೋರುರ್ವೀಂ ತಯೋಃ ಸಂಗ್ರಾಮಲೋಲಯೋಃ ।
ಅಷ್ಟಾದಶಾತ್ರಾಕ್ಷೌಹಿಣ್ಯೋ ಘಟಿಷ್ಯಂತ್ಯತ್ರ ಭೀಷಣಾಃ ॥ ೩೧ ॥

ತತ್ಕ್ಷಯೇಣ ವಿಭಾರತ್ವಂ ಭುವೋ ವಿಷ್ಣುಃ ಕರಿಷ್ಯತಿ ।
ರಾಘವಾರ್ಜುನದೇಹೇನ ಬೃಹದ್ಗಾಂಡೀವ ಧನ್ವನಾ ॥ ೩೨ ॥

ವಿಷ್ಣೋರರ್ಜುನನಾಮಾದೌ ಪ್ರಾಕೃತಂ ಭಾವಮಾಶ್ರಿತಃ ।
ಹರ್ಷಾಮರ್ಷಾನ್ವಿತೋ ದೇಹೋ ನರಧರ್ಮಾ ಭವಿಷ್ಯತಿ ॥ ೩೩ ॥

---

೨೯. ಯುಧಿಷ್ಠಿರನೆಂದು ವಿಖ್ಯಾತನಾದ ಇನ್ನೊಬ್ಬನು ಧರ್ಮಪುತ್ರನಾಗಿ ಹುಟ್ಟುವನು. ಆತನು ಸಮುದ್ರದವರೆಗೂ ಇರುವ ಭೂಮಂಡಲಕ್ಕೆಲ್ಲ ನಾಥನಾಗಿ ಷೋಡಶ ಮಹಾರಾಜರಲ್ಲಿ ಒಬ್ಬನಾಗುವನು. ಆ ಪಾಂಡವನು ಧರ್ಮಜ್ಞನು.

೩೦. ಆತನ ದೊಡ್ಡಪ್ಪನ ಹೊಟ್ಟೆಯಲ್ಲಿ ದುರ್ಯೋಧನನೆಂದು ಪ್ರಸಿದ್ಧನಾದ ಇನ್ನೊಬ್ಬನು ಹುಟ್ಟುವನು. ಧರ್ಮಪುತ್ರನಿಗೆ ಸಾಕ್ಷಾತ್ ತಮ್ಮನಾಗಿ ಭೀಮನು ಹುಟ್ಟುವನು. ದುರ್ಯೋಧನನಿಗೂ ಅವನಿಗೂ ಯಾವಾಗಲೂ ಸರ್ಪ ನಕುಲಗಳಿಗಿರುವಂತೆ ದ್ವಂದ್ವಯುದ್ಧವು ನಡೆಯುತ್ತಲೇ ಇರುವುದು.

೩೧. ಒಬ್ಬರ ಭೂಮಿಯನ್ನು ಮತ್ತೊಬ್ಬರು ಹಾರಿಸಬೇಕೆಂದು ಯುದ್ಧಕ್ಕೆ ಇಳಿಯುವ ಅವರಿಗೆ ಭಯಂಕರವಾದ ಹದಿನೆಂಟು ಅಕ್ಷೋಹಿಣಿಯ ಸೈನ್ಯವು ಒದಗುವುದು.

೩೨. ಭಾರಿಯ ಗಾಂಡೀವವನ್ನು ಧರಿಸಿದ ಅರ್ಜುನನಾಗಿ, ಎಲೈ ರಾಘವನೆ, ವಿಷ್ಣುವೇ ಆ ಸೇನೆಯನ್ನೆಲ್ಲ ಸಂಹಾರಮಾಡಿ ಭೂಭಾರವನ್ನು ಇಳಿಸುವನು.

೩೩. ವಿಷ್ಣುವು ಅರ್ಜುನನಾದಿ ನಾಮಗಳನ್ನು ಪಡೆದು ಪ್ರಾಕೃತಭಾವ

ಸೇನಾದ್ವಯಗತಾನ್ದೃಷ್ಟ್ವಾ ಸ್ವಜನಾನ್ಮರಣೋನ್ಮುಖಾನ್ ।
ವಿಷಾದಮೇಷ್ಯತ್ಯುದ್ಯೋಗಂ ಯುದ್ಧಾಯ ನ ಕರಿಷ್ಯತಿ ॥ ೩೪ ॥

ತಮರ್ಜುನಾಭಿಧಂ ದೇಹಂ ಪ್ರಾಪ್ತಕಾರ್ಯೈಕ ಸಿದ್ಧಯೇ ।
ಹರಿರ್ಬುದ್ಧೇನ ದೇಹೇನ ಬೋಧಯಿಷ್ಯತಿ ರಾಘವ ॥ ೩೫ ॥

ನ ಜಾಯತೇ ಮ್ರಿಯತೇ ವಾ ಕದಾಚಿನ್ನಾಯಂ ಭೂತ್ವಾ ಭವಿತಾ ವಾ ನ ಭೂಯಃ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ।೩೬।

ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥ ೩೭ ॥

ದಿಂದ ದೇಹವನ್ನು ಪಡೆದಾಗ, ಆ ಅವತಾರವು ನರಧರ್ಮ ಸಂಪನ್ನವಾಗಿ ಹರ್ಷಾಮರ್ಷಗಳಿಂದ ಕೂಡಿದುದಾಗುವುದು.

೩೪. ಉಭಯ ಸೇನೆಗಳನ್ನೂ ನೋಡಿ, ಮರಣೋನ್ಮುಖರಾದ ಸ್ವಜನರನ್ನು ಕಂಡು ಆ ಅರ್ಜುನನು ವಿಷಾದಪರನಾಗಿ ಯುದ್ಧೋದ್ಯೋಗವನ್ನೂ ಕೂಡ ಬಿಟ್ಟು ಕೂಡುವನು.

೩೫. ಹೀಗೆ ತೂಷ್ಣೀಂ ಕುಳಿತ ಅರ್ಜುನನರೂಪಕ್ಕೆ ತಾವು ಬಂದಿರುವ ಕಾರ್ಯವು ಆಗಬೇಕೆಂದು, ತಾನೇ ತನ್ನ ಪ್ರಬುದ್ಧರೂಪದಿಂದ, ರಾಘವ, ವಿಷ್ಣುವು ಜ್ಞಾನೋಪದೇಶ ಮಾಡುವನು.

೩೬. ಹೊಡೆಸಿಕೊಳ್ಳ ಬಹುದಾದ ಈ ಶರೀರದಲ್ಲಿ ಅಜನೂ ನಿತ್ಯನೂ ಶಾಶ್ವತನೂ ಪುರಾಣನೂ ಆದ ಒಬ್ಬನಿರುವನು. ಅವನನ್ನು ಯಾರೂ ಹೊಡೆಯಲಾರರು. ಅವನು ಹುಟ್ಟುವುದೂ ಇಲ್ಲ. ಸಾಯುವುದೂ ಇಲ್ಲ. ಅವನು ಹುಟ್ಟಿದನು ಮತ್ತೆ ಹುಟ್ಟುವನು ಎಂಬುದೂ ಇಲ್ಲ.

೩೭. ಹೊಡೆದವನು ಇವನು ಎಂದು ಕೊಂಡವನೂ, ಹೊಡೆತವನ್ನು ತಿಂದವನು ಎಂದುಕೊಳ್ಳುವನೂ ಇಬ್ಬರೂ ತಿಳಿದವರಲ್ಲ. ಈತನು ಹೊಡೆಯುವವನೂ ಅಲ್ಲ: ಹೊಡೆತವನ್ನು ತಿಂದವನೂ ಅಲ್ಲ.

ಅನಂತಸ್ಯೈಕರೂಪಸ್ಯ ಸತಃ ಸೂಕ್ಷ್ಮಸ್ಯ ಖಾದಪಿ ।
ಆತ್ಮನಃ ಪರಮೇಶಸ್ಯ ಕಿಂ ಕಥಂ ಕೇನ ನಶ್ಯತಿ ॥ ೩೮ ॥

ಅನಂತಮವ್ಯಕ್ತಮನಾದಿಮಧ್ಯಮಾತ್ಮಾನಮಾಲೋಕಯ ಸಂವಿದಾತ್ಮನ್ ।
ಸಂವಿದ್ವಪುಃ ಸ್ಫಾರಮಲಬ್ಧದೋಷಮಜೋಽಸಿ ನಿತ್ಯೋಽಸಿ ನಿರಾಮಯೋಽಸಿ ॥೩೯॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಅರ್ಜುನೋಪಾಖ್ಯಾನೇ "ನರನಾರಾಯಣಾವತಾರ ಕಥನಂ" ನಾಮ ದ್ವಿಪಂಚಾಶಃ ಸರ್ಗಃ

---

೩೮. ಅನಂತವಾಗಿ, ತಾನೇ ತಾನಾಗಿ, ಸತ್ಯಸ್ವರೂಪನಾಗಿ, ಆಕಾಶಕ್ಕಿಂತ ಸೂಕ್ಷ್ಮವಾಗಿ, ಪರಮೇಶ್ವರನಾಗಿರುವ, ಆತ್ಮನದು ಯಾವುದು ತಾನೇ ಹೇಗೆ, ಏತರಿಂದ ನಾಶವಾಗುವುದು ?

೩೯. ಅನಂತವೂ ಅವ್ಯಕ್ತವೂ ಆದಿಮಧ್ಯರಹಿತವಾದುದೂ ಆದ ಆತ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡು, ಎಲೈ ಚಿದಾತ್ಮನಾದ ರಾಮನೆ, ನೀನೂ ಚಿದ್ವಪುವಾಗಿ, ನಿರ್ಮಲ ಸ್ವರೂಪನಾಗಿ, ಅಜನಾಗಿರುವೆ, ನಿತ್ಯನಾಗಿರುವೆ, ನಿರಾಮಯನಾಗಿರುವೆ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ನರನಾರಾಯಣಾವತಾರ ಕಥನ" ಎಂಬ ಐವತ್ತೆರಡನೆಯ ಸರ್ಗವು

ತ್ರಿಪಂಚಾಶಃ ಸರ್ಗಃ

ಶ್ರೀ ಭಗವಾನ್ ಉವಾಚ :—

ಅರ್ಜುನ ತ್ವಂ ನ ಹಂತಾ ತ್ವಮಭಿಮಾನಮಲಂ ತ್ಯಜ ।
ಜರಾಮರಣನಿರ್ಮುಕ್ತಃ ಸ್ವಯಮಾತ್ಮಾನಿ ಶಾಶ್ವತಃ ॥ ೧ ॥

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಪಿ ಸ ಇಮಾನ್ ಲೋಕಾನ್ನ ಹಂತಿ ನ ನಿಬಧ್ಯತೇ ॥ ೨ ॥

ಐವತ್ತಮೂರನೆಯ ಸರ್ಗವು

ಶ್ರೀ ಭಗವಂತನು ಹೇಳಿದನು :—

೧. ಅರ್ಜುನ ನೀನು ಕೊಲ್ಲುವನಲ್ಲ. ನೀನು ನಿನ್ನಲ್ಲಿರುವ ಅಭಿಮಾನ ವೆಂಬ ಮಲವನ್ನು ವಿಸರ್ಜಿಸು. ಮುಪ್ಪು. ಮರಣಗಳು ಇಲ್ಲದೆ ಶಾಶ್ವತನಾಗಿ ರುವ ಆತ್ಮನೇ ನೀನು.

೨. ಯಾವನಿಗೆ ನಾನು ಮಾಡಿದೆನೆಂಬ ಅಭಿಮಾನವು ಇಲ್ಲವೋ, ಯಾವನ ಬುದ್ಧಿಯಲ್ಲಿ ಆದ ಕಾರ್ಯಗಳು ವಾಸನೆಗಳಾಗಿ ನಿಂತಿರುವುದಿಲ್ಲವೋ, ಅವನು ಈ ಲೋಕ ಲೋಕಗಳನ್ನೆಲ್ಲ ಧ್ವಂಸ ಮಾಡಿದರೂ ಅವನು ಕೊಂದವನಲ್ಲ; ಅವನಿಗೆ ಆ ಕರ್ಮವು ಬಂಧಕವಾಗುವುದಿಲ್ಲ.

(ಯಾವನಾದರೂ ರಾಗದ್ವೇಷವಶನಾಗಿ ಒಬ್ಬನನ್ನು ಕೊಂದರೆ ಸರಕಾರವು ಅವನನ್ನು ಗಲ್ಲಿಗೇರಿಸುವುದು. ಅದೇ ಸೆರ್ಷನ್ ಜಡ್ಜಿಯು ಎಷ್ಟೋ ಜನರನ್ನು ಗಲ್ಲಿಗೆ ಹಾಕಿಸಿದರೂ ಅವನಿಗೆ ಮರಣದಂಡನೆಯಿಲ್ಲ. ಏಕೆಂದರೆ ಜಡ್ಜಿಯು ರಾಗದ್ವೇಷವಶನಾಗಿಲ್ಲ. ಹಾಗೆಯೇ ಇದು.)

ಯೈವ ಸಂಜಾಯತೇ ಸಂವಿದಂತಃ ಸೈವಾನುಭೂಯತೇ ।
ಅಯಂ ಸೋಽಹಮಿದಂ ತನ್ಮ ಇತ್ಯಂತಃ ಸಂವಿದಂ ತ್ಯಜ ॥ ೩ ॥

ಅನಯೈವ ಚ ಯುಕ್ತೋಽಸ್ಮಿ ನಷ್ಟೋಽಸ್ಮೀತಿ ಚ ಭಾರತ ।
ಅಭಿತಃ ಸುಖದುಃಖಾಭ್ಯಾಮವಶಃ ಪರಿತಪ್ಯಸೇ ॥ ೪ ॥

ಸ್ವಾತ್ಮಾಂಶೈಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಭಾಗಶಃ ।
ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥ ೫ ॥

ಚಕ್ಷುಃ ಪಶ್ಯತು ಕರ್ಣಶ್ಚ ಶೃಣೋತು ತ್ವಕ್ಸ್ಪೃಶತ್ವಿದಂ ।
ರಸನಾ ಚ ರಸಂ ಯಾತು ಕಾತ್ರ ಕೋಽಹಮಿತಿ ಸ್ಥಿತಿಃ ॥ ೬ ॥

---

೩. ಯಾವ ಭಾವವನ್ನಾಶ್ರಯಿಸಿ ಸಂವಿತ್ತು ಚಿತ್ತದಲ್ಲಿ ಹುಟ್ಟುವುದೋ ಅದೇ ಹೊರಗೆ ಇವನು, ಅವನು, ನಾನು, ಇದು, ಅದು, ನನ್ನದು ಎಂದು ಅನುಭವಕ್ಕೆ ಬರುವುದು. ಆದರಿಂದ ಆ ಅಂತಸ್ಸಂವಿತ್ತನ್ನು ವಿಸರ್ಜಿಸು.

(ಸಂವಿತ್ ಬುದ್ಧಿವೃತ್ತಿಃ ದೇಹಾದ್ಯಭಿಮಾನರೂಪಾ ಅನ್ಯಾದ್ಯಶೀವಾ । ಅಯಂ ಕಾರ್ಯಕರಣಸಂಘಾತಃ, ಸ ಹಂತಾ ಅಹಂ । ಇದಂ ಏತದ್ದೇಹಾದಿ ಸಂಬಂಧಿ ತದ್ಬಂಧ್ವಾದಿ । ಮೇ ಮಮ । ಇತ್ಯೇವಂ ಸಂವಿದಂ ಭ್ರಾಂತಿವೃತ್ತಿಂ ತ್ಯಜ —ತಾ. ಪ್ರ.)

೪. ಎಲೈ ಅರ್ಜುನನೆ, ಈ ಸಂವಿತ್ ಸಂಯೋಗದಿಂದಲೇ 'ನನಗೆ ಬಂತು, ನನಗೆ ಹೋಯಿತು', ಎಂದು ಸುತ್ತಮುತ್ತಲಿನ ಸುಖದುಃಖಗಳಿಗೆ ವಶನಾಗಿ ಪರಿತಾಪಪಡುವೆ.

೫. ದೇಹೇಂದ್ರಿಯಾದಿಗಳಿಂದ ಆಗುವ ಕರ್ಮಗಳನ್ನೆಲ್ಲ, ಅಹಂಕಾರ ವಿಮೂಢಾತ್ಮನು ನಾನು ಮಾಡಿದೆನು ಎಂದುಕೊಳ್ಳುವೆನು.

(ಗೀತೆಯ ಕ್ಷೇತ್ರ ಕ್ಷೇತ್ರಜ್ಞರನ್ನು ಇಲ್ಲಿ ಚಿಂತಿಸಿ. ವಿಕಾರವುಳ್ಳ ಅದುದೆಲ್ಲ ಕ್ಷೇತ್ರ : ನಿರ್ವಿಕಾರಿಯು ಕ್ಷೇತ್ರಜ್ಞ.)

೬. ಕಣ್ಣು ನೋಡಲಿ, ಕಿವಿಯು ಕೇಳಲಿ, ಮೈಯು ಮುಟ್ಟಲಿ, ನಾಲಿ

ಕಲನಾಕರ್ಮಣಿ ರತೇ ಮನಸ್ಯಪಿ ಮಹಾತ್ಮನಃ ।
ನ ಕಶ್ಚಿದತ್ರಾಹಮಿತಿ ಕ್ಲೇಶಭಾಗೇಕ ಏವ ತೇ ॥ ೭ ॥

ಬಹುಭಿಃ ಸಮವಾಯೇನ ಯತ್ಕೃತಂ ತತ್ರ ಭಾರತ ।
ಏಕೋಽಭಿಮಾನದುಃಖೇನ ಹಾಸಾಯೈವ ಹಿ ಗೃಹ್ಯತೇ ॥ ೮ ॥

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ ॥ ೯ ॥

ಗೆಯು ಸವಿಯಲಿ, ಇದರಲ್ಲಿ ನಾನು ಎನ್ನುವುದು ಯಾವುದು ಎಂಬುದು ಮಾತ್ರ ತಿಳಿದಿರಲಿ.

(ಅತ್ರ ಅಸ್ಮಿನ್ ಚಕ್ಷುರಾದಿ ಕರಣಕಾರ್ಯ ಸಂಘಾತೇ ಅಹಂ ಕಃ ನ ಕಶ್ಚಿದಿತಿ। ಅಹಮಿತಿ ಸ್ಥಿತಿಃ ಕಾ । ನ ಮುಕ್ತಾ ಇತ್ಯರ್ಥಃ —ತಾ. ಪ್ರ.)

೭. ಅಂತಃಕರಣವು ತನ್ನ ಧರ್ಮವಾದ ಸಂಕಲ್ಪ ವಿಕಲ್ಪಾದಿಗಳಲ್ಲಿ ಒದ್ದಾಡುತ್ತಿರುವಾಗ, ಮಹಾ ಆತ್ಮನಾದ ನೀನು ಅವುಗಳಲ್ಲಿ ಯಾವುದನ್ನು ನಾನು ಎಂದುಕೊಳ್ಳುವೆ ? ನಿನ್ನ ಯಾವ ಭಾಗವು ಅಲ್ಲಿ ಸೇರಿಕೊಂಡು ಕ್ಲೇಶಕ್ಕೆ ವಶವಾಗಿರುವುದು ಹೇಳು ?

೮. ಅನೇಕರು ಸೇರಿಕೊಂಡು ಮಾಡಿರುವ ಕೆಲಸವನ್ನು, ಕುರಿತು, ಅರ್ಜುನ, ಯಾವನಾದರೊಬ್ಬನು ತನ್ನದೆಂದು ಅಭಿಮಾನವನ್ನು ವಹಿಸಿ ದುಃಖಪಟ್ಟರೆ, ಅವನು ಹಾಸ್ಯಕ್ಕೆ ಗುರಿಯಾಗುವನಲ್ಲವೆ ?

೯. ಕಾಯದಿಂದಲೂ ಮನಸ್ಸಿನಿಂದಲೂ ಬುದ್ಧಿಯಿಂದಲೂ, ಕೇವಲಗಳಾದ ಇಂದ್ರಿಯಗಳಿಂದಲೂ ಯೋಗಿಗಳು ಕರ್ಮ ಮಾಡುವರು. ಅವರು ಮಾಡುವುದು ಚಿತ್ತ ಶುದ್ಧಿಗಾಗಿ: ಅವರಿಗೆ ಮಾಡುವ ಕರ್ಮದಲ್ಲಿ ಆಸಕ್ತಿಯಿರುವುದಿಲ್ಲ.

ಅಹಂತ್ವವಿಷಚೂರ್ಣೇನ ಯೇಷಾಂ ಕಾಯೋ ನ ಮಾರಿತಃ ।
ಕುರ್ವಂತೋಽಪಿ ಹರಂತೋಽಪಿ ನ ಚ ತೇ ನಿರ್ವಿಷೂಚಿಕಾಃ ॥ ೧೦ ॥

ನ ಕ್ವಚಿದ್ರಾಜತೇ ಕಾಯೋ ಮಮತಾಮೇಧ್ಯದೂಷಿತಃ ।
ಪ್ರಾಜ್ಞೋಽಪ್ಯತಿಬಹುಜ್ಞೋಽಪಿ ದುಃಶೀಲ ಇವ ಮಾನವಃ ॥ ೧೧ ॥

ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ।
ಯಃ ಸ ಕಾರ್ಯಮಕಾರ್ಯಂ ವಾ ಕುರ್ವನ್ನಪಿ ನ ಲಿಪ್ಯತೇ ॥ ೧೨ ॥

ಇದಂ ಚ ತೇ ಪಾಂಡುಸುತ ಸ್ವಕರ್ಮ ಕ್ಷಾತ್ರಮುತ್ತಮಂ ।
ಅಪಿ ಕ್ರೂರಮತಿಶ್ರೇಯಃ ಸುಖಾಯೈವೋದಯಾಯ ಚ ॥ ೧೩ ॥

---

೧೦. ಅಹಂಕಾರವೆಂಬ ವಿಷ ಚೂರ್ಣದಿಂದ ಯಾರ ದೇಹವು ಸತ್ತಿಲ್ಲವೋ ಅಂತಹವರು ರಾಗದ್ವೇಷಾದಿಗಳಿಲ್ಲದವರು. ಅಂಥವರು ಕರ್ಮಕಾರಿಗಳಾಗಿ ಫಲ ಭೋಕ್ತೃಗಳಾಗಿ ಕಂಡರೂ ಅವರು ಕರ್ತೃಗಳೂ ಅಲ್ಲ; ಭೋಕ್ತೃಗಳೂ ಅಲ್ಲ.

೧೧. ಪ್ರಾಜ್ಞನೂ ಅತಿಬಹುಜ್ಞನೂ ಆಗಿದ್ದರೂ ಮನುಷ್ಯನು ದುಶ್ಶೀಲ ನಾಗಿದ್ದರೆ ಹೇಗೆ ಅಪ್ರಯೋಜಕನಾಗುವನೋ ಹಾಗೆಯೇ ಮಮತಾ ಎಂಬ ಅಮೇಧ್ಯದಿಂದ ದೂಷಿತವಾಗಿರುವ ಜನ್ಮವು ಯಾವಾಗಲೂ ಶೋಭಿಸುವುದಿಲ್ಲ.

೧೨. ನಿರ್ಮಮನೂ ನಿರಹಂಕಾರನೂ ಸುಖದುಃಖಗಳಲ್ಲಿ ಹೆಚ್ಚದೆ ತಗ್ಗದೆ ಎಲ್ಲವನ್ನೂ ಕ್ಷಮಿಸುವವನು ಯಾವನೋ ಅವನು ಕಾರ್ಯವನ್ನು ಮಾಡಲಿ, ಅಕಾರ್ಯ ವನ್ನು ಮಾಡಲಿ, ಅವನಿಗೆ ಕರ್ಮ ಲೇಪವಿರುವುದಿಲ್ಲ.

೧೩. ಈಗ ನಿನಗೆ ಒದಗಿರುವ ಈ ಯುದ್ಧವು ಕ್ಷತ್ರಿಯನಿಗೆ ಸ್ವಕರ್ಮವಾ ದುದು: ಅದರಿಂದ ಉತ್ತಮವೇ ಆದುದು. ಇದೂ ಕ್ರೂರವಾದರೂ, ನಿನಗೆ ಅತಿಶಯವಾದ ಶ್ರೇಯಸ್ಸನ್ನು ಕೊಡುವುದು. ಸುಖವನ್ನು ಕೊಡುವುದು. ಉದ್ಧಾರ ಮಾಡುವುದು.

ಅಪಿ ಕುತ್ಸಿತ ಮಪ್ಯನ್ಯ ದಪ್ಯಧರ್ಮಮುಕ್ರಮಂ ।
ಶ್ರೇಷ್ಠಂ ತೇ ಸ್ವಂ ಯಥಾ ಕರ್ಮ ತಥೇಹಾಮೃತವಾನ್ಭವ ॥ ೧೪ ॥

ಮೂರ್ಖಸ್ಯಾಪಿ ಸ್ವಕರ್ಮೈವ ಶ್ರೇಯಸೇ ಕಿಮು ಸನ್ಮತೇಃ ।
ಮತಿರ್ಗಲದಹಂಕಾರಾ ಪತಿತಾಪಿ ನ ಲಿಪ್ಯತೇ ॥ ೧೫ ॥

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ನಿಃಸಂಗಸ್ತ್ವಂ ಯಥಾ ಪ್ರಾಪ್ತಕರ್ಮವಾನ್ನ ನಿಬಧ್ಯಸೇ ॥ ೧೬ ॥

---

೧೪. ಕುತ್ಸಿತವಾದರೂ, ಶಾಸ್ತ್ರಾಂತರ ವಿರುದ್ಧವಾದರೂ ಅಧರ್ಮವು ಅದರಲ್ಲಿ ಬೆರೆತಿದ್ದರೂ, ತನ್ನ ಸ್ವಕರ್ಮವು ತನಗೆ ಶ್ರೇಷ್ಠವೇ ಆದುದು. ಅದರಿಂದ ಈ ಯುದ್ಧ ಮಾಡಿ ಅಮೃತತ್ವವನ್ನು ಪಡೆ.

[ಪ್ರವೃತ್ತಿ ಮಾರ್ಗದಲ್ಲಿ ಪಡೆವ ಉತ್ತಮೋತ್ತಮ ಗತಿಯು ಅಮೃತತ್ವವು.]

೧೫. ಮೂರ್ಖನಿಗೂ ಕೂಡ ಸ್ವಕರ್ಮದಿಂದ ಶ್ರೇಯಸ್ಸು ಬಂದೇ ಬರುವುದು ಎಂದಮೇಲೆ ಬುದ್ಧಿವಂತನ ವಿಚಾರವಾಗಿ ಹೇಳುವುದೇನು ? ಅಹಂಕಾರ ವನ್ನು ವಿಸರ್ಜನ ಮಾಡಿದ ಮತಿಯು ಒಂದು ವೇಳೆ ಪತಿತವೇ ಆದರೂ [ಜಾರಿದರೂ] ಅದಕ್ಕೆ ಪಾಪಲೇಪವಾಗುವುದಿಲ್ಲ.

೧೬. ಯೋಗವನ್ನು ಆಶ್ರಯಿಸಿ ಕರ್ಮಗಳನ್ನು ಮಾಡು. ಸಂಗವನ್ನು (ಫಲಾಸಕ್ತಿಯನ್ನು) ಬಿಡು. ಎಲೈ ಧನಂಜಯನೆ, ನಿಸ್ಸಂಗನಾಗಿ ಇದ್ದು ಕೊಂಡು, ಮಾಡಬೇಕಾಗಿ ಬಂದ ಕರ್ಮವನ್ನು ಮಾಡಿಕೊಂಡು ಇದ್ದರೆ, ನಿನಗೆ ಬಂಧನವಿರುವುದಿಲ್ಲ.

(ಕಿಂಚರಾಜ್ಯಲಾಭಾದಿ ಲೋಭ ಪ್ರಯುಕ್ತೇ ಯುದ್ಧೇ "ಲೋಭ ಮೂಲಾನಿ ಪಾಪಾನಿ ರಸಮೂಲಾಸ್ತಥಾಽಮಯಾಃ'' ಇತಿ ನ್ಯಾಯೇನ ಕದಾಚಿದಧರ್ಮ ಪ್ರಸಕ್ತಿಃ ಸ್ಯಾತ್ ಫಲಾತ್ ! ಸಂಗತ್ಯಾಗೇನ ಸಿದ್ಧ್ಯಸಿದ್ಧಿ ಸಮತಾಲಕ್ಷಣ ಯೋಗ ಸ್ಥಸ್ಯ ತು ತತ್ಪ್ರಸಕ್ತಿರಪಿ ನಾಸ್ತೀತಿ ತಾಂ ಯೋಗಸ್ಥಿತಿಮಾದಿಶತಿ ! —ತಾ. ಪ್ರ.)

ಶಾಂತಬ್ರಹ್ಮವಪುರ್ಭೂತ್ವಾ ಕರ್ಮ ಬ್ರಹ್ಮಮಯಂ ಕುರು ।
ಬ್ರಹ್ಮಾರ್ಪಣಸಮಾಚಾರೋ ಬ್ರಹ್ಮೈವ ಭವಸಿ ಕ್ಷಣಾತ್ ॥ ೧೭ ॥

ಈಶ್ವರಾರ್ಪಿತಸರ್ವಾರ್ಥ ಈಶ್ವರಾತ್ಮಾ ನಿರಾಮಯಃ ।
ಈಶ್ವರಃ ಸರ್ವಭೂತಾತ್ಮಾ ಭವ ಭೂಷಿತಭೂತಲಃ ॥ ೧೮ ॥

ಸಂನ್ಯಸ್ತಸರ್ವಸಂಕಲ್ಪಃ ಸಮಃ ಶಾಂತಮನಾ ಮುನಿಃ ।
ಸಂನ್ಯಾಸಯೋಗಯುಕ್ತಾತ್ಮಾ ಕುರ್ವನ್ಮುಕ್ತಮತಿರ್ಭವ ॥ ೧೯ ॥

---

೧೭. ನೀನು ಶಾಂತನಾಗಿ ಬ್ರಹ್ಮಾತ್ಮನಾಗಿ, ಮಾಡುವ ಕರ್ಮವನ್ನೆಲ್ಲ ಬ್ರಹ್ಮಮಯವಾಗಿ ಮಾಡು. ಬ್ರಹ್ಮಾರ್ಪಣ ಮಾಡುವ ಸಂ+ಆಚಾರವುಳ್ಳವನಾದರೆ, ನೀನೂ ಒಂದೇ ಕ್ಷಣದಲ್ಲಿ ಬ್ರಹ್ಮನಾಗುವೆ.

೧೮. ನಿನ್ನ ಸರ್ವಾರ್ಥಗಳನ್ನೂ ಈಶ್ವರನಿಗೆ ಅರ್ಪಿಸಿ, ಈಶ್ವರನನ್ನು ಹೃದಯದಲ್ಲಿಟ್ಟುಕೊಂಡು, ಯಾವುದೊಂದು ಯೋಚನೆಯೂ ಇಲ್ಲದೆ, ಸರ್ವ ಭೂತಗಳನ್ನೂ ತನ್ನಲ್ಲಿಟ್ಟುಕೊಂಡಿರುವ ಈಶ್ವರನಾಗಿ, ಭೂತಲಕ್ಕೆಲ್ಲ ಭೂಷಣನಾಗು.

[ನಿರ್ವಿಶೇಷ ಬ್ರಹ್ಮತತ್ವಜ್ಞಾನೇನ ತದಸಾಮರ್ಥ್ಯೇ ಸಗುಣೇಶ್ವರಾರ್ಪಣಬುದ್ಧ್ಯಾವಾ ಕರ್ಮಕುರು; ತತೋಽಪಿ ನ ಕರ್ಮಬಂಧ ಇತ್ಯಾಹ —ತಾ. ಪ್ರ].

೧೯. ಸರ್ವಸಂಕಲ್ಪಗಳನ್ನೂ ಸಂನ್ಯಾಸ ಮಾಡು; ಯಾರಲ್ಲಿಯೂ ಮೈತ್ರೀ ದ್ವೇಷಗಳಿಲ್ಲದ ಸಮನಾಗು; ಶಾಂತಮನಸ್ಕನಾಗು: ಕಾರಣವಿಲ್ಲದೆ ಮಾತನಾಡುವುದನ್ನು ಬಿಟ್ಟು ಮೌನಿಯಾಗು: (ಕಾಮ್ಯಕರ್ಮಗಳನ್ನು ಮಾಡುವುದಿಲ್ಲವೆಂಬ) ಸನ್ಯಾಸ ಯೋಗವನ್ನು ಅಂಗೀಕರಿಸಿ, ಕರ್ಮ ಮಾಡುತ್ತ ಜೀವನ್ಮುಕ್ತಭಾವವನ್ನು ಪಡೆ.

ಅರ್ಜುನ ಉವಾಚ:—

ಸಂಗತ್ಯಾಗಸ್ಯ ಭಗವಂಸ್ತಥಾ ಬ್ರಹ್ಮಾರ್ಪಣಸ್ಯ ಚ ।
ಈಶ್ವರಾರ್ಪಣರೂಪಸ್ಯ ಸಂನ್ಯಾಸಸ್ಯ ಚ ಸರ್ವಶಃ ॥ ೨೦ ॥

ತಥಾ ಜ್ಞಾನಸ್ಯ ಯೋಗಸ್ಯ ವಿಭಾಗಃ ಕೀದೃಶಃ ಪ್ರಭೋ ।
ಕ್ರಮೇಣ ಕಥಯೈತನ್ಮೇ ಮಹಾಮೋಹನಿವೃತ್ತಯೇ ॥ ೨೧ ॥

ಶ್ರೀ ಭಗವಾನು ಉವಾಚ:—

ಸರ್ವಸಂಕಲ್ಪ ಸಂಶಾಂತೌ ಪ್ರಶಾಂತಘನವಾಸನಂ ।
ನ ಕಿಂಚಿದ್ಭಾವನಾಕಾರಂ ಯತ್ತದ್ಬ್ರಹ್ಮ ಪರಂ ವಿದುಃ ॥ ೨೨ ॥

ತದುದ್ಯೋಗಂ ವಿದುರ್ಜ್ಞಾನಂ ಯೋಗಂ ಚ ಕೃತಬುದ್ಧಯಃ ।
ಬ್ರಹ್ಮ ಸರ್ವಂ ಜಗದಹಂ ಚೇತಿ ಬ್ರಹ್ಮಾರ್ಪಣಂ ವಿದುಃ ॥ ೨೩ ॥

ಅರ್ಜುನನು ಕೇಳಿದನು:-

೨೦-೨೧. ಎಲೈ ಭಗವಂತನೆ, ಸಂಗತ್ಯಾಗವೆಂದರೇನು ? ಬ್ರಹ್ಮಾರ್ಪಣವೆಂದರೇನು ? ಈಶ್ವರಾರ್ಪಣವೆನ್ನುವುದೇನು ? ಸರ್ವವನ್ನೂ ಸಂನ್ಯಾಸ ಮಾಡುವುದು ಎಂದರೇನು ? ಜ್ಞಾನವಿದು, ಯೋಗವಿದು, ಎಂದು ಭಾಗಮಾಡುವುದು ಹೇಗೆ ? ನನಗೆ ಬಂದಿರುವ ಮಹಾ ಮೋಹವು ನಿವೃತ್ತಿಯಾಗುವಂತೆ ಇದೆಲ್ಲವನ್ನೂ ಕ್ರಮವಾಗಿ ಹೇಳು.

ಶ್ರೀ ಭಗವಂತನು ಹೇಳಿದನು :—

೨೨. ಸಮಸ್ತ ಸಂಕಲ್ಪಗಳೂ ಚೆನ್ನಾಗಿ ಶಾಂತವಾಗಲು, ಘನವಾಗಿದ್ದ ವಾಸನೆಗಳೆಲ್ಲವೂ ಅಡಗಿಹೋಗಿ ಯಾವ ಭಾವನವೂ ಆಕಾರವೂ ಇಲ್ಲದೆ ಉಳಿಯುವುದು ಯಾವುದೋ ಅದೇ ಪರಮವಾದ ಬ್ರಹ್ಮವೆಂದು ತಿಳಿ.

(ಆತ್ಯಂತಿಕ ಸಂಗತ್ಯಾಗಸ್ಯ ತತ್ವ ಪರಿಜ್ಞಾನಮಂತರೇಣ ಅಯೋಗಾತ್, ಬ್ರಹ್ಮಾತ್ಮ ತತ್ತ್ವಮೇವ ಭಗವಾನ್ ಪ್ರಥಮಂ ಲಕ್ಷಣೇನ ನಿರ್ದಿಶತಿ-ಸರ್ವೇತಿ । ತಥಾಚ ನಿರ್ವಿಕಲ್ಪ ಸಮಾಧಿ ಪರಿಪಾಕ ಸಾಕ್ಷಾತ್ಕಾರಾನುಭವಸಿದ್ಧಂ ನಿಷ್ಪ್ರಪಂಚಂ ಪ್ರತ್ಯಾಗಾತ್ಮ ರೂಪಮೇವ ಬ್ರಹ್ಮ ಇತ್ಯರ್ಥಃ —ತಾ. ಪ್ರ.)

೨೩. ಬ್ರಹ್ಮಾಕಾರವಾಗಿರುವ ವೃತ್ತಿಯನ್ನುಳ್ಳುದೇ ಜ್ಞಾನವೆನ್ನುವರು.

ಅಂತಃ ಶೂನ್ಯಂ ಬಹಿಃಶೂನ್ಯಂ ಪಾಷಾಣಹೃದಯೋಪಮಂ ।
ಶಾಂತಮಾಕಾಶಕೋಶಾಚ್ಛಂ ನ ದೃಶ್ಯಂ ನ ದೃಶಃ ಪರಂ || ೨೪ ||

ತತ ಈಷದ್ಯದುತ್ಥಾನ ಮೀಷದನ್ಯತಯೋದಿತಂ ।
ಸ ಜಗತ್ಪ್ರತಿಭಾಸೋಯ ಮಾಕಾಶಮಿವ ಶೂನ್ಯತಾ || ೨೫ ||

ಭಾವೋಹಮಿತಿ ಕೋಪ್ಯೇಷ ಪ್ರತ್ಯೇಕಮುದಿತಶ್ಚಿತೇಃ ।
ಕೋಟಿ ಕೋಟ್ಯಂಶಕಲಿತಃ ಕ ಇವೈನಂ ಪ್ರತಿಗ್ರಹಃ || ೨೬ ||

(ಇದರ ಫಲವು ಅಜ್ಞಾನ ನಿವೃತ್ತಿಯು.) ಆ ವೃತ್ತಿಯು ಇರುವಂತೆ ಮಾಡುವ ಪ್ರಯತ್ನವೇ ಯೋಗವು. ಜಗತ್ತು ಮೊದಲಾಗಿ ನಾನು ಎಂಬುದು ಕಡೆಯಾಗಿರುವ ಸರ್ವವೂ ಬ್ರಹ್ಮವು ಎನ್ನುವ ನಿಶ್ಚಯವೇ ಬ್ರಹ್ಮಾರ್ಪಣವು.

(ಬ್ರಹ್ಮಣಿ ಅಭಿಮಂತವ್ಯಸ್ಯ ಜಗತಃ, ತದಭಿಮಂತುರಹಂಕಾರಸ್ಯ ಚ ಬಾಧಃ ಮುಖ್ಯಂ ಬ್ರಹ್ಮಾರ್ಪಣಂ-ಇತ್ಯಾಹ —ತಾ. ಪ್ರ.)

೨೪. ಅಂತಶ್ಶೂನ್ಯವಾದುದು ಆ ಬ್ರಹ್ಮವು. ಅದು ಬಹಿಃ ಶೂನ್ಯವೂ ಹೌದು. ಶಿಲಾ ಹೃದಯದಂತೆ ಅನ್ಯವೇನೂ ಇಲ್ಲದ್ದು. ಯಾವ ವಿಕಾರವೂ ಇಲ್ಲದೆ ಶಾಂತವಾಗಿರುವುದು ಅದು. ಮೂಟೆಯಾಗಿರುವ ಆಕಾಶದಂತೆ ನಿರ್ಮಲವಾಗಿರುವುದು. ಅದು ದೃಶ್ಯವಲ್ಲ, ದೃಕ್ಕಿಗಿಂತ ಆಚೆಯದು.

(ಬ್ರಹ್ಮಣಿ ಜಗದಹಂಕಾರ ಬಾಧೋಪಪತ್ತಯೇ ತತ್ರ ಅಧ್ಯಸ್ತತ್ವಂ ವಕ್ತುಂ ಬ್ರಹ್ಮಸ್ವರೂಪಮಾಹ–ಅಂತಶ್ಶೂನ್ಯಮಿತ್ಯಾದಿನಾ । ನ ದೃಶ್ಯಮಿತಿ । ಸರ್ವದೃಶ್ಯ ನಿಷೇಧೇ ದೃಶೋಽಪಿ ದೃಶ್ಯತ್ವಾನ್ನಿಷೇಧಃ ಕಿಂ ನ ಸ್ಯಾದಿತಿ ಆಶಂಕ್ಯಾಹ-ನ, ದೃಶಃ ಪರಮಿತಿ । ದೃಶೋ ದೃಶ್ಯತಾ ನಿಷೇಧೋ ವಾ ತದಾ ಸ್ಯಾದ್ಯದಿ ದೃಶಃ ಪರಂ ದೃಗಂತರಂ ಸ್ಯಾತ್ ನತು ತದಸ್ತೀತ್ಯರ್ಥಃ || –ತಾ. ಪ್ರ.

೨೫. ಆ ಬ್ರಹ್ಮದಿಂದ ಎಲ್ಲೋ ಏನೋ ಬೇರೆಯಾದಂತಾಗಿ ತೋರುವುದು ಯಾವುದುಂಟೋ ಅದೇ ಜಗತ್ತಿನ ಪ್ರತಿಭಾಸವೆನ್ನುವರು. ಇದು ಆಕಾಶದಂತೆ ಇರುವ ಶೂನ್ಯತೆಯು.

೨೬. ಆ ಚಿತ್ತಿನಿಂದ ಅಹಂ ಎಂಬ ಭಾವವೊಂದು ಪ್ರತ್ಯೇಕವಾಗಿ

ಅಪೃಥಗ್ಭೂತ ಏವೈಷ ಪೃಥಗ್ಭೂತ ಇವ ಸ್ಥಿತಃ ।
ಪೃಥಕ್ತ್ವಂ ಹಿ ನಪರ್ಯಂತೋ ನಾಹಮಿತ್ಯವಗಚ್ಛತಿ ॥ ೨೭ ॥

ಯಥೇಹಾಹಂ ತಥೇಹಾಸ್ತಿ ಘಟಾದೀಹಾಪಿ ಮರ್ಕಟಃ ।
ಖಮೀಹೈವಂ ತಥಾಂಭೋಧಿಃ ಕಿಮಹಂತಾಂಪ್ರತಿ ಗ್ರಹಃ ॥ ೨೮ ॥

ತೋರುವುದು. ಅದು ಚಿತ್ತಿನಲ್ಲಿ ಒಂದು ಕೋಟಿಯಲ್ಲಿ ಕೋಟಿ ಅಂಶವು. ಹೀಗಿರಲು ಇದನ್ನು ಅಂಗೀಕರಿಸುವುದೆಂತು.?

೨೭. ಇದು ವಾಸ್ತವವಾಗಿ ಚಿತ್ತು (ಬ್ರಹ್ಮ) ನಿಂದ ಬೇರೆಯಲ್ಲದಿದ್ದರೂ ಬೇರೆಯಾದಂತೆ ಕಾಣುವುದು. ಪೃಥಕ್ತ್ವವೂ ಪರ್ಯಂತ (ಪರಿಚ್ಛೇದ-ಅಂಚು ಕಟ್ಟಿ ಬೇರೆ ಮಾಡುವಿಕೆ)ವೂ ಬ್ರಹ್ಮದಲ್ಲಿ ಇಲ್ಲದಿದ್ದರೂ ನಾನು ಬೇರೆ, ಎಂದು ತಿಳಿದುಕೊಳ್ಳುವುದು.

(ಏಷಃ ಅಹಮಿತಿಭಾವಃ ಸ್ವಾಧಿಷ್ಠಾನಾತ್ ಅಪೃಥಗ್ಭೂತ ಏವ । ಹಿ, ಯಸ್ಮಾತ್ ಹೇತೋಃ ಪೃಥಕ್ತ್ವಂ ಪರ್ಯಂತಃ ಪರಿಚ್ಛೇದಃ ಸ ಚ ಬ್ರಹ್ಮಣಿ ನ ಅಸಂಶ್ಚ ನಾಹಮಿತಿ ಕಶ್ಚಿದವಗಚ್ಛತಿ । ತಥಾಚ ಅವಗಂತೃತ್ವೇನ ಪೃಥಕ್ತ್ವೋಪಪತ್ತಿಃ । ಪೃಥಕ್ತ್ವೇನ ಚ ಅವಗಂತೃತ್ವೋಪಪತ್ತಿರಿತ್ಯವಶ್ಯಮನ್ಯತರಸ್ಮಿನ್ ಹೇಯೇ ನಿರುಪಪತ್ತಿಕಂ ಪೃಥಕ್ತ್ವಮೇವ ಹೇಯ ಇತಿಭಾವಃ । ತಾ. ಪ್ರ.)

೨೮. ಹೀಗೆ ಅಹಂ ಎಂಬುದು ಹೇಗೆ ಕೇವಲ (ಚಿತ್ತಿನ) ಈಹಾ (ಭಾವನೆ-ಸಂಕಲ್ಪ) ಮಾತ್ರವೋ, ಹಾಗೆಯೇ ಘಟ, ಮರ್ಕಟ, ಮೊದಲಾದವೂ ಈಹಾ ಮಾತ್ರವೇ ! ಆಕಾಶವೂ ಈಹಾ ಮಾತ್ರವೇ ! ಅಂಭೋಧಿಯೂ ಈಹಾ ಮಾತ್ರವೇ ! ಹೀಗಿರಲು ಈ ಅಹಂತಾವೊಂದುಂಟು ಎಂದು ಅಂಗೀಕರಿಸುವುದೆಂತು ? (ಅಹಂ ಎಂಬುದು ಒಂದುಂಟು ಎಂಬ ಹಟವೇಕೆ ?)

[ಯಥಾ ಅಹಮೀಹಾ ಅಹಂ ಭಾವೋ ನ ಪೃಥಗಸ್ತಿ ತಥಾ ಪ್ರತೀಚಿ ಘಟಾದಿ ಮಮತಾ ಈಹಾ ಲಕ್ಷಣಃ । ಮರ್ಕಟೋಪಿ ಪೃಥಜ್ ನಾಸ್ತಿ ತಥಾಚ ದ್ವಿವಿಧಾಪೀಹಾ ಅಂಬೋಧಿರಿವ ಪೂರ್ಣಂ ಸ್ವಂ ಆತ್ಮೈವ । ಇತಿ ನಾಹಂತೋ ಗ್ರಹೋಯುಕ್ತ ಇತ್ಯುಕ್ತಃ —ತಾ. ಪ್ರ.]

ವಿಕಲ್ಪಭೇದೇ ಸ್ಫುರಿತೇ ಸಂವಿತ್ಸಾರಮಯಾತ್ಮನಿ ।
ವೈಚಿತ್ರ್ಯೇಣ ವಿಚಿತ್ರೇಽಪಿ ಕಿ ಮೇಕತ್ವೇಽಪಿ ನೋ ಗ್ರಹಃ ॥ ೨೯ ॥

ಇತಿ ಜ್ಞಾತವಿಭಾಗಸ್ಯ ಬುದ್ಧೌ ತಸ್ಯ ಪರಿಕ್ಷಯಃ ।
ಕರ್ಮಣಾಂ ಯಃ ಫಲತ್ಯಾಗಸ್ತಂ ಸಂನ್ಯಾಸಂ ವಿದುರ್ಬುಧಾಃ ॥ ೩೦ ॥

ತ್ಯಾಗಃ ಸಂಕಲ್ಪಜಾಲಾನಾಮಸಂಸಂಗಃ ಸ ಕಥ್ಯತೇ ॥ ೩೧ ॥

(ತಾತ್ಪರ್ಯ ಪ್ರಕಾಶಕರ ಪಾಠ "ಸ್ವಮೀಹೈವಂ" ಎಂದು. ನಮ್ಮ ಪಾಠ "ಖಮೀ ಹೈವಂ" ಎಂದು.)

೨೯. ಸಂವಿತ್ತಿನ ಸಾರವೇ ತಾನಾಗಿರುವ ಬ್ರಹ್ಮದಲ್ಲಿ ವಿಕಲ್ಪದಿಂದ ಉಂಟಾದ ಭೇದವು ಸ್ಫುರಿಸಿ, ಚಿತ್ರವಿಚಿತ್ರವಾಗಿರುವುದನ್ನು ಅಂಗೀಕರಿಸಬೇಕು ಎನ್ನುವ ಪಕ್ಷದಲ್ಲಿ ಆ ಭೇದಗಳಿಗೆಲ್ಲ ಅಧಿಷ್ಠಾನವಾಗಿರುವ ಏಕತ್ವವನ್ನೇ ಅಂಗೀಕರಿಸಬಾರದೇಕೆ ?

(ಕಿಂಚ, ಅಹಂ ಮಮತಾದಿ ಸರ್ವ ವಿಕಲ್ಪ ಭೇದೇ ತತ್ತದ್ವಿಷಯ ವೈಚಿತ್ರ್ಯೇಣ ವಿಚಿತ್ರೇ ಸ್ಫುರಿತೇಽಪಿ, ತತ್ಸತ್ತಾಸ್ಫೂರ್ತಿ ನಿಮಿತ್ತೇ ಅವಸ್ಥಾತ್ರಯಾನುಗತೇ ಸಂವಿತ್ಸಾರ ಮಾತ್ರ ಸ್ವಭಾವೇ ಸರ್ವವಿಕಲ್ಪಾಗಮಾಪಾಯ ಸಾಕ್ಷಿಣಿ ಪ್ರತ್ಯಗಾತ್ಮನಿ ಏಕತ್ವಮಪಿ ಸ್ಫುರತ್ಯೇವ । ಏವಂ ಸತಿ ತತ್ರಾಪಿ ಆಗ್ರಹೋ । ಯುಕ್ತಃ ಸ ಕುತೋ ನೋ ನ ಕ್ರಿಯತೇ । ಇತ್ಯರ್ಥಃ । ತಾ. ಪ್ರ.)

೩೦. ಹೀಗೆ ಬ್ರಹ್ಮವಿದು, ಬ್ರಹ್ಮಾಭಾಸವಾದ ಜಗತ್ತಿದು ಎಂಬ ವಿಭಾಗವನ್ನು ಬಲ್ಲವನ ಬುದ್ಧಿಯಲ್ಲಿ ಆ ಜಗದ್ಭ್ರಮದ ಪರಿಕ್ಷಯವುಂಟಾಗುವುದು. ಆ ಪರಿಕ್ಷಯದ ಫಲವಾಗಿ ಕರ್ಮಫಲದಲ್ಲಿ ಆಸೆಯಿಲ್ಲದಾಗುವುದು. ಹಾಗೆ ಆದ ಕರ್ಮಫಲತ್ಯಾಗವೇ ತ್ಯಾಗವೆಂದು ಬಲ್ಲವರು ಹೇಳುವರು.

೩೧. ಸಂಕಲ್ಪ ತ್ಯಾಗ ಮಾಡುವುದೇ ಅಸಂಸಂಗ ಎನ್ನಿಸಿಕೊಳ್ಳುವುದು.

(ಕಾಮ್ಯಾನಾಂ ಕರ್ಮಣಾಂನ್ಯಾಸಂ ಸಂನ್ಯಾಸಂಕವಯೋವಿದುಃ । ಸರ್ವ ಕರ್ಮ ಫಲತ್ಯಾಗರಿತ್ಯಾಗಮಾಹುರ್ಮನೀಕ್ಷಿಣಃ ॥ ಗೀತಾ ಅ. ೧೮-೨.)

ಸಮಸ್ತಕಲನಾಜಾಲಸ್ಯೇಶ್ವರತ್ವೈಕಭಾವನಾ ।
ಗಲಿತದ್ವೈತ ನಿರ್ಭಾಸಮೇತದೇವೇಶ್ವರಾರ್ಪಣಂ । ॥ ೩೨ ॥

ಅಬೋಧವಶತೋ ಭೇದೋ ನಾಮ್ನೈವೈಷಾಂ ಚಿದಾತ್ಮನಿ ।
ಬೋಧಾತ್ಮಾ ಕಿಲ ಶಬ್ದಾರ್ಥೌ ಜಗದೇಕಂ ನ ಸಂಶಯಃ ॥ ೩೩ ॥

ಅಹಮಾಶಾ ಜಗದಹಂ ಸ್ವಮಹಂ ಕರ್ಮ ಚಾಪ್ಯಹಂ ।
ಕಾಲೋಹ ಮಹಮದ್ವೈತಂ ದ್ವೈತಂ ಚಾಹಮಹಂ ಜಗತ್ ॥ ೩೪ ॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥ ೩೫ ॥

---

೩೨. ಮನಸ್ಸಿನಲ್ಲಿ ಹುಟ್ಟುವ ಸಂಕಲ್ಪ ಜಾಲಗಳೂ ಈಶ್ವರನೇ ಎಂಬ ಏಕ ಭಾವನೆಯನ್ನು ವಹಿಸಿ, ದ್ವೈತಭಾವನೆಯನ್ನು ಕಳೆದುಕೊಳ್ಳುವುದು ಯಾವುದೋ ಅದೇ ಈಶ್ವರಾರ್ಪಣವು.

೩೩. ಅಜ್ಞಾನ ವಶವಾಗಿ ತೋರುವ ಭೇದವು ಚಿದಾತ್ಮನಲ್ಲಿ ಕೇವಲ ನಾಮಮಾತ್ರದಿಂದ ಇರುವುದು. ಜ್ಞಾನಿಯಾದವನಿಗೆ ಶಬ್ದಕ್ಕೂ ಅರ್ಥಕ್ಕೂ ಭೇದವಿಲ್ಲವಾಗಿ ಈ ಜಗತ್ತೂ ಇದಕ್ಕೆ ಅಧಿಷ್ಠಾನವಾಗಿರುವ ಬ್ರಹ್ಮವೂ ಏಕವೆನ್ನುವುದರಲ್ಲಿ ಸಂಶಯವಿಲ್ಲ.

೩೪. ದಿಕ್ಕುಗಳೂ ನಾನೇ, ಜಗತ್ತೂ ನಾನೇ, ಸ್ವಭಾವವೂ ನಾನೇ, ಕರ್ಮವೂ ನಾನೇ, ಕಾಲವೂ ನಾನೇ, ಅದ್ವೈತವೂ ನಾನೇ, ದ್ವೈತರೂಪವಾಗಿ ಕಾಣಿಸುತ್ತಿರುವ ಜಗತ್ತೂ ನಾನೇ !

೩೫. (ಅದರಿಂದ) ನನ್ನಲ್ಲಿ ಮನಸ್ಸಿಡು. ನನ್ನ ಭಕ್ತನಾಗು, ನನ್ನನ್ನು ಪೂಜೆ ಮಾಡು. ನನಗೆ ನಮಸ್ಕಾರ ಮಾಡು. ಹೀಗೆ ನಿನ್ನನ್ನು ನನಗೆ ಜೋಡಿಸಿಕೊಂಡು ಮತ್ಪರಾಯಣನಾದರೆ, ನನ್ನನ್ನು ಹೊಂದಲೇ ಹೊಂದುವೆ.

(ಅದ್ವೈತಂ ಪರಂ, ದ್ವೈತಮಪರಂರೂಪಂ, ತನ್ನಿಯಮ್ಯಂಜಗಚ್ಚಾಹಮೇವ। ಏವಂ ದ್ವಿರೂಪೇ ಮಯಿ ಅಧಿಕಾರತಾರತಮ್ಯೇನ ಮನೋ ಯಸ್ಯ ಸ ಮನ್ಮನಾಃ। ತಾದೃಶೇ ಮಯಿ ತಥೈವ ಭಕ್ತಃ ಶ್ರವಣಕೀರ್ತನಾದಿ ನವವಿಧ ಭಕ್ತಿಮಾರ್ಗ ಭವ–

ಅರ್ಜುನ ಉವಾಚ:—

ದ್ವೇ ರೂಪೇ ತವ ದೇವೇಶ ಪರಂ ಚಾಪರಮೇವ ಚ ।
ಕೀದೃಶಂ ತತ್ಕದಾರೂಪಂ ತಿಷ್ಠಾಮ್ಯಾಶ್ರಿತ್ಯ ಸಿದ್ಧಯೇ ॥ ೩೬ ॥

ಶ್ರೀ ಭಗವಾನ್ ಉವಾಚ :—

ಸಾಮಾನ್ಯಂ ಪರಮಂ ಚೈವ ದ್ವೇ ರೂಪೇ ವಿದ್ಧಿ ಮೇಽನಘ ।
ಪಾಣ್ಯಾದಿಯುಕ್ತಂ ಸಾಮಾನ್ಯಂ ಶಂಖಚಕ್ರ ಗದಾಧರಂ ॥ ೩೭ ॥

ಪರಂ ರೂಪಮನಾದ್ಯಂತಂ ಯನ್ಮಮೈಕಮನಾಮಯಂ ।
ಬ್ರಹ್ಮಾತ್ಮಪರಮಾತ್ಮಾದಿಶಬ್ದೇನೈತದುದೀರ್ಯತೇ ॥ ೩೮ ॥

ಏವಂ ಉಕ್ತ ಪ್ರಕಾರದ್ವಯೇನಾಪಿ ಯುಕ್ತ್ವಾ ಮಯಿ ಚಿತ್ತಂ ನಿವೇಶ್ಯ ಮಾಮೇವ ಆತ್ಮಾನಂ ಸ್ವಾತ್ಮಭೂತಮೇಷ್ಯಸಿ ಸಾಕ್ಷಾತ್ ಪರಂಪರಯಾ ಚ–ಪ್ರಾಪ್ಸ್ಯಸಿ ಇತ್ಯರ್ಥಃ —ತಾ. ಪ್ರ.)

ಅರ್ಜುನನು ಕೇಳಿದನು :—

೩೬. ಎಲೈ ದೇವೇಶ್ವರನೆ, ನಿನಗೆ ಪರ ಅಪರ ಎಂದು ಎರಡು ರೂಪಗಳು (ಎಂದು ಕೇಳಿರುವೆನು.) ಆ ರೂಪಗಳು ಹೇಗಿರುವುವು ? ಸಿದ್ಧ್ಯರ್ಥವಾಗಿ ಯಾವಾಗ ಯಾವ ರೂಪವನ್ನು ಆಶ್ರಯಿಸಬೇಕು ?

(ಏವ ಮುಕ್ತೋಽರ್ಜುನಃ ತೇ ದ್ವೇ ರೂಪೇ, ತದ್ಯುಕ್ತಿಯೋಗ್ಯಮಧಿಕಾರಂ, ಕಾಲ ವಿಭಾಗಂ ಚ, ಜಿಜ್ಞಾಸಮಾನಃ ಪೃಚ್ಛತಿ —ತಾ. ಪ್ರ.)

ಶ್ರೀ ಭಗವಂತನು ಹೇಳಿದನು :—

೩೭. ನನಗೆ ಸಾಮಾನ್ಯ, ಪರಮ, ಎಂದು ಎರಡು ರೂಪಗಳಿರುವುವು. ಎಲೆ ಪಾಪರಹಿತನೆ, ಕರಪಾದಾದಿ ಅಂಗಸಹಿತವಾದ ಶಂಖಚಕ್ರ ಗಧಾಧಾರಿಯಾದ ರೂಪವು ಸಾಮಾನ್ಯವು.

೩೮. ಆದಿ ಅಂತಗಳಿಲ್ಲದೆ ಏಕವಾಗಿ, ಅನಾಮಯವಾಗಿ, ಬ್ರಹ್ಮ, ಆತ್ಮ ಪರಮಾತ್ಮ, ಎಂಬ ಶಬ್ದಗಳಿಂದ ಹೇಳಿಸಿಕೊಳ್ಳುವುದು ಪರರೂಪವು.

ಯಾವದಪ್ರತಿಬುದ್ಧಸ್ತ್ವಮನಾತ್ಮಜ್ಞತಯಾ ಸ್ಥಿತಃ ।
ತಾವಚ್ಚತುರ್ಭುಜಾಕಾರದೇವಪೂಜಾಪರೋ ಭವ ॥ ೩೯ ॥

ತತ್ಕ್ರಮಾತ್ಸಂಪ್ರಬುದ್ಧಸ್ತ್ವಂ ತತೋ ಜ್ಞಾಸ್ಯಸಿ ತತ್ಪರಂ ।
ಮಮ ರೂಪಮನಾದ್ಯಂತಂ ಯೇನ ಭೂಯೋ ನ ಜಾಯಸೇ ॥ ೪೦ ॥

ಯದಿ ವಾವೇದ್ಯವಿಜ್ಞಾತೋ ಭಾವಸ್ತದರಿಮರ್ದನ ।
ತನ್ಮಮಾತ್ಮಾನಮಾತ್ಮಾನಮಾತ್ಮನಶ್ಚಾಶು ಸಂಶ್ರಯ ॥ ೪೧ ॥

(ದ್ವಾವಿಮೌಪುರುಷೌಲೋಕೇ ಕ್ಷರಶ್ಚಾಕ್ಷರ ಏವಚ ।· ಕ್ಷರಸ್ಸರ್ವಾಣಿ ಭೂತಾಣಿ ಕೂಟಸ್ಥೋಕ್ಷರ ಉಚ್ಯತೇ ॥-s । ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ॥ ಗೀತಾ ಅ, ೧೫.)

೩೯. ಎಲ್ಲಿಯವರೆಗೆ ನೀನು ಅಪ್ರಬುದ್ಧನಾಗಿ ಅನಾತ್ಮಜ್ಞನಾಗಿ ಇರುವೆಯೋ ಅಲ್ಲಿಯವರೆಗೆ ಚತುರ್ಭುಜಾಕಾರನಾದ ದೇವನ ಪೂಜೆಯಲ್ಲಿಯೇ ನಿರತನಾಗಿರು.

೪೦. ಆ ಕ್ರಮದಲ್ಲಿ ನಿನಗೆ ಆತ್ಮ ಜ್ಞಾನವು ಲಭಿಸಿ ನೀನು ಸಂಪ್ರಬುದ್ಧನಾದರೆ, ಅದಕ್ಕಿಂತ ಮೇಲಿರುವ ನನ್ನ ಅನಾದ್ಯಂತ ರೂಪವನ್ನು ತಿಳಿಯುವೆ, ಆಗ ನೀನು ಮತ್ತೆ ಹುಟ್ಟುವುದಿಲ್ಲ.

೪೧. ಎಲ್ಲಿಯವರೆಗೆ ನೀನು ವಿಜ್ಞಾನವಂತನಾಗುವುದಿಲ್ಲವೋ ಅಲ್ಲಿಯವರೆಗೆ, ಎಲೆ ಅರಿಮರ್ದನನೇ, ನನ್ನ ಆತ್ಮವನ್ನೂ ನಿನ್ನ ಆತ್ಮವನ್ನೂ ಆಶ್ರಯಿಸಿಕೊಂಡು ಬೇದಬುದ್ಧಿಯಲ್ಲಿರು.

("ಇದಂಚ ಸಗುಣಭಜನಂ ಮಯಾ ತುಭ್ಯಂ ಚಿತ್ತಶುದ್ಧ್ಯಭಾವಂ ಸಂಭಾವ್ಯೋಕ್ತಂ । ಯದಿತು ತವ ಭಾವಶ್ಚಿತ್ತಂ ವೇದ್ಯಂ ವೇದನಾರ್ಹಂ ವಿಜ್ಞಾತಂ । ವಿಜ್ಞಾನೈಕಸ್ವಭಾವಂ ಬ್ರಹ್ಮ ಯಸ್ಯ ತಥಾವಿಧ ಶುದ್ಧ ಇತಿ ಮನ್ಯಸೇ ತತ್ರರ್ಹಿ ಮಮ ಈಶ್ವರಸ್ಯ ಆತ್ಮಾನಂ ಪಾರಮಾರ್ಥಿಕ ಸ್ವರೂಪಭೂತಂ ಶೋಧಿತ ತತ್ಪದಾರ್ಥಂ ಆತ್ಮನಃ ಸ್ವಸ್ಯಚ ಆತ್ಮಾನಂ ಶೋಧಿತ ತ್ವಂಪದಾರ್ಥ ರೂಪಂ ಚೈಕರಸೀಕೃತ್ಯ ಅಖಂಡ ಪರಿಪೂರ್ಣಾತ್ಮಾನಂ ಸಂಶ್ರಯ ಬುದ್ಧ್ಯಾ ತನ್ನಿಷ್ಠೋ ಭವ ಇತ್ಯರ್ಥಃ —ತಾ. ಪ್ರ.)

(ನಾವು "ಯದಿವಾ ಅವೇದ್ಯ ವಿಜ್ಞಾತೋ ಭಾವಃ'' ಎಂದು ತೆಗೆದುಕೊಂಡಿದ್ದೇವೆ. ಮುಂದಿನ ಶ್ಲೋಕದ ಅರ್ಥ ನಮಗೆ ಅನುಕೂಲವಾಗಿದೆ)

ಇದಂ ಚಾಹಮಿದ ಚಾಹಮಿತಿ ಯತ್ಪ್ರವದಾಮ್ಯಹಂ ।
ತದೇತದಾತ್ಮತತ್ತ್ವಂ ತು ತುಭ್ಯಂ ಹ್ಯುಪದಿಶಾಮ್ಯಹಂ ॥ ೪೨ ॥

ಮನ್ಯೇ ಸಾಧುವಿಬುದ್ಧೋಽಸಿ ಪದೇ ವಿಶ್ರಾಂತವಾನಸಿ ।
ಸಂಕಲ್ಪೈರವ ಮುಕ್ತೋಽಸಿ ಸತ್ಯೈಕಾತ್ಮಮಯೋ ॥ ೪೩ ॥

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಪಶ್ಯ ತ್ವಂ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥ ೪೪ ॥

ಸರ್ವಭೂತಸ್ಥಮಾತ್ಮಾನಂ ಭಜತ್ಯೇಕತ್ವಮಾತ್ಮನಃ ।
ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ ॥ ೪೫ ॥

---

೪೨. ಇದಂ ಎಂದು ದೃಶ್ಯಪದ ವಾಚ್ಯವಾದ ಜಗತ್ತೂ ನಾನೇ, ಅಹಂ ಎಂದು ದೃಕ್ಪದ ವಾಚ್ಯನಾಗಿರುವ ಜೀವನೂ ನಾನೇ, ಎಂದು ನಾನು ನಿನಗೆ ಹೇಳುವಾಗ, ನಾನು ಈ ಆತ್ಮತತ್ವವನ್ನು ನಿನಗೆ ಉಪದೇಶ ಮಾಡುವೆನು.

೪೩. ನೀನು ಚೆನ್ನಾಗಿ ತಿಳಿದಿರುವೆ. ಆತ್ಮಪದದಲ್ಲಿ ನಿಂತು ವಿಶ್ರಾಂತಿ ಪಡೆದವನಾಗಿದ್ದೀಯೆ. ಸಂಕಲ್ಪಗಳಿಂದ ಮುಕ್ತನಾಗಿದ್ದೀಯೆ ಎಂದು ತಿಳಿದಿರುವೆನು. ಅದರಿಂದ, ಸತ್ಯವಾದ, ಏಕವಾದ, ಆತ್ಮನಲ್ಲಿ ತನ್ಮಯನಾಗಿಹೋಗು.

೪೪. ಸರ್ವ ಭೂತಗಳಲ್ಲಿಯೂ ಇರುವ ಆತ್ಮನನ್ನೂ ಆತ್ಮನಲ್ಲಿ ಇರುವ ಸರ್ವ ಭೂತಗಳನ್ನೂ ನೋಡು. ಯೋಗದಿಂದ ಯಾವಾಗಲೂ ಕೂಡಿರುವನಾಗಿ ಎಲ್ಲೆಲ್ಲಿಯೂ ಸಮ (ಬ್ರಹ್ಮ) ವನ್ನೇ ಕಾಣುವನಾಗು.

(ಪಂಡಿತಾಸ್ಸಮದರ್ಶಿನಃ —ಗೀತಾ)

೪೫. ಸರ್ವಭೂತಗಳಲ್ಲಿಯೂ ಇರುವ ಆತ್ಮನನ್ನೂ ಆತ್ಮನ ಏಕತ್ವವನ್ನೂ ಯಾವನು ಭಜಿಸುವನೋ ಅವನು ಜೀವಂತನಾಗಿದ್ದರೂ ಸರ್ವಥಾ ಮುಕ್ತನು. ಅವನು ಮತ್ತೆ ಜನ್ಮ ಭಾಜನನಾಗುವುದಿಲ್ಲ.

ಏಕತ್ವಂ ಸರ್ವಶಬ್ದಾರ್ಥ ಏಕಶಬ್ದಾರ್ಥ ಆತ್ಮನಃ ।
ಆತ್ಮಾಪಿ ಚ ನ ಸನ್ನಾಸದ್ಗತೋ ಯಸ್ಯಾಶು ತಸ್ಯ ತತ್ || ೪೬ ||

ತ್ರೈಲೋಕ್ಯಚೇತಸಾಮಂತರಾಲೋಕೋ ಯಃ ಪ್ರಕಾಶಕಃ ।
ಅನುಭೂತಿಮುಪಾರೂಢಃ ಸೋಽಹಮಾತ್ಮೇತಿ ನಿಶ್ಚಯಃ || ೪೭ ||

ತ್ರೈಲೋಕ್ಯಪಯಸಾಮಂತರ್ಯೋ ರಸಾನುಭವಃ ಸ್ಥಿತಃ ।
ಗವ್ಯಾನಾಮಬ್ಧಿಜಾನಾಂ ಚ ಸೋಽಯಮಾತ್ಮೇತಿ ಭಾರತ || ೪೮ ||

---

೪೬. ಏಕತ್ವ ಎಂದರೆ ಸರ್ವ ಶಬ್ದಗಳ ಅರ್ಥವನ್ನೂ (ಒಟ್ಟುಗೂಡಿಸಿ) ಹೇಳಿದಂತೆ ಆಯಿತು. ಏಕ ಶಬ್ದದ ಅರ್ಥವು ಆತ್ಮನಿಗೆ (ಅಲ್ಲದೆ, ಇನ್ನಾರಿಗೂ ಅನ್ವಯಿಸುವುದಿಲ್ಲ.) ಆ ಆತ್ಮನು ಸತ್ ಅಲ್ಲ: ಅಸತ್ ಅಲ್ಲ. ಯಾವನಿಗೆ ಅದು ಬೇಕೋ ಅವನಿಗೇ ಅದು ಸಿಕ್ಕುವುದು.

(ಸರ್ವ ಭೂತಸ್ಥ ಮಾತ್ಮಾನಂ ಇತಿ ಶ್ಲೋಕಸ್ಯ ತಾತ್ಪರ್ಯಂ ಸ್ವಯಮೇವ ವರ್ಣಯತಿ–ಏಕತ್ವಮಿತಿ । ಸರ್ವಭೂತೇಷು ಅಧಿಷ್ಠಾನತಯಾ ಸ್ಥಿತ ಮಾತ್ಮಾನಂ ಪಶ್ಯತಿ ತದಾ ಸ ಸರ್ವಶಬ್ದಾರ್ಥಃ, ಆತ್ಮನಃ ಪ್ರತೀಚಃ ಸ್ವಭಾವೇ ಪರ್ಯವಸನ್ನಃ, ಸ ಆತ್ಮಾಪಿ ಚ–ನ ಸತ್, ಮೂರ್ತಭೂತ ತ್ರಯಸ್ವಭಾವಃ, ನಾಪ್ಯಸತ್ ಸೂಕ್ಷ್ಮ ಭೂತ ದ್ವಯ ಸ್ವಭಾವಃ, ಕಿಂತು ಭೂಮಾನಂದ ಚಿದೇಕ ಸ್ವಭಾವಃ, ಯಸ್ಯ ಅನುಭವಂಗತಃ, ತಸ್ಯಾಶು ತದವಗಮ ಸಮಕಾಲಮೇವ ತಜ್ಜನ್ಮಾದಿ ಸರ್ವ ವಿಕ್ರಿಯಾರಹಿತಂ ಭೂಮಾನಂದಾತ್ಮಕಂ ಕೈವಲ್ಯಂ ಪರ್ಯವಸ್ಯತೀತಿ ತತ್ತಾತ್ಪರ್ಯ ಮಿತ್ಯರ್ಥಃ —ತಾ. ಪ್ರ.)

೪೭. ಈ ತ್ರೈಲೋಕ್ಯದ ಹೃದಯದೊಳಗೆ ಪ್ರಕಾಶವಾಗಿ ಕುಳಿತಿರುವ ಜ್ಞಾನವು ಯಾವುದು ಅನುಭವಕ್ಕೆ ಬರುವುದೋ ಅದೇ ನಾನು: ಅದೇ ಆತ್ಮ: ಎಂದು ನಿಶ್ಚಯವು.

[ತಸ್ಯ ಕೇನಾಪಿ ಅನನುಭವಾತ್ ಅತ್ಯಂತ ಪರೋಕ್ಷತಾಂ ಪ್ರಸಕ್ತಾಂ ವಾರಯತಿ–ತ್ರೈಲೋಕ್ಯೇತ್ಯಾದಿನಾ —ತಾ. ಪ್ರ.]

೪೮. ಅರ್ಜುನ, ತ್ರೈಲೋಕ್ಯದಲ್ಲಿಯೂ ಇರುವ ನೀರುಗಳ ಒಳಗೆ ಇರುವ

ಅಂತಃ ಸರ್ವಶರೀರಾಣಾಂ ಯಃ ಸೂಕ್ಷ್ಮೋಽನುಭವಃ ಸ್ಥಿತಃ ।
ಮುಕ್ತೋಽನುಭವನೀಯೇನ ಸೋಽಯಮಾತ್ಮಾಸ್ತಿ ಸರ್ವಗಃ ॥ ೪೯ ॥

ಸಮಗ್ರಪಯಸಾಮಂತರ್ಯಥಾ ಘೃತಮಿವ ಸ್ಥಿತಂ ।
ತಥಾ ಸರ್ವಪದಾರ್ಥಾನಾಂ ದೇಹಾನಾಂ ಸಂಸ್ಥಿತಃ ಪರಃ ॥ ೫೦ ॥

ರಸಾನುಭವವು ಯಾವುದುಂಟೋ ಅದು ಗವ್ಯ [ಗೋಭವ] ವಾಗಿರಲಿ, ಅಬ್ಧಿಭವ ವಾಗಿರಲಿ, ಅದೇ ಈ ಆತ್ಮನು.

[ಗವ್ಯಾನಾಂ ದುಗ್ಧಾದೀನಾಂ । ಅಬ್ಧಿಜಾನಾಂ ಲವಣಾದೀನಾಂ ಚಕಾರಾತ್ ಇಕ್ಷುಮಧು-ಆದೀನಾಂ ಚ ಜಿಹ್ವಾಗ್ರ ಸಂನಿಕೃಷ್ಟಾನಾಂ ಯೋ ರಸಾನುಭವಃ ಸೋಽಯಮಾತ್ಮೈವೇತಿ ನ ಪಾರೋಕ್ಷ್ಯ ಪ್ರಸಕ್ತಿರಿತ್ಯರ್ಥಃ —ತಾ.ಪ್ರ]

೪೯. ಸರ್ವ ಶರೀರಗಳಲ್ಲಿಯೂ ಒಳಒಳಗೆ ಸೂಕ್ಷ್ಮವಾದ ಅನುಭವವು ಯಾವುದು ಇರುವುದೋ, ಅನುಭವನೀಯವಿನ್ನೊಂದು ಇಲ್ಲದ ಏಕೈಕವಾದ ಅದನ್ನು ಆತ್ಮಾ ಎಂದುಕೊ, ಅದು ಸರ್ವಗವು [ಎಲ್ಲೆಲ್ಲಿಯೂ ಇರುವುದು.]

(ನಮಗೆ ಅನುಭವವು ವಿದಿತವಾಗುವುದು ಇಂದ್ರಿಯ ವಿಷಯ ಸನ್ನಿಕರ್ಷದಿಂದ ಎಂದರೆ ನಾಲಗೆಯ ಮೇಲೆ ಸಕ್ಕರೆ ಬಿದ್ದರೆ ಸೀ ತೋರುವುದು. ಸೀಯಾದ ಪದಾರ್ಥವು ಯಾವುದೂ ನಾಲಗೆಗೆ ಸಿಕ್ಕದೆ ಮನಸ್ಸಿಗೆ ಸಿಹಿ ತೋರುವುದು ಸ್ಮೃತಿಯಿಂದ. ಆ ಸ್ಮೃತಿ ಬರುವುದು ಹಂ ಬಲದಿಂದ. ಹಾಗೆ, ಹಂಬಲವಿಲ್ಲದ ಸ್ಮೃತಿಯೂ ಬರುವುದು ಅಸಾಧ್ಯ. ಹಾಗೆ ಸ್ಮೃತಿಯಿಂದ ಅಲ್ಲದೆ, ಸಿಹಿ ಪದಾರ್ಥವೂ ನಾಲಗೆಯೂ ಸೇರದೆ, ಸ್ವತಂತ್ರವಾಗಿ ಬರುವ ಮಧುರತಾ ಅನುಭವವು ಬ್ರಹ್ಮ.)

೫೦. ಹಾಲಿನೊಳಗೆ ತುಪ್ಪವು ಸಮಗ್ರವಾಗಿ ಸೇರಿಕೊಂಡಿರುವಂತೆ, ಪದಾರ್ಥ ಪದಾರ್ಥಗಳಲ್ಲಿಯೂ ದೇಹ ದೇಹಗಳಲ್ಲಿಯೂ ಆ ಪರಮಾತ್ಮನು ಸಂಸ್ಥಿತನಾಗಿರುವನು.

ಸರ್ವಾಂಭೋನಿಧಿರತ್ನಾನಾಂ ಸಬಾಹ್ಯಾಭ್ಯಂತರೇ ಯಥಾ ।
ತೇಜಸ್ತಥಾಸ್ಮಿ ದೇಹಾನಾಮಸಂಸ್ಥಿತ ಇವ ಸ್ಥಿತಃ ॥ ೫೧ ॥

ಯಥಾ ಕುಂಭಸಹಸ್ರಾಣಾಂ ಸಬಾಹ್ಯಾಭ್ಯಂತರೇ ನಭಃ ।
ಜಗತ್ರಯಶರೀರಾಣಾಂ ತಥಾತ್ಮಾಹಮವಸ್ಥಿತಃ ॥ ೫೨ ॥

ಮುಕ್ತಾಫಲಶತೌಘಾನಾಂ ತಂತುಃ ಪ್ರೋತವಪುರ್ಯಥಾ ।
ತಥಾಯಂ ದೇಹಲಕ್ಷಾಣಾಂ ಸ್ಥಿತ ಆತ್ಮಾಸ್ತ್ಯಲಕ್ಷಿತಃ ॥ ೫೩ ॥

ಬ್ರಹ್ಮಾದೌ ತೃಣಪರ್ಯಂತೇ ಪದಾರ್ಥನಿಕುರಂಬಕೇ ।
ಸತ್ತಾಸಾಮಾನ್ಯಮೇತದ್ಯತ್ತಮಾತ್ಮಾನಮಜಂ ವಿದುಃ ॥ ೫೪ ॥

---

೫೧. ಸಮಸ್ತವಾದ ರತ್ನಗಳಿಗೂ ಒಳಗೂ ಹೊರಗೂ ಕಾಂತಿಯೇ ತುಂಬಿರುವಂತೆ, ದೇಹಗಳ ಒಳಗೂ ಹೊರಗೂ ನಾನೇ, ಇಲ್ಲದಿರುವಂತೆಯೇ ತೋರಿದರೂ ಇರುವೆನು.

(ದೇಹಾಂತಃಸ್ಥಿತಿಂ ದೃಷ್ಟಾಂತೇನ ವಿಶದಯತಿ–ಸರ್ವೇತಿ । ಯಥಾ ಸರ್ವ ರತ್ನಾನಾಂ ಅಂತರ್ಗತಂ ತೇಜೋ ಬಹಿರಪಿ ಪ್ರಕಾಶಯತಿ ತದ್ವದಿತ್ಯರ್ಥಃ —ತಾ. ಪ್ರ.)

೫೨. ಸಾವಿರಾರು ಮಡಿಕೆಗಳ ಒಳಗೂ ಹೊರಗೂ ಆಕಾಶವು ತುಂಬಿರುವಂತೆ ಜಗತ್ರಯಗಳಲ್ಲೂ ತುಂಬಿರುವ ಶರೀರಗಳಲ್ಲೆಲ್ಲ ಆತ್ಮನಾದ ನಾನೇ ತುಂಬಿರುವೆನು.

೫೩. ನೂರಾರು ಮುತ್ತುಗಳನ್ನುಳ್ಳ ಮಾಲೆಗಳಲ್ಲಿ ದಾರವು ಒಳಗೆ ಸೇರಿಕೊಂಡು ಇರುವಂತೆ, ಲಕ್ಷ ಲಕ್ಷ ದೇಹಗಳಲ್ಲಿ ಆತ್ಮನು ಇತರರಿಗೆ ಗೋಚರನಾಗದೆ ಇರುವನು.

೫೪. ಚತುರ್ಮುಖ ಬ್ರಹ್ಮನಾದಿಯಾಗಿ ತೃಣವೇ ಕೊನೆಯಾಗಿರುವ ಪದಾರ್ಥ ಸಮೂಹಗಳಲ್ಲಿ ಎಲ್ಲಕ್ಕೂ ಸಮಾನವಾಗಿರುವ, ಎಲ್ಲದರಲ್ಲಿಯೂ ಇರುವ, ಸತ್ತಾ ಸಾಮಾನ್ಯವು ಯಾವುದೋ ಅದನ್ನು ಆತ್ಮ, ಜಲ, ಎನ್ನುವರು.

ತದೀಷತ್ಸ್ಫುರಿತಾಕಾರಂ ಬಹ್ಮ ಬ್ರಹ್ಮೈವ ತಿಷ್ಠತಿ ।
ಅಹಂತಾದಿಜಗತ್ತಾದಿ ಕ್ರಮೇಣ ಭ್ರಮಕಾರಿಣಾ ॥ ೫೫ ॥

ಆತ್ಮೈವೇದಂ ಜಗದ್ರೂಪಂ ಹನ್ಯತೇ ಹಂತಿ ವಾತ್ರ ಕಿಂ । ॥ ೫೬ ॥

ಶುಭಾಶುಭೈರ್ಜಗದ್ದುಃಖೈಃ ಕಿಮಸ್ಯಾರ್ಜುನ ಲಿಪ್ಯತೇ ।
ಪ್ರತಿಬಿಂಬೇಷ್ವಿವಾದರ್ಶಸಮಂ ಸಾಕ್ಷಿವದಾಸ್ಥಿತಂ ॥ ೫೭ ॥

(ತತ್ರಾಧಿಷ್ಠಾನಾತ್ಮನಾ ನಿರ್ವಿಕಾರ ಸ್ಥಿತಿಃ ಬ್ರಹ್ಮತಾ, ಸೈವ ವಾಸ್ತವೀ । ಯಾತು ಮುಕ್ತಾಸು ತಂತುವದಂತರ್ಯಾಮಿತಯಾ ಸ್ಥಿತಿಃ ಯಾ ಚ ರತ್ನೇಷು ಪ್ರಭಾವತ್ಪ್ರಕಟ ಜೀವತಯಾ ಸ್ಥಿತಿಃ ತೇ ಉಭೇ ಅಧ್ಯಸ್ತ ಸಾಪೇಕ್ಷೇ ಜಗದ್ವ್ಯವಹಾರಾರ್ಥೇ ಕಲ್ಪಿತೇ ಇತಿ ನ ವಾಸ್ತವ್ಯಂ ಹಂತವ್ಯಂ ಹಂತಾ ತತ್ಪ್ರಯುಕ್ತಪಾಪಂ ತತ್ಫಲಪ್ರದೋವಾ ಸ್ವಾತ್ಮಾತಿರಿಕ್ತ ಇತ್ಯಾಶಯೇನಾಹ)

೫೫. ಅಹಂತಾದಿ ಅಂತಃಕರಣ ಧರ್ಮರೂಪವಾಗಿಯೂ ಜಗತ್ತಾದಿ ರೂಪವಾದ ಬಾಹ್ಯ ಧರ್ಮ ರೂಪವಾಗಿಯೂ ಕಾಣುತ್ತ ಭ್ರಮೆಯುಂಟು ಮಾಡುತ್ತಿರುವ ಈ ಸರ್ವವೂ ಬ್ರಹ್ಮದ ಈಷತ್ಸ್ಫುರಣದಿಂದ ತೋರುವುದು. ಇಷ್ಟನ್ನೆಲ್ಲ ತೋರಿಸಿದ ಆ ಬ್ರಹ್ಮವು ತಾನು ಯಾವ ವಿಕಾರವನ್ನೂ ಹೊಂದದೆ, ಬ್ರಹ್ಮವಾಗಿಯೇ ಇರುವುದು.

೫೬. ಆತ್ಮನೇ ಈ ಜಗದ್ರೂಪನಾಗಿರಲು ಕೊಲ್ಲುವುದು ಯಾವುದು? ಕೊಲ್ಲಿಸಿಕೊಳ್ಳತಕ್ಕುದು ಯಾವುದು?

೫೭. ಶುಭ-ಅಶುಭಗಳೂ, ಜಗತ್ತಿನ ದುಃಖಗಳೂ ಈ ಬ್ರಹ್ಮಕ್ಕೆ, ಅಂಟುವುವು ಎಂದುಕೊಂಡಿರುವೆಯಾ? ಅರ್ಜುನ, ಕನ್ನಡಿಯಲ್ಲಿ ಪ್ರತಿಫಲಿಸಿರುವ ಪ್ರತಿಬಿಂಬಗಳ ವಿಕಾರಗಳಿಂದ ಕನ್ನಡಿಗೇನಾದರೂ ವಿಕಾರವಾಗುವುದೇ? ಹಾಗೆಯೇ ಕನ್ನಡಿಯಂತೆಯೇ ನಿರಂಜನನಾಗಿರುವ, ಸಾಕ್ಷಿಯಂತೆ ಇರುವ ಆತ್ಮನಿಗೆ ಇವು ಅಂಟುವುವೇ?

ನಶ್ಯತ್ಸು ನ ವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ । ॥ ೫೮ ॥

ಇದಂ ಚಾಹಮಿದಂ ನೇತಿ ಇತೀದಂ ಕಥ್ಯತೇ ಮಯಾ ।
ಏವಮಾತ್ಮಾಸ್ಮಿ ಸರ್ವಾತ್ಮಾ ಮಾಮೇವಂ ವಿದ್ಧಿ ಪಾಂಡವ ॥ ೫೯ ॥

ಇಮಾಃ ಸರ್ವಾಃ ಪ್ರವರ್ತಂತೇ ಸರ್ಗಪ್ರಲಯವಿಕ್ರಿಯಾಃ ।
ಆತ್ಮನ್ಯಹಂತಾಚಿತ್ತಸ್ಥಾಃ ಪಯಸ್ಪಂದಾ ಇವಾಂಬುಧೌ ॥ ೬೦ ॥

ಯಥೋಪಲತ್ವಂ ಶೈಲಾನಾಂ ದಾರುತ್ವಂ ಚ ಮಹೀರುಹಾಂ ।
ತರಂಗಾಣಾಂ ಜಲತ್ವಂ ಚ ಪದಾರ್ಥಾನಾಂ ತಥಾತ್ಮತಾ ॥ ೬೧ ॥

---

೫೮. ವಿನಾಶವಾಗುತ್ತಿರುವ ದೇಹಗಳಲ್ಲಿ ವಿನಾಶವಾಗದಿರುವ ಆತ್ಮನನ್ನು ಯಾವನು ನೋಡುವನೋ ಅವನು ಎಲ್ಲವನ್ನೂ ಕಾಣುವನು.

೫೯. ಅರ್ಜುನ, ಇದು ನಾನು, ಇದು ನಾನಲ್ಲ, ಎಂದು ನಾನು ಹೇಳುತ್ತಿರುವೆನು. ಆದರೂ ಎಲ್ಲವೂ ನಾನೇ! ನಾನು ಸರ್ವಾತ್ಮನು! ನನ್ನನ್ನು ಹಾಗೆಂದೇ ತಿಳಿ.

(ಸರ್ವದೇಹೇಷು ಅಹಮಹಮಿತಿ ಪ್ರಥಮಾನಶ್ಚಿದಂಶ ಏವಾಹಂ, ಜಡ ದೇಹೇಂದ್ರಿಯ ವಿಷಯಾಂಶೋ ನಾಹಮಿತಿ ವಿಭಾಗೋಕ್ತಿರಪಿ ದರ್ಪಣ ಪ್ರತಿಬಿಂಬಿತೇಷು ಅನೇಕ ದರ್ಪಣಾಂತರೇಷು ಘಟಾದಿಷು ಚ ವ್ಯಾವೃತ್ತ ದರ್ಪಣ ಸ್ವರೂಪ ಪರಿಚಯಾಯ ದರ್ಪಣಾ ದರ್ಪಣ ವಿಭಾಗೋಕ್ತಿವದೇವ ಇತ್ಯಾಹ – ಇದಂ ಚ ಅಹಮಿತಿ । ಇತಿಶಬ್ದ ಆದ್ಯೋಽರ್ಥ ವಿಭಾಗ ಪ್ರಕಾರಪರಃ, ದ್ವಿತೀಯಸ್ತು ಉಕ್ತಿ ವಿಭಾಗ ಪ್ರಕಾರಪರ ಇತ್ಯಪೌನರುಕ್ತ್ಯಂ । ಏವಂ ದರ್ಪಣವತ್ ಏವ ಅಲೇಪಕೋಽದ್ವಯ ಏವ ಆತ್ಮಾ ಸನ್ನಹಂ ಸರ್ವಾತ್ಮಾಸ್ಮಿ –ತಾ. ಪ್ರ.)

೬೦. ಸರ್ಗದಿಂದ ಪ್ರಲಯದ ವರೆಗಿನ ವಿಕಾರಗಳೆಲ್ಲವೂ ಈ ಎಲ್ಲಾ ವ್ಯಾಪಾರಗಳೂ ಆತ್ಮನಲ್ಲಿಯೇ ಪ್ರವರ್ತಿಸುವುವು. ಇವೆಲ್ಲವೂ ಸಮುದ್ರದಲ್ಲಿ ನಡೆಯುವ ಜಲದ ವ್ಯಾಪಾರದಂತೆ, ಅಹಂತಾ (ಅಭಿಮಾನ) ವಿಶಿಷ್ಟವಾದ ಚಿತ್ತದಲ್ಲಿಯೇ ನಡೆಯುವುವು

೬೧. ಬೆಟ್ಟಗಳಲ್ಲಿ ಹೇಗೆ ಶಿಲಾತ್ವವಿರುವುದೋ, ಮರಗಳಲ್ಲಿ ಮರತನವು ಹೇಗೋ, ತರಂಗಗಳಲ್ಲಿ ಜಲತ್ವವು ಹೇಗೋ ಪದಾರ್ಥಗಳಿಗೆ ಆತ್ಮತ್ವವು ಹಾಗೆ!

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಯಃ ಪಶ್ಯತಿ ತಥಾತ್ಮಾನಮಕರ್ತಾರಂ ಸ ಪಶ್ಯತಿ ॥ ೬೨ ॥

ನಾನಾಕಾರವಿಕಾರೇಷು ತರಂಗೇಷು ಯಥಾ ಪಯಃ ।
ಕಟಕಾದಿಷು ವಾ ಹೇಮ ಭೂತೇಷ್ವಾತ್ಮಾ ತಥಾರ್ಜುನ ॥ ೬೩ ॥

ನಾನಾತರಂಗವೃಂದಾನಿ ಯಥಾ ಲೋಲಾನಿ ವಾರಿಣಿ ।
ಕಟಕಾದೀನಿ ವಾ ಹೇಮ್ನಿ ಭೂತಾನ್ಯೇವಂ ಪರಾತ್ಮನಿ ॥ ೬೪ ॥

ಪದಾಥಜಾತಂ ಭೂತಾನಿ ಬೃಹದ್ಬ್ರಹ್ಮ ಚ ಭಾರತ ।
ಏಕಮೇವಾಖಿಲಂ ವಿದ್ಧಿ ಪೃಥಕ್ತ್ವಂ ನ ಮನಾಗಪಿ ॥ ೬೫ ॥

ಕಿಂ ತದ್ಭಾವವಿಕಾರಾಣಾಂ ಗಮ್ಯಮಸ್ತಿ ಜಗತ್ತ್ರಯೇ ।
ಕ್ವ ತೇ ವಾಪಿ ಜಗತ್ಕಿಂ ವಾ ಕಿಂ ಮುಧಾ ಪರಿಮುಹ್ಯಸಿ ॥ ೬೬ ॥

---

೬೨. ಸರ್ವ ಭೂತಗಳಲ್ಲಿಯೂ ಇರುವ ಆತ್ಮನನ್ನು ಕಂಡು, ಸರ್ವ ಭೂತಗಳನ್ನೂ ಆತ್ಮನಲ್ಲಿ ಕಾಣುವವನು ಯಾರೋ ಅವನು ಆತ್ಮನು ಕರ್ತನಲ್ಲ ಎಂಬುದನ್ನೂ ಕಾಣುವನು.

೬೩. ನಾನಾ ರೂಪವಾದ ಆಕಾರ ವಿಕಾರಗಳನ್ನು ಪಡೆಯುವ ತರಂಗಗಳಲ್ಲೆಲ್ಲಾ ನೀರೇ ಇರುವಂತೆ, ಕಟಕಾದಿ ಆಭರಣಗಳಲ್ಲೆಲ್ಲಾ ಚಿನ್ನವೇ ಇರುವಂತೆ, ಭೂತಭೂತಗಳಲ್ಲಿಯೂ ಅರ್ಜುನ, ಆತ್ಮನೇ ಇರುವನು.

೬೪. ನೀರಿನಲ್ಲಿ ತರಂಗ ತರಂಗಗಳು ಗುಂಪು ಗುಂಪಾಗಿ ಕುಣಿಯುವಂತೆ, ಚಿನ್ನದಲ್ಲಿ ಕಟಕಾದಿ ಆಭರಣಗಳು ಆಗುವಂತೆ, ಭೂತ ಭೂತಗಳೂ ಪರಮಾತ್ಮನಲ್ಲಿಯೇ ಆಗಿ, ಇದ್ದು, ವ್ಯಾಪಾರ ಮಾಡುತ್ತಿರುವುವು.

೬೫. ಪದಾರ್ಥಗಳ ಗುಂಪುಗಳೆನ್ನಲಿ, ಭೂತಸಮೂಹಗಳು ಎನ್ನಲಿ, ಅರ್ಜುನ, ಬೃಹತ್ತಾಗಿ ಬೃಂಹಿತವಾಗಿರುವ ಬ್ರಹ್ಮವೆನ್ನಲಿ, ಎಲ್ಲವೂ ಒಂದೇ ಎಂದು ತಿಳಿ, ಬೇರೆಬೇರೆಯಾಗಿರುವುದು ಎನ್ನುವದು ಎಂದಿಗೂ ಇಲ್ಲ.

೬೬. ಆ ಭಾವವಿಕಾರಗಳು ಜಗತ್ತ್ರಯದಲ್ಲಿಯೂ ಇರುವವಲ್ಲ, ಅವಕ್ಕೇ

ಇತಿ ಶ್ರುತ್ವಾಭಯಂ ತ್ವಂತರ್ಭಾವಯಿತ್ವಾ ಸುನಿಶ್ಚಿತಂ ।
ಜೀವನ್ಮುಕ್ತಾಶ್ಚರಂತೀಹ ಸಂತಃ ಸಮರಸಾಶಯಾಃ ॥ ೬೭ ॥

ನಿರ್ಮಾನಮೋಹಾ ಜಿತಸಂಗದೋಷಾ ।
ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ ।
ಗಚ್ಛಂತ್ಯಮೂಢಾಃ ಪದಮವ್ಯಯಂ ತತ್ ॥ ೬೮ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಅರ್ಜುನೋಪಾಖ್ಯಾನೇ "ಅರ್ಜುನೋಪದೇಶೋ" ನಾಮ
ತ್ರಿಪಂಚಾಶಃ ಸರ್ಗಃ

ನಾದರೂ ಗಮ್ಯವಿರುವುದೇನು ? ಅವು ಇರುವುದಾದರೂ ಎಲ್ಲಿ? ಅಥವಾ ಜಗತ್ತು ಎನ್ನುವುದಾದರೂ ಬೇರೊಂದಿರುವುದೇನು ? ಏತಕ್ಕೆ ವೃಥಾ ಮೋಹಗೊಳ್ಳುವೆ ?

೬೭. ಹೀಗೆ ಹೇಳುವ ಬ್ರಹ್ಮೋಪದೇಶವನ್ನು ಕೇಳಿ, ಇದೇ ನಿಶ್ಚಯವೆಂದು ತಮ್ಮೊಳಗೇ ಅರಿತುಕೊಂಡು, ಅನುಭವಿಸಿ, ಜೀವನ್ಮುಕ್ತರಾಗಿ, ಮನಸ್ಸನ್ನು ಬ್ರಹ್ಮದಲ್ಲಿ ಇಟ್ಟುಕೊಂಡು ಸಾಧುಗಳು ಲೋಕಯಾತ್ರೆಯನ್ನು ಮಾಡುವರು.

೬೮. (ತಾನು ಹೆಚ್ಚು ಎಂಬ) ಮಾನವನ್ನೂ (ತಾನು ಕಡಿಮೆ ಎಂಬ) ಮೋಹವನ್ನೂ ಬಿಟ್ಟು, ಸಂಗದೋಷವನ್ನು ಗೆದ್ದು (ಎಲ್ಲಿದ್ದರೂ ಹೇಗೆ ಇದ್ದರೂ ವಿಕಾರವನ್ನು ಪಡೆಯದವರಾಗಿ,) ಆತ್ಮನಲ್ಲಿಯೇ ಸದಾ ಇರುವವರಾಗಿ, ಕಾಮವನ್ನು ಹಿಂತಿರುಗಿಸಿದವರಾಗಿ, ಸುಖ ದುಃಖ ರೂಪವಾದ ದ್ವಂದ್ವಗಳಿಂದ ವಿಮುಕ್ತರಾಗಿ, ಇರುವ ವಿದ್ವಾಂಸರು ಯಾರೋ ಅವರು ಅವ್ಯಯವಾಗಿ ಶಾಶ್ವತವಾಗಿ ಇರುವ ಆ ಪರಮ ಪದವನ್ನು ಸೇರುವರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಅರ್ಜುನೋಪದೇಶ" ಎಂಬ ಐವತ್ತಮೂರನೆಯ ಸರ್ಗವು.

ಚತುಃಪಂಚಾಶಃ ಸರ್ಗಃ

ಶ್ರೀ ಭಗವಾನುವಾಚ :—

ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ।
ಯತ್ತೇಽಹಂ ಪ್ರೀಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ ॥ ೧ ॥

ಮಾತ್ರಾಸ್ಪರ್ಶಾ ಹಿ ಕೌಂತೇಯ ಶೀತೋಷ್ಣಸುಖದುಃಖದಾಃ ।
ಆಗಮಾಪಾಯಿನೋ ನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥ ೨ ॥

ತೇತು ನೈಕಾತ್ಮನಶ್ಚಾನ್ಯೇ ಕ್ವಾತೋ ದುಃಖಂ ಕ್ವ ವಾ ಸುಖಂ ।
ಅನಾದ್ಯಂತೇಽನವಯವೇ ಕುತಃ ಪೂರಣಖಂಡನೇ ॥ ೩ ॥

ಐವತ್ತನಾಲ್ಕನೆಯ ಸರ್ಗವು

ಶ್ರೀ ಭಗವಂತನು ಹೇಳಿದನು :—

೧. ಮತ್ತೆಯೂ ಹೇಳುವ ನನ್ನ ಶ್ರೇಷ್ಠವಾದ ಉಪದೇಶ ವಾಕ್ಯವನ್ನು ಕೇಳು; ನೀನು ಮೆಚ್ಚಿ ಕೇಳುವೆಯೆಂದು, ನಿನಗೆ ಹಿತವಾಗಲೆಂದು ಇದನ್ನು ಹೇಳುವೆನು.

೨. ಇಂದ್ರಿಯ ವಿಷಯಗಳ ಸಂಸರ್ಗದಿಂದ ಶೀತ-ಉಷ್ಣ, ಸುಖ–ದುಃಖ ಗಳೆಲ್ಲವೂ ಆಗುವುವು. ಇವು ಆಗಮ, ಅಪಾಯ, (ಬರು–ಹೋಗು)ಗಳಿಂದ ಕೂಡಿದವು; ಅನಿತ್ಯಗಳು. ಅದರಿಂದ, ಅರ್ಜುನ, ಇವುಗಳನ್ನು ಸಹಿಸಿಕೊ.

೩. ಹಾಗೆ ಆ ಮಾತ್ರಾ, ಸ್ಪರ್ಶಗಳಾಗಲೀ ಅವುಗಳಿಂದಾಗುವ ಶೀತೋಷ್ಣ ಸುಖದುಃಖಾದಿಗಳಾಗಲಿ, ಒಬ್ಬನೇ ಒಬ್ಬನಾಗಿರುವ ಆತ್ಮನಿಗಿಂತ ಅನ್ಯಗಳಲ್ಲ. ಹಾಗಿರಲು ದುಃಖವೆಲ್ಲಿಯದು ? ಸುಖವೆಲ್ಲಿಯದು ? ಆದ್ಯಂತ ಗಳೇ ಇಲ್ಲದ, ಅವಯವಗಳೂ ಇಲ್ಲದ ಆತ್ಮನಲ್ಲಿ ಪೂರ್ಣವೆಲ್ಲಿ ? ಖಂಡನವೆಲ್ಲಿ ?

ಸಂಸ್ಥಿತಾ ಸ್ಪರ್ಶಮಾತ್ರಾಖ್ಯಾ ಮಾತ್ರಾಸ್ಪರ್ಶಭ್ರಮಾತ್ಮಕಃ ।
ಸಮದುಃಖಸುಖೋ ಧೀರಃ ಸೋಽಮೃತತ್ವಾಯ ಕಲ್ಪತೇ ॥ ೪ ॥

ಸರ್ವತ್ವಾದಾತ್ಮನಶ್ಚೈತೇ ಸುಭೇದಾಃ ಸಂಸ್ಥಿತಾ ಇವ ।
ಅಸದ್ರೂಪಾಸ್ತ್ವಸದ್ರೂಪಂ ಕಥಂ ಸೋಢುಂ ನ ಶಕ್ಯತೇ ॥ ೫ ॥

ಮನಾಗಪಿ ನ ವಿದ್ಯಂತೇ ಸುಖದುಃಖೇ ತು ಸರ್ವಶಃ ।
ಸರ್ವತ್ವಾದಾತ್ಮತತ್ತ್ವಸ್ಯ ಸತ್ತಾ ಕಥಮನಾತ್ಮನಃ ॥ ೬ ॥

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ನಾಸ್ತ್ಯೇವ ಸುಖದುಃಖಾದಿ ಪರಮಾತ್ಮಾಸ್ತಿ ಸರ್ವಗಃ ॥ ೭ ॥

---

೪. ಸ್ಪರ್ಶಗಳೂ ಮಾತ್ರಗಳೂ (ಬ್ರಹ್ಮ) ಸಂಸ್ಥಿತಗಳೇ ಎಂಬ ನಂಬಿಕೆಯು ಬಲಿತು, ಅವೆರಡೂ ಭ್ರಮಾತ್ಮಕಗಳೇ ಎಂದು ತಿಳಿದು, ಸುಖ ದುಃಖಗಳಿಗೆ ವಶನಾಗದೆ ಎರಡರಲ್ಲಿಯೂ ಒಂದೇಸಮನಾಗಿರುವ ಧೀರನು ಅಮೃತತ್ವವನ್ನು ಪಡೆಯುವನು.

೫. ಆತ್ಮನು ಸರ್ವದರಲ್ಲಿಯೂ ಇರುವನು ಎಂದಮೇಲೆ ದುಃಖವೂ ಸುಖದಂತೆಯೇ ಆಗಬೇಕು. (ಗಂಗೆಯನ್ನು ಸೇರಿದ ಕೊಚ್ಚೆಯ ನೀರೂ ಅದರಲ್ಲಿ ಬೆರೆದು ತೀರ್ಥವೇ ಆಗಿಹೋಗುವಂತೆ) ಬ್ರಹ್ಮಜ್ಞನಿಗೆ ಬಂದ ದುಃಖವೂ ಸುಖವೂ ಎರಡು ಆನಂದವೇ ಆಗುವುವು: ಅಥವಾ ಅವು ಅಸದ್ರೂಪಗಳು ಎಂದಾದರೆ, ಇಲ್ಲದೆಯೇ ಇರುವವುಗಳನ್ನು ಸಹಿಸುವುದು ಏನು ತಾನೇ ಕಷ್ಟವಾದೀತು ?

೬. ಯಾವ ಯಾವ ರೀತಿಯಿಂದ ನೋಡಿದರೂ ಸುಖದುಃಖಗಳು ಇಲ್ಲವೇ ಇಲ್ಲ. ಆತ್ಮನೊಬ್ಬನೇ ಸರ್ವವೂ ಆಗಿರಲು, ಆತ್ಮತತ್ವವು ಎಲ್ಲೆಲ್ಲಿಯೂ ತಾನೇ ತಾನಾಗಿರಲು, ಅನಾತ್ಮ ಸತ್ತೆಯು ಎಲ್ಲಿಂದ ಬಂತು ?

೭. ಅಸತ್ತಾದುದಕ್ಕೆ ಭಾವವಿಲ್ಲ: ಸತ್ ಆದುದಕ್ಕೆ ಅಭಾವವಿಲ್ಲ. ಸುಖ ದುಃಖಾದಿಗಳಂತೂ ಇಲ್ಲವೇ ಇಲ್ಲ. ಸರ್ವದರಲ್ಲಿಯೂ ಪರಮಾತ್ಮನೇ ಇರುವನು.

(ನನು ಅಸದಪಿ ದುಃಖಾದಿ ಆತ್ಮನಿ ಉಪಪದ್ಯತೇ । ಅಸತ ಏವ ಸ್ವಕಾರಣ ಸಮವಾಯಃ ಸ್ವಸತ್ತಾಸಂಬಂಧ ಆದ್ಯಕ್ಷಣ ಸಂಬಂಧೋವಾ ಉತ್ಪತ್ತಿರಿತಿ ಕಣ

ಸತ್ವಾಸತ್ವಮತೀ ತ್ಯಕ್ತ್ವಾ ದ್ವೈತಯೋರ್ಜಗದಾತ್ಮನೋಃ ।
ತ್ಯಕ್ತ್ವಾ ನ ಕಿಂಚಿನ್ಮಧ್ಯೇ ಚ ಶೇಷೇ ಬದ್ಧಪದೋ ಭವ ॥ ೮ ॥

ನ ಹೃಷ್ಯತಿ ಸುಖೈರಾತ್ಮಾ ದುಃಖೈರ್ಗ್ಲಾಯತಿ ನೋರ್ಜುನ ।
ದೃಶ್ಯದೃಕ್ಚೇತನಾತ್ಮಾಪಿ ಶರೀರಾಂತರ್ಗತೋಽಪಿ ಸನ್ ॥ ೯ ॥

ಭಕ್ಷ ಅಕ್ಷಚರಣಾದಿ ಉಕ್ತಿಂ (ವೈಶೇಷಿಕ, ನ್ಯಾಯ) ಪ್ರತಿಕ್ಷಿಪತಿ–ನಾಽಸತ ಇತಿ। ಅಸದೋ ದುಃಖಾದೇರ್ಭಾವಃ ಸತ್ತಾ ನ ವಿದ್ಯತೇ । ಸತಃ ಅಭಾವಃ ಅಸತ್ತಾ ಚ ನವಿದ್ಯತೇ । ಸ್ವಭಾವ ವೈಪರೀತ್ಯಾ ಯೋಗಾತ್ । ವಾಚಾರಂಭಣಾದಿ ಶ್ರುತ್ಯಾ ವಿಕಾರ ಮಾತ್ರಸ್ಯ ಅಸತ್ತ್ವ ನಿಶ್ಚಯಾತ್ । ನನು ಸರ್ವ ವಿಕಾರಾಣಾಮ ಸತ್ತ್ವೇ ಪಿಂಡಾದ್ಯನ್ಯ ತಮ ವಿಕಾರಾನಾಲಿಂಗಿತ ಪ್ರಕೃತಿ ಮೃದಾದ್ಯ ದರ್ಶನಾತ್ । ತಸ್ಯಾಪ್ಯಸತ್ತ್ವೇ ಶೂನ್ಯತಾ ಪರಿಶೇಷಃ ಕಿಂ ನ ಸ್ಯಾದಿತಿ ಚೇತ್, ನವಿಕಾರೇಷು ಅನುಗತಸದ್ಬುದ್ಧೇಃ ನಿರ್ವಿಷಯತ್ವಾಯೋಗೇನ ವಿಕಾರಾ ಸತ್ವೇಽಪಿ ಶೂನ್ಯಪರಿಶೇಷಾನಾಪತ್ತೇಃ ಯದಿ ತದಪ್ಯಸದೇವ ಚ ಅನು ವರ್ತತೇ ಅತಸ್ತನ್ಮಾತ್ರಮೇವ ಪರಿಶಿಷ್ಯತೇ । ಯಸ್ತು ವಿಕಾರೇಷು ಸದಿದ ಮಿತ್ಯಭಿಮಾನಃ ಸೋಽಧಿಷ್ಠಾನ ಸತ್ತಾನುವೇಧಾದೇವ ನ ಸ್ವತ ಇತಿ ಸುಖ ದುಃಖಾದಿ ನಾಸ್ತ್ಯೇವ ಇತ್ಯರ್ಥಃ । —ತಾ. ಪ್ರ.)

(ಗೀತೆಯಲ್ಲಿ ೨–೧೬ ರ ಮೇಲಿನ ಶಾಂಕರಭಾಷ್ಯವನ್ನು ನೋಡಿ.)

೮. ಇದು ಇದೆ, ಇದು ಇಲ್ಲ, ಎಂಬ ಸತ್ತ್ವ, ಅಸತ್ತ್ವ, ಬುದ್ಧಿಯನ್ನು ಬಿಟ್ಟು, ಜಗತ್ತು, ಆತ್ಮ ಎಂಬ ಬುದ್ಧಿಯನ್ನು ಬಿಟ್ಟು, ಅವೆರಡರ ನಡುವೆ ಅವೆರಡೂ ಅಲ್ಲದ ಮತ್ತೊಂದಿದೆ ಎಂಬುದನ್ನೂ ಬಿಟ್ಟು, ಇವೆಲ್ಲವನ್ನೂ ಬಿಟ್ಟಮೇಲೆ ಉಳಿಯುವ ಶೇಷವು ಯಾವುದೋ ಅದರಲ್ಲಿ ನಿಲ್ಲುವವನಾಗು.

(ಜಗತಃ ಸತ್ವಮತಿಂ, ನಿರತಿಶಯಾನಂದಾತ್ಮನಃ ಅಸತ್ತ್ವಮತಿಂ, ಚ ತ್ಯಕ್ತ್ವಾ ತಯೋರ್ಜಗದಾತ್ಮನೋರ್ಮಧ್ಯೇ ಅಂತರಾಳೇ ಉಭಯ ಸಂಘಟನಾ ನಿಮಿತ್ತಂ ಪುನಸ್ತಮಶ್ಚ ಅತಿ ತುಚ್ಛ ಮಿತಿ ತ್ಯಕ್ತ್ವಾ ಶಿಷ್ಯತ ಇತಿ ಶೇಷಶ್ಚಿದಾತ್ಮಾ ತಸ್ಮಿನ್ ಬದ್ಧಪದಃ ಪ್ರತಿಷ್ಠಿತೋ ಭವ ॥ ––ತಾ. ಪ್ರ.)

೯. ಅರ್ಜುನ, ದೃಶ್ಯವನ್ನು ಕಾಣುವ ಚೇತನನಾದ ಆತ್ಮನು ಶರೀರದಲ್ಲಿಯೇ ಇರುವನಾದರೂ ಆ ಆತ್ಮನು ಸುಖಗಳಿಂದ ಹರ್ಷಪಡುವುದಿಲ್ಲ: ದುಃಖಗಳಿಂದ ಗ್ಲಾನಿಯನ್ನು ಹೊಂದುವುದಿಲ್ಲ.

ಜಡಂ ಚಿತ್ತಾದಿದುಃಖಸ್ಯ ಭಾಜನಂ ದೇಹತಾಂ ಗತಂ ।
ನ ಚೈತಸ್ಮಿನ್ ಕ್ಷತೇ ಕ್ಷೀಣೇ ಕಿಂಚಿದೇವಾತ್ಮನಃ ಕ್ಷತಂ ॥ ೧೦ ॥

ಜಡಂ ದೇಹಾದಿ ದುಃಖಾದೇರ್ಯದಿದಂ ಭೋಕ್ತೃ ಸಂಸ್ಥಿತಂ ।
ತನ್ಮಾಯಾಭ್ರಮಮೇವಾಂಗ ವಿದ್ಧ್ಯಬೋಧವಶೋತ್ಥಿತಂ ॥ ೧೧ ॥

ನ ಕಿಂಚಿದೇವ ದೇಹಾದಿ ನ ಚ ದುಃಖಾದಿ ವಿದ್ಯತೇ ।
ಆತ್ಮನೋ ಯತ್ಪೃಥಗ್ಭೂತಂ ಕಿಂ ಕೇನಾತೋಽನುಭೂಯತೇ ॥ ೧೨ ॥

ಯದಿದಂ ಕಥಯಾಮ್ಯತ್ರ ತೇನೈವಾತೋ ವಿನಶ್ಯತಿ ।
ಭ್ರಾಂತಿರ್ದುಃಖಮಬೋಧೋತ್ಥಾ ಸಮ್ಯಗ್ಬೋಧೇನ ಭಾರತ ॥ ೧೩ ॥

---

೧೦. ಜಡವಾದ ಚಿತ್ತಾದಿಗಳು ದೇಹತ್ವವನ್ನು ಹೊಂದಿರುವುವು. ಅವು ದುಃಖಕ್ಕೆ ಪಾತ್ರಗಳು. (ದುಃಖವನ್ನು ಅನುಭವಿಸುವುವು ಅವು.) ಈ ಜಡವು ಕ್ಷತಿಯನ್ನು ಹೊಂದಿದರೆ, ಕ್ಷಯವನ್ನು ಹೊಂದಿದರೆ, ಆತ್ಮನಿಗೆ ಕ್ಷತಿಯೂ ಇಲ್ಲ, ಕ್ಷಯವೂ ಇಲ್ಲ.

೧೧. ಜಡವಾದೀ ದೇಹಾದಿಗಳು ದುಃಖಾದಿಗಳ ಭೋಕ್ತೃಗಳಾಗಿ ಇರುವುವು ಎಂಬುದು ಯಾವುದುಂಟೋ ಅದೂ ಮಾಯೆಯಿಂದುಂಟಾದ ಭ್ರಾಂತಿಯು. ಅದೂ ಅಜ್ಞಾನದಿಂದ ಉಂಟಾದುದು ಎಂದು ತಿಳಿ.

೧೨. ಅದರಿಂದ ದೇಹಾದಿಗಳೆಂಬವಾಗಲಿ, ದುಃಖಾದಿಗಳೆಂಬವಾಗಲಿ ಆತ್ಮನಿಂದ ಬೇರೆಯಾಗಿ ಇಲ್ಲದಿರಲು, ಯಾವುದು, ಯಾರಿಂದ ಅನುಭೂತ ವಾಗುತ್ತದೆ ? (ಯಾರ ಅನುಭವಕ್ಕೆ ಬರುತ್ತವೆ ?)

೧೩. ಈಗ ನಾನು ನಿನಗೆ ಉಪದೇಶಮಾಡುತ್ತಿರುವ ಸಮ್ಯಗ್ ಜ್ಞಾನವು ಯಾವುದುಟೋ ಅದರಿಂದ, ಭಾರತ, ಅಜ್ಞಾನದಿಂದ ಹುಟ್ಟಿರುವ ಭ್ರಾಂತಿಯೂ ದುಃಖವೂ ನಾಶವಾಗುವುವು.

ಯಥಾ ರಜ್ಜ್ವಾಮಹಿಭಯಂ ಬೋಧಾನ್ನಶ್ಯತ್ಯಬೋಧಜಂ ।
ತಥಾ ದೇಹಾದಿದುಃಖಾದಿ ಬೋಧಾನ್ನಶ್ಯತ್ಯಬೋಧಜಂ ॥ ೧೪ ॥

ವಿಷ್ವಗ್ವಿಶ್ವಮಜಂ ಬ್ರಹ್ಮ ನ ನಶ್ಯತಿ ನ ಜಾಯತೇ ।
ಇತಿ ಸತ್ಯಂ ಪರಂ ವಿದ್ಧಿ ಬೋಧಃ ಪರಮ ಏಷ ಸಃ ॥ ೧೫ ॥

ಬ್ರಹ್ಮಾಂಬುಧೌ ತರಂಗತ್ವಂ ಕಿಂಚಿದ್ಭೂತ್ವಾ ವಿಲೀಯತೇ ।
ಬ್ರಹ್ಮಾವರ್ತೇ ಸ್ಫುರಸ್ಯದ್ಯ ಬ್ರಹ್ಮೈವಾಸಿ ನಿರಾಮಯಂ ॥ ೧೬ ॥

ಯಾವತ್ಕಾಲಕ್ರಿಯಾದೇಶಾಸ್ತ್ವಮಹಂ ಸೈನಿಕಾ ಇವ ।
ಬ್ರಹ್ಮಣೇಽಪ ಪರಿಸ್ಪಂದಾ ನಾತ್ರ ಸ್ತಃ ಸದಸದ್ಭ್ರಮೌ ॥ ೧೭ ॥

ಜಹಿ ಮಾನಂ ಮದಂ ಶೋಕಂ ಭಯಮೀಹಾಂ ಸುಖಾಸುಖೇ ।
ದ್ವೈತಮೇತದಸದ್ರೂಪಮೇಕಃ ಸದ್ರೂಪವಾನ್ಭವ ॥ ೧೮ ॥

---

೧೪. ರಜ್ಜುವಿನಲ್ಲಿ ಅಬೋಧದಿಂದ ಉಂಟಾಗಿದ್ದ ಸರ್ಪದ ಭಯವು ಬೋಧದಿಂದ ನಾಶವಾಗುವಂತೆಯೇ, ಅಬೋಧದಿಂದಲೇ ಉಂಟಾಗಿರುವ ದೇಹಾದಿ ದುಃಖಾದಿಗಳೂ ಕೂಡ ಬೋಧದಿಂದ ನಾಶವಾಗುವುವು.

೧೫. ಎಲ್ಲೆಲ್ಲಿಯೂ ಇರುವನಾದ, ಎಲ್ಲವೂ ಆಗಿರುವ, ಜನ್ಮವಿಲ್ಲದ, ಬ್ರಹ್ಮವು ಸಾಯುವುದಿಲ್ಲ; ಹುಟ್ಟುವುದಿಲ್ಲ. ಇದೇ ಪರಮವಾದ ಸತ್ಯವೆಂದು ತಿಳಿ. ಇದೇ ಪರಮವಾದ ಬೋಧವು.

೧೬. ಬ್ರಹ್ಮ ಸಮುದ್ರದಲ್ಲಿ ಯಾವುದೋ ಒಂದು ತರಂಗತ್ವವು ಎದ್ದು ಮುಳುಗುವುದು. ಬ್ರಹ್ಮವೆಂಬ ಸುಳಿಯಲ್ಲಿ ಪ್ರತ್ಯೇಕನಂತೆ ಈಗ ಸ್ಫುರಣವಾಗಿರುವೆ. ಬ್ರಹ್ಮವೇ, ನಿರಾಮಯವಾದ ಬ್ರಹ್ಮವೇ, ಆಗಿರುವೆ.

೧೭. ಕಾಲ, ಕ್ರಿಯಾ, ದೇಶ, ನೀನು, ನಾನು, ಸೈನಿಕರು ಮೊದಲಾದ ಎಲ್ಲವೂ ಸಹ ಬ್ರಹ್ಮದಲ್ಲಿ ಆದ ಪರಿಸ್ಪಂದದಿಂದ ಕಂಡುಬಂದವರು. ಆದರಿಂದ ಸತ್-ಅಸತ್ ಎಂಬ ಭ್ರಾಂತಿಗಳೇ ಇಲ್ಲ.

೧೮. ಮಾನ, ಮದ, ಶೋಕ, ಭಯ, ಆಸೆ, ಸುಖ, ಅಸುಖ, ಇವೆಲ್ಲವೂ ಅಸದ್ರೂಪಗಳಾದ ದ್ವೈತವು. ಇವನ್ನು ಬಿಟ್ಟು ಸದ್ರೂಪನೇ ನೀನಾಗು.

ಪುರುಷಾಕ್ಷೌಹಿಣೀನಾಂ ಚ ಕ್ಷಯೇಣಾನುಭವಾತ್ಮನಾ ।
ಬ್ರಹ್ಮಣಾ ಬೃಂಹಿತಂ ಶುದ್ಧಂ ಬ್ರಹ್ಮಬ್ರಹ್ಮಮಯಂ ಕುರು ॥ ೧೯ ॥

ಅಸಂವಿದನ್ಸುಖಂ ದುಃಖಂ ಲಾಭಾಲಾಭೌ ಜಯಾಜಯೌ ।
ಯುಂಜನ್ ಬ್ರಹ್ಮೈಕತಾಂ ಗಚ್ಛ ಬ್ರಹ್ಮಾಬ್ಧಿಸ್ತ್ವಂ ಹಿ ಭಾರತ ॥ ೨೦ ॥

ಲಾಭಾಲಾಭಸಮೋ ಭೂತ್ವಾ ಭೂತ್ವಾನೂನಂ ನ ಕಿಂಚನ ।
ಖಂಡವಾತ ಇವಾಸ್ಪಂದಿ ಪ್ರಕೃತಂ ಕಾರ್ಯಮಾಚರ ॥ ೨೧ ॥

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ಕರಿಷ್ಯಸಿ ಕೌಂತೇಯ ತದಾತ್ಮೇತಿ ಸ್ಥಿರೋ ಭವ ॥ ೨೨ ॥

---

೧೯. ಅಕ್ಷೌಹಿಣೀ ಸಂಖ್ಯಾತರಾದ ಈ ಸೈನಿಕರನ್ನೆಲ್ಲ ಕೊಲ್ಲಬೇಕೆಂದಿರುವೆಯಲ್ಲ; ಅದೂ ಬ್ರಹ್ಮದ ಬೃಂಹಿತವೇ ಎಂಬುದನ್ನೂ ಆತ್ಮನಾ ಅನುಭವಿಸಿ, ಶುದ್ಧಬ್ರಹ್ಮನಾಗಿ ನಿನ್ನನ್ನು ಬ್ರಹ್ಮಮಯನನ್ನಾಗಿ ಮಾಡಿಕೊ.

೨೦. ಯೋಗ, ಯುಕ್ತನಾಗಿ, ಸುಖ ದುಃಖಗಳನ್ನೂ, ಲಾಭಾಲಾಭಗಳನ್ನೂ, ಜಯಾಜಯಗಳನ್ನೂ ಅನುಭವಕ್ಕೆ ತಂದುಕೊಳ್ಳದವನಾಗಿ (ಗಣಿಸದೆ) ಬ್ರಹ್ಮೈಕ್ಯವನ್ನೂ ಸಾಧಿಸು.

೨೧. ಲಾಭಾಲಾಭಗಳಿಂದ ವಿಕಾರಗೊಳ್ಳದೆ, ಹಾಗೆಯೇ ಜಗತ್ತಿನ ದೇಹಾದಿಭಾವಗಳನ್ನು ಪಡೆಯದೆ, ಖಂಡವಾತವಂತೆ ವ್ಯಾಪಾರ ಶೂನ್ಯವಾಗಿ, ಮಾಡಬೇಕಾದ ಕೆಲಸವನ್ನು ಮಾಡು.

(ಖಂಡವಾತಃ=ಗುಹಾ ಪರಿಚ್ಛಿನ್ನೋವಾಯುಃ । —ತಾ. ಪ್ರ.)

೨೨. ಮಾಡುವುದು, ತಿನ್ನುವುದು, ಹೋಮ ಮಾಡುವುದು, ಕೊಡುವುದು, ಮೊದಲಾದ ಏನೇನು ಮಾಡುವುದುಂಟೋ ಇದೆಲ್ಲವೂ ಆತ್ಮನೇ ಎಂದು ಸ್ಥಿರನಾಗಿರು.

ಯನ್ಮಯೋ ಯೋ ಭವತ್ಯಂತಃ ಸ ತದಾಪ್ನೋತ್ಯಸಂಶಯಂ ।
ಬ್ರಹ್ಮಸತ್ಯಮವಾಪ್ತುಂ ತ್ವಂ ಬ್ರಹ್ಮಸತ್ಯಮಯೋ ಭವ ॥ ೨೩ ॥

ಅನಪೇಕ್ಷಂ ಫಲಂ ಬ್ರಹ್ಮ ಭೂತ್ವಾ ಬ್ರಹ್ಮೇತಿ ಭಾವಿತಂ ।
ಕ್ರಿಯತೇ ಕೇವಲಂ ಕರ್ಮ ಬ್ರಹ್ಮಜ್ಞೇನ ಯಥಾಗತಂ ॥ ೨೪ ॥

ಕರ್ಮಣ್ಯಕರ್ಮ ಯಃ ಪಶ್ಯತ್ಯಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ಮನುಷ್ಯೇಷು ಸ ಚೋಕ್ತಃ ಕೃತ್ಸ್ನಕರ್ಮಕೃತ್ ॥ ೨೫ ॥

---

೨೩. ಅಂತಕಾಲದಲ್ಲಿ ಯಾವನು ಯಾವದನ್ನು ಮನಸ್ಸಿನಲ್ಲಿಟ್ಟುಕೊಂಡಿರುವನೋ ಅದನ್ನೇ ಅವನು ನಿಸ್ಸಂಶಯನಾಗಿ ಪಡೆಯುವನು. ಅದರಿಂದ ಬ್ರಹ್ಮಸತ್ಯವನ್ನು ಪಡೆಯಲು ಬ್ರಹ್ಮಸತ್ಯಮಯನಾಗು.

(ಯನ್ಮಯಃ ಯದಾಕಾರಚಿತ್ತಃ —ತಾ. ಪ್ರ.)

೨೪. ಯಾವ ಫಲವನ್ನೂ ಅಪೇಕ್ಷಿಸದೆ, ಬ್ರಹ್ಮ ಬ್ರಹ್ಮವೆಂದು ಭಾವಿಸುತ್ತಿದ್ದರೆ ಬ್ರಹ್ಮವೇ ಆಗುವನು. ಅಂತಹ ಬ್ರಹ್ಮಜ್ಞನು ಯಥಾಗತವಾದ ಎಂದರೆ ತಾನಾಗಿ ಪ್ರಾಪ್ತವಾದ ಕರ್ಮವನ್ನು ಮಾತ್ರ ಮಾಡುವನು.

[ಸರ್ವಕಾಮೋಪರಮಸ್ತದ್ರೂಪಂ ಫಲಂ ಪರಮ ಪುರುಷಾರ್ಥಃ ಸ್ವಯಂ ಭೂತ್ವ ಕೇವಲಂ ವೃಥಾ ಚೇಷ್ಟಾರೂಪಂ ಬ್ರಹ್ಮೇತಿ ಭಾವನಾ ಬಾಧಿತಂ ಕರ್ಮ ಕ್ರಿಯತೇ —ತಾ. ಪ್ರ.]

೨೫. ಕರ್ಮದಲ್ಲಿ ಅಕರ್ಮವನ್ನೂ ಯಾವನು ಕಾಣುವನೋ, ಅಕರ್ಮದಲ್ಲಿ ಯಾವನು ಕರ್ಮವನ್ನೂ ನೋಡುವನೋ, ಮನುಷ್ಯರಲ್ಲಿ ಅವನು ಬುದ್ಧಿವಂತನು. ಆತನೇ ಕೃತ್ಸ್ನ ಕರ್ಮವನ್ನು ಬಲ್ಲವನು.

(ಯಃ ಪುಮಾನ್ ಕರ್ಮಣಿ ಉಕ್ತರೀತ್ಯಾ ಅಕರ್ಮ ನಿಷ್ಕ್ರಿಯಂ ಬ್ರಹ್ಮ ಪಶ್ಯತಿ, ಅಕರ್ಮಣಿ ಬ್ರಹ್ಮಣಿ ಚ ಅವಿಚ್ಯುತ ಪ್ರತಿಷ್ಠಾರೂಪಂ ಕರ್ಮ ಅವಶ್ಯಂ ಕರ್ತವ್ಯಂ ಪಶ್ಯತಿ ಸ ಬುದ್ಧಿಮಾನ್ ವಿವೇಕೀ ಸ ಏವ ಸ್ವರೂಪತಃ ಫಲತಶ್ಚ ಕೃತ್ಸ್ನಂ ಪೂರ್ಣಂ ಕರ್ಮ ಕರೋತೀತಿ ಕೃತ್ಸ್ನಕರ್ಮಕೃದುಕ್ತೋ ವಿದ್ವದ್ಭಿರಿತ್ಯರ್ಥಃ । —ತಾ. ಪ್ರ.)

ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ।
ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ॥ ೨೬ ॥

ಕರ್ಮಾಸಕ್ತಿಮನಾಶ್ರಿತ್ಯ ತಥಾ ನಾಶ್ರಿತ್ಯ ಮೂಢತಾಂ ।
ನೈಷ್ಕರ್ಮ್ಯಮಪ್ಯನಾಶ್ರಿತ್ಯ ಸಮಸ್ತಿಷ್ಠ ಯಥಾಸ್ಥಿತಂ ॥ ೨೭ ॥

ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥ ೨೮ ॥

ಆಸಕ್ತಿಮಾಹುಃ ಕರ್ತೃತ್ವಮಕರ್ತುರಪಿ ತದ್ಭವೇತ್ ।
ಮೌರ್ಖ್ಯೇ ಸ್ಥಿತೇ ಹಿ ಮನಸಿ ತಸ್ಮಾನ್ಮೌರ್ಖ್ಯಂ ಪರಿತ್ಯಜೇತ್ ॥ ೨೯ ॥

ಪರಂ ತತ್ತ್ವಜ್ಞಮಾಶ್ರಿತ್ಯ ನಿರಾಸಕ್ತೇರ್ಮಹಾತ್ಮನಃ ।
ಸರ್ವಕರ್ಮರತಸ್ಯಾಪಿ ಕರ್ತೃತೋದೇತಿ ನ ಕ್ವಚಿತ್ ॥ ೩೦ ॥

---

೨೬. ಎಲೈ ಧನಂಜಯನೇ, ಕರ್ಮದ ಫಲವನ್ನು ಕುರಿತು ಆಶಿಸಬೇಡ. ಹಾಗೆಂದು ಅ-ಕರ್ಮದಲ್ಲಿ ಮನಸ್ಸಿಡಬೇಡ. ಯೋಗದಲ್ಲಿ ನಿಂತು ಕರ್ಮಗಳನ್ನು ಮಾಡು, ಸಂಗವನ್ನು ಎಂದರೆ ಫಲಾಭಿಲಾಷೆಯನ್ನು ಬಿಡು.

೨೭.' ಕರ್ಮದಲ್ಲಿ ಆಸಕ್ತಿಯನ್ನು ವಹಿಸಬೇಡ, ಹೀಗೆಂದು ಮೂಢನೂ ಆಗಬೇಡ. ನೈಷ್ಕರ್ಮವನ್ನೂ ಹಿಡಿಯಬೇಡ. ಇದ್ದಂತೆ ಇದ್ದು ಸಮನಾಗಿರು.

೨೮. ಕರ್ಮಫಲದಲ್ಲಿ ಆಸಕ್ತಿಯನ್ನಿಟ್ಟುಕೊಳ್ಳದೆ, ನಿತ್ಯತೃಪ್ತನೂ ನಿರಾಶ್ರಯನೂ ಆಗಿ ಕರ್ಮದಲ್ಲಿಯೇ ಬೇಕಾದ ಹಾಗೆ ಮುಳುಗಿದ್ದರೂ, ಅವನು ಏನೂ ಮಾಡಿಯೇ ಇಲ್ಲ ಎಂದು ಲೆಕ್ಕವು.

೨೯. ಆಸಕ್ತಿಯನ್ನೇ (ಫಲಭೋಕ್ತೃವಾಗಬೇಕು ಎಂಬುದನ್ನು) ಕರ್ತೃತ್ವ ಎನ್ನುವರು. ಮನಸ್ಸಿನಲ್ಲಿ ಮೌರ್ಖ್ಯವಿದ್ದರೆ ಅಕರ್ತೃವಿಗೂ ಕರ್ತೃತ್ವವು ಬರುವುದು. ಅದರಿಂದ ಮೌರ್ಖ್ಯವನ್ನು ಕಳೆದುಕೊಳ್ಳಬೇಕು.

೩೦. ಶ್ರೇಷ್ಠವಾದ ತತ್ವಜ್ಞ (ಜ್ಞಾನ)ವನ್ನು ಆಶ್ರಯಿಸಿ ನಿರಾಸಕ್ತನಾಗಿರುವ ಮಹಾತ್ಮನು ಸರ್ವ ಕರ್ಮಗಳನ್ನೂ ಮಾಡುತ್ತಿದ್ದರೂ ಆತನಿಗೆ ಯಾವಾಗಲೂ ಕರ್ತೃತ್ವವು ಬರುವುದೇ ಇಲ್ಲ.

ಅಕರ್ತೃತ್ವಾದಭೋಕ್ತೃತ್ವಮಭೋಕ್ತೃತ್ವಾತ್ಸಮೈಕತಾ ।
ಸಮೈಕತ್ವಾದನಂತತ್ವಂ ತತೋ ಬ್ರಹ್ಮತ್ವಮಾತತಂ ॥ ೩೧ ॥

ನಾನಾತಾಮಲಮುತ್ಸೃಜ್ಯ ಪರಮಾತ್ಮೈಕತಾಂ ಗತಃ ।
ಕುರ್ವನ್ನಾರ್ಯಮಕಾರ್ಯಂ ಚ ನೈವ ಕರ್ತಾ ತ್ವಮರ್ಜುನ ॥ ೩೨ ॥

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥ ೩೩ ॥

ಸಮಃ ಸೌಮ್ಯಃ ಸ್ಥಿರಃ ಸ್ವಸ್ಥಃ ಶಾಂತಃ ಸರ್ವಾರ್ಥನಿಸ್ಪೃಹಃ ।
ಯಸ್ತಿಷ್ಠತಿ ಸ ಸ ವ್ಯಗ್ರೋಽಪ್ಯಲಮವ್ಯಗ್ರತಾಂ ಗತಃ ॥ ೩೪ ॥

ನಿರ್ದ್ವಂದ್ವೋ ನಿತ್ಯಸತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ।
ಯಥಾಪ್ರಾಪ್ತಾನುವರ್ತೀ ತ್ವಂ ಭವ ಭೂಷಿತಭೂತಲಃ ॥ ೩೫ ॥

---

೩೧. ಕರ್ತೃತ್ವವಿಲ್ಲದವನಿಗೆ ಭೋಕ್ತೃತ್ವವಿಲ್ಲ: ಭೋಕ್ತೃತ್ವವಿಲ್ಲದವನಿಗೆ ಸಮವಾಗಿರುವ ಏಕತೆಯು ಬರುವುದು. ಹೀಗೆ ಸಮೈಕತೆಯುಳ್ಳವನಿಗೆ ಅನಂತತ್ವವು ಬರುವುದು. ಅದರಿಂದ ತಾನೇ ತಾನಾದ ಬ್ರಹ್ಮತ್ವವು ಬರುವುದು.

೩೨. ನಾನಾತಾ ಎಂಬ ಮಲವನ್ನು ವಿಸರ್ಜನ ಮಾಡಿ ಪರಮಾತ್ಮನೊಡನೆ ಏಕವಾಗಿ, ಕಾರ್ಯವನ್ನಾದರೂ ಮಾಡು, ಅಕಾರ್ಯವನ್ನಾದರೂ ಮಾಡು, ಅರ್ಜುನ, ನಿನಗೆ ಕರ್ತೃತ್ವವಿರುವುದಿಲ್ಲ.

೩೩. ಯಾವನು ತಾನು ಮಾಡುವ ಕಾರ್ಯಗಳಲ್ಲೆಲ್ಲಾ ಬೇಕು ಬೇಕು ಎಂಬ ಕಾಮ ಸಂಕಲ್ಪವನ್ನೂ ಬಿಟ್ಟಿರುವನೋ, ಅಂತಹವನ ಪ್ರಾಕ್ತನ ಕರ್ಮಗಳನ್ನೆಲ್ಲ ಜ್ಞಾನಾಗ್ನಿಯು ದಗ್ಧಮಾಡಿಬಿಡುವುದು. ಅಂಥವನನ್ನು ತಿಳಿದವರು ಪಂಡಿತನೆನ್ನುವರು.

೩೪. ಸಮನೂ ಸೌಮ್ಯನೂ ಸ್ಥಿರನೂ ಸ್ವಸ್ಥನೂ ಶಾಂತನೂ ಸರ್ವಾರ್ಥಗಳಲ್ಲಿಯೂ ನಿಸ್ಪೃಹನೂ ಆಗಿ ಯಾವನು ಇರುವನೋ ಅವನು ಕಾರ್ಯಗಳನ್ನು ಮಾಡುವವನಾಗಿದ್ದರೂ ಅಕರ್ತೃವೇ ಸರಿ.

೩೫. ಸುಖದುಃಖಗಳನ್ನು ಲಕ್ಷಿಸದ ನಿರ್ದ್ವಂದ್ವನಾಗಿ ಯಾವಾಗಲೂ ಸತ್ವ (ಗುಣ)ಮಯನಾಗಿದ್ದುಕೊಂಡು, ಯೋಗಕ್ಷೇಮಗಳನ್ನು ಕುರಿತು ಹಂಬಲಿಸ

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರ್ರ |
ಇಂದ್ರಿಯಾರ್ಥಾನ್ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ || ೩೬ ||

ಯಸ್ತ್ವಿಂದಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ |
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ || ೩೭ ||

ಆಪೂರ್ಯಮಾಣಮಚಲಪ್ರತಿಷ್ಠಂ |
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ||
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ |
ಸ ಶಾಂತಿಮಾಪ್ನೋತಿ ನ ಕಾಮಕಾಮೀ || ೩೮ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಅರ್ಜುನೋಪಾಖ್ಯಾನೇ "ಆತ್ಮಜ್ಞಾನೋಪದೇಶೋ" ನಾಮ
ಚತುಃಪಂಚಾಶಃ ಸರ್ಗಃ

ದವನಾಗಿ, ಆತ್ಮನಿಷ್ಠನಾಗಿ, ಹೇಗೆ ಹೇಗೆ ಬಂದುದನ್ನು ಹಾಗೆ ಹಾಗೆ ಮಾಡಿಕೊಂಡು ಹೋಗುವನಾಗಿ, ಭೂಮಿಗೆ ಭೂಷಣನಾಗಿ ನೀನಿರು.

೩೬. ಕರ್ಮೇಂದ್ರಿಯಗಳನ್ನು ಕಟ್ಟಿಹಾಕಿ, ಯಾವನು ಅವುಗಳ ವಿಷಯಗಳನ್ನು ಮನಸ್ಸಿನಲ್ಲಿ ಸ್ಮರಿಸುತ್ತಿರುವನೋ, ಅವನು ಬುದ್ಧಿಯಿಲ್ಲದವನು. ಅವನು ಮಿಥ್ಯಾಚಾರಿಯು.

೩೭. ಅರ್ಜುನ, ಯಾವನು ಮನಸ್ಸಿನಿಂದ ಇಂದ್ರಿಯಗಳನ್ನು ನಿಗ್ರಹಿಸಿ, ಕರ್ಮೇಂದ್ರಿಯಗಳಿಂದ ಕರ್ಮ ಯೋಗವನ್ನು ಮಾಡುವನೋ, ಆ ಅಸಕ್ತನು ಇತರರಿಗಿಂತ ಹೆಚ್ಚಿನವನಾಗುವನು.

೩೮. ಎಷ್ಟು ತುಂಬಿದರೂ ತುಂಬದಯೇ ಅಚಲವಾಗಿ ಸ್ಥಿರವಾಗಿರುವ ಸಮುದ್ರವನ್ನು ನದಿಗಳು ಪ್ರವೇಶಿಸಿ (ಅಲ್ಲಿಯೇ ವಿಲೀನವಾಗಿ ಹೋಗುವ ಹಾಗೆ) ಕಾಮ ಕಾಮಗಳೆಲ್ಲವೂ ಯಾವನನ್ನು ಪ್ರವೇಶಿಸಿ (ಅಲ್ಲಿ ವಿಕಾರವನ್ನುಂಟು ಮಾಡದೆ ಲಯವಾಗಿ ಹೋಗುವುವೋ) ಅಂಥವನು ಕಾಮಕಾಮಿಯಾಗುವುದಿಲ್ಲ. ಅದರಿಂದ ಅಂಥವನು ಶಾಂತಿಯನ್ನು ಹೊಂದುವನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಆತ್ಮಜ್ಞಾನೋಪದೇಶ" ಎಂಬ
ಐವತ್ತನಾಲ್ಕನೆಯ ಸರ್ಗವು

ಪಂಚಪಂಚಾಶಃ ಸರ್ಗಃ

ಶ್ರೀ ಭಗವಾನ್ ಉವಾಚ :—

ನ ಕುರ್ಯಾದ್ಭೋಗಸಂತ್ಯಾಗಂ ನ ಕುರ್ಯಾದ್ಭೋಗಭಾವನಂ ।
ಸ್ಥಾತವ್ಯಂ ಸುಸಮೇನೈವ ಯಥಾಪ್ರಾಪ್ತಾನುವರ್ತಿನಾ ॥ ೧ ॥

ಅನಾತ್ಮನ್ಯಾತ್ಮತಾಂ ದೇಹೇ ಮಾ ಭಾವಯ ಭವಾತ್ಮನಿ ।
ಆತ್ಮನ್ಯೇವಾತ್ಮತಾಂ ಸತ್ಯೇ ಭಾವಯಾಭವರೂಪಿಣಿ ॥ ೨ ॥

ಐವತ್ತೈದನೆಯ ಸರ್ಗವು

ಶ್ರೀ ಭಗವಂತನು ಹೇಳಿದನು :—

೧. ಭೋಗಗಳನ್ನು ತ್ಯಜಿಸುವುದು ಬೇಡ. ಭೋಗಗಳನ್ನು ಕುರಿತು ಚಿಂತನ ಮಾಡುವುದು ಮಾತ್ರ ಬೇಡ. ಯಾವುದು ಯಾವುದು ಹೇಗೆ ಹೇಗೆ ಬಂದರೆ ಹಾಗೆ ಹಾಗೆ ಅನುಭವಿಸುತ್ತಾ ಸುಖ ದುಃಖಗಳಿಗೆ ವಶನಾಗದೆ ಇರಬೇಕು.

(ಭುಜ್ಯತ ಇತಿಭೋಗಾಃ । ದೇಹಧಾರಣ ಹೇತವಃ, ಅನ್ನಪಾನಾದಯಃ ತೇಷಾಂ ಸಂತ್ಯಾಗಂ ನಕುರ್ಯಾತ್ । ಹಿತಮಿತಭೋಜ್ಯ ಅಶನಾದಿ ಉಪಾದದ್ಯಾತ್ ಇತ್ಯರ್ಥಃ । ಭೋಗಾನಾಂ ಭಾವನಂ ಚಿಂತನಂ ತತ್ಪ್ರಾಪ್ತ್ಯವ ಸಂಪಾದನ ವ್ಯಸನಿತಾಂ ಚ ನ ಕುರ್ಯಾತ್ । ತಲ್ಲಾಭಾಲಾಭಾದಿಷು ಸುಸಮೇನೈವ ಸ್ಥಾತವ್ಯ ಮಿತ್ಯರ್ಥಃ —ತಾ. ಪ್ರ.)

೨. ಜನ್ಮಾದಿ ಷಡ್ವಿಕಾರಗಳನ್ನು ಹೊಂದುವ ಈ ದೇಹವು ಅನಾತ್ಮವು. ಇದೇ 'ನಾನು' ಎಂದು ಕೊಳ್ಳಬೇಡ. ಶಾಶ್ವತನೂ ಜನ್ಮಾದಿವಿಕಾರಗಳಿಲ್ಲದವನೂ ಆದ ಆತ್ಮನಲ್ಲಿಯೇ ಆತ್ಮಭಾವವನ್ನು ಮಾಡು.

ದೇಹನಾಶೇ ಮಹಾಬಾಹೋ ನ ಕಿಂಚಿದಪಿ ನಶ್ಯತಿ ।
ಆತ್ಮನಾಶೋ ಹಿ ನಾಶಃ ಸ್ಯಾನ್ನ ಚಾತ್ಮಾ ನಶ್ಯತಿ ಧ್ರುವಃ ॥ ೩ ॥

ನಹಿ ಶೀರ್ಯತ್ಯಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥ ೪ ॥

ಆಸಕ್ತಿಮಾಹುಃ ಕರ್ತೃತ್ವಮಕರ್ತುರಪಿ ತದ್ಭವೇತ್ ।
ಮೌರ್ಖ್ಯಸ್ಥಿತೇ ಹಿ ಮನಸಿ ತಸ್ಮಾನ್ಮೌರ್ಖ್ಯಂ ಪರಿತ್ಯಜೇತ್ ॥ ೫ ॥

ಪರಂ ತತ್ತ್ವಜ್ಞಮಾಶ್ರಿತ್ಯ ನಿರಾಸಕ್ತೇರ್ಮಹಾತ್ಮನಃ ।
ಸರ್ವಕರ್ಮರತಸ್ಯಾಪಿ ಕರ್ತೃತೋದೇತಿ ನ ಕ್ವಚಿತ್ ॥ ೬ ॥

---

೩. ಎಲೈ ಮಹಾಬಾಹುವೇ, ದೇಹನಾಶವಾದರೆ ಏನೂ ನಾಶವಾಗುವುದಿಲ್ಲ. ಆತ್ಮನಾಶವಾದರೆ ಸರ್ವವೂ ನಾಶವಾಗುವುದು. ಆದರೆ ಆತ್ಮನು ಎಂದಿಗೂ ನಾಶವಾಗುವುದಿಲ್ಲ. ಅದರಲ್ಲಿ ಸಂದೇಹವೇ ಇಲ್ಲ.

೪. ಚಿತ್ತವು ತಾನು ಎಂದುಕೊಳ್ಳದ ಆತ್ಮನು ಅಚಿತ್ತಾತ್ಮನು. ಆತನು ಎಂದಿಗೂ ನಾಶವಾಗುವುದಿಲ್ಲ. ಆತನು ಯಾವುದೊಂದು ಪರಿಗ್ರಹವೂ ಇಲ್ಲದವನು. ಅಚಿತ್ತಾತ್ಮನು ಕರ್ಮದಲ್ಲಿಯೇ ನಿರತನಾಗಿದ್ದರೂ ಆತನು ಯಾವ ಕರ್ಮವನ್ನೂ ಮಾಡಿದವನು ಎನ್ನಿಸಿಕೊಳ್ಳುವುದಿಲ್ಲ. ಯಾಕೆಂದರೆ ಅವನಿಗೆ ಕರ್ತೃತ್ವವಿರುವುದಿಲ್ಲ.

(ಉಕ್ತೇ ಅರ್ಥೇ, "ಅಶೀರ್ಯೋ ನಹಿ ಶೀರ್ಯತೇ" ಇತಿ ಶ್ರುತಿಂ ಪ್ರಮಾಣಯ, ಆಭಿಮಾನಿಕ ಪರಿಗ್ರಹ ಏವ ಶೀರ್ಣತಾದಿ ದೇಹಧರ್ಮಾಣಾಂ ಆತ್ಮನಿ ಪ್ರಸಂಜಕಃ, ತತ್ತ್ಯಾಗೇತು ನಶೀರ್ಣಕಾದಿ ಪ್ರಸಕ್ತಿರಿತ್ಯಾಹ–ನಹೀತಿ । —ತಾ. ಪ್ರ.)

೫. ಆಸಕ್ತಿಯೇ ಕರ್ತೃತ್ವವು ಮನಸ್ಸಿನಲ್ಲಿ ಮೌರ್ಖ್ಯವು ಇದ್ದುದೇ ಆದರೆ, ಯಾವ ಕರ್ತೃತ್ವವನ್ನೂ ವಹಿಸದಿದ್ದರೂ ಆಸಕ್ತಿ ಯಿರುವುದು. ಅದರಿಂದ ಮೊದಲು ಮೌರ್ಖ್ಯವನ್ನು ತ್ಯಜಿಸಬೇಕು.

೬. ಉತ್ತಮನಾದ ತತ್ತ್ವಜ್ಞನಾದವನನ್ನು ಆಶ್ರಯಿಸಿ, ನಿರಾಸಕ್ತನಾದ

ಅವಿನಾಶಮನಾದ್ಯಂತಮಾತ್ಮಾನಮಜರಂ ವಿದುಃ |
ನಶ್ಯತ್ಯಾತ್ಮೇತಿ ದುರ್ಬೋಧೋ ಮಾ ತವಾಸ್ತ್ವಿಹ ದುಃಖದಃ || ೭ ||

ನ ತಥಾ ಪರಿಪಶ್ಯಂತಿ ವಿದಿತಾತ್ಮಾನ ಉತ್ತಮಾಃ |
ಪಶ್ಯಂತ್ಯನಾತ್ಮನಾತ್ಮಾನಂ ಸ್ವಮಾತ್ಮನ್ಯಾತ್ಮಮಾನಿನಃ || ೮ ||

ಅರ್ಜುನ ಉವಾಚ:—

ಏವಂ ಚೇತ್ತ್ರಿಜಗನ್ನಾಥ ಮೂಢಾನಾಮಪಿ ಮಾನದ |
ದೇಹನಾಶೇ ಸಮುತ್ಪನ್ನೇ ಇಷ್ಟಂ ನಷ್ಟಂ ನ ಕಿಂಚನ || ೯ ||

ಶ್ರೀ ಭಗವಾನುವಾಚ:—

ಏವಮೇತನ್ಮಹಾಬಾಹೋ ನ ಕಿಂಚಿನ್ನಶ್ಯತಿ ಕ್ವಚಿತ್ ।
ಆತ್ಮೈವಾಸ್ತ್ಯವಿನಾಶಾತ್ಮಾ ಕಿಂ ತಸ್ಯ ಕ್ವ ವಿನಶ್ಯತಿ || ೧೦ ||

ಮಹಾತ್ಮನಿಗೆ, ಆತನು ಸರ್ವ ಕರ್ಮಗಳನ್ನೂ ಮಾಡುತ್ತಿದ್ದರೂ, ಯಾವ ರೀತಿಯಲ್ಲಿಯೂ ಕರ್ತೃತ್ವವು ಸಂಘಟಿಸುವುದಿಲ್ಲ.

೭. ಆತ್ಮನು ಅವಿನಾಶನು, ಆದಿ ಅಂತಗಳಿಲ್ಲದವನು, ಮುಪ್ಪಿಲ್ಲದವನು. ಆತ್ಮನು ನಾಶವಾಗುವನೆಂಬ ಕೆಟ್ಟ ಬುದ್ಧಿಯು ದುಃಖಪ್ರದವು. ಅದು ನಿನಗೆ ಎಂದಿಗೂ ಬರದಿರಲಿ.

೮. ಉತ್ತಮರೂ ಆತ್ಮನನ್ನು ಬಲ್ಲವರೂ ಆದವರು ಎಂದಿಗೂ "ಆತ್ಮನು ನಾಶವಾಗುವನು" ಎಂಬ ದೃಷ್ಟಿಯನ್ನು ಒಪ್ಪುವುದೇ ಇಲ್ಲ. ಆತ್ಮವನ್ನು ಬಲ್ಲ ಆತ್ಮ ಮಾನಿಗಳು ತಾವೇ ಆಗಿರುವ ಆತ್ಮನನ್ನು ತಮ್ಮ ಆತ್ಮನಲ್ಲಿಯೇ ಅನಾತ್ಮನಿಗಿಂತ ಬೇರೆಯಾಗಿರುವುದನ್ನು ಕಾಣುವರು.

ಶ್ರೀ ಅರ್ಜುನನು ಕೇಳಿದನು :—

೯. ಎಲೈ ಮಾನದನೇ, ನೀನು ಹೇಳಿದಂತೆ ಆತ್ಮನು ನಾಶವಾಗುವುದಿಲ್ಲ ಎನ್ನುವುದಾದರೆ, ಎಲೈ ತ್ರಿಜಗನ್ನಾಥನೆ, ಆ ಸತ್ಯವನ್ನರಿಯದ ಮೂಢರಿಗೆ ತಾನೇ ದೇಹನಾಶವಾದಾಗ ಏನುತಾನೇ ನಷ್ಟವಾಗುವುದು ?

ಶ್ರೀ ಭಗವಂತನು ಹೇಳಿದನು :—

೧೦. ಮಹಾಬಾಹುವಾದ ಅರ್ಜುನನೇ, ಇದು ನೀನು ಹೇಳಿದಂತೆಯೇ

ಇದಂ ನಷ್ಟಮಿದಂ ಯುಕ್ತಮಿತಿ ಮೋಹಭ್ರಮಾದೃತೇ ।
ಅನ್ಯತ್ತಥಾ ನ ಪಶ್ಯಾಮಿ ವಂಧ್ಯಾಸ್ತ್ರೀತನಯಂ ಯಥಾ ॥ ೧೧ ॥

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥ ೧೨ ॥

ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ ।
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹಸಿ ॥ ೧೩ ॥

ಅಂತವಂತ ಇಮೇ ದೇಹಾಃ ನಿತ್ಯಸ್ಯೋಕ್ತಾಃ ಶರೀರಿಣಃ ।
ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥ ೧೪ ॥

ದೇಹ ನಾಶವಾದಾಗ ಮೂಢರಿಗಾಗಲೀ ಪ್ರಾಜ್ಞರಿಗಾಗಲೀ ಏನೇ ಆಗಲಿ, ಎಳ್ಳಷ್ಟೂ ನಷ್ಟವಾಗುವುದಿಲ್ಲ. ಆತ್ಮನು ಇದ್ದೇ ಇರುವನು: ಅವಿನಾಶಿಯಾದ ಆತ್ಮನದು ಎಲ್ಲಿ, ಏನು, ನಷ್ಟವಾಗಬೇಕು ?

೧೧. ಇದು ಹೋಯಿತು, ಇದು ಬಂತು, ಎಂಬುದು ಮೋಹ ಭ್ರಾಂತಿಯಿಂದಲೇ ಹೊರತು ಬೇರೆಯಾಗಿರುವುದೂ ಇಲ್ಲ. ಬಂಜೆಯ ಮಗನು ಇದ್ದನು; ಹೋದನು; ಎಂಬಂತೆಯೇ ಇದೂ ಕೂಡ.

೧೨. ಅಸತ್ ಆದುದಕ್ಕೆ ಭಾವವಿಲ್ಲ: ಸತ್ ಆದುದಕ್ಕೆ ಅಭಾವವಿಲ್ಲ. ಭಾವರೂಪವಾದ ಸೃಷ್ಟಿಗೂ, ಅಭಾವರೂಪವಾದ ಪ್ರಲಯಕ್ಕೂ ಅಂತವುಂಟು ಎಂಬುದನ್ನು ಬಲ್ಲವರು ಬಲ್ಲರು.

೧೩. ಯಾವುದು ಈ ಸರ್ವವನ್ನೂ ಆಕ್ರಮಿಸಿಕೊಂಡಿರುವುದೋ ಅದು ಅವಿನಾಶಿಯೆಂದು ತಿಳಿ. ಅವ್ಯಯವಾದ ಅದಕ್ಕೆ ಯಾರೂ ವಿನಾಶವನ್ನೂ ತಂದೊಡ್ಡಲಾರರು.

೧೪. ಈ ದೇಹಗಳು ಕೊನೆಯುಳ್ಳವು. ನಿತ್ಯನಾದ ಶರೀರಿಯು ಒಬ್ಬನುಂಟು. ಆತನು ಅವಿನಾಶಿಯು; ಅಪ್ರಮೇಯನು (ಅಳತೆಗೆ ಸಿಕ್ಕುವನಲ್ಲ.) ಈ ದೇಹಗಳೆಲ್ಲ ಅವನವು. ಅದರಿಂದ, ಭಾರತ, ಯುದ್ಧ ಮಾಡು.

ಆತ್ಮಾ ಚೈಕೋಽಸ್ತಿ ನ ದ್ವಿತ್ವಮಸತಃ ಸಂಭವಃ ಕುತಃ |
ಅವಿನಾಶಸ್ತ್ವನಂತೋಽಸೌ ಸತೋ ನಾಶೋ ನ ವಿದ್ಯತೇ || ೧೫ ||

ದ್ವಿತ್ವೈಕತ್ವಪರಿತ್ಯಾಗೇ ಶೇಷಂ ಯತ್ಪರಿಶಿಷ್ಯತೇ |
ಶಾಂತಂ ಸದಸತೋರ್ಮಧ್ಯಂ ತದಸ್ತೀಹ ಪರಂ ಪದಂ || ೧೬ ||

ಅರ್ಜುನ ಉವಾಚ:—

ತನ್ಮೃತೋಸ್ಮೀತಿ ಭಗವನ್ಕಿಂ ಕೃತಾ ತು ನೃಣಾಂ ಸ್ಥಿತಿಃ |
ಕಥಂ ಸ್ಥಿತೌ ಚ ಲೋಕಾನಾಂ ತೌ ಸ್ವರ್ಗನರಕೌ ಪ್ರಭೋ || ೧೭ ||

ಶ್ರೀ ಭಗವಾನ್ ಉವಾಚ:—

ಭೂಮಿರಾಪೋನಲೋ ವಾಯುಃ ಖಂ ಮನೋ ಬುದ್ಧಿರೇವಚ |
ಏತತ್ತನ್ಮಾತ್ರಜಾಲಾತ್ಮಾ ಜೀವೋ ದೇಹೇಷು ತಿಷ್ಠತಿ || ೧೮ ||

---

೧೫. ಆತ್ಮನು ಒಬ್ಬನೇ ಒಬ್ಬನೇ ಇರುವವನು. ಎರಡನೆಯದಿಲ್ಲ. ಹೀಗಿರಲು, ಅನಾತ್ಮವೆಂಬ, ಅಥವಾ ಆತ್ಮವ್ಯತಿರೇಕವಾದ ಎರಡನೆಯದು, ಎಲ್ಲಿಂದ ಬಂದಿತು? ಇರುವ ಆತ್ಮನಾದರೋ ಅವಿನಾಶನು. ಅನಂತನು. ಸತ್ಯವಾದುದಕ್ಕೆ ನಾಶವೆಲ್ಲಿಯದು ?

೧೬. ದ್ವಿತ್ವ, ಏಕತ್ವ, ಎರಡನ್ನೂ ಬಿಟ್ಟಾಗ, ಯಾವ ಶೇಷವು ಉಳಿಯುವುದೋ, ಸತ್, ಅಸತ್, ಎರಡಕ್ಕೂ ನಡುವೆ ಇರುವ ಶಾಂತವಾದ ಅದು ಇದ್ದೇ ಇರುವುದು. ಅದೇ ಪರಮಪದವು.

ಅರ್ಜುನನು ಕೇಳಿದನು :—

೧೭. ಹಾಗಾದರೆ, ಎಲೈ ಭಗವಂತನೆ, ನಾನು ಮೃತನೆಂದು ಮನುಷ್ಯರಿಗೆ ತೋರುವ ಸ್ಥಿತಿಯೇನು ? ಲೋಕದಲ್ಲಿರುವ ಎಲ್ಲರೂ ಸ್ವರ್ಗ ನರಕಗಳುಂಟೆನ್ನುವರಲ್ಲ, ಎಲೈ ಪ್ರಭುವೆ, ಅವು ಹೇಗಿರುವುವು ?

ಶ್ರೀ ಭಗವಂತನು ಹೇಳಿದನು :—

೧೮. ಭೂಮಿ, ಜಲ, ಅಗ್ನಿ, ವಾಯು, ಆಕಾಶ ಎಂಬ ಪಂಚ ಭೂತಗಳು,

ಸ ಕೃಷ್ಯತೇ ವಾಸನಯಾ ರಜ್ಜ್ವೇವ ಪಶುಪೋತಕಃ |
ಸ ತಿಷ್ಠತಿ ಶರೀರಾಂತಃ ಪಂಜರೇ ವಿಹಗೋ ಯಥಾ ॥ ೧೯ ॥

ಸ ಕಾಲದೇಶತೋ ದೇಹಾಜ್ಜರ್ಜರತ್ವಮುಪಾಗತಾತ್ |
ವಾಸನಾವಶತೋ ಯಾತಿ ಪ್ಲಕ್ಷಪರ್ಣಾದ್ರಸೋ ಯಥಾ ॥ ೨೦ ॥

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ |
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥ ೨೧ ॥

ವಾಸನಾವಶ್ಯಮೇವಾಸ್ಯ ದೇಹೋ ನೇತರಯುಕ್ತಿಜಃ |
ಕ್ಷೀಯತೇ ವಾಸನಾತ್ಯಾಗೇ ಕ್ಷೀಣೇ ಭವತಿ ತತ್ಪದಂ ॥ ೨೨ ॥

ಮನಸ್ಸು, ಬುದ್ಧಿ, ಇದಿಷ್ಟೂ ಸೇರಿರಲು, ಅದೆಲ್ಲವನ್ನೂ ಹಿಡಿದುಕೊಂಡಿರುವ ಜೀವನು ದೇಹ ದೇಹದಲ್ಲಿಯೂ ಇರುವನು.

೧೯. ಕರುವನ್ನು ಹಗ್ಗವು ಎಳೆದುಕೊಂಡು ಹೋಗುವಂತೆ, ವಾಸನಾ ಬಂಧವು ಇವನನ್ನು ಎಳೆದುಕೊಂಡು ಹೋಗುವುದು. ಇವನು ಪಂಜರದೊಳಗಿರುವ ಹಕ್ಕಿಯಂತೆ ಶರೀರದೊಳಗೆ ಇರುವನು.

೨೦. ದೇಹವು ಕಾಲದೇಶ ಮರ್ಯಾದೆಗಳಿಗನುಸಾರವಾಗಿ ಜೀರ್ಣತ್ವವನ್ನು ಹೊಂದುವುದು. ಈ ಜೀವನು ಆಗ ವಾಸನಾವಶನಾಗಿ ದೇಹದಿಂದ ಒಣಗಿದ ಎಲೆಯಲ್ಲಿದ್ದ ರಸವು ಹೊರಟುಹೋಗುವ ಹಾಗೆ ಹೊರಟುಹೋಗುವನು.

೨೧. ವಾಯುವು ಇದ್ದ ಕಡೆಯಿಂದ ಗಂಧವನ್ನು ಹೊತ್ತು ತರುವಂತೆ ಶ್ರೋತ್ರ, ಚಕ್ಷು, ಸ್ಪರ್ಶನ, ರಸನ, ಘ್ರಾಣಗಳನ್ನು ತೆಗೆದುಕೊಂಡು ಈ ಜೀವನು ಹೊರಟುಹೋಗುವನು.

೨೨. ಈ ಜೀವನ ದೇಹವು ಅವನವನ ವಾಸನೆಯಿಂದ ಆದುದು. ಇನ್ನು ಯಾವುದರಿಂದಲೂ ಆದುದಲ್ಲ. ವಾಸನಾ ತ್ಯಾಗವಾದರೆ ಇದು ಕ್ಷೀಣವಾಗುವುದು. ಕ್ಷೀಣವಾಸನನಾದರೆ ಪರಮಪದವನ್ನು ಹೊಂದುವನು.

ವಾಸನಾವಾನ್ಪರಾಪುಷ್ಟೋ ಭೂತ್ವಾ ಭ್ರಾಮತಿ ಯೋನಿಷು |
ಜೀವೋ ಭ್ರಮಭರಾಭಾರೋ ಮಾಯಾಪುರುಷಕೋ ಯಥಾ || ೨೩ ||

ಅಕ್ಷಸ್ವಭಾವಾನಖಿಲಾನ್ ಶರೀರಾದ್ವಾಸನಾವಶಃ |
ಜೀವೋ ಗೃಹಿತ್ವಾ ಸಂಯಾತಿ ಪುಷ್ಪಾದ್ಗಂಧಮಿವಾನಿಲಃ || ೨೪ ||

ದೇಹೋ ನಿಷ್ಪಂದತಾಮೇತಿ ಜೀವೇ ಕೌಂತೇಯ ನಿರ್ಗತೇ |
ನಿಷ್ಪಂದಾವಯವಾಭೋಗಃ ಶಾಂತವಾತ ಇವ ದ್ರುಮಃ || ೨೫ ||

---

೨೩. ವಾಸನಾನಂತನಾದ ಜೀವನು ಚೆನ್ನಾಗಿ ಬೆಳೆದ ವಾಸನಾ ಬಲದಿಂದಲೇ ದೇಹವನ್ನು ಪಡೆದು ಚೆನ್ನಾಗಿ ದೃಷ್ಟಿ ಗೋಚರನಾಗಿ, ಜನ್ಮ ಜನ್ಮ ಗಳನ್ನು ಪಡೆಯುವನು. ಜೀವನು ಭ್ರಾಂತಿಗಳ ಮೂಟೆಯು. ನಿಜವಾಗಿಯೂ ಮಾಯಾ ಪುರುಷನಂತೆಯೇ ಇರುವನು.

೨೪. ದೇಹದಿಂದ ದೇಹಕ್ಕೆ ಹೋಗುವಾಗ, ಇಂದ್ರಿಯಗಳಿಗೆ ಕಾರಣವಾದ ತನ್ಮಾತ್ರಗಳನ್ನೂ ಶರೀರದಿಂದ ತೆಗೆದುಕೊಂಡು, ಹೂವಿನಿಂದ ಗಂಧವನ್ನು ತೆಗೆದು ಕೊಂಡು ಹೋಗುವ ಗಾಳಿಯಂತೆ, ಸ್ವವಾಸನಾವಶನಾಗಿ ಮುಂದಕ್ಕೆ ಗಮನ ಮಾಡುವನು.

(ಜೇನು ಕುಡಿದು ಅಟ್ಟಿಯನ್ನು ಬಿಟ್ಟು ಹಾರಿಹೋಗುವ ಹುಳುವನ್ನು ಗಮನಿಸಿ. ಹಾಗೆ ಬಿಟ್ಟು ಹೋಗುವಾಗ ಅದಕ್ಕೆ ಹೋಗುವುದೆಲ್ಲಾ ಅಷ್ಟು ಮೇಣ, ಅಷ್ಟು ಕೆಲಸ. ಜೀವನಿಗೂ ಹಾಗೆಯೇ ಅಲ್ಲವೇನು? ಅದಕ್ಕಿಂತ ಗೆದ್ದಿಲಿನ ಸಾಮ್ಯ ಇನ್ನೂ ಚೆನ್ನ. ಗೆದ್ದಿಲು ಏನು ಸಿಕ್ಕಿದರೂ ಮಣ್ಣು ಮಾಡಿ ಅದರಿಂದ ಗೂಡು ಕಟ್ಟುತ್ತದೆ. ಜೇನು, ಗೆದ್ದಿಲು, ಇರುವೆ, ಇವೆಲ್ಲವೂ ಒಂದೇ ಒಂದು ರಾಣಿಯ ಮೈಯ್ಯಿಂದ ಹುಟ್ಟಿದವು, ಒಂದು ರಾಣಿಯೆಂದರೆ ಒಂದು ಗೂಡು. ಅದನ್ನೂ ಗಮನಿಸಿ.)

೨೫. ಎಲೈ ಕುಂತೀಪುತ್ರನೇ, ಜೀವನು ಹೊರಟು ಹೋಗುತ್ತಲೂ, ಗಾಳಿ ಯಿಲ್ಲದಾಗ ಮರವು ನಿಶ್ಚಲವಾಗಿ ಇರುವಂತೆ, ನಿರ್ವ್ಯಾಪಾರವಾಗಿ, ಯಾವ ಅಂಗವೂ ಚಲಿಸದೆ ಇರುವುದು. ಅದೇ ಮರಣವು.

ಅಚೇಷ್ಟಂ ಭೇದಭೇದಾದಿ ದೋಷೈರಾಯಾತ್ಯದೃಶ್ಯತಾಂ ||
ಮೃತ ಇತ್ಯುಚ್ಯತೇ ತೇನ ದೇಹೋ ವಿಗತಜೀವಿತಃ || ೨೬ ||

ಸ ಜೀವಃ ಪ್ರಾಣಮೂರ್ತಿಃ ಖೇ ಯತ್ರಯತ್ರಾವತಿಷ್ಠತೇ |
ತಂ ತಂ ಸ್ವವಾಸನಾಭ್ಯಾಸಾತ್ಪಶ್ಯತ್ಯಾಕಾರಮಾತತಂ || ೨೭ ||

ಅಯಂ ದೇಹೋ ಹಿ ಜೀವೇನ ತ್ವಸನ್ನೇವಾವಲೋಕಿತಃ |
ಅಸ್ಯ ನಾಶೇ ತ್ವಮುಪ್ಯೇವಂ ಪಶ್ಯ ಮಾ ವಾ ಸುಷುಪ್ತವತ್ || ೨೮ ||

ಯಥೈವ ಪಶ್ಯತ್ಯಾಕಾರಾಂಸ್ತೇಷಾಂ ನಾಶಾಂಸ್ತಥೈವ ಸಃ |
ಆದಿಸರ್ಗೇ ಭಾವನಯಾ ಕಿಲ್ಯೆಷ್ವೇವಂ ವಿಭಾವತಃ || ೨೯ ||

---

೨೬. ವ್ಯಾಪಾರವಿಲ್ಲದೆ ಬಿದ್ದಿರುವ ದೇಹವು ಭೇದ ಭೇದ ಮೊದಲಾದವುಗಳಿಂದ ಇಲ್ಲವಾಗಿ ಕಾಣದಾಗುವುದು. ಆಗ ಮೃತವಾಯಿತು. ಎನ್ನುವರು. ದೇಹದಲ್ಲಿದ್ದ ಜೀವನು ಹೊರಟು ಹೋಗುವುದೇ ಮರಣವು.

೨೭. ಆ ಜೀವನು ಪ್ರಾಣ ಮೂರ್ತಿಯು. ಆಕಾಶದಲ್ಲಿ ಅವನು ಎಲ್ಲೆಲ್ಲಿ ನಿಂತು, ಸ್ವವಾಸನಾವಶನಾಗಿ, ಯಾವ ಯಾವ ರೂಪವನ್ನು ಧ್ಯಾನಿಸುವನೋ, ಅದದೇ ಆಕಾರವು ತನಗೆ ಪ್ರಾಪ್ತವಾದುದನ್ನು ಅವನು ಕಾಣುವನು.

೨೮. ಈ ದೇಹವು ನಿಜವಾಗಿಯೂ ಪ್ರತ್ಯೇಕವಾಗಿರಲಿಲ್ಲ. ಜೀವನ ಸಂಕಲ್ಪದಿಂದಲೇ ಉದಯಿಸಿತು. ಅದರಿಂದ ಇದು ನಾಶವಾದರೂ ನೀನು ಹೀಗೆಯೇ ಬಂತು ಹೋಯಿತು ಎಂಬ ಉದಾಸೀನ ದೃಷ್ಟಿಯಿಂದ ಇರು. ಅಥವಾ ಸುಷುಪ್ತ ಪುರುಷನಂತೆ ಏನೂ ನೋಡದೆಯೇ ಇರು.

೨೯. ಈ ಜೀವನು ಆಕಾರಗಳನ್ನು ಸಂಕಲ್ಪದಿಂದ ಕಂಡು, ಅವುಗಳನ್ನು ಪಡೆದಂತೆ, ಅವುಗಳ ನಾಶವನ್ನೂ ಹಾಗೆಯೇ ಮಾಡುವನು ಎಂದುಕೊ. ಸೃಷ್ಟಿಯ ಆದಿಯಲ್ಲಿಯೂ ಹೀಗೆಯೇ ಸಂಕಲ್ಪವಶವಾಗಿಯೇ ತಾನೇ ಎಲ್ಲವೂ ನಡೆದುದು !

(ನನು ಉತ್ಪತ್ತಿ ಕಾಲೇ ಜಗದ್ವಾಸನಾಮಯಂ ಮಿಥ್ಯಾಭೂತಮಸ್ತು ಸ್ಥಿತಿ ಕಾಲೇತು ಅರ್ಥಕ್ರಿಯಾ ಸಮರ್ಥತ್ವಾತ್ ಸರ್ವಜನೀನ ಸತ್ಯತಾನುಭವಾಚ್ಚ ವಾಸ್ತವಮೇವೇತ್ಯಾಶಂಕ್ಯ ಆಹ–ಘುಟತೀತಿ.)

ಝುಟಿತ್ಯುದ್ಭವಕಾಲೇ ಹಿ ಯದ್ಯಥಾ ದೃಶ್ಯತೇ ಪುರಃ |
ಆನಿಪಾತಂ ತದೇವಾಸ್ಯಾ ಅವಿನಾಭಾವಿಸಂವಿದಃ || ೩೦ ||

ಪ್ರಾಕ್ತನಂ ವಾಸನಾಮೂಲಂ ಪುರುಷಾರ್ಥೇನ ಜೀಯತೇ |
ಯತ್ನೇನಾದ್ಯತನೇನಾಶು ಹ್ಯಸ್ತನಾಯತನಂ ಯಥಾ || ೩೧ ||

ಯ ಏವ ಪುರುಷಾರ್ಥೇನ ದೃಷ್ಟೋ ಬಲವತಾ ಕ್ಷಣಾತ್ |
ಪೂರ್ವೋತ್ತರವಿಶೇಷಾಂಶಃ ಸ ಏವ ಜಯತಿ ಸ್ಫುಟಂ || ೩೨ ||

ಅಪಿ ಸ್ಫುಟತಿ ವಿಂಧ್ಯಾದೌ ವಾತಿ ವಾ ಪ್ರಳಯಾನಿಲೇ |
ಪೌರುಷಂ ಹಿ ಯಥಾ ಶಾಸ್ತ್ರಮತಸ್ತ್ಯಾಜ್ಯಂ ನ ಧೀಮತಾ || ೩೩ ||

---

೩೦. ಉದ್ಭವವಾಗುವಾಗ ಯಾವುದು ಯಾವ ಆಕಾರದಿಂದ ಕಾಣು ವುದೋ, ಅದು ಅದೇ–ಆಕಾರದಿಂದ–ಅವಸಾನದವರೆಗೂ ಇರುವುದು. ಇದನ್ನು ಅವಿನಾಭಾವ ಸಂವಿತ್ ಎನ್ನುವರು.

೩೧. ಪ್ರಾಚೀನವಾದ ವಾಸನಾ ಗ್ರಂಥಿ ಯಾವುದುಂಟೋ ಅದನ್ನು ಪುರುಷ ಪ್ರಯತ್ನದಿಂದ ಗೆಲ್ಲಬಹುದು. ನಿನ್ನೆಯ ದಿನ ಕಟ್ಟಿದ ಗುಡಿಸಲನ್ನು ಈ ದಿನದ ಪ್ರಯತ್ನದಿಂದ ಹೇಗೆ ಸುಟ್ಟು ಹಾಕಬಹುದೋ ಹಾಗೆ ಇದು.

[ಪುರುಷಾರ್ಥೇನ ಶ್ರವಣಮನನಾದಿ ಪುರುಷ ಪ್ರಯತ್ನ ಜನಿತೇನ ಅಖಂಡಾ ಕಾರ ಜ್ಞಾನೇನ. —ತಾ. ಪ್ರ.]

೩೨. ಪ್ರಯತ್ನಶೀಲನಾದವನು ಪೂರ್ವೋತ್ತರ ವಿಶೇಷಗಳನ್ನು ಪರಿಗಣಿಸಿ ಯಾವುದನ್ನು ಇದೇ ಪುರುಷಾರ್ಥವೆಂದು ನಿಶ್ಚಯಮಾಡಿಕೊಂಡು ಕಾರ್ಯಪರ ನಾದರೆ, ಅವನು ತಪ್ಪದೆ ಜಯಿಸುವನು.

೩೩. ವಿಂಧ್ಯಾದಿ ಪರ್ವತಗಳಲ್ಲಿ ಭಾರಿಯ ಬಿರುಗಾಳಿಯು ಬೀಸುವಾಗ, ಕಲ್ಲುಗಳೂ ಒಡೆದುಹೋಗುವುದು ಉಂಟಲ್ಲವೆ? ಅದನ್ನು ಕಂಡು ಪ್ರಯತ್ನವು ದೃಢವಾಗಿದ್ದರೆ ಗೆಲ್ಲುವುದು ಎಂಬುದನ್ನು ನಂಬಿ, ಶಾಸ್ತ್ರದಲ್ಲಿ ಹೇಳಿರುವಂತೆ ಪ್ರಯತ್ನವನ್ನು ಮಾಡಬೇಕಲ್ಲದೆ, ಬುದ್ಧಿವಂತನಾದವನು ಪ್ರಯತ್ನವನ್ನು ಬಿಡಬಾರದು.

ನರಕಸ್ವರ್ಗಸರ್ಗಾದಿವಾಸನಾವಶತೋಽಭಿತಃ |
ಪ್ರಪಶ್ಯತಿ ಚಿರಾಭ್ಯಸ್ತಂ ಜೀವೋ ಜರಠಮೋಹಧೀಃ || ೩೪ ||

ಅರ್ಜುನ ಉವಾಚ:—

ನರಕಸ್ವರ್ಗಸರ್ಗಾದಿಸಂಭ್ರಮೇಷು ಜಗತ್ಪತೇ |
ಕಿಮಸ್ಯ ಕಾರಣಂ ಬ್ರೂಹಿ ಜೀವಸ್ಯ ಜಗತಃ ಸ್ಥಿತೇಃ || ೩೫ ||

ಶ್ರೀ ಭಗವಾನ್ ಉವಾಚ:—

ಸ್ವಪ್ನೋಪಮಾನಾ ತೇನೇಹ ಶ್ರೇಯಸೇ ವಾಸನಾಕ್ಷಯಃ |
ಚಿರಾಭ್ಯಾಸವಶಾತ್ಪ್ರೌಢಾ ಸಂಸಾರಭ್ರಮಕಾರಿಣೀ || ೩೬ ||

---

೩೪. ನರಕ, ಸ್ವರ್ಗ, ಇವೆಲ್ಲವೂ ಸೃಷ್ಟಿ ವಾಸನೆಯ ಭೇದಗಳು. ಬಹು ಕಾಲದಿಂದ ಅವುಗಳನ್ನು ಹಾಗೆಯೇ ನೋಡಿ ನೋಡಿ ಅಭ್ಯಾಸವಾಗಿ ಹೋಗಿದೆ. ಅದರಿಂದ ಜೀವನು ಪುರಾತನ ಕಾಲದಿಂದ ಬಂದಿರುವ ಮೋಹವನ್ನು ಆಶ್ರಯಿಸಿ ಇವೆಲ್ಲವನ್ನೂ ಹೀಗೆಯೇ ಕಾಣುವನು.

ಅರ್ಜುನನು ಕೇಳಿದನು :—

೩೫. ಎಲೈ ಜಗತ್ಪತಿಯೇ, ನರಕ, ಸ್ವರ್ಗ ಮೊದಲಾದ ಸೃಷ್ಟಿ ಕಾರ್ಯಗಳ ಕಾರಣವೇನು? ಜೀವ, ಜಗತ್ತು, ಸ್ಥಿತಿ, ಇವುಗಳ ಕಾರಣವೇನು? ಹೇಳು.

[ತಮೇವ ಅವಶ್ಯಂ "ಅಜ್ಞೋ ಜಂತುರನೀಶೋಽಯಮಾತ್ಮನಃ ಸುಖ ದುಃಖಯೋಃ | ಈಶ್ವರ ಪ್ರೇರಿತೋ ಗಚ್ಛೇತ್ ಸ್ವರ್ಗಂ ವಾ ನರಕಂ ತು ವಾ ||— ಇತಿ ವ್ಯಾಸ ವಾಕ್ಯಾದಿ ಪ್ರಸಿದ್ಧಿ ಕಾರಣಾಂತರ ಸಂದೇಹ ನಿರಾಸೇನ ಸ್ಫುಟಂ ಜಿಜ್ಞಾಸು ರರ್ಜುನಃ ಪೃಚ್ಛತಿ! —ತಾ. ಪ್ರ.]

ಶ್ರೀ ಭಗವಂತನು ಹೇಳಿದನು :—

೩೬. ಈ ವಾಸನಾ ಪ್ರಪಂಚವೆಂಬುದು ಕನಸಿನ ಹಾಗೆ. ಆ ವಾಸನೆಯು ಕ್ಷಯವಾದರೆ ಶ್ರೇಯಸ್ಸು ಉಂಟಾಗುವುದು. ಅದರಿಂದಲೇ ಈ ಸಂಸಾರವೆಂಬ ಭ್ರಮೆಯು ಹರಡಿರುವುದು. ದೀರ್ಘಕಾಲದಿಂದ ಇದು ರೂಢಮೂಲವಾಗಿ ರುವುದು.

ಅರ್ಜುನ ಉವಾಚ:—

ಕಿಮುತ್ಥಾ ದೇವದೇವೇಶ ಕ್ಷಿಯತೇ ವಾಸನಾ ಕಥಂ || ೩೭ ||

ಶ್ರೀ ಭಗವಾನ್ ಉವಾಚ:—

ಮೌರ್ಖ್ಯಮೋಹಸಮುತ್ಥಾನಾ ತ್ವನಾತ್ಮನ್ಯಾತ್ಮಭಾವನಾ
ಆತ್ಮಜ್ಞಾನಾನ್ಮಹಾಬೋಧಾದ್ವಿಲಯಂ ಯಾತಿ ವಾಸನಾ || ೩೮ ||

ಭಾವಿತಾತ್ಮಾಸಿ ಕೌಂತೇಯ ಸತ್ಯಂ ವಿಜ್ಞಾತವಾನಸಿ |
ಅಯಂ ಸೋಽಹಂ ಜನಾ ಏತೇ ಮಮೇತಿ ತ್ಯಜ ವಾಸನಾಂ || ೩೯ ||

ಅರ್ಜುನ ಉವಾಚ:—

ವಾಸನಾವಿಲಯೇ ಜೀವೋ ವಿಲೀನೋ ಭವತಿ ಸ್ವಯಂ |
ಯೋ ಹಿ ಯತ್ಸತ್ತಯೋಽತ್ಥಾನಸ್ತನ್ನಾಶಾತ್ಸ ವಿಲೀಯತೇ || ೪೦ ||

ಅರ್ಜುನನು ಕೇಳಿದನು:—

೩೭. ಎಲೈ ದೇವದೇವೇಶ್ವರನೆ, ಈ ವಾಸನೆಯು ಹೇಗೆ ಹುಟ್ಟಿತು ? ಹೇಗೆ ಕ್ಷಯವಾಗುವುದು ?

ಶ್ರೀ ಭಗವಂತನು ಹೇಳಿದನು :—

೩೮. ಮೌರ್ಖ್ಯ ಮೋಹ, ಇವುಗಳಿಂದ ಈ ವಾಸನೆಯು ಹುಟ್ಟುವುದು. ಅನಾತ್ಮದಲ್ಲಿ ಆತ್ಮಭಾವನೆ ಮಾಡುವುದರಿಂದ ಈ ಮೌರ್ಖ್ಯ ಮೋಹಗಳು ಹುಟ್ಟುವುವು. ಆತ್ಮ ಜ್ಞಾನವನ್ನು ಪಡೆದರೆ, ಮಹಾಬೋಧವು ಲಭಿಸಿದರೆ, ಈ ವಾಸನೆಯು ನಾಶವಾಗುವುದು.

೩೯. ಎಲೈ ಕುಂತೀಪುತ್ರನೆ, ಭಾವಿತಾತ್ಮನಾಗಿರುವೆ [ಆತ್ಮವೇ ನಾನೆಂಬ ಭಾವನೆಯನ್ನು ಪಡೆದಿರುವೆ] ಸತ್ಯವು ಯಾವುದು ಎಂಬುದನ್ನು ತಿಳಿದವನಾಗಿರುವೆ. ಇವನು, ಆವನು, ನಾನು, ಈ ಜನರು ನನ್ನವರು ಎಂಬ ವಾಸನೆಯನ್ನು ತ್ಯಾಗಮಾಡು.

ಶ್ರೀ ಅರ್ಜುನನು ಕೇಳಿದನು :—

೪೦. ವಾಸನೆಯು ವಿಲೀನವಾಗಲು ಜೀವನೂ ತಾನೇ ವಿಲೀನನಾಗುವನು. ಯಾವನು ಯಾವ ಸತ್ತೆಯಿಂದ ಹುಟ್ಟಿರುವನೋ ಅದು ನಾಶವಾದರೆ ಅವನೂ ನಾಶವಾಗುವನಲ್ಲವೆ ?

ಜೀವೋ ವಿಲಯಮಾಯಾತೇ ದೇಶಕಾಲಾನ್ಯಥಾಕೃತೌ |
ಕೋಽಸೌ ಭಾಜನತಾಮೇತಿ ಜನ್ಮನೋ ಮರಣಸ್ಯ ಚ ॥ ೪೧ ॥

ಶ್ರೀ ಭಗವಾನ್ ಉವಾಚ:—

ಸ್ವಯಂ ಕಲ್ಪಿತಸಂಕಲ್ಪಮಾತ್ಮರೂಪಂ ಯದಾವಿಲಂ |
ತದೇವ ವಾಸನಾಕಾರಂ ಜೀವಂ ವಿದ್ಧಿ ಮಹಾಮತೇ ॥ ೪೨ ॥

(ಜೀವನು ವಾಸನಾಬಲದಿಂದ ಹುಟ್ಟಿದವನು, ವಾಸನೆಯು ನಾಶವಾಗಲು ಜೀವನೂ ನಾಶವಾಗುವನು, ಎಂದರೆ ಜೀವಸತ್ತೆಯೇ ನಾಶವಾಗುವುದು. ಆಗ 'ಅಹಂ' ಎನ್ನುವುದೇ ಇಲ್ಲವಾಗಲು ಇನ್ನು ಅಹಂ ಬ್ರಹ್ಮಾಸ್ಮಿ ಎನ್ನುವುದೆಂತು? ಎಂಬುದು ಇಲ್ಲಿ ಪ್ರಶ್ನಬೀಜ.)

೪೧. ಹೀಗೆ ವಾಸನಾ ನಾಶದಿಂದ ಜೀವನು ವಿಲಯವನ್ನು ಹೊಂದಲು ದೇಶಕಾಲಗಳೂ ಅನ್ಯಥಾ ಆಗಿಹೋಗಲು (ಎಂದರೆ ಇಲ್ಲವಾಗಲು) ಜನ್ಮ ಮರಣ ಗಳಿಗೆ ಗುರಿಯಾಗಿ ತಿರುಗುವವರು ಯಾರು?

(ದೇಶ ಕಾಲಗಳೂ ಅನ್ಯಥಾ ಆಗಿ ಹೋಗಲು ಎಂಬುದರಿಂದ ಜನ್ಮ ಮರಣಗಳು ಎಂದರೆ ದೇಹದ ಜನನ ಮರಣಗಳು ಎನ್ನುವುದನ್ನು ಬಿಟ್ಟು ಲಕ್ಷಣಯಾ ಸೃಷ್ಟಿ, ಪ್ರಲಯಗಳೆಂದುಕೊಳ್ಳಬೇಕು ಎಂದರೆ ಮುಕ್ತನಾಗುವವನು ಯಾರು ಎಂಬ ಭಾವ.)

ಶ್ರೀ ಭಗವಂತನು ಹೇಳಿದನು:—

೪೨. ಯಾವಾಗ ಆತ್ಮನು ಸ್ವಯಂ ಮಾಡಿಕೊಳ್ಳುವ ಸಂಕಲ್ಪವೆಂಬ ಮಲವನ್ನು ಧರಿಸುವನೋ, ಆಗ ವಾಸನಾಕಾರನಾದ ಜೀವನಾಗುವನು. ಇದನ್ನು ಎಲೈ ಮಹಾಮತಿಯೇ ಗುರುತಿಸು.

(ಅರ್ಜುನನ ಪ್ರಶ್ನದಲ್ಲಿ "ವಾಸನಾ ಎಂಬ ಸ್ವತಂತ್ರ ಸತ್ತೆಯೊಂದಿದೆ, ಅದರಿಂದ ಜೀವನು ಹುಟ್ಟಿದ್ದಾನೆ" ಯೆಂಬೊಂದು ಭ್ರಾಂತಿಯಿದೆ. ಅದನ್ನು

ಅನಾಯತ್ತಮಸಂಕಲ್ಪಮಾತ್ಮರೂಪಂ ಯದವ್ಯಯಂ |
ಪ್ರಬೋಧಾದ್ವಾಸನಾಮುಕ್ತಂ ತನ್ಮೋಕ್ಷಂ ವಿದ್ಧಿ ಭಾರತ || ೪೩ ||

ಜೀವನ್ನೇವ ಮಹಾಬಾಹೋ ತತ್ತ್ವಂ ಪ್ರೇಕ್ಷ್ಯ ಯಥಾಸ್ಥಿತಂ |
ವಾಸನಾವಾಗುರೋನ್ಮುಕ್ತೋ ಮುಕ್ತ ಇತ್ಯಭಿಧೀಯತೇ || ೪೪ ||

ಯೋ ನ ನಿರ್ವಾಸನೋ ನೂನಂ ಸರ್ವಧರ್ಮಪರೋಽಪಿ ಸಃ |
ಸರ್ವಜ್ಞೋಽಪ್ಯಭಿತೋ ಬದ್ಧಃ ಪಂಜರಸ್ಥೋ ಯಥಾ ಖಗಃ || ೪೫ ||

ತೋರಿಸಿ, "ವಾಸನಾಯೆಂಬ ಸತ್ತೆಯಿಲ್ಲ. ಸತ್ತಾಮಾತ್ರನಾದ ಆತ್ಮನು ಭ್ರಾಂತಿಯಿಂದ ಸ್ವಸಂಕಲ್ಪ ವಶವಾಗಿಯೇ ವಾಸನಾಮಯನಾದ ಜೀವನಾಗುವನು. ಆ ವಾಸನೆಯು ಹೋದರೆ ಸತ್ತಾ ನಾಶವಾಗಲಿಲ್ಲ. ಜೀವಸತ್ತಾ ಆಗಿದ್ದುದು ಆತ್ಮಸತ್ತೆಗೆ ಹಿಂತಿರುಗಿತು." ಎಂಬರ್ಥವನ್ನು ಸ್ವಾಮಿಯು ಹೇಳಿದ್ದಾನೆ.)

೪೩. ಸ್ವತಂತ್ರವಾಗಿ, ಸಂಕಲ್ಪ ರಹಿತವಾಗಿ, ಅವ್ಯಯವಾಗಿರುವ, ಆತ್ಮರೂಪವು ಯಾವುದುಂಟೋ ಅದೇ ತಾನೆಂಬ ಪ್ರಬೋಧವು ಲಭಿಸಲು ವಾಸನೆಯು ವಿಲಯವಾಗುವುದು. ಭಾರತ, ಅದೇ ಮೋಕ್ಷವೆಂದು ತಿಳಿ.

೪೪. ಎಲೈ ಮಹಾ ಬಾಹುವೆ, ಜೀವಂತನಾಗಿರುವಾಗಲೇ ತತ್ವವನ್ನು ಯಥಾವತ್ತಾಗಿ ಎಂದರೆ ಅದು ಹೇಗೆ ಇರುವುದೋ ಹಾಗೆ, ಕಂಡು, ವಾಸನೆ ಎಂಬ ಬಲೆಯಿಂದ ಮುಕ್ತನಾಗುವವನನ್ನೇ ಮುಕ್ತನೆನ್ನುವರು.

೪೫. ಸರ್ವಧರ್ಮಗಳನ್ನು ಆಚರಿಸಿದವನೇ ಆಗಲಿ, ಸರ್ವಜ್ಞನೇ ಆಗಲಿ. ಯಾವನು ವಾಸನಾತ್ಯಾಗ ಮಾಡಿಲ್ಲವೋ ಅವನು ಪಂಜರದಲ್ಲಿರುವ ಹಕ್ಕಿಯ ಹಾಗೆ ಸರ್ವ ದಿಕ್ಕುಗಳಲ್ಲೂ ಬದ್ಧನೇ ಸರಿ.

ದುರ್ದರ್ಶನಸ್ಯ ಗಗನೇ ಶಿಖಿಪಿಚ್ಛಿಕೇವ
ಸೂಕ್ಷ್ಮಾ ಪರಿಸ್ಫುರತಿ ಯಸ್ಯ ತು ವಾಸನಾಂತಃ |
ಮುಕ್ತಃ ಸ ಏವ ಭವತೀಹ ಹಿ ವಾಸನೈವ
ಬಂಧೋ ನ ಯಸ್ಯ ನನು ತತ್ ಕ್ಷಯ ಏವ ಮೋಕ್ಷಃ || ೪೬ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ ಅರ್ಜುನೋಪಾಖ್ಯಾನೇ "ಜೀವತತ್ತ್ವನಿರ್ಣಯೋ" ನಾಮ ಪಂಚಪಂಚಾಶಃ ಸರ್ಗಃ

---

೪೬. (ಸಂಸಾರ ವಾಸನೆಯು ತಾನೇ ತಾನಾಗಿರುವ ಜೀವನ) ಹೃದಯಾಕಾಶದಲ್ಲಿ, ದರ್ಶನಕ್ಕೆ ಸಿಕ್ಕದ ಬ್ರಹ್ಮವನ್ನು ಕುರಿತ ವಾಸನೆಯು ನವಿಲು ಗರಿಯ ಕೊನೆಯಷ್ಟು ಉದಯವಾದರೆ ಸಾಕು, ಅವನು ನಿಜವಾಗಿಯೂ ಮುಕ್ತನಾಗುವನು. ವಾಸನೆಯೇ ಬಂಧವು. ಅದರ ಕ್ಷಯವೇ ಮೋಕ್ಷವು.

["ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" ಎಂಬ ಗೀತಾವಾಕ್ಯವನ್ನು ಸ್ಮರಿಸಿ. ಜೊತೆಗೆ ಹತ್ತಿಯ ಪರ್ವತನ್ನು ಸುಡಲು ಬೆಂಕಿಯು ಎಷ್ಟು ಬೇಕು ? ಅದನ್ನು ಯೋಚಿಸಿ.]

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ಜೀವತತ್ತ್ವನಿರ್ಣಯ" ಎಂಬ ಐವತ್ತೈದನೆಯ ಸರ್ಗವು.

ಷಟ್‌ಪಂಚಾಶಃ ಸರ್ಗಃ

ಶ್ರೀ ಭಗವಾನ್ ಉವಾಚ:—

ಇತಿ ನಿರ್ವಾಸನತ್ವೇನ ಜೀವನ್ಮುಕ್ತತಯಾರ್ಜುನ ।
ಅಂತಃಶೀತಲತಾಮೇತ್ಯ ಬಂಧುದುಃಖಮಲಂ ತ್ಯಜ ॥ ೧ ॥

ಜರಾಮರಣನಿಃಶಂಕ ಆಕಾಶವಿಶದಾಶಯಃ ।
ತ್ಯಕ್ತೇಷ್ಟಾನಿಷ್ಟಸಂಕಲ್ಪೋ ವೀತರಾಗೋ ಭವಾನಘ ॥ ೨ ॥

ಪ್ರವಾಹಪತಿತಂ ಕಾರ್ಯಮಿದಂ ಕಿಂಚಿದ್ಯಥಾಗತಂ ।
ಕುರು ಕಾರ್ಯಾಣಿ ಕರ್ಮಾಣಿ ನ ಕಿಂಚಿದಿಹ ನಶ್ಯತಿ ॥ ೩ ॥

ಐವತ್ತಾರನೆಯ ಸರ್ಗವು

ಶ್ರೀ ಭಗವಂತನು ಹೇಳಿದನು :—

೧. ಹೀಗೆ ಒಳಗಿರುವ ವಾಸನಾತ್ವವನ್ನು ಕಳೆದುಕೊಂಡು ಜೀವನ್ಮುಕ್ತನಾಗಿ, ಅರ್ಜುನ, ಅಂತಃಕರಣವು ಸೌಮ್ಯವಾಗಿ ಶಾಂತವಾಗುವಂತೆ, ಬಂಧುದುಃಖವೆಂಬ ಮಲವನ್ನು ಬಿಡು.

೨. ಎಲೈ ಅನಘನೆ, ಮುಪ್ಪಡಸುವುದು, ಮರಣವು ಬರುವುದು, ಎಂಬ ಭೀತಿಗಳನ್ನು ಕಳೆದುಕೊಂಡು ನಿಶ್ಶಂಕನಾಗಿ, ಆಕಾಶದಂತೆ ನಿರ್ಮಲವಾದ ಅಂತಃಕರಣವುಳ್ಳವನಾಗಿ; ಇದು ಇಷ್ಟ, ಇದು ಅನಿಷ್ಟ ಎಂಬ ಸಂಕಲ್ಪಗಳನ್ನೆಲ್ಲಾ ಹೊರನೂಕಿ, ವೀತರಾಗನಾಗು, ವೈರಾಗ್ಯ ಸಂಪನ್ನನಾಗು.

೩. ಶಿಷ್ಟಾಚಾರ ಸಮ್ಮತವಾದ ಸಂಪ್ರದಾಯಕ್ಕೆ ಅನುಸಾರವಾಗಿ ಮಾಡಬೇಕಾದ ಕಾರ್ಯಗಳನ್ನು ಮಾಡಬೇಕಾಗಿ ಬಂದಾಗ ಮಾಡಿಯೇ ಬಿಡು. ಕಾರ್ಯ, ಕರ್ಮಗಳನ್ನು ಅವುಗಳಿಗೆ ಬದ್ಧನಾಗದೆ ಮಾಡಿದರೆ ಏನೂ ಹಾನಿಯಿಲ್ಲ.

[ಕಾರ್ಯ ಅವಶ್ಯಕರ್ತವ್ಯಮಿದಂ ಯುದ್ಧಂ ಅನ್ಯಾನಿ ಚ ಅವಶ್ಯಕಾನಿ ಯಾಗದಾನಾದೀನಿ ಕುರು; ತೇನ ತತ್ವ ಬೋಧಸ್ಯ ನ ಕಾಚಿತ್ ಕ್ಷತಿರಿತಿ —ತಾ. ಪ್ರ.]

ಪ್ರವಾಹಪತಿತಂ ಕರ್ಮ ಸ್ವನೇಽವ ಕ್ರಿಯತೇ ತು ಯತ್ |
ಜೀವನ್ಮುಕ್ತಸ್ವಭಾವೋಽಯಂ ಸಾ ಜೀವನ್ಮುಕ್ತತಾ ತಥಾ ॥ ೪ ॥

ಇದಂ ಕರ್ಮ ತ್ಯಜಾಮೀದಮಾಶ್ರಯಾಮೀತಿ ನಿರ್ಣಯಃ |
ಮೂಢಸ್ಯ ಮನಸೋ ರೂಪಂ ಜ್ಞಾನಿನಸ್ತು ಸಮಾ ಸ್ಥಿತಿಃ ॥ ೫ ॥

ಪ್ರವಾಹಪತಿತಂ ಕರ್ಮ ಕುರ್ವಂತಃ ಶಾಂತಚೇತಸಃ |
ಜೀವನ್ಮುಕ್ತಾಃ ಸುಷುಪ್ತಸ್ಥಾಃ ಸ್ಫುರತ್ಯತ್ರ ಸುಷುಪ್ತವತ್ ॥ ೬ ॥

ಸ್ಥಿರಾಂ ಸಂಸ್ಥಿತಿಮಾಯಾಂತಿ ಕೂರ್ಮಾಂಗಾನೀವ ಸರ್ವಶಃ |
ಇಂದ್ರಿಯಾಣೀಂದ್ರಿಯಾರ್ಥೇಭ್ಯೋ ಹೃದಿ ಯಸ್ಯ ಸ್ವಭಾವತಃ ॥ ೭ ॥

---

೪. ಶಿಷ್ಟಾಚಾರ ಪ್ರವಾಹದಲ್ಲಿ ಅವಶ್ಯವಾಗಿ ಮಾಡಿಯೇತೀರಬೇಕಾಗಿ ಬರುವ ಕರ್ಮವು ತಾನಾಗಿಯೇ ಮಾಡಲ್ಪಡುವುದು. ಅಲ್ಲಿ ನಿನ್ನ ಕರ್ತೃತ್ವವೇನೂ ಇರುವುದಿಲ್ಲ. ಅದರಿಂದ ಅದೇ ಜೀವನ್ಮುಕ್ತ ಸ್ವಭಾವವು. ಅದರಿಂದ ಹಾಗೆ ಪ್ರವಾಹ ಪತಿತ ಕಾರ್ಯಪರತ್ವವೇ ಜೀವನ್ಮುಕ್ತತೆಯು.

೫. ಈ ಕರ್ಮವನ್ನು ಬಿಡುವೆನು: ಇದನ್ನು ಆಶ್ರಯಿಸುವೆನು: ಎಂಬ ನಿರ್ಣಯವು ಮೂಢನ ಮನಸ್ಸಿನ ರೂಪವು. ಜ್ಞಾನಿಗೆ ಅದಿಲ್ಲ. ಸಮವಾಗಿದ್ದುಕೊಂಡು ಹೇಯಉಪಾದೇಯಗಳನ್ನು ವರ್ಜಿಸಿರುವ ಸ್ಥಿತಿಯು ಜ್ಞಾನಿಯದು.

೬. ಪ್ರವಾಹ ಪತಿತವಾದ ಕರ್ಮವನ್ನು ಮಾಡುತ್ತಿದ್ದರೂ ಸಂಕಲ್ಪ ರಹಿತವಾಗಿ ಶಾಂತವಾದ ಅಂತಃಕರಣವುಳ್ಳವರಾಗಿರುವ, ಜೀವನ್ಮುಕ್ತರು ಸುಷುಪ್ತಿಯಲ್ಲಿ ಇರುವವರಂತೆ ನಿರ್ವ್ಯಾಪಾರ, ನಿರಭಿಮಾನವುಳ್ಳವರಾಗಿ ವ್ಯವಹರಿಸುವರು.

೭. ಜೀವನ್ಮುಕ್ತನ ಇಂದ್ರಿಯಗಳು ಇಂದ್ರಿಯಾರ್ಥ ಚಿಂತನವಿಲ್ಲದೆ ಸ್ವಭಾವವನ್ನು ಹಿಡಿದು ಹೃದಯದಲ್ಲಿ ಸ್ಥಿರವಾಗಿ ಸಂಸ್ಥಿತಿಯನ್ನು, ಚಿಪ್ಪಿನೊಳಕ್ಕೆ ಸೇರಿಕೊಳ್ಳುವ ಆಮೆಯ ಅಂಗಗಳಂತೆ, ಪಡೆದಿರುವುವು.

ವಿಶ್ವಾತ್ಮನಿ ತಥಾ ವಿಶ್ವಂ ಕಾಲತ್ರಯಮಯೋದಿತಂ ।
ಅಭಿತ್ತಿ ತ್ರಿಜಗಚ್ಚಿತ್ರಂ ಕುರುತೇ ಚಿತ್ತಚಿತ್ರಕೃತ್ ॥ ೮ ॥

ವ್ಯೋಮ್ನಿ ವ್ಯೋಮಾತ್ಮಕಮಪಿ ಪ್ರಸ್ಫುಟಂ ವೃತ್ತಿವರ್ತಿಭಿಃ ।
ಚಿತ್ತಚಿತ್ರಕರೇಣಾದೌ ಚಿತ್ರಂ ಚಿತ್ರಂ ವಿತಾನಿತಂ ॥ ೯ ॥

ಪಶ್ಚಾದ್ಭಿತ್ತಿಃ ಕೃತಾ ವ್ಯೋಮರೂಪಾ ಚಾಸಾವಹೋ ಭ್ರಮಃ ।
ಅಪೂರ್ವೈರ್ವಾತಿಮಾಯೇಯಂ ತೃಣಕುಡ್ಯಮಯೀ ಶುಭಾ ॥ ೧೦ ॥

ನ ಮನಾಗಪಿ ಭೇದೋಽಸ್ತಿ ಸ್ಫುಟಮಪ್ಯುಪಲಬ್ಧಯೋಃ ।
ಇಮಾ ಯಾ ಉಪಲಕ್ಷ್ಯಂತೇ ಭಿತ್ತಯಶ್ಚಿತ್ತಚಿತ್ರಜಾಃ ॥ ೧೧ ॥

---

೮. ವಿಶ್ವಾತ್ಮನಲ್ಲಿ ವಿಶ್ವವೂ ಕಾಲತ್ರಯಮಯವಾಗಿ ಉದಯವಾಗುವುದು (ಕಾಲವಶವಾಗಿ ಕಾಣಿಸಿಕೊಳ್ಳುವುದು.) ಆ ತ್ರಿಜಗಚ್ಚಿತ್ರವು ಅಭಿತ್ತಿಯು ಎಂದರೆ ಗೋಡೆಯೇ ಇಲ್ಲದ್ದು. ಆದರೂ ಚಿತ್ತವೆಂಬ ಚಿತ್ರವನ್ನು ಅದು ಬರೆಯುವುದು.

೯. ಆಕಾಶದಲ್ಲಿ ಆಕಾಶಮಯವಾಗಿಯೇ ವ್ಯಕ್ತವಾಗಿರುವ ವ್ಯವಹಾರಗಳೆಂಬ ಬಣ್ಣದ ಬತ್ತಿಗಳಿಂದ ಚಿತ್ತವೆಂಬ ಚಿತ್ರಕಾರನು ಚಿತ್ರಚಿತ್ರಗಳನ್ನು ಬರೆಯುತ್ತಿರುವನು.

೧೦. ಲೋಕದಲ್ಲಿ ಎಲ್ಲರೂ ಭಿತ್ತಿಯಲ್ಲಿ ಚಿತ್ರವನ್ನು ಬರೆದರೆ ಈ ಚಿತ್ರಕಾರನು ಬರೆಯುವ ರೀತಿಯೇ ಬೇರೆ ! ಮೊದಲು ಚಿತ್ರಗಳನ್ನೆಲ್ಲ ಬರೆದ ಮೇಲೆ ವ್ಯೋಮರೂಪವಾದ ಭಿತ್ತಿಯು ಅವುಗಳಿಗೆ ಸಿಕ್ಕುವುದು. ಅದೇ ಭ್ರಮವೆಂಬುದು. ಈ ಭ್ರಮಾರೂಪವಾದ ಭಿತ್ತಿಯು ಅಪೂರ್ವ ಎಂದರೆ ಮೊದಲು ಇರಲಿಲ್ಲ. ಇದು ಅತಿ ಮಾಯೆಯು: ದೊಂಬನ ಮಾಯಾ ಜಾಲವನ್ನೂ ಮೀರಿದುದು ತೃಣದಿಂದ ಹಿಡಿದು ಕುಡ್ಯದವರೆಗೆ ಇದರಲ್ಲಿ ಎಲ್ಲವೂ ಇರುವುದು. ಭ್ರಾಂತರ ದೃಷ್ಟಿಯಲ್ಲಿ ಇದೇ ಶುಭವು.

೧೧. ಈ ಚಿತ್ತ ಚಿತ್ರದಲ್ಲಿರುವ ಇನ್ನೊಂದು ವಿಚಿತ್ರವೆಂದರೆ, ಲೋಕದ ಚಿತ್ರಗಳಂತೆ ಇಲ್ಲಿ ಚಿತ್ರವು ಬೇರೆ, ಚಿತ್ರಕ್ಕೆ ಆಧಾರವಾದ ಭಿತ್ತಿಯು ಬೇರೆ ಎನ್ನುವಂತಿಲ್ಲ. ಆಧಾರವಾದ ಭಿತ್ತಿ, ಆಧೇಯವಾದ ಚಿತ್ರ, ಇವೆರಡೂ ಆಗಿರುವುದು ಒಂದೇ ದ್ರವ್ಯದಿಂದ: ಅದರಿಂದ ಇವೆರಡಕ್ಕೂ ಏನೂ ಭೇದವಿಲ್ಲ.

ವ್ಯೋಮ್ನಃ ಶೂನ್ಯತಮಾ ವಿದ್ಧಿ ತಾಸ್ತಾಮರಸಲೋಚನ ।
ಕ್ಷಣೇನ ಚೇತಸಿ ಯಥಾ ಭ್ರಾಂತೌ ಲೋಕಕ್ಷಯೋದಯೌ ॥ ೧೨ ॥

ಆತ್ಮಾ ಜಗತ್ತಥೈವೇದಂ ಸಬಾಹ್ಯಾಭ್ಯಂತರಂ ನಭಃ ।
ಚಿರಂತನಮನೋರಾಜ್ಯಂ ಯತ್ತಸ್ಮಾತ್ಕಿಲ ಸತ್ಯತಾ ॥ ೧೩ ॥

ಕಿಂತ್ವನಾಲೋಕಿತೇಪಿ ಸ್ಯಾತ್ಸತ್ಯಂ ನಾಸ್ತ್ಯೇವ ವಿಭ್ರಮೇ ।
ಕ್ರಮೇಣಾಲೋಕತಃ ಸತ್ಯಮಾಲೋಕೇನ ವಿಲೀಯತೇ ॥ ೧೪ ॥

ದೃಶ್ಯಮಾನಮಪಿ ಕ್ಷಾಮಂ ಶರದೀವಾಭ್ರಮಂಡಲಂ । ॥ ೧೫ ॥

ಚಿತ್ತಚಿತ್ರಕೃತಶ್ಚಿತ್ರೇ ಸಸ್ಥಿತಾಶ್ಚಿತ್ರಪುತ್ರಿಕಾಃ ।
ಭಿತ್ತ್ಯಭಾವಾದನಾಕಾರಾ ಬಹಿಸ್ತ್ರೀಭುವನಾದಿಕಾಃ ॥ ೧೬ ॥

---

೧೨. ಆ ಭಿತ್ತಿ ಚಿತ್ರಗಳು ಆಕಾಶಕ್ಕಿಂತಲೂ ಶೂನ್ಯವೆಂಬುದನ್ನು ಮೊದಲು ಕಂಡುಕೋ. ಎಲೈ ಕಮಲಲೋಚನನೇ, ಒಂದೇ ಒಂದು ಕ್ಷಣದಲ್ಲಿ ಚಿತ್ತದಲ್ಲಿ ಭ್ರಾಂತಿಯಿಂದಲೇ ಲೋಕ ಲೋಕಗಳನ್ನು ಪ್ರಲಯ ಮಾಡಿ ಸೃಷ್ಟಿ ಮಾಡುವ ಸ್ವಪ್ನದಂತಿದು.

೧೩. ಅದರಿಂದ ಆತ್ಮನೆಂದರೆ ಮನಸ್ಸು: ಅದರಿಂದ ಆದ ಕಾರ್ಯವು ಜಗತ್ತು. ಅದರಿಂದ ಈ ಜಗತ್ತೆಲ್ಲವೂ ಬಾಹ್ಯ-ಅಭ್ಯಂತರಗಳಲ್ಲೆಲ್ಲ ಆಕಾಶದಂತೆ ಶೂನ್ಯವು. ಆದರೂ ಈ ಮನೋರಾಜ್ಯವು ಬಹುಕಾಲದಿಂದ ಇರುವುದರಿಂದ ಇದನ್ನು ಸತ್ಯವೆಂದುಕೊಂಡಿರುವರು.

೧೪–೧೫. ಹೀಗಿರುವುದರಿಂದ, ಚೆನ್ನಾಗಿ ನೋಡದಿರುವಾಗ ಸತ್ಯವೆಂದು ಕಾಣುವುದು ಯಾವುದೋ ಅದೇ ಕ್ರಮವಾಗಿ ವಿಚಾರ ಮಾಡಿ ನೋಡಲು, (ಹಿಂದೆ ಭ್ರಾಂತಿಯಿಂದ ಸತ್ಯವೆಂದು ಕಂಡಿದ್ದುದೆಲ್ಲವೂ) ವಿಲೀನವಾಗಿ ಹೋಗುವುದು. ಶರದೃತುವಿನಲ್ಲಿ ಕಾಣುವ ತೆಳುವಾದ ಮೋಡಗಳು ಕಣ್ಣಿಗೆ ಕಾಣಿಸುತ್ತಿದ್ದರೂ ಸೂರ್ಯನ ತಾಪದಿಂದ ಕರಗಿಹೋಗುವುದಿಲ್ಲವೆ ?

೧೬. ಚಿತ್ತವೆಂಬ ಚಿತ್ರಕಾರನು ಬರೆದಿರುವ ಚಿತ್ರದಲ್ಲಿ ಹೊರಗೆ ತ್ರಿಭುವನ ಮೊದಲಾದ ಚಿತ್ರದ ಬೊಂಬೆಗಳು ಭಿತ್ತಿಯಿಲ್ಲದಿರುವುದರಿಂದ ಅನಾಕಾರಗಳಾಗಿಯೇ ಕಾಣುತ್ತಿರುವುವು.

ನ ತಾಃ ಸಂತಿ ನ ವಾಸಿ ತ್ವ ಕಿಂ ಕೇನ ಪರಿರೋಧ್ಯತೇ ।
ರೋಧ್ಯರೋಧಕಸಂಮೋಹಂ ತ್ಯಕ್ತ್ವಾ ಖೇ ವಿಮಲೋ ಭವ ॥ ೧೭ ॥

ಪ್ರವೃತ್ತಿರೇವ ನ ವ್ಯೋಮ್ನಃ ಪ್ರವೃತ್ತಿಶ್ಚೈವ ಖಾತ್ಮಿಕಾ । ॥ ೧೮ ॥

ಅತಃ ಕಾಲಕ್ರಿಯಾಕುಡ್ಯಕಲಾದಿವಿಮಲಂ ನಭಃ ।
ಚಿತ್ರಸಂಸ್ಥಂ ಯಥಾ ಚಿತ್ರಂ ಸರೂಪಮಖಿಲಾತ್ಮಕಂ ॥ ೧೯ ॥

ವ್ಯೋಮ್ನಃ ಶೂನ್ಯತಪಂ ವಿದ್ಧಿ ತಥೇದಮಖಿಲಂ ಜಗತ್ ।
ಚಿತ್ತಭಿತ್ತೌ ಕೃತಂ ಚಿತ್ರಂ ಯಚ್ಚಿಚ್ಚಿತ್ರಕರೇಣ ತತ್ ॥ ೨೦ ॥

ಸರ್ವಶೂನ್ಯತಯಾ ವ್ಯೋಮ್ನೋ ಮನಾಗಪಿ ನ ಭಿದ್ಯತೇ । ॥ ೨೧ ॥

---

೧೭. ಆ ಭುವನಾದಿಗಳೂ ಇಲ್ಲ: ಅವನ್ನು ನೋಡುತ್ತಿರುವೆನೆಂದು ಕೊಳ್ಳುತ್ತಿರುವ ನೀನೂ ಇಲ್ಲ. ಅದರಿಂದ ಯಾರು ಘಾತ ಮಾಡುವರು ? ಹತ್ಯ, ಹಂತಕ, ಎಂಬ ಸಂಮೋಹವನ್ನು ಬಿಟ್ಟು ಚಿದಾಕಾಶದಲ್ಲಿ ನಿಂತು ಶುದ್ಧನಾಗಿರು.

೧೮. ಚಿದಾಕಾಶದಲ್ಲಿ ಯಾವ ರೀತಿಯಾದ ವ್ಯಾಪಾರವೂ ಇಲ್ಲವೇ ಇಲ್ಲ. ಇರುವಂತೆ ಕಾಣುವ ಪ್ರವೃತ್ತಿಯಾದರೂ ಆಕಾಶದಂತೆ ಶೂನ್ಯವೇ ಆದುದು.

೧೯. ಅದರಿಂದ, ಸ್ಪಷ್ಟವಾಗಿ ತೋರುತ್ತಿರುವ ಕ್ರಿಯಾ, ಕುಡ್ಯ, ಕಲಾ ಮೊದಲಾದವುಗಳಿಗೂ ಅವಕಾಶ ಕೊಟ್ಟಿರುವ ಈ ಆಕಾಶವೂ ಚಿತ್ತದಲ್ಲಿಯೇ ಇದೆಯೆಂದು ತಿಳಿ. ಬರೆಯುವುದಕ್ಕೆ ಮುಂಚೆಯೇ ಚಿತ್ರವು ಅಂಗಾಂಗ ಸಂಪೂರ್ಣವಾಗಿ ಚಿತ್ತದಲ್ಲಿರುವುದಲ್ಲವೇ ? ಇದೂ ಕೂಡ ಅದರಂತೆಯೇ.

೨೦. ಆಕಾಶವು ಹೇಗೆ ಶುದ್ಧ ಶೂನ್ಯವಾದುದೋ, ಅದರಂತೆಯೇ ತದ್ರೂಪವಾದ ಈ ಅಖಿಲ ಜಗತ್ತೂ ಶೂನ್ಯವೆಂದೇ ತಿಳಿ. ಚಿತ್ತವೆಂಬ ಭಿತ್ತಿಯಲ್ಲಿ ಚಿತ್ತೆಂಬ ಚಿತ್ರಕಾರನು ಬರೆದಿರುವ ಚಿತ್ರವು ಈ ಜಗತ್ತು.

೨೧. ಆಕಾಶವು ಹೇಗೆ ಸರ್ವಶೂನ್ಯವಾಗಿರುವುದರಿಂದ ಅದನ್ನು ಇದು ಬೇರೆ ಇದು ಬೇರೆ ಎಂದು ಪ್ರತ್ಯೇಕಿಸಿ ವಿಭಾಗ ಮಾಡಲು ಆಗುವುದಿಲ್ಲ.

ಯಥಾ ಪ್ರಕಚತಶ್ಚಿತ್ತೇ ಜಗನ್ನಿರ್ಮಾಣಸಂಕ್ಷಯೌ ।
ಕ್ಷಣೇನೈವ ತಥೈವೇಮೌ ಭುವಿಸ್ಥಾವಿತಿ ವಿದ್ಧಿ ಹೇ ॥ ೨೨ ॥

ಅದ್ಯ ಕ್ಷೀಣಾ ಮನೋರಾಜ್ಯೇ ನಾನಾನುಭವನಾತ್ಮನಿ ।
ಕ್ಷಣಭಾವಿತಮೋಹೇನ ಕಲ್ಪನಾ ಪರಿಕಲ್ಪಿತಾ ॥ ೨೩ ॥

ಅಸದೇವ ಮನೋರಾಜ್ಯಂ ಕರ್ತುಂ ಶಕ್ತಂ ಯಥಾ ಮನಃ ।
ಕ್ಷಣಸ್ಯ ಕಲ್ಪೀಕರಣೇ ತಥೈವ ಬಲವನ್ಮನಃ ॥ ೨೪ ॥

ಕ್ಷಣಂ ಕಲ್ಪೀಕರೋತ್ಯೇತತ್ತಚ್ಚಾಲ್ಪಂ ಕುರುತೇ ಬಹು ।
ಅಸತ್ಸತ್ಕುರುತೇ ಕ್ಷಿಪ್ರಮಿತೀಯಂ ಭ್ರಾಂತಿರುತ್ಥಿತಾ ॥ ೨೫ ॥

---

೨೨. ಹೊಳೆ ಹೊಳೆಯುವ ಚಿತ್ತಿನ ಹೊಳೆಹಿನಿಂದಲೇ ಜಗತ್ತಿನ ನಿರ್ಮಾಣ ಪ್ರಲಯಗಳು ಚಿತ್ತದಲ್ಲಿಯೇ ಹೇಗೆ ಆಗಿ ಹೋಗುವುವೋ, ಹಾಗೆಯೇ ಬಾಹ್ಯದಲ್ಲಿಯೂ ಈ ಸೃಷ್ಟಿ ಸಂಹಾರಗಳು ಒಂದೇ ಕ್ಷಣದಲ್ಲಿಯೇ ನಡೆದುಹೋಗುವುವೆಂದು ತಿಳಿ.

೨೩. ನಾನಾ ರೂಪವಾದ ಅನುಭವಗಳನ್ನು ಅನುಭವಿಸುತ್ತಿರುವ ಚಿತ್ತರೂಪವಾದ ಮನೋರಾಜ್ಯದಲ್ಲಿ, ಒಂದು ಕ್ಷಣ ಅನುಭವಿಸುವ ಮೋಹದಿಂದ ಈ [ವಧ್ಯವಧಕರೂಪ] ವಾದ, ಅಸತ್ಯವಾದುದರಿಂದ ಕ್ಷೀಣವಾದ, ಕಲ್ಪನೆಯು ಕಲ್ಪಿತವಾಗಿರುವುದು.

೨೪. ಇಲ್ಲದೆಯೇ ಇರುವ ಒಂದು ಮನೋರಾಜ್ಯವನ್ನು ಮನಸ್ಸು ಹೇಗೆ ಕಲ್ಪಿಸಬಲ್ಲುದೋ ಹಾಗೆಯೇ ಒಂದು ಕ್ಷಣವನ್ನು ಒಂದು ಕಲ್ಪವನ್ನೂ ಮಾಡುವ ಸಾಮರ್ಥ್ಯವನ್ನು ಮನಸ್ಸು ಪಡೆದಿರುವುದು.

೨೫. ಕ್ಷಣವನ್ನೊಂದು ಕಲ್ಪದಷ್ಟು ದೊಡ್ಡದು ಮಾಡಬಲ್ಲುದು. ಹಾಗೆಯೇ ಬಹುವನ್ನು ಅಲ್ಪವೂ ಮಾಡಬಲ್ಲುದು. ಅಸತ್ತನ್ನು ಸತ್ತಾಗಿ ಒಂದೇ ಕ್ಷಣದಲ್ಲಿ ಮಾಡಬಲ್ಲುದು. ಇದೇ ಭ್ರಾಂತಿಯ ಉದಯವು.

ಕ್ಷಣೇನೈವ ಮನೋರಾಜ್ಯಂ ಪ್ರತಿಭಾತಂ ಸ್ವಭಾವತಃ ।
ಯದ್ವಿಚಿತ್ರಾತ್ಮ ತದಿದಂ ಜಗಜ್ಜಾಲಮಿತಿ ಸ್ಥಿತಂ ॥ ೨೬ ॥

ಸರ್ಗೇ ನಿರ್ವಾಣನಿಷ್ಠತ್ವಾನ್ನಿಮೇಷಮಯಮುತ್ಥಿತಂ ।
ಪ್ರತಿಭಾಸಮಾತ್ರತೋಽತ್ರೈವ ಕಲ್ಪಿತಾ ವಜ್ರಸಾರತಾ ॥ ೨೭ ॥

ಪ್ರತಿಭಾಸವಿಪರ್ಯಾಸಮಾತ್ರಂ ಹ್ಯವಿದಿತಾಕೃತೇಃ ।
ಪ್ರವೃತ್ತೌ ವಾ ನಿವೃತ್ತೌ ವಾ ಕ್ವೈವ ಸಾ ವಜ್ರಸಾರತಾ ॥ ೨೮ ॥

ಚಿತ್ತಚಿತ್ರಕೃತಶ್ಚಿತ್ಸ್ಥಂ ಜಗಚ್ಚಿತ್ರಂ ಕದಾ ಸ್ಥಿತಂ ।
ಅಕುಡ್ಯಮಪ್ಯರಂಗಾಢ್ಯಮಿದಂ ಸ್ಫಾರಮಿವಾಗ್ರತಃ ॥ ೨೯ ॥

---

೨೬. ಹೀಗೆ ಒಂದೇ ಕ್ಷಣದಲ್ಲಿಯೇ ಸ್ವಭಾವದಿಂದಲೇ ಹುಟ್ಟಿ ಬೆಳೆದು ಹೋಗುವ ಮನೋರಾಜ್ಯದ ವಿಚಿತ್ರತೆಯು ಯಾವುದುಂಟೋ ಅದೇ ವಿಚಿತ್ರವೇ ಜಗಜ್ಜಾಲವಾಗಿರುವುದು.

೨೭. ಹುಟ್ಟುವಾಗಲೇ ಮೃತ್ಯುಗ್ರಸ್ತವಾಗಿದ್ದರೂ ಇದು ಒಂದೇ ನಿಮೇಷ ಮಾತ್ರ ಇರುವುದಾದರೂ ಪ್ರತಿಭಾನಮಾತ್ರದಿಂದಲೇ ಇದು ವಜ್ರಸಾರವಾಗಿ ಕಾಣಿಸುವುದು.

೨೮. ಆದರೆ, ಪ್ರವೃತ್ತಿಯಾಗಲಿ, ನಿವೃತ್ತಿಯಾಗಲಿ ಇದು ಕೇವಲ ಸ್ವಪ್ನದಂತೆ ಪ್ರತಿಭಾಸ ಮಾತ್ರವಾದುದು: ಆದುದರಿಂದ ಇದು ಏನು ಎಂಬುದನ್ನು ಯಾರೂ ಹೇಳಲಾರರು. ಹೀಗಿರಲು, ಇದಕ್ಕೆ (ವಜ್ರದಂತೆ ದೃಢನಾಗಿರುವ) ವಜ್ರಸಾರತೆಯು ಎಲ್ಲಿಯದು ?

೨೯. ಅದರಿಂದ ಚಿತ್ತವೆಂಬ ಚಿತ್ರಕಾರನು ರಚಿಸಿರುವ ಈ ಜಗತ್ತೆಂಬ ಚಿತ್ರವು ಚಿತ್ಸಂಸ್ಥವಾಗಿದ್ದರೂ, ಇದು ಯಾವಾಗ ಸ್ವತಂತ್ರವಾಗಿತ್ತು ? ಇದಕ್ಕೆ ಆಧಾರವಾದ ಕುಡ್ಯವುಂಟೆ ? ರಂಗಮಂಟಪವುಂಟೆ ? ಎದುರಿಗೇ ಇರುವಂತೆ ಇದ್ದರೂ ಇದಕ್ಕೆ ಸತ್ಯತೆಯುಂಟೆ ?

ಅಹೋ ನು ಚಿತ್ರಂ ನಿರ್ಭಿತ್ತಿ ಚಿತ್ರಮುಜ್ಜ್ವಲಮುತ್ಥಿತಂ ।
ಸುರಂಜನಂ ಜಗದಿತಿ ಸ್ಫುಟಂ ದೃಷ್ಟಿವಿಲೋಭನಂ ॥ ೩೦ ॥

ನಾನಾತಮೋಮಷೀಲೇಖಂ ನಾನಾತೇಜೋಂಶುರಂಜನಂ ।
ನಾನಾಕಲ್ಪಾಂಗಾವಯವಂ ನಾನಾರಾಗಾನುರಂಜಿತಂ ॥ ೩೧ ॥

ನಾನಾದೃಷ್ಟಿವಿಲಾಸಾಢ್ಯಂ ನಾನಾನುಭವಲೋಚನಂ ।
ನಾನಾಗ್ರಹೋಗ್ರಕಚನಂ ನಾನಾಕಾರಾಗ್ರಪಶ್ಚಿಮಂ ॥ ೩೨ ॥

ವ್ಯೋಮನೀಲಸರಃ ಫುಲ್ಲತಾರಾಚಂದ್ರಾರ್ಕಪಂಕಜಂ ।
ವಿಚಿತ್ರರಚನೋದ್ಯುಕ್ತಮೇಘಾಲೀಪತ್ರಮಂಜರಿ ॥ ೩೩ ॥

ಪ್ರಕೋಷ್ಠಕಾಭಿಲಿಖಿತಸುರಾಸುರನೃಪುತ್ರಿಕಂ ।
ಪರಮಾಲೋಕಮಂಕೋಲಯುವತಾಕಾಶಕುಡ್ಯಕಂ ॥ ೩೪ ॥

---

೩೦. ಅಹಹಾ! ಎಂಥಹ ವಿಚಿತ್ರವಿದು! ಭಿತ್ತಿಯೇ ಇಲ್ಲದ ಚಿತ್ರವೊಂದು ಉಜ್ವಲವಾಗಿ ಕಾಣುತ್ತಿರುವುದಲ್ಲಾ! ಜಗತ್ತೆಂಬ ಈ ಚಿತ್ರವು ರಂಗುರಂಗುಗಳಿಂದ ಸೊಗಸಾಗಿರುವಂತೆ ಸ್ಫುಟವಾಗಿರುವಂತೆ ಕಂಡು ದೃಷ್ಟಿಗೆ ಭ್ರಮೆಯನ್ನೂ ಲೋಭವನ್ನೂ ಉಂಟುಮಾಡುತ್ತಿರುವುದಲ್ಲ!

೩೧–೩೨. ಇದರಲ್ಲಿ ಎಷ್ಟೋ ಕರಿಯ ಗೆರೆಗಳು! ಇನ್ನೆಷ್ಟೋ ಕಾಂತಿಮಯವಾದ ರಂಗುಗಳು! ನಾನಾ ಕಲ್ಪಗಳೆಂಬ ಅಂಗಗಳೂ ಅವಯವಗಳು! ನಾನಾ ವರ್ಣಗಳಿಂದ ರಂಜಿತವಾಗಿರುವುದು! ನಾನಾ ದೃಷ್ಟಿ (ಸಿದ್ಧಾಂತ)ಗಳೆಂಬ ವಿಲಾಸಗಳುಳ್ಳುದು ಇದು! ನಾನಾ ವಿಧವಾದ ಅನುಭವಗಳೆಂಬ ಕಣ್ಣುಗಳುಳ್ಳುದು! ನಾನಾ ರೂಪವಾದ ಗ್ರಹ ಉಪಗ್ರಹಗಳ ತೀವ್ರವಾದ ಕಾಂತಿಯುಳ್ಳುದು! ನಾನಾ ವಿಧವಾದ ಆಕಾರಗಳನ್ನು ಹಿಂದೆ ಮುಂದೆ ಉಳ್ಳುದು.

೩೩. ವ್ಯೋಮನೆಂಬ ನೀಲಜಲ ಸುಂದರವಾದ ಸರಸ್ಸಿನಲ್ಲಿ ನಕ್ಷತ್ರಗಳು ಸೂರ್ಯಚಂದ್ರರು, ಎಂಬ ಕಮಲಗಳುಳ್ಳುದ್ದು : ಚಿತ್ರವಿಚಿತ್ರವಾದ ರಚನೆಗಳನು ಮಾಡುತ್ತಿರುವ ಮೇಘ ಮಂಡಲಗಳೆಂಬ ಎಲೆಗಳನ್ನುಳ್ಳುದ್ದು.

೩೪. ಅಲ್ಲಿ ಪ್ರಕೋಷ್ಠ (ಜಗುಲಿಗಳು) ದಲ್ಲಿ ಬರೆದಿರುವ ಸುರ, ಅಸುರ, ನರ, ಎಂಬ ಬೊಂಬೆಗಳನ್ನುಳ್ಳುದು. ಉತ್ತಮವಾದ ಸೂರ್ಯ ಚಂದ್ರರ ಬೆಳಕುಗಳೆಂಬ ಸುಣ್ಣದಿಂದ ವಿರಾಜಿಸುತ್ತಿರುವ ಆಕಾಶವೆಂಬ ಗೋಡೆಯುಳ್ಳುದು.

ಆಕಾಶ ಏವ ರಚಿತಾ ಪ್ರತಿಭೈಕರಂಗಾ
ಮುಗ್ಧಾ ಜಗತ್ತ್ರಯಮನೋಹರ ಪುತ್ರಿಕೇಯಂ ।
ಚಿನ್ಮಾತ್ರಚಕ್ರಪರಿರಂಜಿತ ಸರ್ವಲೋಕಾ
ಲೀಲಾಕುಲಾ ಚಪಲಚಿತ್ತಕಚಿತ್ರಕರ್ತ್ರಾ || ೩೫ ||

ಹೇಮಾಚಲಾಂಗಲತಿಕಾ ಘನಕೇಶಪಾಶಾ
ಚಂದ್ರಾರ್ಕಲೋಚನವಿಚಾಲನ ದೃಷ್ಟಲೋಕಾ ।
ಧರ್ಮಾರ್ಥಕಾಮ ವಿನಿಯಂತ್ರಿತ ಶಾಸ್ತ್ರವಸ್ತ್ರಾ
ಪಾತಾಲಜಾಲ ಚರಣೋನ್ನತ ಭೂನಿತಂಬಾ || ೩೬ ||

---

೩೫. ಚಪಲ (ಕಾಮುಕ) ನಾದ ಚಿತ್ತವೆಂಬ ಚಿತ್ರಕಾರನು ತಾನಿರುವ ಆಕಾಶದಲ್ಲಿಯೇ, ಪ್ರತಿಭೆಯೆಂಬ ತನ್ನ ಗಳಿಗೆಗೊಂದು ಬಣ್ಣವಾಗುವ ಬುದ್ಧಿಯೆಂಬ ರಂಗಮುಂಟಪದಲ್ಲಿ, ಸುಂದರಳಾದ, ಮನೋಹರಳಾದ ಜಗತ್ತ್ರಯವೆಂಬ ನಟಿಯೊಬ್ಬಳನ್ನು ರಚಿಸಿರುವನು. ರಂಗಮುಂಟಪದ ಬೆಳಕೆಂಬಂತಿರುವ ಚಿತ್ತಿನಿಂದ ಹೊರಡುವ ವೃತ್ತಿಗಳೆಂಬ ಕಾಂತಿ ಚಕ್ರಗಳು ಸುತ್ತಲೂ ಬೆಳಗುತ್ತಿರಲು ಅವಳು ಆಟವಾಡುತ್ತಿರುವಳು.

(ನೃತ್ಯಶಾಲಾ ಪ್ರದೀಪಸ್ಥಾನೀಯಸ್ಯ ಸಾಕ್ಷಿಚೈತನ್ಯಸ್ಯ ಚಕ್ರೈರಿವಸ್ಫುರತ್ ಪ್ರತಿಬಿಂಬಗ್ರಾಹಭಿಃ ಬುದ್ಧಿ ವೃತ್ತ್ಯಾಭರಣೈಃ ಪರಿತೋ ರಂಜಿತಾಃ ಪ್ರಕಾಶಿತಾ ಲೋಕಾ ಯಯಾ। ನೃತ್ಯಹಾವಭಾವವಿಲಾಸಾದಿ ಲೀಲಾಭಿರಾಕುಲಾ ||-ತಾ.ಪ್ರ.)

೩೬. ಆ ಜಗತ್ತ್ರಯ ನಟಿಯು ಚಿನ್ನದಿಂದ ಮಾಡಿರುವಂತೆ ತೋರುವ ದೃಢವಾದ ಅಂಗಾಂಗಗಳಿಂದ ಬಳುಕುತ್ತ ಲತೆಯಂತಿರುವಳು. ನಿಬಿಡವಾದ ದೀರ್ಘವಾದ ಕುರುಳುಗಳುಳ್ಳವಳು. ಚಂದ್ರ ಸೂರ್ಯರು ಎಂಬ ಕಣ್ಣುಗಳನ್ನು ತಿರುಗಿಸುತ್ತಾ ಲೋಕ ಲೋಕಗಳನ್ನು ನೋಡುತ್ತಿರುವಳು. ಧರ್ಮಾರ್ಥ ಕಾಮಗಳಿಂದು ನಿಯಮಿತವಾದ ಪುರುಷಾರ್ಥಗಳನ್ನು ಬೋಧಿಸುವ ಶಾಸ್ತ್ರ ಶಾಸ್ತ್ರಗಳೆಂಬ ವಸ್ತ್ರಗಳನ್ನು ಉಳ್ಳವಳು. ಪಾತಾಲಜಾಲಗಳೆಂಬ ಚರಣಗಳೂ ಭೂಮಿಯೆಂಬ ಉನ್ನತ ನಿತಂಬಗಳೂ ಉಳ್ಳವಳು.

ಬ್ರಹ್ಮೇಂದ್ರರುದ್ರಹರಿಬಾಹುಚತುಷ್ಟಯೋಗ್ರಾ
ಸತ್ತ್ವಾವೃತೋನ್ನತಕುಚಸ್ಫುರದಂಗಯಷ್ಟಿಃ ।
ಸುವ್ಯಾಲವೇಷ್ಟಿತಮಹೀತಲಪದ್ಮಪೀಠಾ
ಪತ್ರೀಕೃತಾಚಲಮಹಾಭುವನೋದರೀ ಚ ॥ ೩೭ ॥

ರಾತ್ರ್ಯಂಧಕಾರಚಪಲತ್ವಹರಾಕ್ಷಿಚೇಷ್ಟಾ ।
ತಾರಾಕರಾಲಪುಲಕಾ ಪವಿದಂತಪಂಕ್ತಿಃ ॥
ಚಂಚಚ್ಚತುರ್ದಶವಿಧಾತುಲಭೂತಜಾತ ।
ರೋಮಾಂಚನಾ ಪ್ರಲಯವಾದಕದಂಬಪುಷ್ಪಾ ॥ ೩೮ ॥

---

೩೭. ಬ್ರಹ್ಮ, ಇಂದ್ರ, ರುದ್ರ, ಹರಿ ಎಂಬ ನಾಲ್ಕು ಕೈಗಳುಳ್ಳವಳು. ಸತ್ತ್ವ (ಪ್ರಾಣಿ, ಶಕ್ತಿ) ದಿಂದ ಕೂಡಿರುವಳು. ಎತ್ತರವಾದ ಕುಚ ಮಂಡಲ ದಿಂದ ಸುಂದರವಾದ ದೇಹವುಳ್ಳವಳು. ಆದಿಶೇಷನೆಂಬ ಮಹಾ ನಾಗನಿಂದ ಸುತ್ತುಕಟ್ಟಿಕೊಂಡಿರುವ ಮಹೀತಲವೆಂಬ ಪದ್ಮಪೀಠವುಳ್ಳವಳು. ಬೆಟ್ಟಗಳೂ ಕೂಡ ತರಗೆಲೆಗಳಷ್ಟು ಅಗಣ್ಯವಾಗುವ ಮಹಾ ಭುವನವೆಂಬ ಉದರವುಳ್ಳವಳು.

೩೮. ರಾತ್ರಿಯ ಅಂಧಕಾರವನ್ನು ತನ್ನ ಕಣ್ಣು ನೋಟವೆಂಬ ಮಿಂಚಿ ನಿಂದ ಪರಿಹರಿಸುವವಳು. ತಾರೆಗಳೆಂಬ ವಿಚಿತ್ರವಾದ ಪುಳಕಗಳುಳ್ಳವವಳು. ವಜ್ರಗಳೇ ಹಲ್ಲುಗಳಾಗಿರುವವಳು. ನಾನಾ ವ್ಯಾಪಾರ ಮಾಡುವ ಹದಿನಾಲ್ಕು ಜಾತಿಯ ಅಸಮವಾದ ಪ್ರಾಣಿ ಸಮೂಹಗಳೇ ರೋಮಾಂಚದಂತಿರುವವಳು. ಪ್ರಲಯವಾದ (ಕಾಲಿನವರೆಗೂ ಇಳಿಯುವ) ಕದಂಬ ಪುಷ್ಪಮಾಲೆಗಳುಳ್ಳವಳು.

(ತೇಷು ಭೂತೇಷು ಪ್ರಸಿದ್ಧಾ ಭೂತ ಭುವನಾದಿ ಪ್ರಲಯವಾದ ಏವ ಸರ್ವತಃ ಪ್ರಸಾರಿತ ಸದ್ಬುದ್ಧಿ ಕೇಸರತ್ವಾತ್ ಶ್ರೋತೃಣಾಂ ವೈರಾಗ್ಯ ಸದ್ವಾಸನಾ ಸೌಗಂಧ್ಯಾಧಾಯಕತ್ವಾತ್ ಚ ಆಪಾದಲಂಬಿ ಕದಂಬ ಮಾಲಾ ಪುಷ್ಪಾಣಿ ಯಸ್ಯಾ ಸಾ॥ ತಾ. ಪ್ರ.).

ಜೀವಾನ್ವಿತಾ ಗಗನ ಏವ ಕೃತಾ ವಿಚಿತ್ರಾ ।
ವ್ಯೋಮಾತ್ಮಿಕಾ ಚಿರವಿಲಕ್ಷಣಚಿತ್ರಕರ್ತ್ರಾ ॥
ಚಿತ್ತೇನ ಚಿತ್ರಪರಿಕರ್ಮವಿದಾ ತ್ರಿಲೋಕಿ ।
ನಾನಾವಿಲಾಸವಲಿತಾ ವರಪುತ್ರಿಕೇತಿ ॥ ೩೯ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಅರ್ಜುನೋಪಾಖ್ಯಾನೇ "ಚಿತ್ತವರ್ಣನಂ" ನಾಮ
ಷಟ್‌ಪಂಚಾಶಃ ಸರ್ಗಃ

---

೩೯. ಸಮಷ್ಟಿಜೀವ (ನಾದ ಈಶ್ವರ) ವ್ಯಷ್ಟಿ ಜೀವರುಗಳಿಂದ ಕೂಡಿದ್ದರೂ ಆಕಾಶವೇ ಮೈಯಾಗಿರುವಳಾಗಿ, ತ್ರಿಲೋಕವೆಂಬ ಈ ನಾನಾ ವಿಲಾಸಗಳಿಂದ ಕೂಡಿರುವ ಈ ಶ್ರೇಷ್ಟ ನಟಿಯು, ಚಿರಕಾಲದಿಂದ ವಿಲಕ್ಷಣ ಚಿತ್ರಗಳನ್ನು ಬರೆಯುವ, ಚಿತ್ರಕರ್ಮವನ್ನು ಚೆನ್ನಾಗಿ ಬಲ್ಲ, ಚಿತ್ತವೆಂಬ ಚಿತ್ರಕಾರನಿಂದ, ವಿಚಿತ್ರವಾಗಿ ಎಂದರೆ ಎಲ್ಲರೂ ಆಶ್ಚರ್ಯಪಡುವಂತೆ ಗಗನದಲ್ಲಿಯೇ ಶೂನ್ಯದಲ್ಲಿಯೇ ನಿರ್ಮಿತಳಾಗಿರುವಳು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಚಿತ್ತವರ್ಣನ" ಎಂಬ ಐವತ್ತಾರನೆಯ ಸರ್ಗವು.

ಸಪ್ತಪಂಚಾಶಃ ಸರ್ಗಃ

ಶ್ರೀ ಭಗವಾನುವಾಚ :—

ಇದಂ ವಿದ್ಧಿ ಮಹಾಶ್ಚರ್ಯಮರ್ಜುನೇಹ ಹಿ ಯತ್ಕಿಲ ।
ಪೂರ್ವಂ ಸಂಜಾಯತೇ ಚಿತ್ರಂ ಪಶ್ಚಾದ್ಭಿತ್ತಿರುದೇತಿ ಹಿ ॥ ೧ ॥

ಅಭಿತ್ತಾವುತ್ಥಿತೇ ಚಿತ್ರೇ ದೃಶ್ಯತೇ ಭಿತ್ತಿರಾತತಾ ।
ಅಹೋ ವಿಚಿತ್ರಾ ಮಾಯೇಯಂ ಮಗ್ನಂ ತುಂಬಂ ಶಿಲಾ ಪ್ಲುತಾ ॥ ೨ ॥

ಚಿತ್ರಸ್ಥಚಿತ್ರಸದೃಶೇ ವ್ಯೋಮಾತ್ಮನಿ ಜಗತ್ತ್ರಯೇ ।
ವ್ಯೋಮಾತ್ಮನಸ್ತೇ ಕಿಮಿಯಮಹಂತಾವ್ಯೋಮತೋದಿತಾ ॥ ೩ ॥

ಐವತ್ತೇಳನೆಯ ಸರ್ಗವು

ಶ್ರೀ ಭಗವಂತನು ಹೇಳಿದನು :—

೧. ಅರ್ಜುನ, ಮಹಾಶ್ಚರ್ಯಕರವಾದ ಈ ಸಂಗತಿಯನ್ನು ಕೇಳು. ಇಲ್ಲಿ ಮೊದಲು ಚಿತ್ರವು ಹುಟ್ಟುವುದು; ಅದಕ್ಕೆ ಭಿತ್ತಿಯು ಆ ಮೇಲೆ ಸಿಕ್ಕುವುದು.

೨. ಭಿತ್ತಿಯೇ ಇಲ್ಲದೆ ಹುಟ್ಟಿದ ಚಿತ್ರಕ್ಕೆ ವಿಸ್ತಾರವಾದ ಭಿತ್ತಿಯಿರುವಂತೆ ಕಾಣುವುದು. ಅಹಹಾ! ಈ ಮಾಯೆಯ ವೈಚಿತ್ರ್ಯವನ್ನು ಏನೆಂದು ಹೇಳಲಿ! ಬುರುಡೆಯು ಮುಳುಗಿ ಬಂಡೆಯು ತೇಲಿದಂತಾಯಿತಲ್ಲಾ!

೩. ಚಿತ್ರದಲ್ಲಿರುವ ಚಿತ್ರಕ್ಕೆ ಸದೃಶವಾಗಿರುವ ಆಕಾಶಾತ್ಮವಾದ ಜಗತ್ತ್ರಯದಲ್ಲಿ, ಆಕಾಶಾತ್ಮನೇ ಆದ ನಿನಗೆ, ಅಹಂತಾ ಎಂಬ ಆಕಾಶತ್ವವು ಎಲ್ಲಿಂದ ಹುಟ್ಟಿತು?

ಸರ್ವಂ ವ್ಯೋಮಕೃತಂ ವ್ಯೋಮ್ನಾ ವ್ಯೋಮ್ನಿ ವ್ಯೋಮ ವಿಲೀಯತೇ ।
ಭುಜ್ಯತೇ ವ್ಯೋಮನಿ ವ್ಯೋಮ ವ್ಯೋಮ ವ್ಯೋಮನಿ ಚಾತತಂ　　॥ ೪ ॥

ವೇಷ್ಟಿತಂ ವಾಸನಾರಜ್ಜ್ವಾ ದೀರ್ಘಸಂಸೃತಿದಾಮವತ್ ।
ವಾಸನೋದ್ವೇಷ್ಟನೇನೈವ ತದಿಹೋದ್ವೇಷ್ಟ್ಯತೇಽರ್ಜುನ　　॥ ೫ ॥

ಪ್ರತಿಬಿಂಬಂ ಯಥಾದರ್ಶೇ ತಥೇದಂ ಬ್ರಹ್ಮಣಿ ಸ್ವಯಂ ।
ಅಗಮ್ಯಂ ಭೇದಭೇದಾದೇರಾಧಾರಾನನ್ಯತಾವಶಾತ್　　॥ ೬ ॥

ಅನನ್ಯಚ್ಛೇದಭೇದಾದಿ ಬ್ರಹ್ಮಣಿ ಬ್ರಹ್ಮಣಾಂಬರಂ ।
ಕಿಂ ಕಥಂ ಕಸ್ಯ ಕೇನೈವಚ್ಛಿದ್ಯತೇ ಪಾ ಕ್ವ ಭಿದ್ಯತೇ　　॥ ೭ ॥

---

೪. ಸರ್ವವೂ ಎಂದರೆ ಇರುವುದೆಲ್ಲವೂ (ಚಿತ್) ಆಕಾಶದಲ್ಲಿ (ಚಿತ್) ಆಕಾಶದಿಂದ, (ಚಿತ್) ಆಕಾಶವೇ ಮಾಡಿದುದು. ಆಕಾಶದಲ್ಲಿ ಆಕಾಶ ಲೀನವಾಗುವುದು. ಆಕಾಶದಲ್ಲಿ ಆಕಾಶವೇ ಭೋಗಿಸಲ್ಪಡುವುದು. ಆಕಾಶವು ಆಕಾಶದಲ್ಲಿ ಹರಡಿರುವುದು.

೫, ವಾಸನಾ ಎಂಬ ಹಗ್ಗದಿಂದ ಬದ್ಧವಾಗಿ, ದೀರ್ಘವಾದ ಸಂಸಾರ ಭ್ರಮಣವುಳ್ಳದ್ದಾಗಿರುವುದೀ ಜಗತ್ತು. ಇದು ವಾಸನೆಯಿಂದಲೇ ಇರುವುದು. ಅರ್ಜುನ, ಇದು ನಡೆಯುವುದೂ ವಾಸನೆಯಿಂದಲೇ !

೬. ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ, ಇದು ಬ್ರಹ್ಮದಲ್ಲಿ ಕಂಡ ಬ್ರಹ್ಮದ ಪ್ರತಿಬಿಂಬವು. ಭೇದ ಭೇದಗಳಿಗೆ ಇದು ಸಿಕ್ಕುವುದಿಲ್ಲ. ಇದಕ್ಕೆ ಬ್ರಹ್ಮವಲ್ಲದೆ ಇನ್ನು ಯಾವುದೂ ಆಧಾರವೇ ಇಲ್ಲ.

(ಅಸ್ಯ ಜ್ಞಾನಾತಿರಿಕ್ತ–ಉಪಾಯ–ದುರುಚ್ಛೇದತಾಪಿ ಅಧಿಷ್ಠಾನ ದಾರ್ಢ್ಯ ಬಲಾದೇವ ನ ಸ್ವತಃ ಇತ್ಯಾಹ. —ತಾ. ಪ್ರ.)

೭. ಬ್ರಹ್ಮದಲ್ಲಿ ಬ್ರಹ್ಮದಿಂದಲೇ ಪ್ರತಿಬಿಂಬಿಸಿರುವ ಆಕಾಶರೂಪವಾದ ಈ ಜಗತ್ತು ಇನ್ನೊಂದರಿಂದ ಭೇದ ಭೇದಗಳನ್ನು ಪಡೆಯುವುದಿಲ್ಲವಾಗಿ ಯಾವುದನ್ನು ಹೇಗೆ ಯಾರು ಏತರಿಂದ ಭೇದಿಸುವುದು? ಏತರಿಂದ ಭೇದಿಸುವುದು?

ತೇನೇಹ ವಾಸನಾಭಾವೋ ಬೋಧಾತ್ಸಂಪನ್ನ ಏವ ತೇ ॥ ೮ ॥

ಯೋನ ನಿರ್ವಾಸನೋ ನೂನಂ ಸರ್ವಧರ್ಮಪರೋಪಿ ಸನ್ ।
ಸರ್ವಜ್ಞೋಽಪ್ಯತಿಬದ್ಧಾತ್ಮಾ ಪಂಜರಸ್ಥೋ ಯಥಾ ಹರಿಃ ॥ ೯ ॥

ಯಸ್ಯಾಸ್ತಿ ವಾಸನಾಬೀಜಮತ್ಯಲ್ಪಂ ಚಿತಿಭೂಮಿಗಂ ।
ಬೃಹತ್ಸಂಜಾಯತೇ ತಸ್ಯ ಪುನಃ ಸಂಸೃತಿಕಾನನಂ ॥ ೧೦ ॥

ಅಭ್ಯಾಸಾದ್ಧೃದಿ ರೂಢೇಣ ಸತ್ಯಸಂಬೋಧವಹ್ನಿನಾ ।
ನಿರ್ದಗ್ಧಂ ವಾಸನಾಬೀಜಂ ನ ಭೂಯಃ ಪರಿರೋಹತಿ ॥ ೧೧ ॥

ದಗ್ಧಂ ತು ವಾಸನಾಬೀಜಂ ನ ನಿಮಜ್ಜತಿ ವಸ್ತುಷು ।
ಸುಖದುಃಖಾದಿಷು ಸ್ವಚ್ಛಂ ಪದ್ಮಪತ್ರಮಿವಾಂಭಸಿ ॥ ೧೨ ॥

---

೮. ಅದರಿಂದ, ಹೀಗೆ ನೀನು ತಿಳಿದುಕೊಂಡರೆ ನಿನಗೆ ವಾಸನಾ ಅಭಾವವು ಲಭಿಸಿದಂತೆಯೇ !

೯. ಸರ್ವಧರ್ಮಗಳನ್ನು ಆಚರಿಸಿದವನಾಗಿದ್ದರೂ ಯಾವನು ವಾಸನಾ ರಹಿತನಾಗಿರುವುದಿಲ್ಲವೋ ಅವನು ಸರ್ವಜ್ಞನೇ ಆಗಿದ್ದರೂ, ಪಂಜರದಲ್ಲಿರುವ ಸಿಂಹದಂತೆ, ಸಂಪೂರ್ಣವಾಗಿ ಬದ್ಧಾತ್ಮನೇ !

೧೦. ಯಾವನಿಗೇ ಚಿತ್ತ ಭೂಮಿಯಲ್ಲಿ ಅತ್ಯಲ್ಪವಾಗಿಯಾದರೂ ವಾಸನಾ ಬೀಜವು ಇದ್ದುದೇ ಆದರೆ, ಅದೇ ಭಾರಿಯ ಸಂಸಾರಕಾನನವಾಗುವುದು.

೧೧. ಸತ್ಯವು ಯಾವುದು ಎಂಬುದನ್ನು ತಿಳಿಯುವಿಕೆ ಎಂಬ ತೀವ್ರವಾದ ಬೆಂಕಿಯನ್ನು, ಅಭ್ಯಾಸದಿಂದ ಹೃದಯದಲ್ಲಿ ಚೆನ್ನಾಗಿ ಪ್ರಜ್ವಲನ ಮಾಡಿ, ಅದರಿಂದ ವಾಸನಾ ಬೀಜವನ್ನು ಚೆನ್ನಾಗಿ ಸುಟ್ಟರೆ, ಆಗ ಅದು ಮತ್ತೆ ಹುಟ್ಟುವುದಿಲ್ಲ.

೧೨. ವಾಸನಾ ಬೀಜವನ್ನು ಸುಟ್ಟು ಬಿಟ್ಟರೆ ಅದು ಸುಖದುಃಖಾದಿ ವಸ್ತು ಭಾವಗಳಲ್ಲಿ ಮತ್ತೆ ಸೇರುವುದಿಲ್ಲ. ಸ್ವಚ್ಛವಾದ ಪದ್ಮಪತ್ರವು ನೀರಲ್ಲಿ ನೆನೆಯುವುದೇನು ?

ಶಾಂತಾತ್ಮಾ ವಿಗತಭಯೋಜ್ಝಿತಾಮಿತಾಶೋ
ನಿರ್ವಾಣೋ ಗಲಿತಮಹಾಮನೋವಿಮೋಹಃ ।
ಸಮ್ಯಕ್ತ್ವಂ ಶ್ರುತಮನುಗಮ್ಯ ಪಾವನಂ
ತತ್ತಿಷ್ಠಾತ್ಮನ್ಯಪಹತಿರೇಕಶಾಂತಿರೂಪಃ ॥ ೧೩ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಅರ್ಜುನೋಪಾಖ್ಯಾನೇ "ಅರ್ಜುನವಿಶ್ರಾಂತಿವರ್ಣನಂ" ನಾಮ
ಸಪ್ತಪಂಚಾಶಃ ಸರ್ಗಃ

---

೧೩. ಅರ್ಜುನ, ನೀನು ಶಾಂತಾತ್ಮನಾಗು. ಭಯವನ್ನು ಬಿಡು. ಸಂಕಲ್ಪಗಳನ್ನೆಲ್ಲಾ ತೊರೆದುಬಿಡು. ನಿರ್ವಾಣಪರನಾಗು. ಮನಸ್ಸಿನಲ್ಲಿರುವ ಮಹಾಮೋಹವನ್ನು ಕಳೆದುಕೊ. ಇದುವರೆಗೂ ಕೇಳಿದ ಉಪದೇಶದ ಬಲದಿಂದ, ಪಾವನವಾದ ಸಮ್ಯಕ್ತ್ವವನ್ನು ಹೊಂದು. ಯಾವುದೊಂದು ಹಾನಿಯೂ ಇಲ್ಲದೆ ಏಕೈಕವಾದ ಶಾಂತಿರೂಪನಾಗಿ ಆತ್ಮನಲ್ಲಿ ನಿಲ್ಲುವನಾಗು

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಅರ್ಜುನವಿಶ್ರಾಂತಿವರ್ಣನ" ಎಂಬ
ಐವತ್ತೇಳನೆಯ ಸರ್ಗವು

ಅಷ್ಟಪಂಚಾಶಃ ಸರ್ಗಃ

ಅರ್ಜುನ ಉವಾಚ:—

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥ ೧ ॥

ಶ್ರೀ ಭಗವಾನ್ ಉವಾಚ:—

ವೃತ್ತಯೋ ಯದಿ ಬೋಧೇನ ಸಂಶಾಂತಾ ಹೃದಯೇ ಸ್ಫುಟಂ ।
ತಚ್ಚಿತ್ತಂ ಶಾಂತಮೇವಾಂತರ್ವಿದ್ಧಿ ಸತ್ವಮುಪಾಗತಂ ॥ ೨ ॥

ಅತ್ರ ತಚ್ಚೇತ್ಯರಹಿತಂ ಪ್ರತ್ಯಕ್ಚೇತನನಾಮಕಂ ।
ಯತ್ತ್ವಶೇಷವಿನಿರ್ಮುಕ್ತಂ ಯತ್ಸರ್ವಂ ಸರ್ವತಶ್ಚ ಯತ್ ॥ ೩ ॥

ಐವತ್ತೆಂಟನೆಯ ಸರ್ಗವು

ಅರ್ಜುನನು ಕೇಳಿದನು :—

೧. ಅಚ್ಯುತ, ನಿನ್ನ ಪ್ರಸಾದದಿಂದ ಮೋಹವು ಹೋಯಿತು. ಸ್ಮೃತಿಯು ಲಭಿಸಿತು. ಈಗ ಸಂದೇಹವಿಲ್ಲದವನಾದೆನು. ಇನ್ನು ನಿನ್ನ ವಚನವನ್ನು ಪಾಲಿಸುವೆನು.

ಶ್ರೀ ಭಗವಂತನು ಹೇಳಿದನು :—

೨. ಯಾವಾಗ ಬೋಧದಿಂದ ಹೃದಯದಲ್ಲಿರುವ ವೃತ್ತಿಗಳೆಲ್ಲವೂ ಸಂಶಾಂತವಾಗುವುವೋ ಆಗ ಚಿತ್ತವೂ ಶಾಂತವೇ ಆಗುವುದು: ಸತ್ತ್ವವು ಲಭಿಸುವುದು ಎಂದು ತಿಳಿ.

(ಯದಾ ಸರ್ವೇ ಪ್ರಮುಚ್ಯಂತೇ ಕಾಮಾಯೇಽಸ್ಯ ಹೃದಿಸ್ಥಿತಾಃ ॥ ಅಥಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ ॥ ಇತಿ ಶ್ರುತಿಃ)

೩. ಈ ಸತ್ತ್ವಾವಸ್ಥೆಯಲ್ಲಿ ಚೇತ್ಯ (ದೃಶ್ಯ)ವು ಯಾವುದೊಂದೂ ಇಲ್ಲ.

ನ ಕೇಚನ ವಿಪಂತ್ಯೇತೇ ತತ್ಪದಂ ಜಾಗತಾದಯಃ ।
ಭೂತಲಾದ್ಗಗನೋಡ್ಡೀನಂ ವಿಹಂಗಮಮಿವೋನ್ನತಂ ॥ ೪ ॥

ಪ್ರತ್ಯಕ್ಚೇತನ ಮಾಭಾಸಂ ಶುದ್ಧಂ ಸಂಕಲ್ಪವರ್ಜಿತಂ ।
ಅಗಮ್ಯಮೇನಮಾತ್ಮಾನಂ ವಿದ್ಧಿ ದೂರಂ ದೃಶಾಮಿವ ॥ ೫ ॥

ಸರ್ವಾತೀತಂ ಯದತ್ಯಚ್ಛಂ ವಿನಾ ಶುದ್ಧಂ ಸ್ವಭಾವನಾಂ ।
ನ ಶಕ್ನೋತಿ ಪದಂ ದ್ರಷ್ಟುಂ ಜನದೃಷ್ಟಿರಣೂನಿವ ॥ ೬ ॥

ಪ್ರತ್ಯಕ್ ಚೇತನ ಎಂದೆನ್ನಿಸಿಕೊಳ್ಳುವ, ಎಲ್ಲವನ್ನೂ ಸಂಪೂರ್ಣವಾಗಿ ಬಿಟ್ಟಿರುವ, ಎಲ್ಲವೂ ಎಲ್ಲ ವಿಧದಲ್ಲೂ ತಾನೇ ಆಗಿರುವ,

೪. ತತ್‌ಪದವು ಯಾವುದುಂಟೋ ಅದನ್ನು ಇಂದ್ರಿಯಗಳಾಗಲಿ, ಅಜ್ಞ ಜನರಾಗಲಿ ಯಾರೂ ಕಾಣರು. ನೆಲದಿಂದ ಮೇಲಕ್ಕೆ ಆಕಾಶಕ್ಕೆ ಹಾರಿ ಕಣ್ಮರೆ ಯಾಗುವಷ್ಟು ದೂರಕ್ಕೆ ಹೋದ ಹಕ್ಕಿಯನ್ನು ಯಾರು ಕಾಣಬಲ್ಲರು ?

೫. ಪ್ರತ್ಯಕ್ ಚೇತನವು ಯಾವುದುಂಟೋ ಅದು ಎಲ್ಲವನ್ನೂ ಪ್ರಕಾಶ ಗೊಳಿಸುವುದು. ಅದು ಶುದ್ಧವು. ಸಂಕಲ್ಪವು ಯಾವುದೂ ಇಲ್ಲದ್ದು. ಆತ್ಮವೇ ತಾನಾದ ಇದು ಇಂದ್ರಿಯಗಳಿಗೆ ದೂರವಾಗಿ ಅಗಮ್ಯವಾದುದು ಎಂದು ತಿಳಿ.

೬. ಸರ್ವಕ್ಕೂ ಅತೀತವಾಗಿ, ಆಕಾಶಕ್ಕಿಂತ ಅಚ್ಛವಾಗಿ ಯಾವುದಾದ ರೊಂದರ ಸಂಪರ್ಕವೂ ಇಲ್ಲದ್ದರಿಂದ ಶುದ್ಧವಾಗಿ, ಇರುವ ಆ ಪದವನ್ನು ಆತ್ಮ ಭಾವನಾ ಅಲ್ಲದೆ ಇನ್ನು ಯಾವುದನ್ನು ಅವಲಂಬಿಸಿದರೂ, ಜನದೃಷ್ಟಿಯು ಅಣುವನ್ನು ಹೇಗೆ ನೋಡಲಾರದೋ ಹಾಗೇ (ಅಣುವಿಗಿಂತ ಅಣುವಾಗಿರುವ ಅದನ್ನು) ನೋಡಲಾಗುವುದಿಲ್ಲ.

[ತದ್ದರ್ಶನೇ ಚ ಶ್ರವಣಾದ್ಯವಧೃತ ತದ್ಭಾವನಾಸು ಅಭ್ಯಸ್ತಾ ನಿಧಿಧ್ಯಾಸ ನಾಖ್ಯಾ ಅವಶ್ಯಕೀ ಇತ್ಯಾಹ —ತಾ. ಪ್ರ.]

(ಮೂಲದಲ್ಲಿ ಸ್ವವಾಸನಾ ಎಂದಿದೆ: ಅದನ್ನು ಸ್ವಭಾವನಾಂ ಎಂದು ತಿದ್ದಿಕೊಳ್ಳಲಾಗಿದೆ.)

ಯತ್ಪ್ರಾಪ್ತೌ ಸರ್ವ ಏವೇಮೇ ಕ್ಷೀಣಾ ಘಟಪಟಾದಯಃ ।
ವರಾಕೀ ವಾಸನಾ ತತ್ರ ಕಿಂ ಕರೋತಿ ಪರೇ ಪದೇ ॥ ೭ ॥

ಯಥಾನಲಗಿರಿಂ ಪ್ರಾಪ್ಯ ಹಿಮಲೇಶೋ ವಿಲೀಯತೇ ।
ಶುದ್ಧಮಾಸಾದ್ಯ ಚಿತ್ತತ್ತ್ವಮವಿದ್ಯಾ ಲೀಯತೇ ತಥಾ ॥ ೮ ॥

ಕ್ವ ವರಾಕೀ ರಜಸ್ತುಚ್ಛಾ ವಾಸನಾಭೋಗಬಂಧನಂ ।
ಕ್ವ ಪೂರಿತಜಗಜ್ಜಾಲಶ್ಚಿತ್ತತ್ತ್ವ ವಿಪುಲಾನಿಲಃ ॥ ೯ ॥

ತಾವತ್ಸ್ಫುರತ್ಯವಿದ್ಯೇಯಂ ನಾನಾಕಾರವಿಕಾರಿಣೀ ।
ಯಾವನ್ನ ಸಂಪರಿಜ್ಞಾತಃ ಶುದ್ಧಃ ಸ್ವಾತ್ಮಾಯಮಾತ್ಮನಾ ॥ ೧೦ ॥

---

೭. ಯಾವುದನ್ನು ಹೊಂದಲು ಘಟಪಟಾದಿ ಸಮಸ್ತವೂ ಕ್ಷೀಣವಾಗಿ ಹೋಗುವುದೋ ಆ ಪರಮ ಪದವು ಲಭಿಸಿದಾಗ ಅಲ್ಲಿ ಅಲ್ಪವಾದ ವಾಸನೆಯು ಏನು ತಾನೇ ಮಾಡಬಲ್ಲುದು ?

೮. ಬೆಂಕಿಯ ಬೆಟ್ಟಕ್ಕೆ ಹೋದ ಹಿಮಲೇಶವು ಹೇಗೆ ಹೆಸರಿಲ್ಲದೆ ಅಡಗಿ ಹೋಗುವುವೋ ಹಾಗೆಯೇ ಶುದ್ಧವಾದ ಚಿತ್ ತತ್ತ್ವವನ್ನು ಹೊಂದಿ ಅವಿದ್ಯೆಯು ನಿರ್ನಾಮವಾಗಿ ಹೋಗುವುದು.

೯. ಭೋಗದಲ್ಲಿ ಬಂಧಿಸುವ, ಧೂಳು ಹಿಡಿದು ತುಚ್ಛವಾಗಿರುವ ಈ ವಾಸನಾ ಎಲ್ಲಿ ? ಜಗತ್ತು ಜಗತ್ತುಗಳನ್ನೆಲ್ಲ ತುಂಬಿರುವ ಚಿತ್ ತತ್ವವೆಂಬ ಮಹಾ ವಾತವೆಲ್ಲಿ ?

(ದಜಸ್ತುಚ್ಛ ಎಂಬಲ್ಲಿ ರಜೋದೂಷಿತಳಾಗಿರುವ ಎಂದೂ ಅರ್ಥ ವಾಗುತ್ತದೆ.)

೧೦. ಎಲ್ಲಿಯವರೆಗೆ ಶುದ್ಧನಾದ ಸ್ವಾತ್ಮನು ಆತ್ಮನಿಂದಲೇ ಸಂಪರಿಜ್ಞಾತ ನಾಗುವುದಿಲ್ಲವೋ ಅಲ್ಲಿಯವರೆಗೂ ನಾನಾಕಾರಗಳಿಂದ ವಿಕಾರಗೊಳಿಸುತ್ತಿರುವ ಈ ಅವಿದ್ಯೆಯು ಮೆರೆಯುವುದು.

ಸರ್ವಾ ದೃಶ್ಯದೃಶಃ ಕ್ಷೀಣಾಃ ಸ್ವಚ್ಛತೈವೋದಿತಾ ತಥಾ ।
ನಭಸೀವ ಪದೇ ತಸ್ಮಿನ್ ಸ್ವಾತ್ಮನ್ಯಖಿಲಪೂರಣೇ ॥ ೧೧ ॥

ಸಮಗ್ರಾಕಾರರೂಪಂ ತತ್ಸಮಗ್ರಾಕಾರವರ್ಜಿತಂ ।
ವಾಗತೀತಂ ಪರಂ ವಸ್ತು ಕೇನ ನಾಮೋಪಮೀಯತೇ ॥ ೧೨ ॥

ವಿಷಯವಿಷವಿಷೂಚಿಕಾಮತಸ್ತ್ವಂ ನಿಪುಣಮಹಂ ಸ್ಥಿತಿವಾಸನಾಮುಪಾಸ್ಯ ।
ಅಭಿಮತಪರಿಹಾರಮಂತ್ರಯುಕ್ತ್ಯಾ ಭವವಿಭವೋ ಭಗವಾನ್ಭಯಾಮಭೂಮಿಃ॥೧೩॥

---

೧೧. ಆಕಾಶದಂತೆ ಇರುವ ಆ ಆತ್ಮಪದವು ಎಲ್ಲವನ್ನೂ ತುಂಬಿರುವುದು ಎಂಬುದು ಅರಿವಾದರೆ, ಸಮಸ್ತವಾದ ದೃಶ್ಯದೃಷ್ಟಿಗಳೂ ಕ್ಷೀಣವಾಗುವುವು. ಸ್ವಚ್ಛತೆಯೊಂದೇ ಒಂದು ಉಳಿಯುವುದು.

(ಸ್ವಾತ್ಮನಿ, ಸ್ವೋದರೇ ಅಖಿಲಂ ಪೂರಯತಿ ಗ್ರಸತಿ ತಥಾವಿಧೇ —ತಾ. ಪ್ರ.)

೧೨. ಮೊದಲಿನಿಂದ ಕೊನೆಯವರೆಗೆ ಇರುವ ಆಕಾರಗಳೆಲ್ಲವೂ ಯಾವುದರ ರೂಪವೋ, ಯಾವುದು ಆ ರೂಪಗಳೊಂದನ್ನೂ ಪಡೆದುದಲ್ಲವೋ, ಅದು ವಾಕ್ಕಿಗೆ ಅತೀತವಾದ ಸೂಕ್ಷ್ಮರೂಪವುಳ್ಳ ವಸ್ತು. ಅದನ್ನು ಹೀಗೆಂದು ಹೇಳಲು ಯಾರಿಗೆ ಸಾಧ್ಯ?

(ಸಮಗ್ರಾಕಾರಃ ಪೂರ್ಣತಾ ತದ್ರೂಪಂ । ಸಮಸ್ತೈರ್ಜಗದಾಕಾರೈಃ ವರ್ಜಿತಂ ॥ —ತಾ. ಪ್ರ.)

೧೩. ಅದರಿಂದ ನೀನು, ವಿಷಯಗಳೆಂಬ ವಿಷದಿಂದ ಕೂಡಿ ವಿಷೂಚಿ ರೋಗದಂತೆ ತೀವ್ರವಾಗಿರುವ, ನಾನೊಬ್ಬನು ಪ್ರತ್ಯೇಕವಾಗಿರುವೆನು ಎಂಬ ವಾಸನೆಯನ್ನು ಚೆನ್ನಾಗಿ ಬಿಟ್ಟು, ಅಭಿಮತ (ಕಾಮ)ಗಳನ್ನೆಲ್ಲಾ ತ್ಯಾಗ ಮಾಡುವುದು ಎಂಬ ಮಂತ್ರಯೋಗವನ್ನು ಅವಲಂಬಿಸಿ, ವಿ-ಭವ [ಜನ್ಮವಿಲ್ಲದವ]ನಾಗು. ಭಯಗಳು ಯಾವವೂ ಬರದ, ಅಭಯಸ್ವರೂಪನಾದ ಭಗವಾನ್ ಆಗು.

ಶ್ರಿ ವಸಿಷ್ಠ ಉವಾಚ :—

ಇತಿ ಗದಿತವತಿ ತ್ರಿಲೋಕನಾಥೇ ಕ್ಷಣಮಿವ ಮೌನಮುಪಸ್ಥಿತೇ ಪುರಸ್ತಾತ್ ।
ಅಥ ಮಧುಪ ಇವಾಸಿತಾಬ್ಜಖಂಡೇ ವಚನಮುಪೈಷ್ಯತಿ ತತ್ರ ಪಾಂಡುಪುತ್ರಃ॥೧೪

ಅರ್ಜುನ ಉವಾಚ:—

ಪರಿಗಲಿತಸಮಸ್ತಶೋಕಭಾರಾ ಪರಮುದಯಂ ಭಗವನ್ಮತಿರ್ಗತೇಯಂ ।
ಮಮ ತವ ವಚನೇನ ಲೋಕಭರ್ತುರ್ದಿನಪತಿನಾ ಪರಿಬೋಧಿತಾಬ್ಜಿನೀವ ॥೧೫॥

ಇತ್ಯುಕ್ತ್ವೋತ್ಥಾಯ ಗಾಂಡೀವಧನ್ವಾ ಸ ಹರಿಸಾರಥಿಃ ।
ಅರ್ಜುನೋ ಗತಸಂದೇಹೋ ರಣಲೀಲಾಂ ಕರಿಷ್ಯತಿ ॥ ೧೬ ॥

ಶ್ರೀ ವಸಿಷ್ಠನು ಹೇಳಿದನು :—

೧೪. ತ್ರಿಲೋಕನಾಥನಾದ ಶ್ರೀ ಹರಿಯು ಹೀಗೆ ಹೇಳಿ, ನೀಲೋತ್ಪಲದಲ್ಲಿರುವ ದುಂಬಿಯಂತೆ ಒಂದು ಘಳಿಗೆ ಮೌನವಾಗಿ ಕುಳಿತುಕೊಳ್ಳಲು ಪಾಂಡವನು ಹೀಗೆ ಹೇಳಿದನು.

ಅರ್ಜುನನು ಹೇಳಿದನು:—

೧೫. ಎಲೈ ಭಗವಂತನೆ, ನನ್ನ ಬುದ್ಧಿಯು ಈಗ ಸಮಸ್ತ ಶೋಕಭಾರವನ್ನೂ ನೀಗಿಕೊಂಡು ಶ್ರೇಷ್ಠವಾದ ಉದಯವನ್ನು ಪಡೆಯಿತು. ಲೋಕನಾಥನಾದ ನಿನ್ನ ಉಪದೇಶದಿಂದ, ಸೂರ್ಯನಿಂದ ಪ್ರಬೋಧಿತವಾದ ಕಮಲಿನಿಯಂತೆ ಪ್ರಬೋಧಿತವಾಯಿತು.

೧೬. ಹೀಗೆಂದು ಹೇಳಿ ಶ್ರೀ ಕೃಷ್ಣ ಸಾರಥಿಯಾದ ಆ ಗಾಂಡೀವಿಯು ಗತಸಂದೇಹನಾಗಿ ರಣಲೀಲೆಯನ್ನು ಮಾಡುವನು.

ಕರಿಷ್ಯತಿ ಕ್ಷತಗಜವಾಜಿಸಾರಥಿ ।
ದ್ರುತಕ್ಷರದ್ರುಧಿರ ಮಹಾನದೀಂ ಭುವಂ ।
ಶರೋತ್ಕರಪ್ರಸರಮಹಾರಜಃ ಸ್ಥಲೀ ।
ತಿರೋಹಿತದ್ಯುಮಣಿವಿಲೋಚನಾಂ ದಿವಂ ॥ ೧೭ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಅರ್ಜುನೋಪಾಖ್ಯಾನೇ "ಅರ್ಜುನಕೃತಾರ್ಥತಾ" ನಾಮ
ಅಷ್ಟಪಂಚಾಶಃ ಸರ್ಗಃ

ಅರ್ಜುನೋಪಾಖ್ಯಾನಂ ಸಮಾಪ್ತಂ

---

೧೭. ಅರ್ಜುನನು ಗಜ, ವಾಜಿ, ಸಾರಥಿ, ರಥಿಗಳನ್ನು ಹೊಡೆದು ಕೆಡವಿ ಹರಿಯುವ ಅವರ ರಕ್ತದಿಂದ ಭೂಮಿಯೆಲ್ಲವೂ ಒಂದು ಮಹಾ ನದಿಯಾಗುವಂತೆಯೂ, ಬಾಣಗಳ ಗುಂಪಿನಿಂದ ಎದ್ದ ಧೂಳು ಮುಚ್ಚಿಕೊಂಡು ಸೂರ್ಯನೆಂಬ ಕಣ್ಣನ್ನು ಆಕಾಶವು ಮುಚ್ಚಿಕೊಳ್ಳುವಂತೆಯೂ ಮಾಡುವನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಅರ್ಜುನಕೃತಾರ್ಥತಾ" ಎಂಬ ಐವತ್ತೆಂಟನೆಯ ಸರ್ಗವು.

ಅರ್ಜುನೋಪಾಖ್ಯಾನ ಮುಗಿದುದು

ಏಕೋನಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ ;—

ಏತಾಂ ದೃಷ್ಟಿಮವಷ್ಟಭ್ಯ ರಾಘವಾಘವಿನಾಶಿನೀಂ ।
ತಿಷ್ಠ ನಿಃಸಂಗಸಂನ್ಯಾಸ ಬ್ರಹ್ಮಾರ್ಪಣಮಯಾತ್ಮಕಃ ॥ ೧ ॥

ಯಸ್ಮಿನ್ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವತಶ್ಚಯಃ ।
ಯಶ್ಚ ಸರ್ವಮಯೋ ನಿತ್ಯಮಾತ್ಮಾನಂ ವಿದ್ಧಿ ತಂ ಪರಂ ॥ ೨ ॥

ಐವತ್ತೊಂಭನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಈ ದೃಷ್ಟಿಯನ್ನು ಅವಲಂಬಿಸು. ರಾಘವ, ಇದು ಪಾಪವಿನಾಶಿನಿಯು. ನಿಸ್ಸಂಗನಾಗಿ, ಸರ್ವ ಕರ್ಮಗಳನ್ನೂ, ಪರಿತ್ಯಾಗ ಮಾಡಿದ ಸಂನ್ಯಾಸಿಯಾಗಿ, ಮಾಡುವುದನ್ನೆಲ್ಲ ಬ್ರಹ್ಮಾರ್ಪಣ ಮಾಡುತ್ತ, ಬ್ರಹ್ಮಾಕಾರ ವೃತ್ತಿಯುಳ್ಳವನಾಗಿ ಇರು.

(ನಿಸ್ಸಂಗತಾ ಲಕ್ಷಣೋ ಯಃ ಸಂನ್ಯಾಸಃ ಸರ್ವತ್ಯಾಗಃ ತ್ವಂಪದಾರ್ಥಶೋಧಃ, ಸರ್ವ ಜಗತೋಬ್ರಹ್ಮಣಿ ಬಾಧಲಕ್ಷಣಂ ಯದ್ಬ್ರಹ್ಮಾರ್ಪಣಂ ತತ್ಪದಾರ್ಥ ಶೋದಃ, ತದುಭಯ ಪರಿಶಿಷ್ಟ–ಅಖಂಡ ಮಹಾ ವಾಕ್ಯಾರ್ಥ ಸಚ್ಚಿದಾನಂದೈಕ ರಸಭೂಮಾತ್ಮಾ ತಿಷ್ಠ-ಇತ್ಯರ್ಥಃ —ತಾ. ಪ್ರ.)

೨. ಯಾವುದರಲ್ಲಿ ಸರ್ವವೂ ಇರುವುದೋ, ಯಾವುದರ ದೆಸೆಯಿಂದ ಎಲ್ಲವೂ ಹುಟ್ಟಿ ಬರುವುದೋ, ಯಾವುದು ಸರ್ವವನ್ನು ಕೊಲ್ಲುವುದೋ, ಎಲ್ಲಾ ಕಡೆಯೂ ಯಾವುದು ವ್ಯಾಪಿಸಿರುವುದೋ, ಯಾವುದು ಸರ್ವಮಯವಾಗಿರುವುದೋ ಆ ನಿತ್ಯವೂ ಸರ್ವಕ್ಕಿಂತ ಶ್ರೇಷ್ಠವೂ ಆದುದನ್ನು ಆತ್ಮನೆಂದು ತಿಳಿ.

[ಯಸ್ಮಿನ್ ಸರ್ವಂ ಸ್ಥಿತೌ । ಯತಃ ಸರ್ವಂ ಸೃಷ್ಟೌ । ಯಃ ಸರ್ವಂ ಸಂಹಾರೇ । ಸರ್ವತಶ್ಚಯಃ ಕಾಲತ್ರಯೇಽಪಿ । ಏವಂ ಸರ್ವಾನಿತ್ಯ ಪ್ರಪಂಚ

ದೂರಸ್ಥಮಪ್ಯದೂರಸ್ಥಂ ಸರ್ವಗಂ ತತ್ಸ್ಥಮೇವ ಚ ।
ತತ್ಸ್ಥಃ ಸತ್ತಾಮವಾಪ್ನೋಷಿ ತದೇವಾಸ್ಯಸ್ತ ಸಂಶಯಃ ॥ ೩ ॥

ಯತ್ಸಂವೇದ್ಯವಿನಿರ್ಮುಕ್ತಂ ಸಂವೇದನಮನಿರ್ಮಿತಂ ।
ಚೇತ್ಯಮುಕ್ತಂ ಚಿದಾಭಾಸಂ ತದ್ವಿದ್ಧಿ ಪರಮಂ ಪದಂ ॥ ೪ ॥

ಮಯೋಽಪಿ ಯೋನಿತ್ಯಃ ಪರಃ ತಮೇವಾತ್ಮಾನಂ ವಿದ್ಧಿ ನ ಪರಿಚ್ಛಿನ್ನ ಸ್ವಭಾವಂ ಇತ್ಯರ್ಥಃ —ತಾ. ಪ್ರ.]

೩. ದೂರದಲ್ಲಿದ್ದರೂ ದೂರದಲ್ಲಿಲ್ಲದ, ಸರ್ವದರಲ್ಲಿಯೂ ಇರುವನಾದರೂ ತತ್ಪದದಲ್ಲಿಯೇ ಇರುವ ಆತ್ಮನನ್ನು ನೀನು ಪಡೆದರೆ, ನೀನೂ ತತ್ಪದಲ್ಲಿಯೇ ಇರುವನಾಗುವೆ. ಅದೇ ಸತ್ತೆಯನ್ನು ಹೊಂದುವೆ. ಏಕೆಂದರೆ ನೀನೂ ಅದೇ ಆಗಿರುವೆ. ಅದರಿಂದ ಸಂಶಯಗಳನ್ನೆಲ್ಲ ಬಿಡು.

(ಸರ್ವ ಪ್ರಪಂಚ ಬಹಿರ್ಭಾವಾದ್ದೂರಸ್ಥಮಪಿ ಸರ್ವಾಂತರತ್ವಾತ್ ಸರ್ವಸ್ಯ ಅದೂರಸ್ಥಂ। ಏವಮಾಕಾಶವತ್ಸರ್ವಗಮಪಿ ತತ್ಸ್ಥಂ ಜಾತಿವತ್ ತತ್ತದ್ವಸ್ತು ಪರ್ಯಾಪ್ತಮೇವ। ಇತ್ಥಂ ಸರ್ವಪ್ರಕಾರೇಣಾಪಿ ತದೇವೈಕಮಸ್ತಿ ನಾನ್ಯದಿತಿ ಸಿದ್ಧೇ ತ್ವಂ ಪರಿಚ್ಛಿನ್ನ ರೂಪೇಣಾಪಿ ತಸ್ಮಿನ್ ತಿಷ್ಠಸೀತಿ ತತ್ಸ್ಥಃ, ತತ್ಸತ್ತಯೈವ ಸತ್ತಾಂ ಅವಾಪ್ನೋಷಿ ನ ಸ್ವಾತಂತ್ರ್ಯೇಣ। ಏವಂ ಸತಿ ಕಿಂತವ ಪರಿಚ್ಛೇದಾಭಿ ಮಾನೇನ ಸ ಏವ ಅಪರಿಚ್ಛಿನ್ನ ಸನ್ಮಾತ್ರಃ ತ್ವಮಸಿ। ಅಸ್ತ ಪರಿಚ್ಛಿದ ಸಂಶಯೋ ಭವ-ಇತ್ಯರ್ಥಃ —ತಾ- ಪ್ರ.)

೪. ಸಂವೇದ್ಯವು ಯಾವುದೂ ಇಲ್ಲದ್ದು ಯಾವುದೋ ಬೇರೆ ಕಾರಣ ಗಳಿಂದಾಗಲೀ ಕರಣಗಳಿಂದಾಗಲೀ ಹುಟ್ಟಿದುದು ಅಲ್ಲದ ಸಂವೇದನವು ಯಾವುದೋ, ಚೇತ್ಯದಿಂದ ಮುಕ್ತವಾದ ಚಿತ್ತಾಗಿ, ಎಲ್ಲವನ್ನೂ ಬೆಳಗುವುದಾಗಿ ಇರುವುದು ಯಾವುದೋ ಅದು ಪರಮಪದವು ಎಂದು ತಿಳಿ.

(ದ್ವಿವಿಧಂ ಹಿ ಚಿದಾತ್ಮನೋರೂಪಂ ವಿವೇಕಿಭಿರನುಭೂಯತೇ। ಏಕಂ ಚಿತ್ತ, ತದ್ವೃತ್ತಿ ಪ್ರತಿಬಿಂಬಿತಂ ಚೇತ್ಯಾರ್ಥ ಪ್ರಥಾ ರೂಪಂ ಚಿತ್ತ ನಿರ್ಮಿತಂ। ಅಪರಂಚ, ಚಿತ್ತ ತದ್ವೃತ್ತಿ ತದ್ವಿಷಯಾಣಾಂ ಆಗಮಾಪಾಯಾದಿ ಸರ್ವಾವಸ್ಥಾ ಸಾಕ್ಷಿ ಸಂವಿದ್ರೂಪಂ ಅನಿರ್ಮಿತಂ ನಿತ್ಯಸಿದ್ಧಂ। ತದುಭಯಮಪಿ ಚೇತ್ಯೇನ

ಸಾ ಪರಾ ಪರಮಾ ಕಾಷ್ಠಾ ಸಾ ದೃಶಾಂ ದೃಗನುತ್ತಮಾ |
ಸಾ ಮಹಿಮ್ನಾಂ ಚ ಮಹಿಮಾ ಗುರುಣಾಂ ಸಾ ತಥಾ ಗುರುಃ || ೫ ||

ಸ ಆತ್ಮಾ ತಚ್ಚ ವಿಜ್ಞಾನಂ ಸ ಶೂನ್ಯಂ ಬ್ರಹ್ಮ ತತ್ಪರಂ |
ತಚ್ಛ್ರೇಯಃ ಸ ಶಿವಃ ಶಾಂತಃ ಸಾ ವಿದ್ಯಾ ಸಾ ಪರಾ ಸ್ಥಿತಿಃ || ೬ ||

ಯೋಽಯಮಂತಶ್ಚಿತೇರಾತ್ಮಾ ಸರ್ವಾನುಭವರೂಪಕಃ |
ಯತ್ರ ಸ್ಪಂದತೇ ಸರ್ವಾಣಿ ಸ್ವಾತ್ಮದ್ರವ್ಯಾಣಿ ಸತ್ತಯಾ || ೭ ||

ಸಂವೇದ್ಯಂ ತ್ರಿಪುಟ್ಯಾಚ ವಿನಿರ್ಮುಕ್ತಂ ಚೇತ್ ತತ್ ಪರಮಂ ಪದಂ ಬ್ರಹ್ಮೈವ ಸಂಪನ್ನ ಮಿತಿ ವಿದ್ಧೀತ್ಯರ್ಥಃ —ತಾ. ಪ್ರ.)

೫. ಆ ನಿತ್ಯಸಿದ್ಧವಾದ ಚಿತ್ ಯಾವುದುಂಟೋ ಅದು ಪರಾ (ಎಲ್ಲದಕ್ಕಿಂತ ಶ್ರೇಷ್ಠ) ಆದುದು. ಪರಮಾ (ಸೂಕ್ಷ್ಮ) ಆದುದು. ಕಾಷ್ಠಾ (ಕೊನೆ) ಆದುದು. ಅದು ಎಲ್ಲ ದೃಕ್ಕುಗಳಿಗಿಂತ ಉತ್ತಮವಾದ ದೃಕ್ಕು. ಮಹಿಮೆಗಳೆಲ್ಲದಕ್ಕೂ ಮಹಿಮೆಯನ್ನು ಕೊಡುವುದು ಅದು. ಅದು ಗುರುಗಳಿಗೆಲ್ಲ ಗುರುವು.

(ಸಾ ಚೇತ್ಯ ಸಂವೇದ್ಯ ವಿನಿರ್ಮುಕ್ತ ಸಂವಿತ್ ಸ್ಥಿತಿಃ | ಯತೋವಾಚೋ ನಿವರ್ತಂತೇ ||–ಇತ್ಯಾದಿ ಶ್ರುತಿಪ್ರೋಕ್ತಾ ಆನಂದೋತ್ಕರ್ಷ ಪರಂಪರಾಯಾಃ ಪರಮಾ ಕಾಷ್ಠಾ | —ತಾ. ಪ್ರ.)

೬. ಅದೇ ಆತ್ಮನು. ಅದೇ ವಿಜ್ಞಾನವು. ಅದೇ ಶೂನ್ಯವು. ಪರಬ್ರಹ್ಮವೂ ಅದೇ! ಅದೇ ಶ್ರೇಯಸ್ಸು. ಶಾಂತನಾದ ಶಿವನೂ ಅದೇ! ಅದೇ ವಿದ್ಯೆಯು! ಅದೇ ಎಲ್ಲದಕ್ಕಿಂತ ಹೆಚ್ಚಿನ ಸ್ಥಿತಿಯು!

೭. ಚಿತ್ತಿನೊಳಗೆ ಇರುವ ಆತ್ಮವು ಯಾವುದೋ ಅದು ಸರ್ವಾನುಭವ ರೂಪವು. ಅದರಲ್ಲಿ ಆತ್ಮ ದ್ರವ್ಯಗಳೆಲ್ಲವೂ ಆತ್ಮ ಸತ್ತೆಯಿಂದಲೇ ಸುಖಾನುಭವ ಮಾಡುವುವು.

(ಸರ್ವಾನುಭವ ಎಂಬಲ್ಲಿ ಕರ್ತೃ ಕರ್ಮಗಳೆರಡೂ ತೋರುವ ಸೊಗಸು ನೋಡಿ. ಅದರಿಂದಲೇ "ಆತ್ಮನು ಕರ್ತಾಭೋಕ್ತಾ ಎರಡೂ ಹೌದು: ಇಲ್ಲದಿದ್ದರೆ ಎರಡೂ ಅಲ್ಲ" ಎನ್ನಬೇಕು. ಕರ್ತೃತ್ವ ಭೋಕ್ತೃಗಳುಂಟು ಎಂದರೆ

ಸ ಜಗತ್ತಿಲತೈಲಾತ್ಮಾ ಸ ಜಗದ್ಗೃಹದೀಪಕಃ |
ಸ ಜಗತ್ಪಾದಪರಸಃ ಸ ಜಗತ್ಪಶುಪಾಲಕಃ || ೮ ||

ಸ ತಂತುರ್ಭೂತಮುಕ್ತಾನಾಂ ಪರಿಪ್ರೋತಹೃದಂಬರಃ |
ಸ ಭೂತಮರಿಚೌಘಾನಾಂ ಪರಮಾ ತೀಕ್ಷ್ಣತಾ ತಥಾ || ೯ ||

ಸ ಪದಾರ್ಥೇ ಪದಾರ್ಥತ್ವಂ ಸ ತತ್ತ್ವಂ ಯದನುತ್ತಮಂ |
ಸ ಸತೋ ವಸ್ತುನಃ ಸತ್ತ್ವಮಸತ್ತ್ವಂ ವಾ ಸತಃ ಸ್ವತಃ || ೧೦ ||

ಯಃ ಸ್ವವಿತ್ತಿವಿಚಿತ್ರೇಣ ಸ್ವಯಮಾತ್ಮೈವ ಲಭ್ಯತೇ |
ಸರ್ವ ಏವ ಜಗದ್ಭಾವಾ ಅವಿಚಾರೇಣ ಚಾರವಃ || ೧೧ ||

ಅದಕ್ಕೆ ಸತ್ತಾ ಯಾವುದಾದರೂ ಉಂಟೋ ಎಂದರೆ, ಉಂಟು. ಆದರದೂ ಆತ್ಮ ಸತ್ತೆಯೇ !)

೮. ಆ ಆತ್ಮನು ಜಗತ್ತೆಂಬ ತಿಲದಲ್ಲಿರುವ ತೈಲವು. ಆ ಆತ್ಮನು ಜಗತ್ತೆಂಬ ವೃಕ್ಷಕ್ಕೆ ರಸರೂಪನಾಗಿರುವನು. ಆ ಆತ್ಮನು ಜಗತ್ತೆಂಬ ಪಶುವಿಗೆ ಪಾಲಕನು.

೯. ಪ್ರಾಣಿ ಪ್ರಾಣಿಗಳೆಂಬ ಮುತ್ತುಗಳನ್ನೆಲ್ಲ ಹಿಡಿದಿರುವ ತಂತು ವಾತನು. ಹಾಸು ಹೊಕ್ಕಾಗಿ ಸೇರಿಕೊಂಡು ಎಲ್ಲವನ್ನೂ ಧರಿಸಿರುವ ಆಕಾಶವೇ ಆತನು. ಪ್ರಾಣಿಗಳೆಂಬ ಮೆಣಸುಗಳ ಖಾರವೂ ಆತನೇ !

೧೦. ಪದಾರ್ಥಗಳ ಪದಾರ್ಥತ್ವವು ಆತನು. ಅನುತ್ತಮವಾದ ತತ್ವವು ಆತನು. ಇರತಕ್ಕ ವಸ್ತುಗಳ ಸತ್ವವು ಆತನು. ಇಲ್ಲದಿರುವ ವಸ್ತುಗಳ ಅಸತ್ತ (ಅಭಾವ)ವೂ ಆತನೇ !

೧೧. ಅವಿಚಾರ ಸ್ಥಿತಿಯಲ್ಲಿ ರಮಣೀಯಗಳಾದ ಜಗದ್ಭಾವಗಳೆಲ್ಲವೂ ಆತ್ಮನಿಂದಲೇ ಬಂದವು ಎಂಬ ಜ್ಞಾನವು ಯಾವನನ್ನು ತಿಳಿವುದರಿಂದ ಬರುವುದೋ ಆ ವಿಚಿತ್ರ-(ಅಲೌಕಿಕ) ಸ್ವಸಂವಿತ್ಸ್ವರೂಪನು ಆತನು.

ಅವಿದ್ಯಮಾನಾಃ ಸದ್ಭಾವಾ ವಿಚಾರವಿಶರಾರವಃ |
ಅಹಮಾದೌ ಜಗಜ್ಜಾಲೇ ಮಿಥ್ಯಾಭ್ರಮಭರಾತ್ಮನಿ || ೧೨ ||

ಕೋನು ಭೂತ್ವಾನುಬಧ್ನಾಮಿ ವೃತ್ತಿಂ ಕಥಮವಾಪ ಧೀಃ |
ಆದ್ಯಮಧ್ಯಾಂತಮಾನಾನಿ ಸಂಕಲ್ಪಕಲನಾನ್ಯಹಂ || ೧೩ ||

ಬ್ರಹ್ಮಾಕಾಶಮನಾದ್ಯಂತಂ ಕೇವೇಯತ್ತಾ ಮಮಾತ್ಮನಃ |
ಇತಿ ನಿಶ್ಚಯವಾನಂತಃ ಸಮ್ಯಗ್ವ್ಯವಹೃರ್ಬಹಿಃ || ೧೪ ||

ಉದಯಾಸ್ತಮಯೋನ್ಮುಕ್ತಸ್ಥಿತಿರಂತಃ ಸ ಸರ್ವದಾ |
ನಾಸ್ತಮೇತಿ ನ ಚೋದೇತಿ ಮನಃ ಸಮಸಮುಸ್ಥಿತಂ || ೧೫ ||

---

೧೨. ಮಿಥ್ಯಾ ಭ್ರಾಂತಿಗಳ ಕ್ರೀಡಾಕ್ಷೇತ್ರವಾಗಿರುವ ಜಗತ್ತೆಂಬ ಈ ಜಾಲದಲ್ಲಿ ಅಹಂ ಎಂಬುದು ಯಾವುದು ಎಂದು ಮೊದಲಾಗಿ ವಿಚಾರ ಮಾಡುವುದಕ್ಕೆ ಆರಂಭವಾಗುತ್ತಲೂ ಉದುರಿಹೋಗುವ ಭಾವಗಳು ಇದ್ದಂತೆ ಕಂಡರೂ ಇಲ್ಲವೇ ಇಲ್ಲದವು ಅವು.

೧೩. (ಆ ವಿಚಾರವು ಹೇಗೆ ಎಂದರೆ) ಬುದ್ಧಿಯು ನನ್ನನ್ನು ಹೇಗೆ ಹಿಡಿದುಕೊಂಡಿತು ? ಬುದ್ಧಿಯಿಂದಲ್ಲವೆ ಆದಿ, ಮಧ್ಯ, ಅಂತ, ಎಂಬ ಸಂಕಲ್ಪ ಸಂಕಲ್ಪನೆಗಳು ಹುಟ್ಟಿಕೊಂಡಿರುವುದು ? ನಾನು ಯಾರಾಗಿ ಇವುಗಳಲ್ಲಿ ಆಸ್ಥೆಯನ್ನು ವಹಿಸಿರುವೆನು ?

೧೪. ಬ್ರಹ್ಮವು ಆಕಾಶಕ್ಕಿಂತ ಸೂಕ್ಷ್ಮವಾಗಿ ಆದಿ-ಅಂತಗಳಿಲ್ಲದಿರಲು, ಆತ್ಮನಲ್ಲಿ ಇಯತ್ತಾ (ಇಷ್ಟೇ ಸರಿ ಎಂದು ಗೊತ್ತುಮಾಡುವಿಕೆ) ಯಾವುದು ? ಎಂಬ ನಿಶ್ಚಯವುಳ್ಳವನಾಗಿ, ಅಂತಃ, ಬಹಿಃ, ಕೂಡ, ಚೆನ್ನಾಗಿ ಸಮಾಧಾನವುಳ್ಳವನಾಗಬೇಕು.

೧೫. ಅಂತಹವನು ತನ್ನೊಳಗೆ ಉದಯ, ಅಸ್ತಮಯ, ಎಂಬ ಎರಡೂ ಸ್ಥಿತಿಗಳಿಲ್ಲದವನು. ಅವನ ಮನಸ್ಸು ಬ್ರಹ್ಮದಲ್ಲಿ ನೆಲೆಯಾಗಿರುವುದರಿಂದ ಅದು ಉದಯಿಸುವುದೂ ಇಲ್ಲ: ಅಸ್ತಮಿಸುವುದೂ ಇಲ್ಲ.

ಯಸ್ಯ ಖಸ್ಯೇವ ಶೂನ್ಯತ್ವಂ ಸ ಮಹಾತ್ಮೇಹ ತದ್ವಪುಃ || ೧೬ ||

ಭಾವಾದ್ವೈತಪದಾರೂಢಃ ಸುಷುಪ್ತಪರಯಾ ಧಿಯಾ ।
ವ್ಯವಹಾರ್ಯಪಿ ಸಂಕ್ಷೋಭಂ ನೈತ್ಯಾದರ್ಶನರೋ ಯಥಾ || ೧೭ ||

ಆದರ್ಶಪುರುಷಸ್ಯೇವ ವ್ಯವಹಾರವತೋಽಪಿ ಚ ।
ನ ಯಸ್ಯ ಹೃದಯೋಲ್ಲೇಖೋ ಮನಾಗಪಿ ಸ ಮುಕ್ತಿಭಾಕ್ || ೧೮ ||

ಅವಿಭಾಗಮಿವಾದರ್ಶೇ ಚಿನ್ಮಣೌ ಪ್ರತಿಬಿಂಬತಿ || ೧೯ ||

---

೧೬. ಯಾವನಿಗೆ ಬ್ರಹ್ಮದಂತೆಯೇ ಸರ್ವ ಶೂನ್ಯತ್ವವು ಲಭಿಸಿರುವುದೋ. ಯಾವನು ಬ್ರಹ್ಮದಂತೆ ಶೂನ್ಯವಪುವೋ ಎಂದರೆ ನಾಮರೂಪ ರಹಿತನೆಂದು ಉಳಿಯುವನೋ ಆತನು ಇಲ್ಲಿದ್ದರೂ ಮಹಾತ್ಮನು.

೧೭. ಆತನು ಭಾವಾದ್ವೈತದಲ್ಲಿ ನಿಂತವನು. ಸುಷುಪ್ತಿಯಲ್ಲಿರುವಂತೆ ಆತನ ವೃತ್ತಿಯು ಶೂನ್ಯವಾಗಿರುವುದು. ಆತನು ವ್ಯವಹಾರ ಮಾಡುತ್ತಿದ್ದರೂ, ಕನ್ನಡಿಯಲ್ಲಿ ಕಾಣಿಸುವವನಂತೆ ಯಾವುದರಿಂದಲೂ ಸಂಕ್ಷೋಭವನ್ನು ಹೊಂದುವುದಿಲ್ಲ.

(ಭಾವಾದ್ವೈತಂ ಸದಾ ಕುರ್ಯಾತ್ । ಕ್ರಿಯಾದ್ವೈತಂ ನ ಕರ್ಹಿಚಿತ್ ||
ಅದ್ವೈತಂ ತ್ರಿಷು ಲೋಕೇಷು ನಾದ್ವೈತಂ ಗುರುಣಾ ಸಹ ||-)

೧೮. ಕನ್ನಡಿಯಲ್ಲಿ ಕಾಣುವ ಪುರುಷನಿಗೆ ಹೇಗೋ ಹಾಗೆ ವ್ಯವಹಾರ ಮಾಡುತ್ತಿದ್ದರೂ ಯಾವನಿಗೆ ಮಾನಾಪಮಾನಾದಿಗಳು ಯಾವಾಗಲೂ ಉಂಟಾಗುವುದಿಲ್ಲವೋ ಅವನು ಮುಕ್ತಿಭಾಜನನು.

೧೯. ಆದರ್ಶದಲ್ಲಿ ಕಾಣುವ ಅವಿಭಾಗದಂತೆ ಚಿನ್ಮಣಿಯಲ್ಲಿ ಪ್ರತಿಬಿಂಬಿಸುವುದು (?)

(ಅವಿಭಾಗಮಿತಿ । ಇವಕಾರೋ ಭಿನ್ನ ಕ್ರಮಃ । ಯಥಾ ಆದರ್ಶೇ ದೃಶ್ಯಮಾನೋ ಜನವ್ಯವಹಾರಃ ಅವಿಭಾಗಂ ಆದರ್ಶಸ್ಯ ವೈಚಿತ್ರ್ಯ ವಿಭಾಗ ವಿಕಾರಮಕೃತ್ವೈವ ಪ್ರತಿಬಿಂಬತಿ ತದ್ವಚ್ಚಿನ್ಮಣಾವಿವ || ತಾ. ಪ್ರ.]

ಚಿತೇಃ ಪರಮನೈರ್ಮಲ್ಯಾದ್ವ್ಯವಹಾರೋ ಯಥಾ ಗತಃ |
ಚಿಚ್ಚಮತ್ಕೃತಿರೇವೇಯಂ ಜಗದಿತ್ಯವಭಾಸತೇ ॥ ೨೦ ॥

ನೇಹಾಸ್ತ್ಯೈಕಂ ನ ಚ ದ್ವಿತ್ವಂ ಮಮಾದೇಶೋಽಪಿ ತನ್ಮಯಃ |
ವಾಚ್ಯವಾಚಕಶಿಷ್ಯೇಹಾಗುರುವಾಕ್ಯೈಶ್ಚಮತ್ಕೃತೈಃ ॥ ೨೧ ॥

ಆತ್ಮನಾತ್ಮನಿ ಶಾಂತೈವ ಚಿಚ್ಚಮತ್ಕುರುತೇ ಚಿತಿ |
ಚಿತ್ಪ್ರಸ್ಪಂದೋ ಹಿ ಸಂಸಾರಸ್ತದಸ್ಪಂದಃ ಪರಂ ಪದಂ ॥ ೨೨ ॥

ಚಿತ್ಸ್ಪಂದಶಮನೇನೇಯಂ ಪರಿಶಾಮ್ಯತಿ ಸಂಸೃತಿಃ |
ಮಹಾಚಿತ್ತೇ ನತೇಽರ್ಥೋಽಂಶಭಾವಾಯೋ ಭಾವನಾಕ್ಷಯಃ ॥ ೨೩ ॥

---

೨೦. ಚಿತ್ತು ಪರಮ ನಿರ್ಮಲವಾದುದು. ಅದರಿಂದಲೂ ವ್ಯವಹಾರವು ಹೇಗೆ ಹೇಗೋ ಹುಟ್ಟುವುದು ಎನ್ನುವುದು. ಆ ಚಿತ್ತಿನ ಚಮತ್ಕೃತಿಯು. ಜಗತ್ತು ಎಂದು ಅವಭಾಸವಾಗುವುದೂ ಇದೇ !

೨೧. ನಾನು ಹೇಳುತ್ತಿರುವ ಉಪದೇಶದಲ್ಲಿ ಐಕ್ಯ, ದ್ವಿತ್ವ, ಎಂಬ ಮಾತುಗಳಿದ್ದರೂ, ವಾಚ್ಯ, ವಾಚಕ, ಶಿಷ್ಯನ ಆಶೆ, ಗುರುವಾಕ್ಯ, ಮೊದಲಾದ ಚಮತ್ಕಾರಗಳಿಂದ ಕೂಡಿದ್ದರೂ, ನಿಜವಾಗಿಯೂ ಇಲ್ಲಿ ಐಕ್ಯವೂ ಇಲ್ಲ: ದ್ವಿತ್ವವೂ ಇಲ್ಲ. ಎಲ್ಲವೂ 'ತತ್' ಮಯವಾದುದು.

೨೨. ತನ್ನಲ್ಲಿ ತಾನಾಗಿ ಶಾಂತವಾಗಿರುವ ಚಿತ್ತು ಚಮತ್ಕಾರ ಮಾಡುವುದು. ಚಿತ್ತಿನಲ್ಲಿ ನಡೆಯುವ ಚಿದ್ವ್ಯಾಪಾರವೇ ಸಂಸಾರವು. ಆ ವ್ಯಾಪಾರವಿಲ್ಲದಿರುವಿಕೆಯೇ ಮೋಕ್ಷವು.

(ಪ್ರಸ್ಪಂದೋ ವಿವರ್ತ ಏವ | —ತಾ. ಪ್ರ.)

೨೩. ಚಿತ್ತಿನ ವ್ಯಾಪಾರವನ್ನು ಪ್ರಶಮನ ಮಾಡುವುದರಿಂದ ಈ ಸಂಸಾರವು ಪ್ರಶಾಂತವಾಗುವುದು. ಮಹಾ ಚಿತ್ತ ಸ್ವರೂಪವಾದ ಬ್ರಹ್ಮವು ನತ (ವಿಕಾರಾದಿ ರೂಪ ಪರಿಣತ)ವಾಗಲು, ಈ ಸಂಸಾರವು ಅರ್ಥ ಎಂದರೆ ಇರುವುದಾಗುವುದು. ಈ (ಅರ್ಥ ಎಂದರೆ ಇರುವುವೆಂಬ) ಭಾವನೆಯು ಕ್ಷಯವಾದರೆ—ಈ ಅಂಶ ಭಾವವೂ ಅಯ(ವೆಂದರೆ ಕ್ಷಯ)ವಾಗುವುದು.

[ಅಂಶ ಭಾವ ಎಂದರೆ ಖಂಡಖಂಡವಾಗಿರುವುದೆಂಬ ಭಾವನೆ.]

ಅಸನ್ನಪಿ ಸ್ವಭಾವಂ ತತ್ಸಂವಿತ್ಸ್ಪಂದ ಉದಾಹೃತಂ ।
ಶೂನ್ಯತ್ವಮಜಡಂ ಯತ್ತತ್ಪರಮಾಹುಶ್ಚಿತೇರ್ವಪುಃ ॥ ೨೪ ॥

ತತ್ತ್ವೇನ ಭಾವನಾಯತ್ತಾ ಸಂಸೃತಿಃ ಸಾನುಭೂಯತೇ ।
ಅಭಾವನಾಮಾತ್ರಲಯಾತ್ಸಾ ಚ ನಿಃಸಾರರೂಪಿಣೀ ॥ ೨೫ ॥

ಕೇವಲಂ ಕೇವಲೀಭಾವಾತ್ತದ್ರೂಪಾ ಸೈವ ಶಿಷ್ಯತೇ । ॥ ೨೬ ॥

ಚಿತ್ಸ್ಪಂದಮೇವ ಸಂಸಾರಚಕ್ರಪ್ರವಹಣಂ ವಿದುಃ ।
ಮಾತೃಮಾನ ಪ್ರಮೇಯಾದಿ ಕಟಕಾದೀವ ಹೇಮನಿ ॥ ೨೭ ॥

ಪೃಥಗಸ್ತಿ ನ ಚ ಸ್ಪಂದಶ್ಚಿತೇರ್ಯಾ ಸಂಸೃತಿರ್ಭವೇತ್ ।
ಚಿತ್ತಮೇವ ಚಿತಿಸ್ಪಂದಸ್ತದಬೋಧೋ ಹಿ ಸಂಸೃತಿಃ ॥ ೨೮ ॥

---

೨೪. ಈ ಅಂಶ ಭಾವವು ಅಸತ್ತೇ ಆಗಿದ್ದರೂ ಸಂವಿತ್ ವ್ಯಾಪಾರದಲ್ಲಿ ಹೀಗೆ ಕಾಣಿಸುವುದು ಸ್ವಭಾವವೆಂದು ಅದನ್ನು ಉದಹರಿಸಿದೆವು. ಶೂನ್ಯತ್ವವು, ಅಜಡವು, ಎಲ್ಲದಕ್ಕಿಂತ ಆಚೆ ಇರುವುದೋ ಯಾವುದೋ ಅದನ್ನು ಚಿತ್ತಿನ ವಪು ವೆನ್ನುವರು.

೨೫. ತತ್ವವೇನು ಎಂದು ವಿಚಾರ ಮಾಡಿ ನೋಡಿದರೆ, ಸಂಸಾರವು ಭಾವನೆಯನ್ನು ಆಶ್ರಯಿಸಿರುವುದು: ಹಾಗೆ ಭಾವನಾಯತ್ತವಾಗಿಯೇ ಅನು ಭೂತವಾಗುವುದು. ಭಾವನೆಯನ್ನು ಬಿಟ್ಟರೆ, ಅದೂ ಲಯವಾಗುವುದರಿಂದ ಅದು ಸಾರವಿಲ್ಲದುದು.

೨೬. ಕೇವಲವಾಗಿ ಕೇವಲ ಭಾವವನ್ನೇ ಹೊಂದಿದರೆ ಚಿದ್ರೂಪವೊಂದೇ ಒಂದು ಉಳಿಯುವುದು.

೨೭. ಚಿತ್ತಿನ ವ್ಯಾಪಾರವನ್ನೇ ಸಂಸಾರ ಚಕ್ರದಲ್ಲಿ ಪ್ರವಾಹವೆನ್ನುವರು. ಮಾತೃ, ಮಾನ, ಮೇಯಾದಿಗಳೂ ಕಟಕಾದಿಗಳು ಚಿನ್ನಕ್ಕೆ ಸಂಭವಿಸುವುದು ಹೇಗೋ ಹಾಗೆ.

೨೮. (ಹಾಗಾದರೆ ಆ ವ್ಯಾಪಾರಸಾದರೂ ಪ್ರತ್ಯೇಕವಾಗಿರುವುದೋ

ಅಬೋಧಮಾತ್ರೇ ಚಿತ್ಸ್ಪಂದಃ ಕಟಕತ್ವಮಿವೋತ್ಥಿತಂ |
ಬೋಧಮಾತ್ರವಿಲೀನೇಽಸ್ಮಿನ್ ಶುದ್ಧಾ ಚಿದ್ರಾಮ ಶಿಷ್ಯತೇ || ೨೯ ||

ಸ್ವಭಾವಬೋಧಮಾತ್ರೇಣ ಕ್ಷೀಯತೇ ಭೋಗವಾಸನಾ |
ಭೋಗಾಭಾವನಮೇವೇಹ ಪರಮಂ ಜ್ಞತ್ವಲಕ್ಷಣಂ || ೩೦ ||

ಇತೋ ನಾಭಿಮತಾಃ ಸರ್ವೇ ಜ್ಞಸ್ಯ ಭೋಗಾಃ ಸ್ವಭಾವತಃ |
ಭವಂತಿ ಕೋಽತಿತೃಪ್ತೋ ಹಿ ದುರನ್ನಂ ಕಿಲ ವಾಂಛತಿ || ೩೧ ||

ಏತದೇವ ಪರಂ ವಿದ್ಧಿ ಜ್ಞತ್ವಸ್ಯಾಪರಲಕ್ಷಣಂ |
ಸ್ವಭಾವೇನೈವ ಭೋಗಾನಾಂ ಯತ್ಕಿಲಾನಭಿವಾಂಛನಂ || ೩೨ ||

ಎಂದರೆ) .ಸಂಸಾರವಾಗುವ ವ್ಯಾಪಾರವೊಂದೂ ಚಿತ್ತಿನಲ್ಲಿ ಪ್ರತ್ಯೇಕವಾಗಿಲ್ಲ; ಸ್ವಚಿತ್ತವೇ ಚಿತ್ತಿನ ವ್ಯಾಪಾರವು: ಹಾಗೆಂದು ತಿಳಿಯದಿರುವುದೇ ಸಂಸೃತಿಯು.

೨೯. ಅಜ್ಞಾನದಶೆಯಲ್ಲಿ ಚಿತ್ಸ್ಪಂದವು ಚಿನ್ನವು ಕಡಗವಾದ ಹಾಗೆ (ನಾಮರೂಪ ಕ್ರಿಯಾಸಹಿತವಾಗಿ) ಇರುವುದು. ಜ್ಞಾನೋದಯವಾಗಿ ನಾಮರೂಪ ಕ್ರಿಯಾ ಸಹಿತತ್ವವು ನಾಶವಾಗಲು, ರಾಮ, ಚಿತ್ತೊಂದೇ ಉಳಿಯುವುದು.

೩೦. ಸ್ವಭಾವವೇನು ಎಂಬುದು ತಿಳಿದರೆ ಭೋಗ ವಾಸನೆಯು ಕ್ಷಯ ವಾಗುವುದು. ಭೋಗವು ಬೇಕಿಲ್ಲ ಎನ್ನಿಸುವುದೇ ಜ್ಞಾನಿಯ ಲಕ್ಷಣವು.

೩೧. ಜ್ಞಾನಿಯು ಭೋಗಗಳು ಬೇಕು ಎನ್ನುವುದಿಲ್ಲ. ಆದರೂ ಭೋಗ ಗಳೆಲ್ಲ ಜ್ಞಾನಿಗೆ ತಾವಾಗಿ ಬರುವುವು. ತೃಪ್ತಿಗಿಂತ ಅತಿಶಯವಾದ ತೃಪ್ತಿಯನ್ನು ಪಡೆದವನು ಯಾವನು ತಾನೇ ದುರ್ಭೋಜನವನ್ನು ಅಪೇಕ್ಷಿಸುವನು ?

೩೨. ಜ್ಞಾನಿಯು ಅಪೇಕ್ಷಿಸದಿದ್ದರೂ ಸ್ವಭಾವವಾಗಿಯೇ ಭೋಗ ಗಳೆಲ್ಲವೂ ಆತನನ್ನು ಹುಡುಕಿಕೊಂಡು ಬರುವುದು, ಜ್ಞಾನಿಯ ಮತ್ತೊಂದು ಲಕ್ಷಣವು.

ಚಿತ್ತತ್ಸ್ಪಂದೈವ ಸರ್ವಾತ್ಮರೂಪಿಣ್ಯಸ್ತೀತಿ ನಿಶ್ಚಯಃ |
ಯೋಂತಪ್ರರೂಢಃ ಸ್ವಭ್ಯಾಸೋ ಜ್ಞತ್ವಶಬ್ದೇನ ಸ ಸ್ಮೃತಃ || ೩೩ ||

ಯೋ ನ ಭುಂಕ್ತೇ ಭುಜ್ಯಮಾನಾನಪಿ ಭೋಗಾನ್ಸ ಬುದ್ಧಿಮಾನ್ || ೩೪ ||

ಲೋಕಾನುರೋಧಸಿದ್ಧ್ಯರ್ಥಂ ಸ ಹಂತಿ ಲಗುಡೈರ್ನಭಃ || ೩೫ ||

---

೩೩. ಚಿತ್ತಿನ ವ್ಯಾಪಾರವೇ ಎಲ್ಲಕ್ಕೂ ಕಾರಣವಾಗಿರುವುದು. ಅದೇ ಸರ್ವಾತ್ಮ ರೂಪವು ಎಂಬ ನಿಶ್ಚಯವು ಅಂತರಂಗದಲ್ಲಿ ದೃಢವಾಗಿ ನಿಲ್ಲುವುದಕ್ಕೆ ಕಾರಣವಾದ ಒಳ್ಳೆಯ ಅಭ್ಯಾಸವು ಯಾವುದುಂಟೋ ಅದೇ ಜ್ಞಾನಿಯ ಜ್ಞತ್ವ ಎನ್ನಿಸಿಕೊಳ್ಳುವುದು.

೩೪–೩೫. ಭೋಗಗಳಲ್ಲಿ ಮಗ್ನನಾಗಿ ಅನುಭವಿಸುತ್ತಿದ್ದರೂ ಯಾವನು ಭೋಗಾನುಭವ ಮಾಡುತ್ತಿಲ್ಲವೋ ಎಂದರೆ ಮನಸ್ಸು ಭೋಗ ಲಗ್ನವಾಗಿಲ್ಲವೋ, ಆತನು ಬುದ್ಧಿವಂತನು: ಜ್ಞಾನಿಯು. ಲೋಕಾನುಗ್ರಹಾರ್ಥವಾಗಿ, ಭೋಗ ಗಳನ್ನು ಅನುಭವಿಸುತ್ತಾ ಆತನು ದೊಣ್ಣೆಯಿಂದ ಆಕಾಶವನ್ನು ಹೊಡೆಯುವವ ನಂತೆ ಇರುವನು.

[ಇತರರೆಲ್ಲರೂ ಭ್ರಾಂತಿಯಿಂದ ಆಕಾಶವನ್ನು ಹೊಡೆಯುತ್ತಿದ್ದರೆ, "ಆಕಾಶ ವನ್ನು ಹೊಡೆಯುವುದು ಸಾಧ್ಯವಿಲ್ಲ: ಅದು ಏಟಿಗೆ ಸಿಕ್ಕುವುದಿಲ್ಲ" ಎಂದು ತಿಳಿದಿದ್ದರೂ ಆ ಇತರರ ತೃಪ್ತ್ಯರ್ಥವಾಗಿ ತಾನೂ ದೊಣ್ಣೆಗಳಿಂದ ಆಕಾಶವನ್ನು ಹೊಡೆಯುವನಂತೆ, ಜ್ಞಾನಿಯು ಭೋಕ್ತೃವು ತಾನಲ್ಲವೆಂದರಿತಿದ್ದರೂ ಭೋಗ ಗಳಲ್ಲಿ ಮಗ್ನನಾಗಿರುವವನಂತೆ ವ್ಯಾಪಾರ ಮಾಡುವನು.]

ಸಕ್ತಾಃ ಕರ್ಮಣ್ಯ ವಿದ್ವಾಂಸೋ |
ಕುರ್ಯಾದ್ವಿದ್ವಾಂಸ್ತಥಾಸಕ್ತ || ೨೫ ||

ನ ಬುದ್ಧಿ ಭೇದಂ ಜನಯೇಪ |
ಜೋಷಯೇತ್ ಸರ್ವಕರ್ಮಾಣಿ || ೨೬ ||

ಪ್ರಕೃತೇಃ ಕ್ರಿಯಮಾಣಾನಿ |
ಅಹಂಕಾರ ವಿಮೂಢಾತ್ಮಾ || ೨೭ ||

ವಿನಾಕೃತ್ರಿಮಯಾ ಬುದ್ಧ್ಯಾ ನ ಸಿದ್ಧಿರವಗಮ್ಯತೇ
ಕ್ವಚಿದಾತ್ಮಾವಲೋಕೇಚ ಸ್ವಾಂಗಾವದಲನೈರಪಿ ॥ ೩೬ ॥

ಚಿಚ್ಚೇತ್ಯಂ ಚೇತ್ಯಕೋಟಿಸ್ಥಾ ತಾವತ್ಪಶ್ಯತಿ ವಿಭ್ರಮಂ ।
ಇದಂ ಯಾವದಬೋಧಾತ್ಮಾ ಸ್ಪಂದತೇ ಸ್ಪಂದರೂಪಿಣೀ ॥ ೩೭ ॥

ತತ್ವವಿತ್ತು ಮಹಾಬಾಹೋ ಗುಣಕರ್ಮ ವಿಭಾಗಯೋಃ ।
ಗುಣಾಗುಣೇಷು ವರ್ತಂತೇ ಇತಿ ಮತ್ವಾಸ ಸಜ್ಜತೇ ॥ ೨೮ ॥

ಪ್ರಕೃತೇರ್ಗುಣ ಸಂಮೂಢಾ ಸ್ಸಜ್ಜಂತೇ ಗುಣಕರ್ಮಸು ।
ತಾನಕೃತ್ಸ್ನ ವಿದೋಮಂದಾ೯ ಕೃತ್ಸ್ನವಿನ್ನ ವಿಚಾಲಯೇತ್ ॥ ೨೯ ॥

ಗೀತಾ-ಅಧ್ಯಾಯ ೩.

[ನನು ಸಾಯದಿ ವೃಥಾ ಚೇಷ್ಟಾ ತರ್ಹಿ ಸರ್ವಜನ ಭೋಕ್ತ ಭೋಗ್ಯ ಭೋಗಾಕಾರ ಪರಿಣತಾತ್ಮ ಚಿದೇವ ಸರ್ವಾತ್ಮರೂಪಾ ಇತಿ ಪ್ರಾಗುಕ್ತ ಬುದ್ಧಿರಪಿ ಸರ್ವಜನ ನಭೋ ಲಗುಡ ಹನನಂ ಮದೀಯಂ ಏವ ಇತಿವತ್ ಭ್ರಾಂತಿ ಬುದ್ಧಿತ್ವಾತ್ ಕೃತ್ರಿಮೇವೇತಿ ಸಾ ಕಥಂ ಲಕ್ಷಣತ್ವೇನೋಕ್ತಾ ? ತತ್ರಾಹ-ವಿನೇತಿ। ಸಿದ್ಧಿಃ ನಿರತಿಶಯಾನಂದಾತ್ಮ ತತ್ತ್ವಂ। ತಥಾ ಚ ಕೃತ್ರಿಮಮಪಿ ಸರ್ವಾತಭಾವ ದರ್ಶನಂ ಪರಿಚ್ಛಿನ್ನಾತ್ಮ ದೃಷ್ಟಿ ನಿರಾಸದ್ವಾರಾ ತತ್ತ್ವಾವಗಮೋಪಯುಕ್ತಮಿತಿ ತಲ್ಲಕ್ಷಣಮುಕ್ತ ಮಿತ್ಯರ್ಥಃ —ತಾ. ಪ್ರ.]

೩೬. ಯಾವಾಗಲಾದರೂ ಒಂದು ಸಲವಾದರೂ ಆತ್ಮ ಸಾಕ್ಷಾತ್ಕಾರವಾಗದಿದ್ದರೆ, ಕೃತ್ರಿಮವಾದ (ಅಸತ್ತಾಗಿ, ಅಸತ್ತನ್ನು ಸತ್ತೆಂದು ತೋರಿಸುವ) ಬುದ್ಧಿಯಿಂದ, ಕೈ ಕಾಲುಗಳನ್ನು ಕತ್ತರಿಸಿಕೊಂಡರೂ ಸಿದ್ಧಿಯು ಲಭಿಸುವುದಿಲ್ಲ.

[ವಿನಾ ಕೃತ್ರಿಮಯಾ ಬುದ್ಧ್ಯಾ ನ ಸಿದ್ಧಿರವಗಮ್ಯತೇ ॥ ಕ್ವಚಿದಾತ್ಮಾವಲೋಕೇ ಚ ಸ್ವಾಂಗಾವದಲ ನೈರಪಿ ॥ ಎಂದು ಮೂಲದಲ್ಲಿದೆ. ಅದನ್ನು ಕ್ವಚಿದ್ಯಾತ್ಮಾವಲೋಕೇನ ಎಂದು ಇಲ್ಲಿ ತಿದ್ದಿಕೊಳ್ಳಲಾಗಿದೆ.]

೩೭. ಚಿತ್ತೇ ಚೇತ್ಯಕೋಟಿಯಲ್ಲಿದ್ದು ಚೇತ್ಯವಾಗಿರುವವರೆಗೂ ಭ್ರಾಂತಿಯನ್ನೇ ನೋಡುತ್ತಿರುವುದು : ಅಜ್ಞಾನದಶೆಯಲ್ಲಿ ತಾನೇ ಸ್ಪಂದರೂಪವಾಗಿದ್ದುಕೊಂಡು ಸ್ಪಂದಮಾಡುತ್ತಲೇ ಇರುವುದು.

ಸಮ್ಯಗ್ಬೋಧೋದಯೋಽಂತಃ ಸ್ಯಾತ್ಸ್ಪಂದಾಸ್ಪಂದದಶಾಕ್ರಮಃ ।
ಕ್ವಾಪಿ ಯಾತಿ ಚ ಸಂಶಾಂತದೀಪವತ್ಸಾಭಿಧಾನಕಃ　　|| ೩೮ ||

ಚಿತಃ ಪ್ರಶಾಂತರೂಪಾಯಾ ದೀಪಿಕಾಯಾಃ ಸ್ವಭಾವತಃ ।
ಸ್ಪಂದಾಸ್ಪಂದಮಯೀ ನೇಹ ಕಥೈವಾಸ್ತಿ ಮನಾಗಪಿ　　|| ೩೯ ||

ಯದಸ್ಪಂದಸ್ಯ ಮರುತೋ ನ ಸನ್ನಾಸನ್ನ ಮಧ್ಯಗಂ ।
ರೂಪಂ ತದೇವಾಸಂವಿತ್ತಿಸ್ಪಂದಾಯಾಃ ಪ್ರಶಮಂ ಚಿತೇಃ　　|| ೪೦ ||

ಅಭಿನ್ನಃ ಸ್ಯಾಚ್ಚಿತಃ ಸ್ಪಂದಃ ಶುದ್ಧಚಿತ್ಸ್ಫುರರೂಪಧೃಕ್ ।
ನ ಬಂಧಾಯ ನ ಮೋಕ್ಷಾಯ ಸ್ಥಿತ ಆತ್ಮನಿ ಕೇವಲಂ　　|| ೪೧ ||

---

೩೮. ತನ್ನೊಳಗೆ ಸಮ್ಯಗ್ಜ್ಞಾನವು ಉದಯವಾಗಲು, ಸ್ಪಂದ–ಅಸ್ಪಂದಗಳಾಗಿ ವರ್ತಿಸುತ್ತಿದ್ದ ಚೇತ್ಯವು, ಆರಿಹೋದ ದೀಪದಂತೆ, ಹೆಸರು ಕೂಡ ಇಲ್ಲದಂತೆಯೇ ಎಲ್ಲಿಯೋ ಹೋಗಿಬಿಡುವುದು.

೩೯. ಚಿತ್ತು ಪ್ರಶಾಂತವಾಗಲು, ಸ್ವಭಾವತಃ ಶಾಂತಿಯು ಬಂದೇ ಬರುವುದು. ಸ್ಪಂದಾಸ್ಪಂದಮಯಿ ಎಂಬ ಕಥೆಯೂ ಕೂಡ, ಆರಿಹೋದ ದೀಪದಲ್ಲಿ ದೀಪದ ಹೆಸರೇ ಇಲ್ಲದಂತೆ ಸುತರಾಂ ಇಲ್ಲವಾಗುವುದು.

೪೦. ಆಡದಿರುವ ಗಾಳಿಯನ್ನು ಕುರಿತು, ಇದೆಯೆಂದಾಗಲಿ, ಇಲ್ಲವೆಂದಾಗಲಿ, ಅಥವಾ ಇದೆ ಇಲ್ಲ ಎಂಬ ಎರಡಕ್ಕೂ ಮಧ್ಯಸ್ಥವಾಗಿದೆಯೆಂದಾಗಲಿ ಹೇಳುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಹಾಗೆ ಸ್ಪಂದವನ್ನು ಬಿಟ್ಟು ಸಂವಿದ್ರೂಪವಾಗಿ ಪ್ರಶಾಂತವಾಗಿರುವ ಚಿತ್ತಿನ ರೂಪವು.

೪೧. ಚಿತ್ತಿನ ಸ್ಪಂದವು ಚಿತ್ತಿಗಿಂತ ಬೇರೆಯಲ್ಲ ಎಂಬುದು ಯಾವಾಗ ಮನಸ್ಸಿಗೆ ಬರುವುದೋ ಆಗ ಚಿತ್ತು ಶುದ್ಧವಾಗಿ ಬ್ರಹ್ಮಸ್ವರೂಪವನ್ನೇ ಧರಿಸುವುದು. ಆಗ ಅದು ಬಂಧವನ್ನೂ ಮಾಡದೆ ಮೋಕ್ಷವನ್ನು ಮಾಡದೆ, ಕೇವಲವಾಗಿ ಆತ್ಮನಲ್ಲಿಯೇ ಇದ್ದು ಬಿಡುವುದು.

ಚಿಜ್ಜ್ಞೇನ್ನಿರರ್ಥಸಂವಿತ್ತಿನಿರ್ವಾಣೇನ ಚ ವಿಂದತೇ ।
ತದ್ಬಂಧಮೋಕ್ಷಪಕ್ಷಾದೇರ್ನಾಮಾಪೀಹ ನ ವಿದ್ಯತೇ ॥ ೮೨ ॥

ಮೋಕ್ಷೋಽಸ್ತ್ವಿತ್ಯೇವ ಬೋಧೋಂತಃ ಪೂರ್ಣತಾಕ್ಷಯಕಾರಣಂ ।
ಸಮಾಸ್ತ್ವಿತ್ಯಪಿ ಬಂಧಸ್ತೇ ಶ್ರೇಯೋಽಸಂವೇದನಂ ಪರಂ ॥ ೮೩ ॥

ಯದನಾಭಾಸಮಜಡಂ ತದ್ವಿದ್ಧಿ ಪರಮಂ ಪದಂ ।
ಚಿತಃ ಸ್ವರೂಪಂ ಸಂಸ್ಥಾನಮಚೇತ್ಯೋನ್ಮುಖತಾತ್ಮಕಂ ॥ ೮೮ ॥

ಯಃ ಸಂಕಲ್ಪನ ಶಬ್ದಾರ್ಥರೂಪಃ ಸ್ಪಂದೋ ಮಹಾಚಿತಃ ।
ಬಂಧಮೋಕ್ಷಾದಿಕಾರ್ಹೋಽಸೌ ಪ್ರೇಕ್ಷ್ಯಮಾಣಃ ಪ್ರಣಶ್ಯತಿ ॥ ೮೫ ॥

---

೮೨. ಚಿತ್ತೆಂಬುದು ಚಿತ್ತದಶೆಯನ್ನೂ ನಿರ್ವಾಣದಶೆಯನ್ನೂ ಹೊಂದದೆಯೇ ಇದ್ದಂತೆ ಇದ್ದಿದ್ದರೆ. ಆಗ ಬಂಧ, ಮೋಕ್ಷ, ಮೊದಲಾದುವುಗಳ ಹೆಸರೂ ಇರುತ್ತಿರಲಿಲ್ಲ.

೮೩. ಮೋಕ್ಷವಾಗಲಿ ಎಂದು ಅಪೇಕ್ಷಿಸುವುದೂ ಕೂಡ ಪೂರ್ಣತೆಯ ನಾಶಕ್ಕೆ ಕಾರಣವಾಗುವುದು. ಅದು ಬೇಡವೆಂದರೆ ಬಂಧಕ್ಕೆ ಕಾರಣವಾಗುವುದು. ಶ್ರೇಯೋರೂಪವಾದ ಅಸಂವೇದನ [ಮೋಕ್ಷ]ವು ಇವೆರಡಕ್ಕೂ ಬೇರೆಯಾಗಿರುವುದು.

೮೮. ಚಿತ್ತಿನ ಮೂಲಸ್ವರೂಪವು ಯಾವುದೋ, ಅದರ ಅಬಾಧಿತ ಸ್ಥಿತಿಯು ಯಾವುದೋ, ಅಚೇತ್ಯೋನ್ಮುಖವಾಗಿರುವಿಕೆಯು ಯಾವುದೋ, [ಎಂದರೆ ಚೇತ್ಯವಾಗಲು ಹೊರಡುವುದು ಇಲ್ಲದಿರುವಿಕೆ] ಯಾವುದನ್ನು ಇನ್ನು ಬೇರೆಯಾವುದೂ ತೋರಿಸಲಾರದೋ, ಯಾವುದು ಅಜಡವೋ ಅದೇ ಪರಮಪದವೆಂದು ತಿಳಿ.

೮೫. ಮಹಾ ಚಿತ್ತಿನ ಸ್ಪಂದವಾಗಿ ಸಂಕಲ್ಪವೆಂಬ ಶಬ್ದದ ಅರ್ಥರೂಪವಾಗಿರುವುದೋ ಅದು ಬಂಧ ಮೋಕ್ಷಾದಿಗಳನ್ನು ಪಡೆಯಲು ಅರ್ಹವಾಗುವುದು. ಅದನ್ನು ನೋಡುತ್ತಿದ್ದ ಹಾಗೆಯೇ, ಅದರ ಸ್ವರೂಪವನ್ನು ತಿಳಿಯುತ್ತಿದ್ದ ಹಾಗೆಯೇ ಅದು ನಾಶವಾಗುವುದು.

ಪ್ರೇಕ್ಷಣಾದೇವ ಸಂಶಾಂತೇ ತ್ವಹಂಭಾವೇ ನಿರಾಸ್ಪದೇ ।
ನ ವಿದ್ಮಃ ಕೇನ ಕಿಂ ಕಸ್ಯ ಬಧ್ಯತೇ ವಾಥ ಮುಚ್ಯತೇ || ೪೬ ||

ಸಂಕಲ್ಪ ಏವ ರಚಿತೇ ಬುಧಶ್ಛೇದವಿಭಾಗವಾನ್ ।
ತದಸಂಕಲ್ಪಮಸ್ಪಂದಂ ಸರ್ವಂ ಜಾತಮುವಾರಿತಂ || ೪೭ ||

ಸ್ಪಂದೇ ಸ್ಪಂದಮಯೇ ವಾತೇ ತನ್ಮಯತ್ವಾತ್ಸದಾ ಚಿತಾ ।
ಸಂಕ್ಷೀಣೇ ನ ಚ ಸಂಸಾರೋ ನಿಸ್ಪಂದೇ ಚಿದ್ಘನೇ ಸ್ಥಿತೇ || ೪೮ ||

ಚಿತ್ತೇಜ ಏವ ಚಿತ್ಸ್ಪಂದ ಇತಿ ಬುದ್ಧೇ ನಿರಂತರಂ ।
ವ್ಯತಿರಿಕ್ತಶ್ಚಿತಃ ಸ್ಪಂದೋ ನ ಕಂಚಿದವಶಿಷ್ಯತೇ || ೪೯ ||

ಅಸ್ಮಿನ್ದೃಶ್ಯಮಯೇ ದೀರ್ಘಸ್ವಪ್ನಾಂತರಂ ವ್ರಜನ್ ।
ನ ಜ್ಞೋ ಮೋಹಮುಪಾದತ್ತೇ ಸರ್ವಗತ್ವಾತ್ಸ್ವಸಂವಿದಃ || ೫೦ ||

---

೪೬. (ಸಂಕಲ್ಪ ಶಬ್ದಾರ್ಥವಾದ) ಅಹಂಭಾವವು ಅದರ ಸ್ವರೂಪವನ್ನು ಪ್ರೇಕ್ಷಣ (ತಿಳಿವು) ಮಾಡುತ್ತಿದ್ದ ಹಾಗೆಯೇ ಸಂಶಾಂತವಾಗುವುವಕ್ಕೆ ಅದಕ್ಕೆ ಆಸ್ಪದವಿಲ್ಲದಿರುವಿಕೆಯೇ. ಕಾರಣ ಹಾಗೆ ನಿರಾಸ್ಪದವಾದ ಅಹಂಭಾವವು ಶಾಂತವಾಗಲು ಯಾರಿಂದ, ಏನು, ಯಾರಿಗಾಗಿ ಬದ್ಧವಾಗುವುದು : ಅಥವಾ ಮುಕ್ತವಾಗುವುದು ಎನ್ನುವುದು ನಮಗೆ ತಿಳಿಯದು.

೪೭. ವಿವೇಕಿಯಾದವನು ತಾನು ಮಾಡಿದ ಸಂಕಲ್ಪದಿಂದಲೇ ಭಾಗಗಳು (ಭೇದಗಳು) ಬಂದಿವೆಯೆಂಬುದನ್ನು ಅರಿತು, ಆ ಸಂಕಲ್ಪವನ್ನು ತ್ಯಾಗ ಮಾಡಿದರೆ, ಚೇತ್ಯವಾಗಿದ್ದುದೆಲ್ಲವೂ ಇಲ್ಲದೆ ಹೋಗುವುದು.

೪೮. ಚಿತ್ತನ್ನು ಅರಿತವನಾಗಿ ವ್ಯಾಪಾರವನ್ನು ಸ್ತಂಭಿಸಿ ನಾಶ ಮಾಡಲು, ಸ್ಪಂದಮಯವಾದ ಪ್ರಾಣವು ಸ್ತಬ್ಧವಾಗಲು, ಚಿತ್ತು ತಾನೇ ತಾನಾಗಿ ನಿರ್ವ್ಯಾಪಾರವಾಗಿ ನಿಲ್ಲಲು, ಸಂಸಾರವೂ ಇಲ್ಲವಾಗುವುದು.

೪೯. ಚಿತ್ತಿನ ತೇಜಸ್ಸೇ ಚಿತ್ತಿನ ಸ್ಪಂದವು ಎಂದು ನಿಸ್ಸಂಶಯವಾಗಿ ತಿಳಿಯಲು ಚಿತ್ತಿನಿಂದ ಬೇರೆಯಾದ ಸ್ಪಂದವು ಯಾವುದೂ ಉಳಿಯುವುದೇ ಇಲ್ಲ.

೫೦. ದೃಶ್ಯಮಯವಾದ ಈ ದೀರ್ಘಸ್ವಪ್ನದಲ್ಲಿ, ಸ್ವಪ್ನದಿಂದ ಸ್ವಪ್ನಕ್ಕೆ

ಯತ್ರೋದೇತಿ ಪ್ರಸಭಮನಿಶಂ ಸರ್ಗಸಂವಿತ್ತಿಸತ್ತಾ ।
ಯಸ್ಮಿನ್ನೇತೇ ಸಕಲಕಲನಾಕಾರಪಂಕಾ ಗಲಂತಿ ।
ಉದ್ಯಂತ್ಯೇತೇ ಸ್ವದನಸುಭಗಂ ಯತ್ರ ಸರ್ವೋಪಲಂಭಾ ।
ಧ್ಯಾನೇನೈವಂ ತಮವಗಮಯ ಪ್ರತ್ಯಗಾತ್ಮಾನಮಂತಃ ॥ ೫೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಪ್ರತ್ಯಗಾತ್ಮಾವಬೋಧೋ" ನಾಮ ಏಕೋನಷಷ್ಟಿತಮಃ ಸರ್ಗಃ

ಹೋಗುತ್ತಿದ್ದರೂ ಜ್ಞಾನಿಯು ಸ್ವಸಂವಿತ್ತು ಎಲ್ಲೆಲ್ಲಿಯೂ ಇರುವುದು ಎಂಬುದನ್ನು ಬಲ್ಲನಾಗಿ ಮೋಹವನ್ನು ಹೊಂದುವುದಿಲ್ಲ.

೫೧. ಸೃಷ್ಟಿಯಾಗುವ ಸಂವಿತ್ಸ್ವರೂಪವಾದ ಸತ್ತೆಯು ಹಠಾತ್ತಾಗಿ ಯಾವಾಗಲೂ ಎಲ್ಲಿ ಹುಟ್ಟುವುದೋ, ಸಮಸ್ತವಾದ ಸಂಕಲ್ಪ ಸ್ವರೂಪಗಳಾದ ಪಂಕಗಳು ಎಲ್ಲಿ ತೊಳೆದುಹೋಗುವುವೋ, ಭೋಗಪ್ರದಗಳಾದ ಸರ್ವ ಸೌಖ್ಯಗಳೂ ಎಲ್ಲಿ ಹುಟ್ಟುವುವೋ, ಅಂತಹ ಪ್ರತ್ಯಗಾತ್ಮನನ್ನು ಧ್ಯಾನದಿಂದ, ಹೀಗೆಂದು, ತಿಳಿಯುವವನಾಗು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಪ್ರತ್ಯಗಾತ್ಮಾವಬೋಧ" ಎಂಬ ಐವತ್ತೊಂಭತ್ತನೆಯ ಸರ್ಗವು

ಷಷ್ಟಿತಮಃ ಸರ್ಗಃ

ಶ್ರಿ ವಸಿಷ್ಠ ಉವಾಚ :—

ಏವಮಾದ್ಯಂ ಪರಂ ತತ್ತ್ವಂ ಚಿದ್ಘನಂ ಪರಮಂ ಪದಂ ।
ತತ್ಸ್ಥಾ ಏತೇ ಮಹಾರೂಪೇ ಬ್ರಹ್ಮವಿಷ್ಣುಹರಾದಯಃ ॥ ೧ ॥

ವಿಭೂತಿಭಿಃ ಸ್ಫುರಂತ್ಯುಚ್ಚೈರ್ಜನಾಸ್ತುಷ್ಟಾ ನೃಪಾ ಇವ ।
ಆಕಾಶಗಮನಾದ್ಯಾಭಿಃ ಕ್ರೀಡಾಭಿಃ ಕ್ರೀಡ್ಯತೇ ಚಿರಂ ॥ ೨ ॥

ತತ್ಸ್ಥೇನೈವ ಜನೇನೇಹ ಸ್ವರ್ಗೇ ಸ್ವರ್ಗೌಕಸಾ ಯಥಾ ।
ತತ್ಪ್ರಾಪ್ಯಾಂಗ ನ ಮ್ರಿಯತೇ ತತ್ಪ್ರಾಪ್ಯಾಂಗ ನ ಶೋಚ್ಯತೇ ॥ ೩ ॥

ಅರವತ್ತನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಆದ್ಯವಾಗಿ, ಚಿದ್ಘನವಾಗಿ, ಪರಮಪದವಾಗಿರುವ ಪರತತ್ವವು ಹೀಗಿರುವುದು. ಅದರಲ್ಲಿ ಬ್ರಹ್ಮ ವಿಷ್ಣು ಹರಾದಿಗಳು ಮಹಾರೂಪವಾಗಿ ಇರುವರು.

೨. ಆ ಪರತತ್ವದ ವಿಭೂತಿಯಿಂದಲೇ ತೃಪ್ತರಾದ ಜನರು ನರಪತಿಗಳಂತೆ ಮಹಾಪುರುಷರಾಗಿ ಆಕಾಶ ಗಮನಾದಿ ಕ್ರೀಡೆಗಳಿಂದ ಯಾವಾಗಲೂ ಕ್ರೀಡಿಸುತ್ತಿರುವರು.

(ತೈತ್ತಿರೀಯ ಶ್ರುತಿದರ್ಶಿತ ಆನಂದೋತ್ಕರ್ಷ ಕ್ರಮ ಪ್ರಥಮ ಭೂಮಿಕಾ ನಿರ್ದೇಶಃ —ತಾ. ಪ್ರ.)

೩. ಅಲ್ಲಿರುವ ಜನರು ಸ್ವರ್ಗದಲ್ಲಿರುವ ಸ್ವರ್ಗವಾಸಿಗಳಂತೆ ಆನಂದಪಡುವರು. ಅದನ್ನು ಪಡೆದವರು ಸಾಯುವುದಿಲ್ಲ: ಅದನ್ನು ಪಡೆದವರು ಶೋಚಿಸುವುದಿಲ್ಲ.

ತತ್ಪ್ರಾಪ್ಯ ಜೀರ್ಯತೇ ನಾಂಗ ತತ್ಪ್ರಾಪ್ಯಾಂಗ ನ ರುಧ್ಯತೇ || ೪ ||

ಅಪಾರಪರಮಾಕಾಶರೂಪಿಣಃ ಪರಮಾತ್ಮನಃ |
ಸತ್ತಾ ಸಾಮಾನ್ಯರೂಪಂ ಜೇನ್ಮನಾಗಪಿ ವಿಭಾವ್ಯತೇ || ೫ ||

ತತ್ತ್ವ ನಿಮೇಷಮಾತ್ರೇಣ ಜಂತುರ್ಮುಕ್ತಮನಾ ಮುನಿಃ |
ಕುರ್ವನ್ಸಂಸಾರಕರ್ಮಾಣಿ ನ ಭೂಯಃ ಪರಿತಪ್ಯತೇ || ೬ ||

ಶ್ರೀರಾಮ ಉವಾಚ:—

ಮನೋ ಬುದ್ಧಿರಹಂಕಾರಶ್ಚಿತ್ತಂ ಯತ್ರ ಕ್ಷಯಂ ಗತಂ |
ಸತ್ತಾ ಸಾಮಾನ್ಯಮಾಭಾತಂ ಮನಸ್ವೀ ಸ ಕಿಮುಚ್ಯತೇ || ೭ ||

ಶ್ರೀ ವಸಿಷ್ಠ ಉವಾಚ ;—

ಯದ್ಬ್ರಹ್ಮ ಸರ್ವದೇಹಸ್ಥಂ ಭುಂಕ್ತೇ ಪಿಬತಿ ವಲ್ಗತಿ |
ಆದತ್ತೇ ವಿನಿಹಂತ್ಯಂತಃ ಸಂವಿತ್ಸಂವೇದ್ಯ ವರ್ಜಿತಂ || ೮ ||

---

೪. ಅದನ್ನು ಹೊಂದಿದವನು ಹಸಿವು ನೀರಡಿಕೆಗಳಿಂದ ಬಾಧೆಪಡುವುದಿಲ್ಲ: ಅಯ್ಯಾ, ಅದನ್ನು ಹೊಂದಿದವರಿಗೆ ಯಾವುದೂ ಅಡ್ಡಿಯಿರುವುದಿಲ್ಲ.

೫–೬. ಅಪಾರವಾಗಿ ಪರಮಾಕಾಶದಂತಿರುವ ಪರಮಾತ್ಮನ ಸತ್ತೆಯೇ ಸಾಮಾನ್ಯರೂಪವಾಗಿ ಎಲ್ಲೆಲ್ಲಿಯೂ ಇರುವುದೆಂದು ಒಮ್ಮೆ ತಿಳಿದರೆ ಸಾಕು, ಆ ನಿಮಿಷದಲ್ಲಿಯೇ ಹಾಗೆ ತಿಳಿದುದು ತಿರ್ಯಗ್ಜಂತುವೇ ಆಗಿದ್ದರೂ ಮುಕ್ತಮನನಾದ ಮುನಿಯಾಗುವುದು. ಅಂಥಹ ಮುನಿಯು ಸಂಸಾರಕರ್ಮಗಳೆಲ್ಲವನ್ನೂ ಮಾಡುತ್ತಿದ್ದರೂ ಅದರ ಪರಿತಾಪವು ಅವನಿಗೆ ಇರುವುದಿಲ್ಲ.

ಶ್ರೀ ರಾಮನು ಕೇಳಿದನು :—

೭. ಎಲೈ ಭಗವಂತನೆ, ನೀನು ಹೇಳುವ ಸತ್ತಾ ಸಾಮಾನ್ಯವು ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳು ಎಲ್ಲ ಲಯವಾಗುತ್ತವೋ ಅದೋ ಅಥವಾ ಮನಸ್ಸು ಮೊದಲಾದವುಗಳ ಸಮಷ್ಟಿಯೋ ? ಯಾವುದು ?

ಶ್ರೀ ವಸಿಷ್ಠನು ಹೇಳಿದನು :—

೮. ಸರ್ವ ದೇಹಗಳಲ್ಲಿಯೂ ಇದ್ದುಕೊಂಡು ಭೋಜನ, ಪಾನ, ಸಂಚಾರ

ತತ್ಸರ್ವಗತಮಾದ್ಯಂತರಹಿತಂ ಸ್ಥಿತಮರ್ಜಿತಂ ।
ಸತ್ತಾ ಸಾಮಾನ್ಯ ಮಖಿಲಂ ವಸ್ತುತತ್ತ್ವಮಿಹೋಚ್ಯತೇ ॥ ೯ ॥

ತತ್ಸ್ಥಿತಂ ಖತಯಾ ವ್ಯೋಮ್ನಿ ಶಬ್ದೇ ಶಬ್ದತಯಾ ಸ್ಥಿತಂ ।
ಸ್ಪರ್ಶೇ ಸ್ಥಿತಂ ಸ್ಪರ್ಶತಯಾ ತ್ವಚಿ ತತ್ತ್ವಕ್ತಯಾ ಸ್ಥಿತಂ ॥ ೧೦ ॥

ರಸೇ ಲೀನಂ ರಸತಯಾ ರಸನಾಯಾಂ ತು ತತ್ತಥಾ ।
ರೂಪೇ ರೂಪತಯಾ ದೃಷ್ಟಂ ನೇತ್ರೇ ಲೀನಂ ಚ ದೃಕ್ತಯಾ ॥ ೧೧ ॥

ಆದಾನ, ಹತಿ ಮೊದಲಾದ ಕಾರ್ಯಗಳನ್ನೆಲ್ಲಾ ಮಾಡುತ್ತಿದ್ದರೂ ಯಾವುದು ಸಂವಿತ್–ಸಂವೇದ್ಯ ಎಂಬ ವಿಭಾಗವಿಲ್ಲದಿರುವ ಬ್ರಹ್ಮವು ಯಾವುದೋ,

(ನಾತ್ರ ಪ್ರಪಂಚ ಬಾಧೋತ್ತರ ಪರಿಶಿಷ್ಟ ನಿರ್ವಿಶೇಷ ಮಿತಿವಾ ತತ್ಪೂರ್ವ ಕಾಲಿಕಂ ಸವಿಶೇಷ ಮಿತಿವಾ ವಿಭಜ್ಯ ಸತ್ತಾ ಸಾಮಾನ್ಯ ಮುಕ್ತಂ ಕಿಂತು ಸರ್ವ ಜೀವ ಭಾವೇಷು ಈಶ್ವರ ಭಾವೇ ಮುಕ್ತೌ ಚ ಯದನುಸ್ಯೂತಂ ಅಖಂಡ ದಂಡಾಯಮಾನಂ·ಸನ್ಮಾತ್ರಂ, ತದೇವೋಕ್ತಂ ತದೇವ ಜಗತ ಸ್ತತ್ತ್ವಂ । ತತ್ರತು ತ್ವದಭಿಪ್ರೇತೋ ನ ಕಶ್ಚಿದ್ವಿರೋಧ ಇತ್ಯಾಶಯೇನ ವಸಿಷ್ಠಃ ಸಮಾಧತ್ತೇ–ಯದಿತಿ ಆದತ್ತೇಅಂತರ್ಜಾಗ್ರತ್ಸ್ವಪ್ನ ಸರ್ಗಕಾಲೇ। ವಿನಿಹಂತಿ ಸುಷುಪ್ತಿ ಪ್ರಲಯಯೋಃ ಸಂವಿತ್ಸಂವೇದ್ಯವರ್ಜಿತಂ ತುರೀಯತಾಯಾಂ ॥ —ತಾ. ಪ್ರ.)

೯. ಅದು ಸರ್ವಗತವಾಗಿರುವುದು: ಆದ್ಯಂತ ರಹಿತವಾಗಿರುವುದು: ಸಂಪಾದಿಸಿಟ್ಟ ಗಂಟಿನಂತೆ ಎದುರಿಗೇ ಇರುವುದು: ಸತ್ತಾ ಸಾಮಾನ್ಯರೂಪವಾಗಿರುವುದು: ಅದು ಅಖಿಲವಾಗಿರುವುದು: ಅದನ್ನೇ ಎಲ್ಲರೂ ವಸ್ತು ತತ್ತ್ವವೆನ್ನುವರು.

೧೦. ಆಕಾಶದಲ್ಲಿ ಆಕಾಶತೆಯಾಗಿ, ಶಬ್ದದಲ್ಲಿ ಶಬ್ದತೆಯಾಗಿ, ಸ್ಪರ್ಶದಲ್ಲಿ ಸ್ಪರ್ಶತೆಯಾಗಿ, ಚರ್ಮದಲ್ಲಿ ಚರ್ಮತೆಯಾಗಿ ಇರುವುದು ಅದು.

೧೧. ರಸದಲ್ಲಿ ರಸತೆಯಾಗಿ ರಸನೆಯಲ್ಲಿ ರಸನತಾ ಆಗಿ, ರೂಪದಲ್ಲಿ ರೂಪತಾ ಆಗಿ ನೇತೃತ್ವದಲ್ಲಿ ದೃಕ್ತೆಯಾಗಿ ಲೀನವಾಗಿರುವುದು.

ಘ್ರಾಣೇ ಘ್ರಾಣತಯಾ ದೃಷ್ಟಂ ಗಂಧೇಂ ಗಂಧತಯೋದಿತಂ ।
ಪುಷ್ಟಂ ಕಾಯತಯಾ ಕಾಯೇ ಭೂಮಾವಪಿ ಚ ಭೂತಯಾ ॥ ೧೨ ॥

ಪಯಸ್ತಯಾ ಚ ಪಯಸಿ ವಾಯೌ ವಾಯುತಯಾ ಸ್ಥಿತಂ ।
ತೇಜಸ್ತಯಾ ತೇಜಸಿ ಚ ಬುದ್ಧೌ ಬುದ್ಧಿತಯಾ ಗತಂ ॥ ೧೩ ॥

ಮನಸ್ತಯಾ ಮನಸ್ಯಂತರಹಂಕೃತ್ಯಾಪ್ಯಹಂಕೃತಾ ।
ರೂಢಂ ಸಂವಿದಿ ಸಂವಿತ್ತ್ಯಾ ಚಿತ್ತೇ ಚಿತ್ತತಯೋತ್ಥಿತಂ ॥ ೧೪ ॥

ವೃಕ್ಷೇ ವೃಕ್ಷತಯಾ ಲಗ್ನಂ ಪಟೇ ಪಟತಯೋದಿತಂ ।
ಘಟೇ ಘಟತಯಾ ರೂಢಂ ವಟೇ ವಟತಯೋತ್ಥಿತಂ ॥ ೧೫ ॥

ಸ್ಥಾವರೇ ಸ್ಥಾವರತ್ವೇನ ಜಂಗಮತ್ವೇನ ಜಂಗಮೇ ।
ಪಾಷಾಣತ್ವೇನ ಪಾಷಾಣೇ ಚೇತನತ್ವೇನ ಚೇತನೇ ॥ ೧೬ ॥

---

೧೨. ಘ್ರಾಣದಲ್ಲಿ ಘ್ರಾಣತಾ ಆಗಿ, ಕಾಣುವುದು: ಗಂಧದಲ್ಲಿ ಗಂಧತೆಯಾಗಿ ತೋರುವುದು. ಕಾಯದಲ್ಲಿ ಕಾಯತಾ ಆಗಿ ಬೆಳೆಯುವುದು: ಭೂಮಿಯಲ್ಲಿ ಭೂಮಿತೆಯಾಗಿ ಇರುವುದು.

೧೩. ಪಯಸ್ಸಿನಲ್ಲಿ ಪಯಸ್ತಾ ಆಗಿ, ವಾಯುವಿನಲ್ಲಿ ವಾಯುತಾ ಆಗಿ, ತೇಜಸ್ಸಿನಲ್ಲಿ ತೇಜಸ್ತಾ ಆಗಿ, ಬುದ್ಧಿಯಲ್ಲಿ ಬುದ್ಧಿತಾ ಆಗಿ ಇರುವುದು.

೧೪. ಮನಸ್ಸಿನೊಳಗೆ ಮನಸ್ತಾ ಆಗಿ ಅಹಂಕಾರದಲ್ಲಿ ಅಹಂಕೃತಿಯಾಗಿ, ಸಂವಿತ್ತಿನಲ್ಲಿ ಸಂವಿತ್ತೆಯಾಗಿ ಚಿತ್ತದಲ್ಲಿ ಚಿತ್ತತಾ ಆಗಿ ಇರುವುದು.

೧೫. ವೃಕ್ಷದಲ್ಲಿ ವೃಕ್ಷತೆಯಾಗಿ ಲಗ್ನವಾಗಿರುವುದು. ಪಟದಲ್ಲಿ ಪಟತಾ ಆಗಿರುವುದು. ಘಟದಲ್ಲಿ ಘಟತಾ ಆಗಿ, ವಟದಲ್ಲಿ ವಟತಾ ಆಗಿ ರೂಢವಾಗಿರುವುದು.

೧೬. ಸ್ಥಾವರದಲ್ಲಿ ಸ್ಥಾವರತೆಯಾಗಿ, ಜಂಗಮದಲ್ಲಿ ಜಂಗಮತ್ವವಾಗಿ, ಪಾಷಾಣದಲ್ಲಿ ಪಾಷಾಣತ್ವವಾಗಿ ಚೇತನದಲ್ಲಿ ಚೇತನತ್ವವಾಗಿ ಇರುವುದು

ಅಮರೇಷ್ವಮರತ್ವೇನ ನರತ್ವೇನ ನರೇಷು ಚ ।
ತಿರ್ಯಕ್ತ್ವೇನ ಚ ತಿರ್ಯಕ್ಷು ಕ್ರಿಮಿತ್ವೇನ ಕ್ರಿಮಿಷ್ಥಿತೌ ॥ ೧೭ ॥

ಕಾಲಕ್ರಮೇ ಕಾಲತಯಾ ಋತಾವೃತುತಯಾ ತಥಾ ।
ತ್ರುಟಿಕ್ಷಣನಿಮೇಷಾದೌ ಸಂಸ್ಥಿತಸ್ತತ್ತಯಾ ವಿಭುಃ ॥ ೧೮ ॥

ಶುಕ್ಲೇ ಶುಕ್ಲತಯಾ ಜಾತಂ ಕೃಷ್ಣೇ ಕೃಷ್ಣತಯಾ ಸ್ಥಿತಂ ।
ಕ್ರಿಯಾಸು ಸ್ಪಂದರೂಪೇಣ ನಿಯತೌ ನಿಯಮೇನ ಚ ॥ ೧೯ ॥

ಸಂಸ್ಥಿತಃ ಸಂಸ್ಥಿತೌ ಸ್ಥಿತ್ಯಾ ನಾಶೇ ನಾಶತಯಾ ಸ್ಥಿತಃ ।
ಉತ್ಪತ್ತಿರೂಪೇಣೋತ್ಪತ್ತಾವಾಸ್ಥಿತಃ ಪರಮೇಶ್ವರಃ ॥ ೨೦ ॥

---

೧೭. ಅಮರರಲ್ಲಿ ಅಮರತ್ವವಾಗಿ, ನರರಲ್ಲಿ ನರತ್ವವಾಗಿ, ತಿರ್ಯಕ್ಕುಗಳಲ್ಲಿ ತಿರ್ಯಕ್ತ್ವವಾಗಿ, ಕ್ರಿಮಿಗಳಲ್ಲಿ ಕ್ರಿಮಿತ್ವವಾಗಿ ಇರುವುದು.

೧೮. ಕಾಲಕ್ರಮದಲ್ಲಿ ಕಾಲತೆಯಾಗಿ, ಋತುವಿನಲ್ಲಿ ಋತುತೆಯಾಗಿ, ತ್ರುಟಿ, ಕ್ಷಣ, ನಿಮೇಷ, ಮೊದಲಾದ ಸೂಕ್ಷ್ಮಕಾಲ ಭಾಗಗಳಲ್ಲಿ ತತ್ತಾ ಆಗಿ, ವಿಭುವೆಂದರೆ ಸರ್ವವ್ಯಾಪಿಯಾಗಿ ಇರುವುದು.

೧೯. ಶುಕ್ಲದಲ್ಲಿ ಶುಕ್ಲತೆಯಾಗಿ ಹುಟ್ಟಿ, ಕೃಷ್ಣದಲ್ಲಿ ಕೃಷ್ಣತೆಯಾಗಿ ಇದ್ದು ಕ್ರಿಯೆಗಳಲ್ಲಿ ವ್ಯಾಪಾರರೂಪವಾಗಿದ್ದು ನಿಯತಿಯಲ್ಲಿ ನಿಯಮವಾಗಿರುವುದು.

೨೦. ಸಂಸ್ಥಿತಿಯಲ್ಲಿ ಸ್ಥಿತಿಯಾಗಿ ನಿಂತಿರುವುದು: ನಾಶದಲ್ಲಿ ನಾಶತೆಯಾಗಿ ಇರುವುದು. ಉತ್ಪತ್ತಿಯಲ್ಲಿ ಉತ್ಪತ್ತಿರೂಪವಾಗಿ ಎಲ್ಲಕ್ಕೂ ಈಶ್ವರನಾಗಿ ಕುಳಿತಿರುವುದು.

ಬಾಲ್ಯೇನ ಬಾಲ್ಯೇ ವಿಶ್ರಾಂತೋ ಯೌವನೇ ಯೌವನೇನ ಚ ।
ಜರಸಾ ಚ ಜರಾರೂಪೇ ಮರಣೇ ಮರಣೇನ ಚ || ೨೧ ||

ಇತಿ ಸರ್ವಪದಾರ್ಥಾನಾಮಭಿನ್ನಃ ಪರಮೇಶ್ವರಃ ।
ಕಲ್ಲೋಲಸೀಕರೋರ್ಮಿಣಾಮಬ್ಧಾವಿವ ಪಯೋಧರಃ || ೨೨ ||

ನಾನಾತೈಷಾಂ ತ್ವಸತ್ಯೈವ ಸತ್ತೇನಾನೇನ ಚೈವ ಹಿ !
ಕಲ್ಪಿತಾ ಚಿತ್ಸ್ವಭಾವೇನ ವೇತಾಲಃ ಶಿಶುನಾ ಯಥಾ || ೨೩ ||

ಸರ್ವತ್ರ ಸಂಸ್ಥಿತಿಮತಾ ವಿಗತಾಮವೇವ
ವ್ಯಾಪ್ತಂ ಮಯೇದಮಖಿಲಂ ವಿವಿಧೈರ್ವಿಲಾಸೈಃ ।
ಚಿದ್ರೂಪಿಣೈವ ಕಲನಾ ಕಲಿತಾಕಲಿತಾತ್ಮನೇತಿ
ಮತ್ವೋಪಶಾಂತಮತಿರಾಸ್ವ ಸುಖಂ ಮಹಾತ್ಮನ್ || ೨೪ ||

---

೨೧. ಬಾಲ್ಯದಲ್ಲಿ ಬಾಲ್ಯವಾಗಿ, ಯೌವನದಲ್ಲಿ ಯೌವನವಾಗಿ ಕುಳಿತಿರುವುದು. ಜರಸ್ಸಿನಲ್ಲಿ ಜರಾರೂಪವಾಗಿ. ಮರಣದಲ್ಲಿ ಮರಣರೂಪವಾಗಿ ಇರುವುದು.

೨೨. ಹೀಗೆ ಸರ್ವ ಪದಾರ್ಥಗಳಲ್ಲಿಯೂ ಅಭಿನ್ನವಾಗಿ ಪರಮೇಶ್ವರನೇ ಇರುವನು. ಸಮುದ್ರದಲ್ಲಿ ನೀರಿನ ಧಾರೆಗಳು ಕಲ್ಲೋಲವಾಗಿ, ಜಲಕಣವಾಗಿ, ತರಂಗಗಳಾಗಿ ಇರುವಂತೆಯೇ ಇದೂ ಎಂದು ತಿಳಿದುಕೊ.

೨೩. ಇಷ್ಟಾದರೂ ನಾನಾತೆಯು ಮಾತ್ರ ಅಸತ್ಯವೇ ! ಸತ್ಯವಾಗಿರುವ ಈ ಪರಬ್ರಹ್ಮದಿಂದಲೇ, ತನ್ನ ಚಿತ್ಸ್ವಭಾವದಿಂದ ಇವೆಲ್ಲವೂ, ಶಿಶುವಿನಿಂದ ಕಲ್ಪಿತವಾದ ವೇತಾಲದಂತೆ, ಕಲ್ಪಿತವಾದವು.

೨೪. ಸರ್ವತ್ರ ಸಂಸ್ಥಿತಿಯುಳ್ಳುದಾಗಿ, ಯಾವುದೊಂದರೊಂದು ಬಾಧೆಯಿಲ್ಲದುದಾಗಿ ಇರುವ ಚಿದ್ರೂಪಿಯಾದ, ಸಂಕಲ್ಪ ಸಹಿತನಾದ ನನ್ನಿಂದಲೇ ವಿವಿಧ ವಿಲಾಸಗಳಿಂದ ಈ ಭುವನ ಬ್ರಹ್ಮಾಂಡವೆಲ್ಲವೂ ವ್ಯಾಪ್ತವಾಗಿರುವುದು ಎಂದು ತಿಳಿದು, ಎಲೈ ಮಹಾತ್ಮನೆ, ಮನಸ್ಸನ್ನು ಉಪಶಮಗೊಳಿಸಿ ಸುಖವಾಗಿರು.

ಶ್ರೀ ವಾಲ್ಮೀಕಿ ಉವಾಚ:—

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯಂತನಾಯ ವಿಧಯೇಽಸ್ತಮಿನೋ ಜಗಾಮ ।
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ ।
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ　　॥ ೨೫ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ವಿಭೂತಿಯೋಗೋಪದೇಶೋ" ನಾಮ ಷಷ್ಟಿತಮಃ ಸರ್ಗಃ

ಷೋಡಶೋ ದಿವಸಃ

ಶ್ರೀ ವಾಲ್ಮೀಕಿಯು ಹೇಳಿದನು :—

೨೫. ಮುನೀಂದ್ರನು ಹೀಗೆ ಹೇಳುತ್ತಿರಲು ದಿವಸವು ಮುಗಿಯಿತು. ಸಂಧ್ಯಾಕರ್ಮಗಳು ನಡೆಯಲೆಂದು ಸೂರ್ಯನು ಅಸ್ತನಾದನು. ಸಭೆಯು ನಮಸ್ಕಾರಮಾಡಿ ಸ್ನಾನಾರ್ಥವಾಗಿ ಹೋಗಿದ್ದು, ರಾತ್ರಿಯು ಮುಗಿದು ಬೆಳಗಾಗುತ್ತಲೂ ಸೂರ್ಯನ ಬಿಸಿಲೊಡನೆಯೇ ಹಿಂತಿರುಗಿ ಬಂತು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ವಿಭೂತಿಯೋಗೋಪದೇಶ" ಎಂಬ ಅರವತ್ತನೆಯ ಸರ್ಗವು.

ಹದಿನಾರನೆಯ ದಿನವು

ಏಕಷಷ್ಟಿತಮಃ ಸರ್ಗಃ

ಶ್ರೀ ರಾಮ ಉವಾಚ:—

ಯಥಾಸ್ಮಾಕಂ ಮುನೇ ಸ್ವಪ್ನಪುರಪತ್ತನಮಂಡಲಂ ।
ತಥೈವ ಪದ್ಮಜಾದೀನಾಂ ಯದಿ ದೇಹಪರಿಗ್ರಹಃ ॥ ೧ ॥

ತಥೈವೇದಂ ಚ ಸಂಜಾತಂ ಯದಿ ಸರ್ವಮಸನ್ಮಯಂ ।
ತದಸ್ಮಾಕಂ ದೃಢತರಃ ಪ್ರತ್ಯಯಃ ಕಥಮುತ್ಥಿತಃ ॥ ೨ ॥

ಶ್ರೀ ವಸಿಷ್ಠ ಉವಾಚ:—

ಅಸ್ಮತ್ಸರ್ಗವದಾಭಾತಿ ಪೂರ್ವಸರ್ಗಃ ಪ್ರಜಾಪತೇಃ ।
ಆಜೀವಪ್ರತಿಭಾಸಾತ್ಮಾ ವಿದ್ಯತೇ ನತು ವಾಸ್ತವಃ ॥ ೩ ॥

ಅರವತ್ತೊಂದನೆಯ ಸರ್ಗವು

ಶ್ರೀ ರಾಮನು ಕೇಳಿದನು :—

೧–೨. ನಮಗೆ ಸ್ವಪ್ನದಲ್ಲಿ ಪುರ, ಪಟ್ಟಣ, ಮಂಡಪಗಳು ಕಾಣಿಸುವಂತೆ, ಪದ್ಮಜಾದಿಗಳಿಗೂ ದೇಹ ಪರಿಗ್ರಹವು ಎನ್ನುವುದಾದರೆ, ಎಲೈ, ಮುನೀಂದ್ರನೆ, ಹಾಗೆಯೇ ದೃಶ್ಯವಾಗಿರುವ ಈ ಸರ್ವ ಜಗತ್ತೂ ಅಸನ್ಮಯವಾಗಿಯೇ ಹುಟ್ಟಿರುವುದೆಂದರೆ, ನಮಗೆ "ಈ ಜಗತ್ತು ದೃಢವಾಗಿರುವುದು : ಜಗತ್ತು ಸತ್ಯವು, ಎಂಬ ನಂಬಿಕೆಯು ಹೇಗೆ ಹುಟ್ಟಿತು ?"

ಶ್ರೀ ವಸಿಷ್ಠನು ಹೇಳಿದನು:—

೩. ಪ್ರಜಾಪತಿಗೆ ಪೂರ್ವ ಸರ್ಗದಲ್ಲಿ ಆತ್ಮಜ್ಞಾನ ಲಾಭವಾಗುವುದಕ್ಕೆ ಮುಂಚೆ ಈಗ ಇರುವಂತೆ ಪ್ರಪಂಚವು ಸತ್ಯ ಎಂಬ ನಂಬಿಕೆಯಿತ್ತು. ಆದರೆ ಆತ್ಮಜ್ಞಾನ ಲಾಭವಾದಮೇಲೆ, "ಜೀವವೂ ಜಗತ್ತೂ ಪ್ರಾತಿಭಾಸಿಕವು ವಾಸ್ತವವಲ್ಲ" ಎಂಬ ಭಾವವು ಇದ್ದೇ ಇರುತ್ತದೆ.

ಸರ್ವಗತ್ವಾಚ್ಚಿತೇಃ ಸರ್ವಂ ಜೀವಃ ಸರ್ವತ್ರ ಸಂಸೃತಿಃ ।
ಸಾ ಚಾಸಮ್ಯಗ್ದರ್ಶನೋತ್ಥಾ ಸಮ್ಯಗ್ದರ್ಶನನಾಶಿನೀ ॥ ೪ ॥

ಸ್ವಪ್ನಾಭಃ ಪ್ರತಿಭಾಸೋಽಸ್ಯ ಯ ಏಷ ಸಮುಪಸ್ಥಿತಃ ।
ಅಹಂತಾಪ್ರತ್ಯಯೈಕಾತ್ಮಾ ಸ ಏವಾತಿದೃಢಂ ಸ್ಥಿತಃ ॥ ೫ ॥

ಸ್ವಪ್ನೇ ಕ್ಷಿಪ್ರವಿನಾಶಿತ್ವಂ ಯಥಾಪುಂಸಾ ನ ದೃಶ್ಯತೇ ।
ಸರ್ವಸ್ವಪ್ನೇ ತಥೈವೈತದ್ಬ್ರಹ್ಮಣಾಮಿಹ ಲಕ್ಷ್ಯತೇ ॥ ೬ ॥

ಸ್ವಪ್ನೋಽಯಂ ಪುರುಷಸ್ಯಾಸ್ಯ ಪ್ರತಿಭಾಸಸ್ಯ ಯೋ ಭವೇತ್ ।
ರಾಮಾಸ್ಮದಾದಿಸರ್ವಾತ್ಮಾ ಭವೇತ್ತಾದೃಶ ಏವ ಚ ॥ ೭ ॥

---

೪. ಚಿತ್ತು ಸರ್ವಗವು: ಅದರಿಂದ ಸರ್ವವೂ ಜೀವವೇ! ಜೀವವಾದ ಮೇಲೆ ಅದಕ್ಕೊಂದು ಸಂಸೃತಿ. ಹೀಗೆ ಇವೆಲ್ಲವೂ ಅಸಮ್ಯಗ್ದರ್ಶನದಿಂದ ಹುಟ್ಟಿದವು: ಸಮ್ಯಗ್ದರ್ಶನವಾಗುತ್ತಲೂ ನಾಶವಾಗುವುವು.

೫. ಹೀಗೆ ಅಸಮ್ಯಗ್ದರ್ಶನ ಕಾಲದಲ್ಲಿ ಸ್ವಪ್ನದಂತೆ ಇರುವ ಈ ಪ್ರತಿಭಾಸವು ಕಾಣಿಸುವುದು. ಹೀಗೆ ಕಾಣಿಸಲು ಅಹಂತಾ ಪ್ರತ್ಯಯವೇ ಎಂದರೆ ಎಲ್ಲದಕ್ಕಿಂತ ಬೇರೆಯಾದ ನಾನು ಇರುವೆನೆಂಬುದೇ ಕಾರಣವು. ಅದು ಎಷ್ಟರವರೆಗೆ ದೃಢವಾಗಿರುವುದೋ ಅಲ್ಲಿಯವರೆಗೆ ಸಂಸಾರವು ಇರುವುದು.

೬. ಸ್ವಪ್ನದಲ್ಲಿ ಕ್ಷಿಪ್ರವಿನಾಶಿತ್ವ ಎಂಬುದು ಯಾರಿಗೂ ಕಾಣಿಸುವುದಿಲ್ಲವಷ್ಟೆ! ಹಾಗೆಯೇ ಚತುರ್ಮುಖ ಬ್ರಹ್ಮರ ಸಮಷ್ಟಿ ಸ್ವಪ್ನವೂ ಕ್ಷಿಪ್ರವಿನಾಶಿಯಾಗಿ ಕಾಣುವುದಿಲ್ಲ.

೭. ಪ್ರತಿಭಾಸದಿಂದ ಅವರವರಿಗೆ ಕನಸಾಗುವಂತೆ, ರಾಮ, ನಮ್ಮೆಲ್ಲರನ್ನೂ ಒಳಗೊಂಡಿರುವ ಪ್ರತಿಭಾಸವೊಂದು ಬ್ರಹ್ಮನಿಗೆ ಕಾಣುವುದು. ಒಬ್ಬರೊಬ್ಬರ ಕನಸು ವ್ಯಷ್ಟಿಯಾದರೆ ಬ್ರಹ್ಮನ ಕನಸು ಸಮಷ್ಟಿಯು.

(ಇಂದ್ರಿಯಗಳು ಜಾಗ್ರತವಾಗಿರುವುದು ಜಾಗ್ರತ್ತು: ಆಗ ಜೀವನು ವಿಶ್ವನಾಗಿ ಭ್ರೂಮಧ್ಯದಲ್ಲಿರುವನು. ಇಂದ್ರಿಯಗಳು ಕೆಲಸ ಮಾಡಿ ಆಯಾಸಪಟ್ಟಾಗ, ದೀಪಸ್ತಂಭದಲ್ಲಿ ಹಣತೆಯನ್ನು ಹಿಡಿದಿದ್ದ ಮರಸುತ್ತು ಸಡಿಲವಾದಾಗ ಕೆಳಕ್ಕೆ ಇಳಿಯುವ ದೀಪದ ಹಣತೆಯಂತೆ ಜೀವನು ಕಂಠಕ್ಕಿಳಿದು ತೈಜಸನಾಗುವನು. ಆಗ ತನ್ಮಾತ್ರ

ಯತ್ಸ್ವಪ್ನಪುರುಷಾಜ್ಜಾತಂ ತತ್ಸ್ವಪ್ನಪುರುಷಾತ್ಮಕಂ ।
ಭವಿತೀತ್ಯನುಭೂತಂ ಹಿ ಯದ್ಬೀಜಂ ತತ್ಫಲಂ ಯಥಾ ॥ ೮ ॥

ಅಸತ್ಯಮೇವ ತದ್ವಿದ್ಧಿ ಯದಸತ್ಯೇನ ಸಾಧ್ಯತೇ ।
ಅಸತ್ಯೇಽರ್ಥೇ ಸಮರ್ಥೋಽಪಿ ನ ಯುಕ್ತಂ ಭಾವನಂ ಘನಂ ॥ ೯ ॥

ಯೇನ ತೇನ ಪರಿತ್ಯಾಜ್ಯಮಸದ್ಭಾವನಭಾವನಂ ।
ದೃಢಪ್ರತ್ಯಯಿತುಂ ಸ್ವಪ್ನಪುರುಷಾದ್ಯತ್ಸಮುತ್ಥಿತಂ ॥ ೧೦ ॥

ಭವತ್ಯಾತ್ಮನಿ ಸರ್ಗಾದಿ ದೃಢಪ್ರತ್ಯಯಮೇವ ತತ್ ।
ನಿಮೇಷಮಾತ್ರಃ ಪೌರೋಽಯಂ ಸರ್ಗಸ್ವಪ್ನಃ ಪುರಃ ಸ್ಥಿತಃ ॥ ೧೧ ॥

ತಸ್ಮಿನ್ನಿಮೇಷ ಏವಾಸ್ಮಿನ್ಕಲ್ಪನಾ ಪರಿಕಲ್ಪ್ಯತೇ ॥ ೧೨ ॥

ಗಳು ಸಹಾಯುಗಳಿಗೆ ವಾಸನಾವಶವಾಗಿ ಸ್ವಪ್ನವಾಗುವುದು, ಅಲ್ಲಿ ತನ್ಮಾತ್ರಗಳೂ ಆಯಾಸಪಟ್ಟರೆ, ಆಗ ಅವೂ ಶ್ರಾಂತವಾಗಿ, ಜೀವನು ಹೃದಯ ಸ್ಥಾನಕ್ಕಿಳಿದು ಅಲ್ಲಿರುವ ಚಿದಾಕಾಶರೂಪನಾದ ಪರಮಾತ್ಮನಲ್ಲಿ ಇದ್ದು ಮತ್ತೆ ರಸವನ್ನು ಪಡೆದು ಹಿಂತಿರುಗಿ ಬರುವನು. ಇವು ಪ್ರಾಕೃತರಲ್ಲಿ ಕಾಲಕರ್ಮವಶವಾಗಿ ನಡೆದರೆ ಯೋಗಿಗಳಲ್ಲಿ ಸ್ವೇಚ್ಛೆಯಿಂದ ನಡೆಯುವುವು.)

೮. ಸ್ವಪ್ನ ಪುರುಷನಿಂದ ಹುಟ್ಟಿದುದು ಯಾವುದೋ ಅದು ಸ್ವಪ್ನ ಪುರುಷಾತ್ಮಕವಾದುದು. ಬೀಜವೆಂತಹುದೋ ಫಲವೂ ಅಂತಹುದೇ ಆಗಬೇಕು ತಾನೇ? ಇದು ಅನುಭವಸಿದ್ಧವಲ್ಲವೇ?

೯. ಅಸತ್ಯದಿಂದ ಹುಟ್ಟಿದುದು ಯಾವುದು ತಾನೇ ಸತ್ಯವಾದೀತು? ಅದು ಅಸತ್ಯವೇ ಆಗಿರಬೇಕು. ಹಾಗೆಯೇ ಅಸತ್ಯನಾದ ಸ್ವಪ್ನ ಪುರುಷನಿಂದ ಕಾಣಿಸುವ ಸ್ನಪ್ನಾದಿಗಳು ಅರ್ಥಕ್ರಿಯಾ ಸಮರ್ಥಗಳಾಗಿದ್ದರೂ, ಅವುಗಳಲ್ಲಿ ಸತ್ಯವೆಂಬ ಘನ ಭಾವನವನ್ನು ಮಾಡುವುದು ಯುಕ್ತವಲ್ಲ.

೧೦-೧೧-೧೨. ಸ್ವಪ್ನ ಪುರುಷನ ಸೃಷ್ಟಿಯು ಸತ್ಯವಾಗಿರುವಂತೆ ತೋರುತ್ತಿದ್ದರೂ ಅಸತ್ಯವೆಂದು ಯಾವ ಕಾರಣದಿಂದ ತಿರಸ್ಕೃತವಾಗುವುದೋ ಅದೇ ಕಾರಣದಿಂದಲೇ, ಆತ್ಮನಲ್ಲಿ ಸಮಷ್ಟಿರೂಪವಾಗಿರುವ ಸ್ವಪ್ನವಾದ ಈ ಜಗತ್ತು ಕೂಡ ಅಸದ್ಭಾವನವೆಂದು ತಿರಸ್ಕೃತವಾಗಬೇಕು. ಏಕೆಂದರೆ, ಪ್ರಜಾಪತಿಯ

ಸುದೀರ್ಘಸ್ವಪ್ನಖಂಡೋಽಯಂ ಯಥೋದೇತಿ ಪ್ರಜಾಪತೇಃ ।
ಸರ್ಗಾಖ್ಯಃ ಸರ್ವಭೂತಾನಾಂ ಪ್ರತ್ಯೇಕಮುದಿತಸ್ತಥಾ ॥ ೧೩ ॥

ಚಿತ್ತತ್ವಸ್ಯೈವ ಭಾವೇನ ಸರ್ಗವರ್ಗಪರಂಪರಾ ।
ಸ್ಫುರಂತ್ಯಮೀ ದ್ರವತ್ವೇನ ಯಥಾವರ್ತವಿವರ್ತನೈಃ ॥ ೧೪ ॥

ಯಥಾ ಸ್ವಪ್ನಾತ್ಮಿಕೈವೇಯಂ ಸರ್ಗಲಕ್ಷ್ಮೀರ್ನ ವಾಸ್ತವೀ ।
ತದಾ ಸಂಭವತೀದಂ ವೈ ತತ್ಪದಂ ಪ್ರಲಯ ಗತಂ ॥ ೧೫ ॥

ಯದ್ಯಥಾ ಯಾದೃಶಂ ದೃಷ್ಟಂ ತತ್ತಾದೃಗ್ವಿದ್ಯತೇ ತಥಾ ।
ನಹಿ ಪರ್ಯನುಯೋಕ್ತವ್ಯಾಃ ಸ್ವಪ್ನವಿಭ್ರಮರೀತಯಃ ॥ ೧೬ ॥

ಸ್ವಪ್ನವೂ ಕೂಡ, ವರ್ಷಾಕಾಲದ ಪ್ರವಾಹದಂತೆ ಒಂದೇ ಗಳಿಗೆ ಇರತಕ್ಕುದು. ಆ ಸ್ವಪ್ನ ಕಾಲದ ಒಂದು ನಿಮಿಷದಲ್ಲಿಯೇ ನಮಗೊಂದು ಕಲ್ಪವಾಗುವುದು.

೧೩. ಪ್ರಜಾಪತಿಗೆ ಹೀಗೆ ನಮ್ಮ ದೃಷ್ಟಿಯಿಂದ ದೀರ್ಘವಾಗಿರುವ ಈ ಸ್ವಪ್ನದ ಒಂದು ಖಂಡವೇ ಈ ಸೃಷ್ಟಿಯು. ಆತನಿಗೆ ಕನಸಾದಂತೆ ನಮಗೂ ಕನಸಾಗಿ ನಮಗೂ ಸಂಸಾರವು ಉದಯವಾಗುವುದು.

೧೪. ನೀರು ದ್ರವವಾಗಿರುವುದರಿಂದ ಸುಳಿ, (ವಿವರ್ತನ) ನೀರು ಹಿಂದಕ್ಕೆ ಒದೆಯುವುದು ಮೊದಲಾದವೆಲ್ಲ ಆಗುವಂತೆ ಚಿತ್ ತತ್ತ್ವದ ಭಾವದಿಂದಲೇ ಸರ್ಗ ವರ್ಗ ಪರಂಪರೆಗಳು ಸಂಭವಿಸುವುವು.

೧೫. ಸರ್ಗಲಕ್ಷ್ಮಿಯು ಹೇಗೆ ಕೇವಲ ಸ್ವಪ್ನಾತ್ಮಿಕಳಾಗಿ ವಾಸ್ತವವಲ್ಲವೋ ಹಾಗೆಯೇ ದೃಶ್ಯವಾದ ಈ ಸರ್ವವೂ ಪ್ರಲಯವಾಗಿ ತತ್ವದಲ್ಲಿ ಸೇರಿಹೋಗುವುದರಿಂದ ಅವಾಸ್ತವು.

೧೬. ಯಾವುದು ಹೇಗೆ ಕಾಣುವುದೋ ಅದು ಹಾಗೆಯೇ ಇರುವುದು ಸ್ವಪ್ನದಲ್ಲಿ ಭ್ರಾಂತಿಯು ಇದೇ ರೀತಿಯಾಗಿರುವುದೆಂದು ಯಾರು ತಾನೇ ಹೇಳಬಹುದು?

ನ ತದಸ್ತಿ ಜಗತ್ಯಸ್ಮಿನ್ಯನ್ನ ಸಂಭವತಿ ಭ್ರಮೇ ।
ವಿಚಿತ್ರಾಸ್ತ್ರಿಷು ಲೋಕೇಷು ದೃಶ್ಯಂತೇ ವಸ್ತುದೃಷ್ಟಯಃ ॥ ೧೭ ॥

ಜಲಮಧ್ಯೇ ಜ್ವಲತ್ಯಗ್ನಿರ್ಯಥಾಬ್ಧೌ ಬಡವಾನಲಃ ।
ನಗರಾಣ್ಯಂಬರೇ ಸಂತಿ ಯಥಾ ವೈಮಾನಿಕಾಶ್ರಯಾಃ ॥ ೧೮ ॥

ಶಿಲಾಸ್ವಬ್ಜಾನಿ ಜಾಯಂತೇ ಹೇಮಾದ್ರಾವಿವ ಪಾದಪಾಃ ।
ಏಕಾಂತೇ ಸರ್ವಪುಣ್ಯಾನಿ ಸಂತಿ ಕಲ್ಪತರೌ ಯಥಾ ॥ ೧೯ ॥

ಶಿಲಾಃ ಫಲಂತಿ ಫಲಿವದ್ಯಥಾ ರತ್ನಗುಲುಚ್ಛಕಾಃ ।
ಶಿಲಾಂತಃ ಪ್ರಾಣಿನಃ ಸಂತಿ ಭೇಕಾ ಇವ ಶಿಲಾಂತರೇ ॥ ೨೦ ॥

ದೃಷದೋ ವಾರಿ ನಿರ್ಯಾತಿ ಚಂದ್ರಕಾಂತೋಪಲಾದಿವ ।
ನಿಮೇಷೇಣ ಘಟೋ ಯಾತಿ ಪಟತಾಂ ಸ್ವಾಪಸಂವಿದಿ ॥ ೨೧ ॥

---

೧೭. ಈ ಜಗತ್ತಿನಲ್ಲಿ ಭ್ರಾಂತಿಯಲ್ಲಿ ಇದಾಗುವುದಿಲ್ಲ ಎಂಬ ಮಾತಿಲ್ಲ. ಈ ಮೂರು ಲೋಕಗಳಲ್ಲಿಯೂ ವಸ್ತು ದೃಷ್ಟಿಗಳು ವಿಚಿತ್ರ ಚಿತ್ರವಾಗಿರುವುದಕ್ಕೆ ಅದೇ ಕಾರಣವು.

೧೮. ಸಮುದ್ರದಲ್ಲಿ ಬಡಬಾಗ್ನಿಯಿರುವಂತೆ ಜಲಮಧ್ಯದಲ್ಲಿ ಅಗ್ನಿಯು ಉರಿಯ್ಬಬಹುದು. ಆಕಾಶದಲ್ಲಿ ನಗರಗಳು ಇರಬಹುದು. ವೈಮಾನಿಕರಿಗೆ ಆಶ್ರಯವಾದ ನಗರಗಳುಂಟಲ್ಲವೆ ?

೧೯. ಮೇರು ಪರ್ವತದಲ್ಲಿ ವೃಕ್ಷಗಳು ಹುಟ್ಟುವಂತೆ ಶಿಲೆಯಲ್ಲಿ ಕಮಲಗಳು ಹುಟ್ಟಬಹುದು. ಸಮಸ್ತ ಪುಣ್ಯಗಳು ಕಲ್ಪವೃಕ್ಷದಲ್ಲಿರುವಂತೆ ಒಂದೇಕಡೆ ಇರಬಹುದು.

೨೦. ಶಿಲೆಗಳಲ್ಲಿ ಮರಗಳಲ್ಲಿ ಆಗುವಂತೆ ಫಲವಾಗಬಹುದು: ಮರಗಳಲ್ಲಿ ಮಣಿಗಳು ಜೊಂಪಲು ಜೊಂಪಲಾಗಿ ಮರದಲ್ಲಿ ಬಿಡಬಹುದು. ಶಿಲೆಯ ಗರ್ಭದಲ್ಲಿ, ಕಪ್ಪೆಗಳು ಬಂಡೆಯೊಳಗೆ ಇರುವಂತೆ, ಪ್ರಾಣಿಗಳೂ ಇರಬಹುದು.

(ಕಪ್ಪೆ ಚೆನ್ನಿಗರಾಯನ ಕಥೆ ಸ್ಮರಿಸಿಕೊಳ್ಳಿ.)

೨೧. ಈ ಸ್ವಪ್ನ ಸಂವಿತ್ತಿನಲ್ಲಿ ಏನು ಬೇಕಾದರೂ ಆಗಬಹುದು. ಚಂದ್ರ

ಅಸತ್ಯಮಪಿ ಬುಧ್ಯೇತ ಸ್ವಪ್ನೇ ಸ್ವಮರಣಂ ಯಥಾ ।
ಆಕಸ್ಮಿಕಂ ಜಲಂ ವ್ಯೋಮ್ನಿ ಧ್ರಿಯತೇ ಭೂತಗಂಯಥಾ　　　॥ ೨೨ ॥

ವಿತಾನಮಿವ ಖೇ ವಾರಿ ತಿಷ್ಠತಿ ಸ್ವರ್ಣದೀ ಯಥಾ ।
ಉಡ್ಡೀಯಂತೇ ಶಿಲಾಃ ಸ್ಥೂಲಾಃ ಪಕ್ಷವಂತೋ ಯಥಾದ್ರಯಃ　　　॥ ೨೩ ॥

ಶಿಲಾಂತಃ ಪ್ರಾಪ್ಯತೇ ಸರ್ವಂ ನನು ಚಿಂತಾಮಣೇರಿವ ।
ಚಿಂತಿತಾನಿ ಫಲಂತ್ಯಾಶು ದೇವೋದ್ಯಾನಾಂತರೇಷ್ವಿವ　　　॥ ೨೪ ॥

ತಾನ್ಯೇವ ನ ಫಲಂತ್ಯಾಶು ಮೋಕ್ಷಾದೀನಾಂ ಚ ರಾಘವ　　　॥ ೨೫ ॥

ಕಾಂತ ಶಿಲೆಯಿಂದ ಚಂದ್ರಕಿರಣವು ತಗುಲಿದಾಗ ನೀರು ಸ್ರವಿಸುವಂತೆ, ಇತರ ಶಿಲೆಗಳಿಂದಲೂ ನೀರು ಸುರಿಯಬಹುದು. ಘಟವು ಒಂದೇ ನಿಮಿಷದಲ್ಲಿ ಪಟವಾಗ ಬಹುದು.

೨೨. ಅಸಂಭವವಾದುದರಿಂದ ಅಸತ್ಯವಾದ ತನ್ನ ಮರಣವನ್ನು ಸ್ವಪ್ನದಲ್ಲಿ ಹೇಗೆ ಕಾಣುವುದುಂಟೋ, ಆಕಸ್ಮಿಕವಾಗಿ ವಾಯುವನ್ನು ಹೇಗೋ ಹಾಗೆ ಜಲವು ಆಕಾಶದಲ್ಲಿ ನಿಂತಿರುವುದನ್ನೂ ಕಾಣುವುದೂ ಉಂಟು.

೨೩. ಗಂಗಾನದಿಯು ಆಕಾಶದಲ್ಲಿ ತೋರಣದಂತೆ ಇರುವುದನ್ನೂ, ಬೆಟ್ಟ ಗಳಿಗೆ ರೆಕ್ಕೆಗಳು ಬಂತೋ ಎಂಬಂತೆ ಸ್ಥೂಲವಾದ ಶಿಲೆಗಳು ಹಾರಾಡುವುದನ್ನೂ ಕಾಣಬಹುದು.

೨೪. ದೇವತೆಗಳ ನಂದನವನದಲ್ಲಿ ಕೋರಿದ ವರಗಳೆಲ್ಲವೂ ಚಿಂತಾಮಣಿ ಯಿಂದ ಹೇಗೋ ಹಾಗೆ ಶಿಲೆಯ ಗರ್ಭದಲ್ಲಿ ಎಲ್ಲವೂ ದೊರೆಯುವುದನ್ನೂ ಕಾಣ ಬಹುದು.

೨೫. ಆದರೆ, ಮೋಕ್ಷಾದಿ ಸತ್ಯ ವಿಷಯಗಳಲ್ಲಿ ಎಷ್ಟು ಪ್ರಯತ್ನ ಪಟ್ಟರೂ ಸಂಕಲ್ಪಗಳು ಫಲಿಸುವುದು ಕಷ್ಟವೇ ಹೊರತು, ತದಿತರ ಅಸತ್ಯ ವಿಷಯಗಳು ಭ್ರಾಂತಿಯಿಂದ ಕೂಡಲೇ ಫಲಿಸುವುವು.

ಅಚೇತನೋಽಪಿ ಕುರುತೇ ಕರ್ಮ ಯಂತ್ರಪುಮಾನಿವ ।
ಏವಮಾದ್ಯಾಸ್ತಥಾನ್ಯೇ ಚ ವಿಚಿತ್ರಾರಂಭವಿಭ್ರಮಾಃ ॥ ೨೬ ॥

ಪೃಷ್ಟಾಃ ಶಂಬರಗಂಧರ್ವವಿಲಾಸೈರಪ್ಯಸಂಭವಾಃ ।
ದೇಶಕಾಲಕ್ರಿಯಾದ್ರವ್ಯ ರತ್ನ ಸಂಚರಣೇಯಜಾಃ ॥ ೨೭ ॥

ಅರ್ಥಾ ಗಂಧರ್ವಜನಿತಾ ಅನಂತಾಃ ಸತ್ಯಸಂಭವಾಃ ।
ಅಸಂಭವಃ ಸಂಭವೋಽಯಮಪಿ ಭಾವ್ಯುಪಪದ್ಯತೇ ॥ ೨೮ ॥

ಸಂಭವೋಽಸಂಭವಃ ಸಮ್ಯಕ್ ಸಿದ್ಧಯೇ ಸ್ವಪ್ನವಿಭ್ರಮಃ ।
ನ ತದಸ್ತಿ ನ ಯತ್ಸತ್ಯಂ ನ ತದಸ್ತಿ ನ ಯನ್ಮೃಷಾ ॥ ೨೯ ॥

ಸರ್ವಂ ಸರ್ವೇಣ ಸರ್ವತ್ರ ಸ್ವಪ್ನೇ ಸರ್ಗಾಭಿಧಾನಕೇ ॥ ೩೦ ॥

---

೨೬. ಯಂತ್ರ ಪುರುಷನು ಅಚೇತನನಾದರೂ ಕರ್ಮವನ್ನು ಮಾಡುವನು. ಹೀಗೆಯೇ ಇನ್ನೂ ವಿಚಿತ್ರವಾದ ಕಾರ್ಯಗಳು ಭ್ರಾಂತಿಯಲ್ಲಿ ನಡೆದು ಹೋಗುವುವು.

೨೭. ಶಂಬರ, ಗಂಧರ್ವ ಮೊದಲಾದವರ ಮಾಯಾ ವಿಲಾಸಗಳಿಂದಲೂ ದೇಶ, ಕಾಲ, ಕ್ರಿಯಾ, ದ್ರವ್ಯಗಳಿಂದಲೂ ಮಣಿಗಳಿಂದಲೂ ಪಿಶಾಚಾದಿ ಜಂಗಮ ಪ್ರಾಣಿಗಳಿಂದಲೂ ಸಾಧ್ಯವಿಲ್ಲದ ಕಾರ್ಯಗಳೆಲ್ಲವೂ ಭ್ರಾಂತಿಯಲ್ಲಿ ಸಾಧ್ಯವು.

೨೮. ಗಂಧರ್ವ ಮಾಯೆಯಿಂದ ಹುಟ್ಟಿದ ಅರ್ಥಗಳೆಲ್ಲವೂ ಅನಂತಗಳಾಗಿ ಸತ್ಯವೂ ಸಂಭವವೂ ಆದವುಗಳಂತೆ ಕೆಲಸಕ್ಕೆ ಒದಗುವುವು. ಅಸಂಭವಗಳಾದರೂ ಸಂಭವಿಸುವುವು. ವರ್ತಮಾನ ಕಾಲದಲ್ಲಿ ಅಸಂಭವವೆಂದರೂ ಮುಂದೆಯಾದರೂ ಸಂಭಾವ್ಯವಾದ ಕಾರ್ಯಗಳೂ ಭ್ರಾಂತಿಯಿಂದ ಆಗುವುವು.

೨೯. ಹಾಗೆಯೇ ಸಂಭವವಾದರೂ ಅಸಂಭವವಾಗುವುದೂ ಉಂಟು. ಅದರಿಂದ ಸ್ವಪ್ನ ಭ್ರಾಂತಿಯಲ್ಲಿ ಸಿದ್ಧವಾಗದುದು ಯಾವುದೂ ಇಲ್ಲ: ಭ್ರಾಂತಿಯಲ್ಲಿ ಸತ್ಯವಾದುದೂ ಯಾವುದೂ ಇಲ್ಲ: ಅಸತ್ಯವಾದುದೂ ಯಾವುದೂ ಇಲ್ಲ.

೩೦. ಸ್ವಪ್ನವೆಂಬ ದೃಷ್ಟಿಯಲ್ಲಿ ಸರ್ವವೂ ಸರ್ವ ರೀತಿಯಿಂದಲೂ ಸರ್ವ ಸ್ಥಲಗಳಲ್ಲಿಯೂ ಸಾಧ್ಯವಾಗುವುದು.

ಸ್ವಪ್ನೇ ನಿಮಗ್ನಧೀರ್ಜಂತುಃ ಪಶ್ಯತಿ ಸ್ಥಿರತಾಂ ಯಥಾ ।
ಸರ್ಗಸ್ವಪ್ನೇ ಮಗ್ನಬುದ್ಧಿಃ ಪಶ್ಯತಿ ಸ್ಥಿರತಾಂ ತಥಾ　　॥ ೩೧ ॥

ಭ್ರಮಾದ್ಭ್ರಮಾಂತರಂ ಗಚ್ಛನ್ ಸ್ವಪ್ನಾತ್ಸ್ವಪ್ನಾಂತರಂ ವ್ರಜನ್
ಅತಿಸ್ಥಿರ ಪ್ರತ್ಯಯಭಾಗಿಹ ಜೀವೋ ವಿಮುಹ್ಯತಿ　　॥ ೩೨ ॥

ಶ್ವಭ್ರಾಂತರಂ ಶ್ವಭ್ರನಿಪಾತದೋಷಾತ್
ಸಂಪ್ರಾಪ್ನುವನ್ಮುಗ್ಧಮೃಗಃ ಪ್ರಯಾತಿ ।
ಮೋಹಂ ಯಥಾಪಾತಮಯೈಕರೂಪಂ
ಜೀವಸ್ತಥಾ ಸಂಸೃತಿಪಾತಮೂಢಃ　　॥ ೩೩ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಜಗತ್ಸ್ವಪ್ನಕಥನಂ" ನಾಮ ಏಕಷಷ್ಟಿತಮಃ ಸರ್ಗಃ

---

೩೧. ಸ್ವಪ್ನ ಕಾಣುತ್ತಿರುವ ಮನುಷ್ಯನೆಂತು ಎಲ್ಲವನ್ನೂ ಸ್ಥಿರವೆಂದೇ ನಂಬಿರುವನೋ, ಅಂತೆಯೇ ಸೃಷ್ಟಿಯೆಂಬ ಸ್ವಪ್ನದಲ್ಲಿ ಇರುವವನೂ, ಈ ದೃಷ್ಟಿಯನ್ನು ಸ್ಥಿರವೆಂದು ನಂಬುವನು.

೩೨. ಭ್ರಮೆಯಿಂದ ಭ್ರಮಕ್ಕೆ ಹೋಗುತ್ತಾ, ಸ್ವಪ್ನದಿಂದ ಇನ್ನೊಂದು ಸ್ವಪ್ನಕ್ಕೆ ಹೋಗುತ್ತ, ಇದೆಲ್ಲವೂ ಅತಿ ಸ್ಥಿರವಾದುದು ಎಂದು ಜೀವನು ವಿಮೋಹವನ್ನು ಪಡೆಯುವನು.

೩೩. ಅಜ್ಞಾನಿಯಾದ ಮೃಗವು ಒಂದು ಹಳ್ಳಕ್ಕೆ ಬಿದ್ದು, ಆ ತಪ್ಪಿಗಾಗಿ ಮತ್ತೊಂದು ಹಳ್ಳಕ್ಕೆ ಎಳೆದುಕೊಂಡು ಹೋದರೂ ಹೇಗೆ ಹೋಗಬೇಕಾಗುವುದೋ, ಹಾಗೆಯೇ ಜೀವನೂ ಸಂಸಾರದಲ್ಲಿ ರಾಗ ದ್ವೇಷಾದಿಗಳಿಗೆ ಸಿಕ್ಕಿ ಮೂಢನಾಗಿ ಮೋಹದಲ್ಲಿ ಹಾಗೆ ಹಾಗೆಯೇ ಸಿಕ್ಕಿಕೊಳ್ಳುತ್ತ ಹೋಗುವನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಜಗತ್ಸ್ವಪ್ನಕಥನ" ಎಂಬ ಅರವತ್ತೊಂದನೆಯ ಸರ್ಗವು

ದ್ವಿಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಅತ್ರ ರಾಘವ ವಕ್ಷ್ಯೇಽಹಮಿತಿಹಾಸಮಿಮಂ ಶೃಣು ।
ಯದ್ವೃತ್ತಂ ಕಸ್ಯಚಿದ್ಭಿಕ್ಷೋಃ ಕಿಂಚಿನ್ಮನನಶಾಲಿನಃ ॥ ೧ ॥

ಆಸೀತ್ಕಶ್ಚಿನ್ಮಹಾಭಿಕ್ಷುಃ ಸಮಾಧ್ಯಭ್ಯಾಸತತ್ಪರಃ ।
ನಿತ್ಯಂ ಸ್ವವ್ಯವಹಾರೇಣ ಕ್ಷಪಯತ್ಯಖಿಲಂ ದಿನಂ ॥ ೨ ॥

ಸಮಾಧ್ಯಭ್ಯಾಸಶುದ್ಧಂ ತತ್ತಸ್ಯ ಚಿತ್ತಂ ಕ್ಷಣೇನ ಯತ್ ।
ಚಿಂತಯತ್ಯಾಶು ತದ್ಭಾವಂ ಗಚ್ಛತ್ಯಂಬ್ವಿವ ವೀಚಿತಾಂ ॥ ೩ ॥

ಅರವತ್ತೆರಡನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು:—

೧. ರಾಘವ, ಈ ವಿಚಾರದಲ್ಲಿ ಒಂದು ಇತಿಹಾಸವನ್ನು ಹೇಳುವೆನು ಕೇಳು. (ಶಾಂತಿದಾಂತಿ ವೈರಾಗ್ಯಾದಿ) ಮನನಶಾಲಿಯಾದ ಭಿಕ್ಷುವೊಬ್ಬನಿದ್ದನು. ಅವನ ಕಥೆಯಿದು.

೨. ಒಬ್ಬಾನೊಬ್ಬ ಮಹಾ ಭಿಕ್ಷುವಿದ್ದನು. ಆತನು ಯಾವಾಗಲೂ ಸಮಾಧಿಯನ್ನು ಅಭ್ಯಾಸ ಮಾಡುವನು. ತನ್ನ ಆಶ್ರಮಕ್ಕೆ ಉಚಿತವಾದ ವ್ಯಾಪಾರಗಳನ್ನೇ ಮಾಡುತ್ತ ದಿನಗಳನ್ನು ನೂಕುವನು.

೩. ಸಮಾಧಿಯನ್ನು ಅಭ್ಯಾಸ ಮಾಡುವುದರಿಂದ ಶುದ್ಧವಾದ ಆತನ ಚಿತ್ತವು ಏನನ್ನು ಕುರಿತು ಭಾವಿಸುವುದೋ ಅದೇ ಭಾವವನ್ನು ಜಲವು ತರಂಗವಾಗುವಷ್ಟು ಸುಲಭವಾಗಿ ಸಹಜವಾಗಿ ಪಡೆದು ಬಿಡುವುದು.

ಕದಾಚಿತ್ಸ ಸಮಾಧಾನವಿರತೋಽತಿಷ್ಠದೇಕಧೀಃ ।
ಕಿಂಚಿತ್ಸಂಚಿಂತಯಾಮಾಸ, ಸ್ವಾಸನಸ್ಥಃ ಕ್ರಿಯಾಕ್ರಮಂ ॥ ೪ ॥

ತಸ್ಯ ಚಿಂತಯತೋ ಜಾತಾ ಪ್ರತಿಭೇಯಮಿತಿ ಸ್ವತಃ
ಭಾವಯಾಮ್ಯಾಶು ಲೀಲಾರ್ಥಂ ಸಾಮಾನ್ಯ ಜನವೃತ್ತಿತಾಂ ॥ ೫ ॥

ಇತಿ ಸಂಚಿತ್ಯ ಚೇತೋಽಸ್ಯ ಸ್ಥಿತಂ ಕಿಂಚಿನ್ನರಾಂತರಂ ।
ಸ್ಪಂದಸಂಸ್ಥಾನ ಸಂತ್ಯಾಗಮಾತ್ರೇಣಾವರ್ತನೇಂಬ್ವಿವ ॥ ೬ ॥

ತೇನ ಚಿತ್ತನರೇಣಾಥ ಕೃತಂ ನಾಮಾತ್ಮವಾಂಛಯಾ ।
ಜೀವಟೋಽಸ್ಮೀತಿ ಸಹಸಾ ಕಾಕತಾಲೀಯವತ್ಸ್ಥಿತಂ ॥ ೭ ॥

ಜೀವಟೋ ವಿಜಹಾರಾಥ ಸ ಸ್ವಪ್ನಪುರುಷಶ್ಚಿರಂ ।
ಸ್ವಪ್ನನಿರ್ಮಾಣನಗರೇ ಕಸ್ಮಿಂಶ್ಚಿತ್ಪುರವೀಥಿಷು ॥ ೮ ॥

---

೪. ಒಂದಾನೊಂದು ಕಾಲದಲ್ಲಿ ಸಮಾಧಿಯಿಂದ ಎಚ್ಚೆತ್ತು ಬಹಿರ್ಮುಖನಾಗಿ, ಮತ್ತೇನೂ ಚಿಂತೆಯಿಲ್ಲದೆ, ಏಕಾಗ್ರಮನಸ್ಕನಾಗಿ ಸುಖಾಸನದಲ್ಲಿ ಕುಳಿತಿದ್ದು, ಮುಂದೇನು ಮಾಡಬೇಕು ಎಂದು ಯೋಚಿಸಿದನು.

೫. ಹಾಗೆ ಯೋಚಿಸುತ್ತ ಕುಳಿತಿರುವ ಆತನಿಗೆ, ಲೀಲಾರ್ಥವಾಗಿ ಸಾಮಾನ್ಯ ಜನರಂತೆ ಅಷ್ಟು ಹೊತ್ತು ಇರೋಣ ಎಂಬ ಬುದ್ಧಿಯು ಹುಟ್ಟಿತು.

೬. ಅಂತಹ ಬುದ್ಧಿಯು ಹುಟ್ಟುತ್ತಿದ್ದ ಹಾಗೆಯೇ, ವ್ಯಾಪಾರ ಮಾಡಲು ಆರಂಭಿಸಿ ತಾನಿದ್ದ ಸ್ಥಲವನ್ನು ಬಿಟ್ಟು ಹೊರಟ ನೀರು ಸುಳಿಯಾಗುವಂತೆ, ಆತನ ಚೇತನವು ನರಾಂತರವಾಗಿ ಹೋಯಿತು.

೭. ಆ ಚಿತ್ತ (ಸಂಕಲ್ಪ ಜನ್ಯನಾದ) ನರನು, ತನಗೆ ಒಂದು ಹೆಸರು ಬೇಕೆಂದು ಕಾಕತಾಲೀಯವಾಗಿ, ತನ್ನನ್ನು ಜೀವಟನೆಂದು, ಸಹಸಾ ಕರೆದುಕೊಂಡನು.

೮. ಜೀವಟನೆಂಬ ಆ ಸ್ವಪ್ನ ಪುರುಷನಂತಹ ಪುರುಷನು ಯಾವುದೋ ಸ್ವಪ್ನ ನಿರ್ಮಿತವಾದ ನಗರದಲ್ಲಿ ಬಹು ಕಾಲ ಪುರವೀಥಿಗಳಲ್ಲಿ ವ್ಯವಹಾರ ಮಾಡುತ್ತಿದ್ದನು.

ತತ್ರ ಪಾನಂ ಪಪೌ ಮತ್ತೋ ಭೃಂಗಃ ಪದ್ಮರಸಂ ಯಥಾ ।
ಲೀಲಯೈವ ದೃಢಂ ಹೃಷ್ಟಃ ಸುಷ್ವಾಪ ಘನನಿದ್ರಯಾ ॥ ೯ ॥

ಸ್ವಪ್ನೇ ದದರ್ಶ ವಿಪ್ರತ್ವಂ ಪಾಠಾನುಷ್ಠಾನತುಷ್ಟಿಮತ್ ।
ಪ್ರತಿಭಾಮಾತ್ರಸಂಪನ್ನಾಂ ಚಿತ್ತೇ ದೇಶಾಂತರಾಪ್ತಿವತ್ ॥ ೧೦ ॥

ಕದಾಚಿತ್ಸ ದ್ವಿಜಶ್ರೇಷ್ಠಸ್ತ್ವಹರ್ವ್ಯಾಪಾರನಿಷ್ಠಯಾ ।
ಸುಷ್ವಾಪಾಂತರ್ವ್ಯವಹೃತಿರ್ಬೀಜತಾಯಾಮಿವ ದ್ರುಮಃ ॥ ೧೧ ॥

ದ್ವಿಜೋಽಪಶ್ಯತ್ಸ್ವಯಂ ಸ್ವಪ್ನೇ ಸಾಮಂತತ್ವಮಥಾತ್ಮನಿ ।
ಸ ಸಾಮಂತಃ ಕೃತಾಹಾರಃ ಕಥಾಚಿನ್ಘನನಿದ್ರಯಾ ॥ ೧೨ ॥

ಅಪಶ್ಯದ್ರಾಜತಾಂ ಸ್ವಪ್ನೇ ಕಕುಬ್ವಲಯಪಾಲನೀಂ ।
ಲಾಲಿತಾಂ ಭೋಗಪೂಗೇನ ಪುಷ್ಪೌಘೇಣ ಲತಾಮಿವ ॥ ೧೩ ॥

---

೯. ಅವನು ಆ ಪುರವೀಧಿಗಳಲ್ಲಿ ಭೃಂಗವು ಪದ್ಮರಸವನ್ನು ಕುಡಿಯುವಂತೆ ಪಾನಮಾಡಿ ಮತ್ತನಾದನು. ಆಟವಾಡುತ್ತ ಸಂತೋಷಪಟ್ಟುಕೊಂಡು, ಘನವಾಗಿ ನಿದ್ರೆಯು ಬರಲು ಮಲಗಿದನು.

೧೦. ದೇಶಾಂತರಕ್ಕೆ ಹೋಗಬೇಕು ಎಂದಿರುವವನು ಕನಸಿನಲ್ಲಿಯೇ ದೇಶಾಟನ ಮಾಡಿಕೊಂಡು ಬರುವಂತೆ ಆ ಜೀವಟನು ಕನಸಿನಲ್ಲಿ ಪಾಠ, ಅನುಷ್ಠಾನಗಳಿಂದ ತುಷ್ಟಿಯನ್ನು ಪಡೆದಿರುವ ವಿಪ್ರತ್ವವು ತನಗೆ ಬಂದಿರುವುದನ್ನು ಕಂಡನು.

೧೧. ಕನಸಿನ ಆ ದ್ವಿಜಶ್ರೇಷ್ಠನು ಹಗಲಿನಲ್ಲಿ ಬಹಳ ಕೆಲಸ ಮಾಡಿ ದುಡಿದು ಆಯಾಸಪಟ್ಟು ಮಲಗಿದನು. ಆ ಸುಷುಪ್ತಿಯೆಂಬುದು ಬೀಜದಲ್ಲಿರುವ ದ್ರುಮದಂತೆ ಎಲ್ಲವನ್ನೂ ತನ್ನಲ್ಲಿಯೇ ಇಟ್ಟುಕೊಂಡಿರುವುದು.

೧೨-೧೩. ಆ ದ್ವಿಜನು ತನ್ನ ಕನಸಿನಲ್ಲಿ ತನಗೆ ಸಾಮಂತ ನರಪತಿತ್ವವು ಬಂದಿರುವಂತೆ ಕಂಡನು. ಆ ಸಾಮಂತನು ಊಟ ಮಾಡಿ, ಬಲು ನಿದ್ದೆಯಿಂದು ಮಲಗಿ ತಾನು ಭೂಮಂಡಕ್ಕೆಲ್ಲ ರಾಜನಾದಂತೆ ಕನಸು ಕಂಡನು. ಆ ರಾಜತ್ವವು ಹೂಗೊಂಚಲುಗಳಿಂದ ತುಂಬಿರುವ ಬಳ್ಳಿಯಂತೆ ಭೋಗ ಸಮೂಹಗಳಿಂದ ತುಂಬಿತ್ತು.

ಸ ಕಾದಾಚಿನ್ನೃಪಃ ಸ್ವಸ್ಥಃ ಸುಷ್ವಾಪಾಸ್ತಮಿತೇಹಿತಃ |
ಪುರೋಭಾವಿ ನಿಜಾಚಾರಃ ಸ್ವಕಾರ್ಯಮಿವ ಕಾರಣೇ　　|| ೧೪ ||

ಅಪಶ್ಯತ್ಸ್ವಾತ್ಮನಿ ಸ್ವಪ್ನೇ ಸುರಸ್ತ್ರೀತ್ವಮನಿಂದಿತಂ |
ವೃಕ್ಷಕೋಶರಸೋಲ್ಲಾಸೇ ಮಂಜರೀತ್ವಮಿವೋದಿತಂ　　|| ೧೫ ||

ಸಾ ಸುರಸ್ತ್ರೀ ರತಿಶ್ರಾಂತಾ ನಿದ್ರಾಂ ಗಾಢಮುಪಾಗತಾ |
ಮೃಗೀತ್ವಮಾತ್ಮನಿ ಸ್ವೈರಮಾವರ್ತತ್ವ ಮಿವಾಂಬುತಾ　　|| ೧೬ ||

ಸಾ ಮೃಗೀ ಲೋಲನಯನಾ ಕದಾಚಿನ್ನಿದ್ರಯಾ ಹೃತಾ |
ಸ್ವಪ್ನೇ ದದರ್ಶ ವಲ್ಲೀತ್ವಂ ಸ್ವಾಭ್ಯಾಸಾದ್ದೃಢಮಾತ್ಮನಿ　　|| ೧೭ ||

ತಿರ್ಯಂಚೋಪಿ ಪ್ರಪಶ್ಯಂತಿ ಸ್ವಪ್ನಂ ಚಿತ್ತಸ್ವಭಾವತಃ |
ದೃಷ್ಟಾನಾಂ ಚ ಶ್ರುತಾನಾಂ ಚ ಚೇತಃಸ್ಮರಣಮಕ್ಷತಂ　　|| ೧೮ ||

---

೧೪. ಆ ರಾಜನು ಭೋಗಗಳಿಂದ ಬಳಲಿ ಎಲ್ಲವನ್ನೂ ಬಿಟ್ಟು, ಮತ್ತೊಮ್ಮೆ ಆರಂಭಿಸಲು ಅನುಕೂಲವಾಗಲೆಂದು, ಕಾರಣದಲ್ಲಿ ಅಡಗುವ ಸ್ವಕಾರ್ಯದಂತೆ ಸುಷುಪ್ತಿಗೆ ಸಂದನು.

೧೫. ವೃಕ್ಷದಲ್ಲಿ ಇರುವ ರಸವು ಸಂತೋಷದಿಂದ ಮಂಜರಿಯಾಗುವಂತೆ, ಆ ಅರಸನು ಕನಸಿನಲ್ಲಿ ಸುಂದರ ಸುರಸ್ತ್ರೀಯಾದನು.

೧೬–೧೭. ಆ ಸುರಸ್ತ್ರೀಯು ರತಿಶ್ರಾಂತಳಾಗಿ ಗಾಢನಿದ್ರೆಯಲ್ಲಿ ಮಲಗಿ, ನೀರು ತಾನಾಗಿ ಸುಳಿಯಾಗುವಂತೆ ಕನಸಿನಲ್ಲಿ ಚಪಲನಯನೆಯಾದ ಮೃಗಿಯಾದಳು. ಆ ಮೃಗಿಯು ಮಲಗಿ ಕನಸಿನಲ್ಲಿ ಬಳ್ಳಿಯಾಯಿತು.

೧೮. ತಿರ್ಯಙ್ಮೃಗಗಳೂ ಕೂಡ ಅವಕ್ಕೂ ಚಿತ್ತವಿರುವುದರಿಂದ, ಚಿತ್ತಕ್ಕೆ ಕನಸು ಕಾಣುವುದೇ ಅಭ್ಯಾಸವಾಗಿ ಹೋಗಿರುವುದರಿಂದ, ತಾವು ವ್ಯಾಪಾರ ಕಾಲದಲ್ಲಿ ಕಂಡುದನ್ನೂ ಕೇಳಿದುದನ್ನೂ ಕನಸಿನಲ್ಲಿ ಅಚ್ಚಳಿಯದಂತೆ ಕಾಣುವುವು.

ಸಾ ಬಭೂವ ಲತಾಪುಷ್ಪಫಲಪಲ್ಲವಶಾಲಿನೀ ।
ವನದೇವೀ ವನೋದ್ಯಾನಲತಾಗೃಹವಿಲಾಸಿನೀ ॥ ೧೯ ॥

ಬೀಜಾಂತಸ್ಥಾಂಕುರಾಕಾರರೂಪಯೇಹಾಧಿರೂಢಯಾ ।
ಸಾಽಪಶ್ಯದಂತಃ ಸಂವಿತ್ತ್ಯಾ ಸ್ಫುಟಂ ಲವನಮಾತ್ಮನಃ ॥ ೨೦ ॥

ಕಂಚಿತ್ಕಾಲಂ ಸುಷುಪ್ತಸ್ಥಂ ಕಲಯಾ ಜಡತಾಂ ಘನಾಂ ।
ಅನುಭೂಯ ದದರ್ಶಾಥ ಸ್ವಾತ್ಮಾನಂ ಭ್ರಮರಂ ಸ್ಥಿರಂ ॥ ೨೧ ॥

ಷಟ್ಪದೋ ವಿಜಹಾರಾಥ ವನೇ ವನಲತಾಸ್ವಸೌ ।
ಪದ್ಮಿನೀಷು ಚ ಫುಲ್ಲಾಸು ತರುಣೀಷ್ವಿವ ವಲ್ಲಭಃ ॥ ೨೨ ॥

ಪ್ರಿಯಾಬಿಂಬಾಧರಸ್ವಾದುರಸವತ್ಕೌಸುಮಂ ಮಧು ।
ಭ್ರಮತ್ಕುಸುಮಸಂಘಾಸು ಮುಕ್ತಾವಲ್ಲೀವಿಲಾಸಿಷು ॥ ೨೩ ॥

---

೧೯. ಆ ಬಳ್ಳಿಯು, ಪಲ್ಲವ, ಪುಷ್ಪ, ಫಲಗಳಿಂದ ಕೂಡಿ ಮನೋಹರವಾಗಿ ವನದೇವಿಯ ಉದ್ಯಾನವನದ ಲತಾಗೃಹಕ್ಕೆ ಭೂಷಣವಾಯಿತು.

೨೦. ಬೀಜದ ಒಳಗಿರುವ ಅಂಕುರದಂತೆ ತನ್ನೊಳಗೆ ಇರುವ ವಾಸನಾಂತರ್ಗತವಾದ ಸಂವಿತ್ತಿನಿಂದ ಅದು ತನ್ನನ್ನು ಯಾರೋ ಕತ್ತರಿಸಿಹಾಕಿದುದನ್ನೂ ಕಂಡಿತು.

೨೧. ಅದೇ ಲತೆಯೇ ಕೆಲವು ಕಾಲ ನಿದ್ರಿಸುತ್ತಿದ್ದು, ಘನವಾದ ಜಡತೆಯನ್ನು ಅನುಭವಿಸಿ, ತಾನೊಂದು ಭ್ರಮರವಾಯಿತು.

೨೨. ಆ ಭ್ರಮರವು ತರುಣಿಯರಲ್ಲಿ ವಿಹರಿಸುವ ವಲ್ಲಭನಂತೆ, ವನ ಲತೆಗಳಲ್ಲಿಯೂ ಅರಳಿದ ತಾವರೆಗಳಲ್ಲಿಯೂ ವಿಹರಿಸುತ್ತಿತ್ತು.

೨೩. ಪ್ರಿಯಾಬಿಂಬಾಧರದಂತೆ ಸ್ವಾದುವಾದ ರಸವುಳ್ಳ ಪುಷ್ಪಮಧುವನ್ನು ಚಂಚಲವಾದ ಪುಷ್ಪ ಮಂಜರಿಗಳಲ್ಲಿಯೂ ಮುಕ್ತಾವಲ್ಲಿಗಳಲ್ಲಿಯೂ ಕುಡಿಯುತ್ತಿತ್ತು.

ಸ ಬಭೂವ ಸರೋಜಿನ್ಯಾಂ ವ್ಯಸನೀ ಬಿಸನಾಲಗಃ |
ಕ್ವಚಿದೇವ ರತಿಂ ಹ್ಯೇತಿ ಚೇತೋ ಜಡಮತೇರಪಿ || ೨೪ ||

ತಾಮಾಜಗಾಮ ನಲಿನೀಂ ಪರಿಲೋಲಯಿತುಂ ಗಜಃ |
ರಮ್ಯವಸ್ತುಕ್ಷಯಾಯೈವ ಮೂಢಾನಾಂ ಜೃಂಭತೇ ಪದಂ || ೨೫ ||

ನಲಿನೀ ಮರ್ದಿತಾ ಸೈವ ಸಮಂ ತೇನ ಸ ಷಟ್ಪದಃ |
ಗತೋ ದಂತಾಂತರಂ ವ್ರೀಹಿರಿವ ಚೂರ್ಣತ್ವಮಾಯಯೌ || ೨೬ ||

ಭ್ರಮರೋ ವಾರಣಾಲೋಕಾದ್ವಾರಣಾಲೋಕಭಾವನಾತ್ |
ದದರ್ಶಾತ್ಮಾನಮಾಮೋದಮತ್ತಹಸ್ತಿತಯೋದಿತಂ || ೨೭ ||

ಶುಷ್ಕಸಾಗರಗಂಭೀರೇ ಗಜಃ ಖಾತೇ ಪಪಾತಹ |
ತಮೋಘನಘನೇ ಶೂನ್ಯೇ ಸಂಸಾರ ಇವ ಜೀವಕಃ || ೨೮ ||

---

೨೪. ಆ ಭ್ರಮರವು ಒಮ್ಮೆ ಕಮಲದಲ್ಲಿ ಕುಳಿತು ಆ ಸುಖಕ್ಕೆ ಸೋತು ಬಿಸನಾಳದವರೆಗೂ ಕೊರೆದುಕೊಂಡು ಹೋಯಿತು. ಜಡಮತಿಗಳಿಗೂ ಒಮ್ಮೊಮ್ಮೆ ಹೀಗೆ ಮನಸ್ಸು ಅತ್ಯಾಸಕ್ತವಾಗುವುದುಂಟು.

೨೫. ಆ ನಲಿನಿಯನ್ನು ಕಿತ್ತುಹಾಕಲು ಒಂದು ಆನೆಯು ಬಂತು. ರಮ್ಯವಾದ ವಸ್ತುಗಳನ್ನು ಧ್ವಂಸಮಾಡುವುದಕ್ಕೆ ತಾನೇ ಮೂಢರು ಕಾರ್ಯಪರರಾಗುವುದು?.

೨೬. ಆ ಆನೆಯು ಆ ನಲಿನಿಯನ್ನು ಕಿತ್ತು ತುಳಿದು ಹಾಕಿತು. ಆ ಭ್ರಮರವೂ ಅದರ ಜೊತೆಯಲ್ಲಿಯೇ ಧ್ವಂಸವಾಯಿತು. ಹಲ್ಲಿನಿಂದ ಹಲ್ಲಿಗೆ ಹೋದ ಕಾಳಿನಂತೆ ಚೂರ್ಣವಾಗಿ ಹೋಯಿತು.

೨೭. ಆ ಭ್ರಮರವು ಸಾಯುವಾಗ ಆನೆಯನ್ನು ಕಂಡಿತ್ತಾದುದರಿಂದ, ಆ ಆನೆಯನ್ನೇ ಕುರಿತು ಯೋಚಿಸುತ್ತಿದ್ದುದರಿಂದ, ಮದ್ದಾನೆಯಾಗಿ ಹುಟ್ಟಿತು.

೨೮. ಆ ಆನೆಯೊಂದುದಿನ ಅಲೆಯುತ್ತಾ ತಮೋಘನವಾಗಿ ಶೂನ್ಯವಾಗಿರುವ ಸಂಸಾರದಲ್ಲಿ ಬಿದ್ದಜೀವನಂತೆ, ಬತ್ತಿಹೋದ ಸಾಗರದತಳವೋ ಎಂಬಂತಿರುವ ಒಂದು ದೊಡ್ಡ ಹಳ್ಳದಲ್ಲಿ ಬಿದ್ದು ಹೋಯಿತು.

ಬಭೂವ ವಲ್ಲಭೋ ರಾಜ್ಞೋ ಮಹಾಪರಬಲಾಂತಕಃ ।
ಸದಾ ಮದಬಲಕ್ಷೀಬೋ ಘೂರ್ಣೋಽತೀವ ನಿಶಾಚರಃ ॥ ೨೯ ॥

ಕದಾಚಿದಸಿನಿಸ್ತ್ರಿಂಶಚ್ಛಿನ್ನಃ ಸೋಽಸ್ತ್ರಮುಪಾಯಯಾ ।
ವಿವೇಕಾನಿಲನಿರ್ಲೂನರೂಪೋ ಜೀವ ಇವಾತ್ಮನಿ ॥ ೩೦ ॥

ಪಶ್ಯನ್ಗಜಘಟಾಕುಂಭಸ್ಥಲಾಗ್ರೋಚ್ಛಲಿತಾನಲೀನ್ ।
ಗಂಡಸ್ಥಭ್ರಮರಾಭ್ಯಾಸಾದ್ಗಜೋ ಭೂಯೋಽಪ್ಯಭೂದಲಿಃ ॥ ೩೧ ॥

ಸೇವಮಾನೋ ವನಲತಾಂ ಪುನರಾಯಾತ್ಸ ಪದ್ಮಿನೀಂ ।
ದುಸ್ತ್ಯಜೋ ಹಿ ದುರಭ್ಯಾಸೋ ವಾಸನಾನಾಮಬೋಧಿನಃ ॥ ೩೨ ॥

---

೨೯. ಅಲ್ಲಿಂದ ಒಬ್ಬ ರಾಜನನ್ನು ಸೇರಿ ಅವನಿಗೆ ಪ್ರಿಯನಾಗಿ ಮಹಾಪರಾಬಲಾಂತಕನೆಂದು ಪ್ರಸಿದ್ಧವಾಗಿ, ಯಾವಾಗಲೂ ರಾಕ್ಷಸನಂತೆ ಅತಿಮದಬಲದಿಂದ ತೂರಾಡುತ್ತ ಇದ್ದು,

೩೦. ಯಾವಾಗಲೋ ಒಂದುಸಲ ಖಡ್ಗಯುದ್ಧದವರ ಕೈಗೆ ಸಿಕ್ಕಿ, ವಿವೇಕವೆಂಬ ಬೆಂಕಿಗೆ ಸಿಕ್ಕಿ ಜೀವನು ತನ್ನ ಪ್ರತ್ಯಗ್ರೂಪವನ್ನು ಕಳೆದುಕೊಂಡು ಆತ್ಮನಲ್ಲಿ ಬೆರೆತುಹೋಗುವಹಾಗೆ, ನಾಶವಾಗಿ ಹೋಯಿತು.

೩೧. ಮದ್ದಾನೆಗಳ ಕುಂಭಸ್ಥಲಗಳಲ್ಲಿ ಆಡುತ್ತಿರುವ ದುಂಬಿಗಳನ್ನುಕಂಡು ತನ್ನ ಗಂಡಸ್ಥಲದಲ್ಲಿಯೂ ಆಡುತ್ತಿದ್ದ ದುಂಬಿಗಳನ್ನು ನೆನೆದು, ಆ ಆನೆಯು ಮತ್ತೆ ದುಂಬಿಯಾಯಿತು.

೩೨. ಆ ದುಂಬಿಯು ವನಲತೆಗಳನ್ನು ಸೇವಿಸುತ್ತ ಮತ್ತೆ ಕಮಲದ ಬಳಿಗೇ ಬಂತು. ಅಜ್ಞಾನಿಗಳಿಗೆ ವಾಸನಾಬಲದಿಂದ ರೂಢವಾಗಿರುವ ದುರಭ್ಯಾಸವನ್ನು ಬಿಡುವುದು ಸಾಧ್ಯವಿಲ್ಲ ತಾನೇ!

ತತ್ರ ಹಸ್ತಿಖುರಾಕ್ರಾಂತಃ ಪುನಃ ಸಂಚೂರ್ಣತಾಂ ಯಯೌ ।
ಪಾರ್ಶ್ವಸ್ಥಹಂಸಸಂವಿತ್ತ್ಯಾ ಬಭೂವ ಕಲಹಂಸಕಃ ॥ ೩೩ ॥

ಕಲಹಂಸಶ್ಚಿರತರಂ ಯೋನಿಷ್ವನ್ಯಾಸು ಸಂಲ್ಲುಠನ್ ।
ಕದಾಚಿದ್ಬಹುಭಿರ್ಹಂಸೈಃ ಸಂಗತೋ ವಿಜಹಾರ ಹ ॥ ೩೪ ॥

ಬ್ರಾಹ್ಮಹಂಸಾತ್ಮಿಕಾ ಸಂವಿತ್ಸ ಶಬ್ದಾರ್ಥವತೀ ಮನಾಕ್ ।
ತತ್ರ ಪುಷ್ಪಾಸ್ಯ ತಸ್ಯಾಂತಃ ಪ್ರಾಗಂಡರಸಬರ್ಹಿವತ್ ॥ ೩೫ ॥

ಸ ತಚ್ಚಿಂತಾಂ ಚರನ್ಮೃತೋ ದೃಢಂ ವ್ಯಾಧಿಘುಣಾಹತಃ ।
ತತ್ಸಂವಿತ್ತ್ಯನುಸಂಧಾನಾಜ್ಜಾತಃ ಪದ್ಮಜಸಾರಸಃ ॥ ೩೬ ॥

---

೩೩. ಅಲ್ಲಿ ಮತ್ತೆ ಆನೆಯ ಕಾಲಿಗೆ ಸಿಕ್ಕಿ, ಚೂರ್ಣವಾಗಿ ಹೋಯಿತು. ಆಗ ಕಮಲದ ಮಗ್ಗುಲಲ್ಲಿದ್ದ ಹಂಸವನ್ನು ನೋಡಿ, ಆ ಹಂಸ ವಾಸನೆಯಿಂದ ತಾನೊಂದು ರಾಜಹಂಸನಾಯಿತು.

೩೪. ಆ ರಾಜಹಂಸವೂ ಮತ್ತೆ ಮತ್ತೆ ಬೇರೆ ಬೇರೆ ಜನ್ಮಗಳನ್ನೆತ್ತಿ, ಮತ್ತೆಯೂ ರಾಜಹಂಸನಾಯಿತು. ತನ್ನ ಕುಲಬಾಂಧವರೊಡನೆ ಸೇರಿಕೊಂಡು ವಿಹರಿಸುತ್ತಿತ್ತು.

೩೫. ತಾನೂ ಹಂಸವೆಂಬ ನಾಮವುಳ್ಳದ್ದಾದುದರಿಂದಲೂ, ಬ್ರಹ್ಮನ ಹಂಸೆಗಳ ಕಥೆಯನ್ನು ಕೇಳಿದುದರಿಂದಲೂ, ಅದರ ಹೃದಯದಲ್ಲಿ, ಮಯೂರಾಂಡರಸದಲ್ಲಿ ಬೆಳೆಯುವ ಮಯೂರದಂತೆ, ತಾನೂ ಬ್ರಹ್ಮಹಂಸವಾಗ ಬೇಕೆಂಬ ಆಸೆಯು ಬೆಳೆಯಿತು.

೩೬. ಅದನ್ನೇ ಕುರಿತು ಚಿಂತಿಸುತ್ತಾ ಯಾವುದೋ ಒಂದು ವ್ಯಾಧಿಯಿಂದ ಸತ್ತು, ಮೂರುಹೊತ್ತೂ ಬ್ರಹ್ಮಹಂಸವನ್ನೇ ಧ್ಯಾನಿಸುತ್ತಿದ್ದುದರಿಂದ, ಬ್ರಹ್ಮಹಂಸೆಯೇ ಆಯಿತು.

ತತ್ರಾತಿ ಸಂತತವಿವೇಕವತೋ ವಿಲಾಸೈಃ
ಸಂಬೋಧಿತೋ ವಿಗತಲೌಕಿಕವಸ್ತುದೃಷ್ಟಿಃ ||
ಮುಕ್ತಃ ಸ್ಥಿತೋ ನನು ಯುಗಾಂತವಿಧೌ ವಿದೇಹ
ಮುಕ್ತೇನ ತೇನ ಕಿಮು ಭಾವಿ ವಿಭಾವ್ಯಮೇತತ್ || ३೭ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಜೀವಟೋಪಾಖ್ಯಾನೇ ಸ್ವಪ್ನಶತರುದ್ರೀಯೇ
" ಭಿಕ್ಷುಸಂಸಾರೋದಾಹರಣಂ " ನಾಮ ದ್ವಿಷಷ್ಟಿತಮಃ ಸರ್ಗಃ

---

३೭. ಆ ಬ್ರಹ್ಮಹಂಸೆಯು ಆ ಬ್ರಹ್ಮಲೋಕದಲ್ಲಿ ಸಂತತವಾಗಿ ನಡೆದ ವಿವೇಕಾದಿಗಳ ಶ್ರವಣಗಳಿಂದ ಜ್ಞಾನವನ್ನು ಪಡೆದು ಲೌಕಿಕ (ಪ್ರಾತಿಭಾಸಿಕ) ವಸ್ತುದೃಷ್ಟಿಯನ್ನು ಬಿಟ್ಟು, ಮುಕ್ತನಾಗಿ ಇದ್ದುಕೊಂಡಿದ್ದು ಯುಗ ಪ್ರಲಯ ಕಾಲದಲ್ಲಿ ಬ್ರಹ್ಮನೊಡನೆ ತಾನೂ ವಿದೇಹ ಮುಕ್ತಿಯನ್ನು ಪಡೆಯಿತು. ಇದನ್ನು ಪರ್ಯಾಲೋಚಿಸುವುದಕ್ಕಿಂತ ಇನ್ನೇನು ತಾನೇ ಆಗಬೇಕು ?

(ಬ್ರಹ್ಮಣಾಸಹ ತೇಸರ್ವಂ ಸಂಪ್ರಾಪ್ತೇ ಪ್ರತಿಸಂಚತೀ । ಪರಸ್ಯಾಂತೇ ಕೃತಾತ್ಮಾನಃ ಪ್ರವಿಶಂತಿ ಪರಂ ಪದಂ || ಇತಿ ಶ್ರುತೇಃ

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ ಸ್ವಪ್ನಶತರುದ್ರೀಯದಲ್ಲಿ "ಭಿಕ್ಷುಸಂಸಾರೋದಾಹರಣ" ಎಂಬ
ಅರವತ್ತೆರಡನೆಯ ಸರ್ಗವು

ತ್ರಿಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಸ ಕದಾಚಿದ್ದದರ್ಶಾಥ ರುದ್ರ ರುದ್ರಪುರೇ ಖಗಃ ।
ವೈರಿಂಚನಲಿನೀನಾಲ ಲೀಲಾಲಾಭೇನ ಲೀಲಯಾ ॥ ೧ ॥

ತತ್ರ ಬುದ್ಧಿರಭೂತ್ತಸ್ಯ ರುದ್ರೋಽಹಮಿತಿ ನಿಶ್ಚಿತಾ ।
ಪ್ರತಿಬಿಂಬವದಾದರ್ಶೇ ದ್ರಾಗಿತ್ಯೇವ ಹಿ ಬಿಂಬತಾ ॥ ೨ ॥

ಅರವತ್ತಮೂರನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಆ ಹಂಸವು ಪದ್ಮಜನ ಆಸನವಾದ ಕಮಲನಾಲದ ಬಳಿಯಲ್ಲಿ ಆಡುವ ಭಾಗ್ಯವನ್ನು ಪಡೆದಿತ್ತಾಗಿ ಸುಲಭವಾಗಿ ಒಮ್ಮೆ ತನ್ನೊಡೆಯನ ಜೊತೆಯಲ್ಲಿ ರುದ್ರಪುರಕ್ಕೆ ಹೋಗಿದ್ದು ಅಲ್ಲಿ ರುದ್ರದರ್ಶನವನ್ನು ಮಾಡಿತು.

೨. ಅಲ್ಲಿ ಅದಕ್ಕೆ, ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದ ಹಾಗೆಯೇ ಪ್ರತಿಬಿಂಬವು ಕಾಣಿಸುವಂತೆ, ರುದ್ರದರ್ಶನವಾಗುತ್ತಿದ್ದ ಹಾಗೇಯೇ ನಾನೂ ರುದ್ರನೇ ಆಗಬೇಕೆಂಬ ನಿಶ್ಚಯುವು ಹುಟ್ಟಿತು.

(ನನು ಜೀವನ್ಮುಕ್ತಸ್ಯ ನಿರ್ವಾಸನಸ್ಯ ಹಂಸಸ್ಯ ಕಥಂ ರುದ್ರತ್ವಸ್ಪೃಹಾ? ತದ್ಭಾವನಾಭ್ಯಾಸೇನ ದೇಹತ್ಯಾಗೇನ ಪುನಾ ರುದ್ರಶರೀರ ಧಾರಣಂಚ? ಯದಿತು "ಭರತಸ್ಯ ತ್ರಿಜನ್ಮಭಿಃ" ಇತಿ ನ್ಯಾಯೇನ ತಸ್ಯ ನಾನಾದೇಹಭೋಗ ಪ್ರಾರಬ್ಧ ಶೇಷಾತ್ ದೇಹಾಂತರಧಾರಣಂ ತರ್ಹಿ ರುದ್ರಾಹಂಭಾವಧಾರಣ ವರ್ಣನಸ್ಯ ಅನುಪಯೋಗ ಪ್ರಸಂಗಾತ್ । ರುದ್ರಸ್ಯೇಶ್ವರತಯಾ ತದ್ಭಾವಸ್ಯ ಕರ್ಮಫಲತ್ವಾಯೋಗಾಚ್ಚೇತಿ ಚೇತ್, ತತ್ರಾಹ-ಪ್ರತಿಬಿಂಬವದಿತಿ । ನಾಯಂಮುಖ್ಯೋಽರುದ್ರಭಾವಃ । ಕಿಂತು ಪ್ರತಿಬಿಂಬವತ್ ತತ್ಸಾರೂಪ್ಯ ಮುಕ್ತಿಃ ಸಾಚಕರ್ಮೋಪಾಸ್ತಿ

ರುದ್ರಭೂತವಪುಸ್ತತ್ರ ತನುಂ ತತ್ಯಾಜ ತಾಮಸೌ ।
ಗಂಧಃ ಪವನತಾಂ ಗಚ್ಛನ್ಕುಸುಮಸ್ತಬಕಂ ಯಥಾ ॥ ૩ ॥

ಸ ರುದ್ರೋ ರುದ್ರಭವನೇ ವಿಜಹಾರ ಯಥೇಚ್ಛಯಾ ।
ತೈಸ್ತೈಃ ಶಿವಪುರಾಚಾರ್ಯೈರ್ಗಣಕೋಟಿಗರಿಷ್ಠಯಾ ॥ ೪ ॥

ರುದ್ರಸ್ತ್ವನುತ್ತಮಜ್ಞಾನವಿಲಾಸೈಕತಯಾ ತಯಾ ।
ಸ್ವಮಶೇಷಂ ಚ ವೃತ್ತಾಂತಮಪಶ್ಯತ್ಪ್ರಾಕ್ತನಂ ಧಿಯಾ ॥ ೫ ॥

ನಿರಾವರಣವಿಜ್ಞಾನವಪುಃ ಸ ಭಗವಾಂಸ್ತದಾ ।
ಉವಾಚ ಸ್ವಯಮೇಕಾಂತೇ ಸ್ವಪ್ನಶತವಿಸ್ಮಿತಃ ॥ ೬ ॥

ಅಹೋ ನು ಚಿತ್ರಾ ಮಾಯೇಯಂ ತತಾ ವಿಶ್ವವಿಮೋಹಿನೀ ।
ಅಸತ್ಯೇವಾಪಿ ಸದ್ರೂಪಾ ಮರುಭೂಮಿಷು ವಾರಿವತ್ ॥ ೭ ॥

ಫಲಂ ಭವತ್ಯೇವ–ದೇವೋಭೂತ್ವಾ ದೇವಾನಪ್ಯೇತಿ ಇತಿ ಶ್ರುತೇರಿತಿ ಭಾವಃ —ತಾ. ಪ್ರ.)

೩. ಅಲ್ಲಿ. ಪರಿಮಳವು ಗಾಳಿಯಲ್ಲಿ ಬೆರೆತು ಹೋಗಿ ಕುಸುಮಮಂಜರಿಯನ್ನು ಬಿಡುವಂತೆ, ಆ ಹಂಸವು ರುದ್ರ ದೇಹವನ್ನು ಧರಿಸಿ, ತನ್ನ ದೇಹವನ್ನು ಬಿಟ್ಟುಬಿಟ್ಟಿತು-

೪. ಆ ರುದ್ರನು ರುದ್ರ ಮಂದಿರದಲ್ಲಿ ಯಥೇಚ್ಛವಾಗಿ, ಶಿವಪುರದಲ್ಲಿರುವ ಆಚಾರಗಳಿಂದ ಗಣಕೋಟಿಗಳೊಡನೆ ವಿಹರಿಸುತ್ತಿದ್ದನು.

೫. ಆ ರುದ್ರನು ರುದ್ರರೂಪಸಾಮ್ಯದಿಂದ ಅನುತ್ತಮವಾದ ಜ್ಞಾನಾದಿಗಳನ್ನುಳ್ಳವನಾಗಿ, ವಿವೇಕಯುಕ್ತವಾದ ಬುದ್ಧಿಯಿಂದ ತನ್ನ ಹಿಂದಿನ ವೃತ್ತಾಂತವನ್ನೆಲ್ಲ ಕಂಡನು.

೬. ಭಗವಂತನಾದ ರುದ್ರನು, ಅಜ್ಞಾನ ಸಂಪರ್ಕವಿಲ್ಲದ ಶುದ್ಧ ಸ್ವರೂಪನಾಗಿದ್ದುಕೊಂಡು, ತನ್ನೊಳಗೆ ತಾನೇ, ತನ್ನ ನೂರಾರು ಕನಸಿಗಳಿಗಾಗಿ ಆಶ್ಚರ್ಯಪಟ್ಟುಕೊಳ್ಳುತ್ತಾ ಹೀಗೆ ಹೇಳಿಕೊಂಡನು.

೭. ಅಹಹಾ ! ಈ ಮಾಯೆಯು ಎಂತಹ ವಿಚಿತ್ರವಾದುದು ! ವಿಶ್ವವನ್ನೇ

ಇತಿ ಪ್ರಥಮಮಜ್ಞಾತಂ ಚಿದ್ಯೋಽಹಂ ಚಿತ್ತತಾಂ ಗತಃ ।
ಸರ್ವಸಂಪನ್ನಸರ್ವಜ್ಞ ಗಗನಾದಿ ವಿಭಾವನಾತ್ ॥ ೮ ॥

ಯದೃಚ್ಛಯಾ ಸ್ಥಿತೋ ಜೀವೋ ಭೂತತನ್ಮಾತ್ರರಂಜಿತಃ ।
ಕಸ್ಮಿಂಶ್ಚಿದಭವತ್ಸರ್ಗೇ ಭಿಕ್ಷುರಕ್ಷುಭಿತೋಽಭಿತಃ ॥ ೯ ॥

ಮೋಹಗೊಳಿಸಬಲ್ಲುದಲ್ಲಾ ! ಮರುಭೂಮಿಯಲ್ಲಿ ಕಾಣಿಸುವ ನೀರಿನಂತೆ, ಅಸತ್ಯವೇ ಆಗಿದ್ದರೂ ಸತ್ಯವಾಗಿರುವಂತೆ ತೋರುವುದಲ್ಲಾ !

೮. ಆ ! ಈಗ ನೆನಪಾಯಿತು. ಮೊದಲು ಚಿತ್ ಆಗಿದ್ದುದು ಯಾವುದೋ ಅದೇ ಚಿತ್ತವಾಯಿತು. ಸರ್ವ ಸಂಪನ್ನನೂ ಸರ್ವಜ್ಞನೂ ಆಗಿದ್ದರೂ ಇದು ಗಗನ ಎಂದು ಮೊದಲಾಗಿ ವಿಭಾವನ ಮಾಡಿದುದರಿಂದ ಹೀಗೆ ಚಿತ್ತವಾಗಬೇಕಾಯಿತು.

(ಅಹಂ ಪ್ರಥಮಂ ಪ್ರಾಕ್ತನ ಪಾರಮಾರ್ಥಿಕ ಸ್ಥಿತ್ಯಾ ಚಿದೇವ । ತತೋ ಮಾಯಯಾ ಚಿತ್ತತಾಂ "ಬಹುಸ್ಯಾಂ ಪ್ರಜಾಯೇಯ" ಇತಿ ಸರ್ಗ ಸಂಕಲ್ಪ ವೃತ್ತಿತಾಂಗತ ಇತ್ಯಾದಿ ಇದಂ ಅಜ್ಞಾತಂ ಸ್ಮೃತ ಇತ್ಯರ್ಥಃ । ತಾದೃಶ ಸಂಕಲ್ಪಾ ದೇವ ಅಹಂ ಸರ್ವಸಂಪನ್ನಃ ಸನ್, ಚಿದಂಶೇ ಸರ್ವಜ್ಞಃ, ಜಡಾಂಶೇ ಗಗನಾದಿ ವಿಭಾಗವಾನ್, ಚ, ಜಾತ ಇತ್ಯರ್ಥಃ —ತಾ. ಪ್ರ.)

೯. ಅಕಾರಣವಾಗಿಯೇ ಸ್ಥೂಲಸೂಕ್ಷ್ಮ ಭೂತಾಂಶಗಳಿಂದ ಕೂಡಿ, (ಸ್ಥೂಲಭೂತಾಂಶಗಳಿಂದ ಆದ ದೇಹ ಸೂಕ್ಷ್ಮ ಭೂತಾಂಶಗಳಿಂದ ಆದ ಅಂತಃ ಕರಣ ಇವುಗಳಿಂದ ಕೂಡಿ) ಜೀವನಾಗಿ, ಯಾವುದೋ ಒಂದು ಸರ್ಗದಲ್ಲಿ ಯಾವ ರೀತಿಯಿಂದಲೂ ವಿಷಯಾದಿಗಳಿಂದ ವಿಕಾರಗಳನ್ನು ಪಡೆಯದ ಭಿಕ್ಷುವಾಗಿ ದ್ದೆನು.

(ತತೋ ಯದೃಚ್ಛಯಾ ವ್ಯಷ್ಟಿ ಸಮಷ್ಟಿ ಲಿಂಗ ಸ್ಥೂಲ ದೇಹೇ, ಚಿದಾ ಭಾಸಾತ್ಮನಾ ಅನುಪ್ರವೇಶೇ, ಭೂತೈಃ ಸ್ಥೂಲೈಃ, ತನ್ಮಾತ್ರೈಃ ಸೂಕ್ಷ್ಮೈಶ್ಚ ತೈರ್ದೇಹೈಃ ತಾದಾತ್ಮ ಸಂಸರ್ಗಾಧ್ಯಾಸೇನ ತದ್ಗತವಾಸನಾ ವೈಚಿತ್ರ್ಯೈಃ ಚಿತ್ರ ಪಟ ಇವರಂಜಿತಃ ಸನ್, ಜೀವೋ ಭೂತ್ವಾಹಂ ಸ್ಥಿತಃ । ಸ ಚ ಜೀವಃ ಅನಾದಿ ಕಾಲಾತ್ ಜನ್ಮಪರಂಪರಾಂ ಅನುಭವನ್ । ಕಸ್ಮಿಂಶ್ಚಿತ್ಸರ್ಗೇ ವೈರಾಗ್ಯ ಸಮಾಧಿ

ತೇನಾವಯವಬಂಧೇನ ಬಹಿಃ ಸ್ವೈರವಿಹಾರಿಣೀ ।
ಲೀಲಾ ವಿಲುಲಿತಾಕಾರಾ ಯದಾ ರಮ್ಯೇತಿ ಭಾವತಃ ॥ ೧೦ ॥

ಸರ್ವಭಾವೋಪಮರ್ದೇನ ತದಭ್ಯಾಸವಶಾತ್ತದಾ ।
ತಾಮೇವ ಸೋಽನ್ವಭೂದ್ಭಿಕ್ಷುಸ್ತ್ಯಕ್ತ್ವಾನ್ಯಂ ಮನನೋದಯಂ ॥ ೧೧ ॥

ಚಮತ್ಕೃತಿಶ್ಚೇತಸಿ ಯಾ ರೂಢಾ ಸೈವ ವಿಜೃಂಭತೇ ।
ವಲ್ಲೀ ತ್ಯಜತಿ ನೈದಾಘೀ ಪೀತಮಪ್ಯಂಬು ಮಾಧವಂ ॥ ೧೨ ॥

ಪಾಟವಾದಭಿತೋ ವಿಷಯೈರಕ್ಷ್ನಭಿತೋ ಭಿಕ್ಷ್ನಂ ಪರಿವ್ರಾಡಭವತ್ —ತಾ. ಪ್ರ.)

೧೦. ಆ ಭಿಕ್ಷುವು ಹಠಯೋಗಾದಿಗಳಿಂದ ದೇಹವನ್ನು ಬಂಧಿಸಿ, ಉಪಾಸನಾದಿಗಳಿಂದ ದೊರೆಯುವ ದೇವದರ್ಶನಾದಿಗಳನ್ನು ಕಂಡು, ಇದೇ ಚೆನ್ನೆಂದು ಭಾವಿಸಿಕೊಂಡು ಯಥೇಚ್ಛವಾಗಿ ಕ್ರೀಡಿಸುತ್ತಿದ್ದನು.

೧೧. ಮಿಕ್ಕೆಲ್ಲ ಭಾವಗಳನ್ನೂ ತುಳಿದು ಆತನು ಹೀಗೆ ಹಠಯೋಗದಲ್ಲಿರಲು, ಅಭ್ಯಾಸವಶದಿಂದ ಆ ಭಿಕ್ಷುವು ಬೇರೆ ಏನನ್ನೂ ಯೋಚಿಸದೆ, ಆ ಮಾನಸ ಪೂಜಾದಿ ಲೀಲೆಗಳಲ್ಲಿಯೇ ಮಗ್ನನಾಗಿದ್ದನು.

೧೨. ಮನಸ್ಸಿನಲ್ಲಿ ಹಲವು ಭಾವಗಳು ಮೂಡಿದರೆ, ಯಾವುದು ರೂಢವಾಗುವುದೋ ಅದೇ ಬೆಳೆಯುವುದು. ನೀರುಹಾಕಿ ಚೆನ್ನಾಗಿ ಬೆಳೆಸಿದ್ದ ಬಳ್ಳಿಯೂ ಕೂಡ ಬಿಸಿಲು ತಗಲಿದರೆ ಒಣಗಿಹೋಗುವುದಲ್ಲವೆ ?

(ರೂಢಯಾ ಉತ್ತರ ಚಮತ್ಕೃತ್ಯಾ ರೂಢಾಯಾ ಅಪಿ ಪೂರ್ವ ಚಮತ್ಕೃತೇಃ ಉಪಮರ್ದೇ ದೃಷ್ಟಾಂತಮಾಹ-ವಲ್ಲೀತಿ । ನೈದಾಘೀ ನಿದಾಘೋಷ್ಣ ಚಮತ್ಕೃತಿ ವ್ಯಾಪ್ತಾ ವಲ್ಲೀ ಮಾಧವಂ ವಸಂತಕಾಲಿಕಂ ಪೀತಮಪ್ಯಂಬು ಹರಿತ ಭಾವ ಚಮತ್ಕಾರಂ ತ್ಯಜತಿ ಶುಷ್ಯತೀತಿ ಯಾವತ್ —ತಾ. ಪ್ರ.)

ಸ ಭಿಕ್ಷುರ್ಜೀವಟೋ ಭೂತ್ವಾ ಜಂತುರ್ಜರಠವಾಸನಃ ।
ತೇಷು ದೇಹೇಷು ಬಭ್ರಾಮ ರಂಧ್ರೇಷ್ವಿವ ಪಿಪೀಲಿಕಾ ॥ ೧೩ ॥

ಆತ್ಮನಿ ದ್ವಿಜಭಕ್ತತ್ವಾತ್ಸೋಽಪಶ್ಯದ್ದ್ವಿಜತಾಮಥ ।
ಭಾವಾಭಾವವಿಪರ್ಯಾಸೇ ಬಲವಾನೇವ ವರ್ಧತೇ ॥ ೧೪ ॥

ಸಾಮಂತತಾಮವಾಪಾಸೌ ವಿಪ್ರಃ ಸಂತತಚಿಂತಿತಾಂ ।
ಸಾತತ್ಯೇನ ರಸಃ ಪೀತಃ ಫಲತಾಮೇತಿ ಪಾದಪೇ ॥ ೧೫ ॥

ರಾಜ್ಯಾರ್ಥಂ ಧರ್ಮಕಾರ್ಯಾಣಾಂ ಕರ್ತೃತ್ವಾತ್ಸೋಽಭವನ್ನೃಪಃ ।
ಸ ಕಾಮುಕತಯಾ ರಾಜಾ ಸುರಸ್ತ್ರೀತ್ವಮವಾಪಹ ॥ ೧೬ ॥

---

೧೩. ಆ ಭಿಕ್ಷುವು ಜೀವಟನಾಗಿ ಪ್ರಬಲವಾಸನಾವಶನಾಗಿ ಇರುವೆಯು ರಂಧ್ರಗಳಲ್ಲಿ ಓಡಾಡುವಂತೆ, ದೇಹ ದೇಹಾಂತರಗಳಲ್ಲಿ ಸುತ್ತಿದನು.

(ತಸ್ಯೈವ ಸಿದ್ಧಸ್ಯಾಪಿ ಅಶಾಸ್ತ್ರೀಯ ಮಾನಸ ಖೇಲನ ಪ್ರವೃತ್ತೌ ಅನರ್ಥ ಪರಂಪರೋದಯೋಽಭೂದಿತ್ಯಾಹ–ಜರಠವಾಸನ ಇತ್ಯನೇನ ಶಾಸ್ತ್ರೀಯ ವಾಸನಾ ಶೈಥಿಲ್ಯೇ ಅನಾದ್ಯನರ್ಥ ವಾಸನೋದ್ಭವಃ, ಅವಶ್ಯಂ ಭಾವಿ ಇತಿ ಸೂಚ್ಯತೇ —ತಾ. ಪ್ರ.)

೧೪. ಆ ಭಿಕ್ಷುವು ಬ್ರಾಹ್ಮಣರಲ್ಲಿ ವಿಶ್ವಾಸವುಳ್ಳವನಾಗಿದ್ದನು. ಅದರಿಂದ ಅವನು ಬ್ರಾಹ್ಮಣನೇ ಆದನು. ಭಾವ, ಅಭಾವ, ಇವೆರಡು ವಾಸನಾ ಸಮೂಹ ಗಳಲ್ಲಿ ಯಾವುದು ಬಲವಾಗಿದ್ದರೆ ಅದೇ ಗೆಲ್ಲುವುದು.

೧೫. ಆ ಬ್ರಾಹ್ಮಣನು ಯಾವಾಗಲೂ ಸಾಮಂತರನ್ನು ಕುರಿತು ಚಿಂತಿಸುತ್ತನಾದ್ದರಿಂದ ಅವನೂ ಸಾಮಂತನೇ ಆದನು. ಮರವು ಸತತವಾಗಿ ಕುಡಿಯುವ ನೀರು ಫಲವಾಗಿ ಪರಿಣಮಿಸುವುದಲ್ಲವೆ?

೧೬. ಆ ಸಾಮಂತನು ರಾಜ್ಯಪಾಲನಾರ್ಥವಾಗಿ ಧರ್ಮಕಾರ್ಯಗಳನ್ನು ಮಾಡುತ್ತಿದ್ದುದರ ಫಲವಾಗಿ ನರಪತಿಯಾದನು. ನರಪತಿಯು ಕಾಮುಕನಾಗಿದ್ದುದರಿಂದ ದಿವ್ಯಸ್ತ್ರೀಯಾದನು.

ಲೋಲಾ ಲೋಚನಲೋಭೇನ ಸಾ ಮೃಗೀ ರಸಶಾಲಿನೀ ।
ಬಭೂವ ವಾಸನಾಮೋಹಶ್ಚಾಹೋ ದುಃಖಾಯ ಜಂತುಷು ॥ ೧೭ ॥

ಮೃಗೀ ಸಾ ಬತ ಚಿತ್ತಸ್ಥಾ ಬಭೂವ ವಿಪಿನೇ ಲತಾ ।
ಅವಶ್ಯಂ ಭಾವಿ ಲವನಂ ಲತಿಕಾನುಬಭೂವ ಹ ॥ ೧೮ ॥

ಅಂತಃ ಸಂಜ್ಞಾ ಚಿರಾಭ್ಯಸ್ತಂ ಭ್ರಮರತ್ವಮಥಾತ್ಮನಿ ।
ಸಾಪಶ್ಯತ್ಸಾವಮರ್ದೇನ ಸದಾ ತದ್ಭಾವಭಾವಿತಾ ॥ ೧೯ ॥

ಸವಾರಣಖುರಕ್ಷೋದಮನುಭೂಯಾಥ ಭಾವಿತಂ ।
ಭೂಯೋಭೂಯಃ ಪ್ರಬಭ್ರಾಮ ಮಹಾಸಂಸೃತಿಸಂಭ್ರಮಾನ್ ॥ ೨೦ ॥

---

೧೭. ಭೋಗಪರಾಯಣಳಾದ ಅವಳು ಹರಿಣಗಳ ಕಣ್ಣುಗಳಲ್ಲಿ ಬಹಳ ಆಸಕ್ತಿಯುಳ್ಳವಳಾಗಿದ್ದು ತಾನೂ ಹರಿಣಿಯೇ ಆದಳು. ಯಾವುದಾದರೂ ಒಂದರಲ್ಲಿ ಹೆಚ್ಚು ಅಭಿಮಾನ ಇಟ್ಟುಕೊಂಡು ವಾಸನಾ ಮೋಹಕ್ಕೆ ಸಿಕ್ಕಿದರೆ ಯಾವ ಜಂತುವೇ ಆದರೂ ದುಃಖವನ್ನು ಅನುಭವಿಸಬೇಕಾಗುವುದು.

೧೮. ಆ ಹರಿಣಿಯು ತನ್ನ ಮನಸ್ಸಿನಲ್ಲಿ ಲತೆಯನ್ನು ಕುರಿತು ಚಿಂತಿಸುತ್ತಿತ್ತಾಗಿ ತಾನು ಒಂದು ಕಾಡಿನಲ್ಲಿ ಲತೆಯೇ ಆಯಿತು. ಲತೆಯಾದ ಮೇಲೆ ಯಾವೊತ್ತಾದರೂ ಒಂದು ದಿನ ಅವಶ್ಯವಾಗಿ ಆಗಲೇಬೇಕಾಗಿದ್ದ ಕತ್ತರಿಸುವಿಕೆಯನ್ನು ಆ ಲತೆಯು ಅನುಭವಿಸಿತು.

೧೯. ಆ ಲತೆಯು ತನ್ನ ಮನಸ್ಸಿನಲ್ಲಿ ಭ್ರಮರವನ್ನು ಕುರಿತು ಬಹಳವಾಗಿ ಚಿಂತಿಸುತ್ತಿದ್ದುದರಿಂದ, ಯಾವಾಗಲೂ ಧ್ಯಾನಿಸುತ್ತಿದ್ದ ಭ್ರಮರತ್ವವನ್ನು ಹೊಂದಿತು. ಆ ಭ್ರಮರತ್ವವನ್ನು ಹೊಂದುವಾಗ ಲತೆಯು ತನಗಾದ ಛೇದವನ್ನು ಧ್ಯಾನಿಸುತ್ತಿತ್ತು.

೨೦. ಅದರಿಂದ ಆನೆಯ ಕಾಲಿಗೆ ಸಿಕ್ಕಿ ಹತವಾಗುವಿಕೆಯನ್ನು ತಾನು ಭಾವಿಸಿಕೊಂಡಿದ್ದಂತೆಯೇ, ಪದೇ ಪದೇ ಅನುಭವಿಸುತ್ತಾ ಮಹಾ ಸಂಸಾರದಲ್ಲಿ ಸಿಕ್ಕಿಕೊಂಡು ತೊಳಲಿತು.

ಸಂಸಾರಶತಪರ್ಯಂತೇ ರುದ್ರಃ ಸೋಹಮಹಂ ಸ್ಥಿತಃ ।
ಅಸ್ಮಿನ್ಸಂಸಾರಸಂರಂಭೇ ಸ್ವಮನೋಮಾತ್ರ ಸಂಭ್ರಮೇ　　॥ ೨೧ ॥

ಏವಮತ್ಯಂತಚಿತ್ರಾಸು ಸಂಸಾರಾರಣ್ಯಭೂಮಿಷು ।
ಬಹ್ವೀಷ್ವಹಮತಿ ಭ್ರಾಂತಸ್ತ್ವಶೂನ್ಯಸ್ವಿವ ಭೂರಿಶಃ　　॥ ೨೨ ॥

ಕಸ್ಮಿಂಶ್ಚಿದಭವಂ ಸರ್ಗೇ ತ್ವಹಂ ಜೀವಟನಾಮಕಃ ।
ಕಸ್ಮಿಂಶ್ಚಿದ್ಬ್ರಾಹ್ಮಣಶ್ರೇಷ್ಠಃ ಕಸ್ಮಿಂಶ್ಚಿದ್ವಸುಧಾಧಿಪಃ　　॥೨೩॥

ಹಂಸಃ ಪದ್ಮವನೇ ಭೂತ್ವಾ ವಿಂಧ್ಯಕಚ್ಛೇ ಚ ವಾರಣಃ ।
ಹರಿಣೋ ದೇಹಯಂತ್ರಾದೌ ದಶಾಮಹಮಿಮಾಂ ಗತಃ　　॥ ೨೪ ॥

(ಭೂಯೋಭೂಯ ಇತ್ಯನೇನ ಅಂತರಾಲಿಕಾನಿ ವಾರಣ, ಅಲಿ, ಹಂಸಾದೀನಿ ನವತಿ ಜನ್ಮಾನಿ (೯೦) ಸ್ಮೃತಾನಿ ಉಚ್ಯಂತೇ　—ತಾ. ಪ್ರ.)

೨೧. ಹೀಗೆ, ಮನಸ್ಸು ಮಾಡುವ ಭ್ರಾಂತಿಗಳ ರೂಪವಾಗಿರುವ ಈ ಸಂಸಾರ ಚಕ್ರವಲ್ಲಿ ಒಂದುನೂರುಸಲ ಜನ್ಮಗಳನ್ನೆತ್ತಿ ಆಗ ಭಿಕ್ಷುವಾಗಿದ್ದ ನಾನೇ ಈಗ ರುದ್ರನಾಗಿರುವೆನು.

೨೨. ಹೀಗೆ ಅತ್ಯಂತ ಚಿತ್ರವಾಗಿ, ಸಂಸಾರವೆಂಬ ಲೆಕ್ಕವಿಲ್ಲದಷ್ಟು ಅರಣ್ಯಭೂಮಿಗಳಲ್ಲಿ ನಾನು ನಾನು ಎಂದು, ಅವುಗಳೆಲ್ಲ ಸತ್ಯವೆಂದುಕೊಂಡೇ ಭ್ರಾಂತಿಯಿಂದ ಬೇಕಾದ ಹಾಗೆ ತಿರುಗಿದೆನು.

(ಅಶೂನ್ಯಾಸು ಸತ್ಯಾಸು ಇವ ಭೂತಾಸು　—ತಾ. ಪ್ರ.)

೨೩. ಯಾವುದೋ ಒಂದು ಕಲ್ಪದಲ್ಲಿ ನಾನು ಜೀವಟನಾಗಿದ್ದೆನು. ಇನ್ನೊಂದರಲ್ಲಿ ಬ್ರಾಹ್ಮಣ ಶ್ರೇಷ್ಠನಾಗಿದ್ದೆನು. ಮತ್ತೊಂದರಲ್ಲಿ ವಸುಧಾಧಿಪತಿಯಾಗಿದ್ದೆನು.

೨೪. ಪದ್ಮವನದಲ್ಲಿ ಹಂಸವಾಗಿದ್ದು ವಿಂಧ್ಯಾಟವಿಯಲ್ಲಿ ವಾರಣವಾಗಿದ್ದು, ಹರಿಣವಾಗಿದ್ದು, ದೇಹಯಂತ್ರಗಳಲ್ಲಿ ದುಡಿದು ಈಗ ಈ ರುದ್ರತ್ವವನ್ನು ಹೊಂದಿರುವೆನು.

(ದೇಹಯಂತ್ರೇ ಆದಿಪರಾರ್ಧೇ ಮನೋಯಂತ್ರೇ ಚ　—ತಾ. ಪ್ರ.)

ಅತ್ರ ವರ್ಷಸಹಸ್ರಾಣಿ ಚತುರ್ಯುಗಶತಾನಿ ಚ ।
ಸಮತೀತಾನ್ಯನಂತಾನಿ ದಿನರ್ತುಚರಿತಾನಿ ಚ || ೨೫ ||

ಮಮ ಪ್ರಥಮಮೇವ ಪ್ರಾಕ್ಚಲಿತಸ್ಯ ಪರಾತ್ಪದಾತ್ || ೨೬ ||

ತತ್ತ್ವಜ್ಞಾನಿತಯಾ ರೂಢೋ ಭಿಕ್ಷುತ್ವೇ ಯೋಗ್ಯತಾಕ್ರಮಃ ।
ಭೂಯೋಭೂಯೋಽಪ್ಯತಿಕ್ರಮ್ಯ ಗತಶ್ಚ ಬ್ರಹ್ಮಹಂಸತಾಂ ।
ಸ ಏವ ಪ್ರಾಕ್ತನೋಽಭ್ಯಾಸಃ ಫಲಿತಃ ಸಂಗಮೋದಯಾತ್ || ೨೭ ||

ದೃಢಾಭ್ಯಾಸೋ ಯ ಏವಾಸ್ಯ ಜೀವಕಸ್ಯೋದೇತ್ಯವಿಘ್ನತಃ ।
ಸೋಽತ್ಯಂತಮರಸೇನಾಪಿ ತಮೇವಾಶ್ವನುಧಾವತಿ || ೨೮ ||

೨೫-೨೬. ಪರಮಪದದಿಂದ ಮೊದಲು ಚಲಿಸಿದ ಕಾಲದಿಂದ ಈ ರುದ್ರನಾಗುವವರೆಗೆ, ದಿನ, ಋತು, ಎಂದು ಲೆಕ್ಕಮಾಡಿ, ನೋಡಿದರೆ, ಸಾವಿರಾರು ವರ್ಷಗಳು, ನೂರಾರು ಚತುರ್ಯುಗಗಳು, ಅನಂತವಾಗಿ ಕಳೆದುಹೋದುವು.

೨೭. ಭಿಕ್ಷುವಾಗಿದ್ದಾಗ ತತ್ತ್ವಜ್ಞಾನಿಯಾಗಿ ಸಂಪಾದಿಸಿಕೊಂಡಿದ್ದ ಯೋಗ್ಯತೆಯು ಪದೇ ಪದೇ ಮುಗ್ಗರಿಸುತ್ತಿದ್ದರೂ ನನ್ನನ್ನು ಬ್ರಹ್ಮಹಂಸನನ್ನು ಮಾಡಿ, ಈಗ ರುದ್ರದರ್ಶನವಾಗುತ್ತಲೂ ಫಲವಾಗಿ, ಈಗ ಆ ಮೊದಲಿನ ಅಭ್ಯಾಸದ ಫಲವಾಗಿ ರುದ್ರನಾಗಿರುವೆನು.

೨೮. ಹಾಗೆ ಆಗ ದೃಢವಾಗಿ ಮಾಡಿದ್ದ ಅಭ್ಯಾಸವು ಈ ಜೀವನಿಗೆ ಎಷ್ಟೆಷ್ಟೋ ವಿಘ್ನಗಳು ಅ-ರಸ ರೂಪವಾಗಿ ಬಂದು ಅಡ್ಡಿ ಮಾಡಿದ್ದರೂ ಅವೆಲ್ಲವನ್ನೂ ದಾಟಿಸಿ ತನ್ನ ಕಡೆಗೇ ಎಳೆದುಕೊಂಡು ಹೋಗುತ್ತಿರುವುದು.

(ಅತ ಏವ ಶಾಸ್ತ್ರೀಯ ಸಾಧನಾಭ್ಯಾಸೋ ಜ್ಯಾಯಾನ್ ಯೋಽವಿರುದ್ಧೈಃ ಅನೇಕ ಜನ್ಮಭಿಃ ವ್ಯವಹಿತೋಽಪಿ ಪುನರುದ್ಭೂಯ ಪುರುಷಾರ್ಥಂ ಸಾಧಯತ್ಯೇವ ಇತ್ಯಾಹ—ಅತ್ಯಂತಂ ಅರಸೇನ ಜನ ಸಹಸ್ರೇಣ ವ್ಯವಹಿತೋಽಪೀತಿ ಶೇಷಃ —ತಾ. ಪ್ರ.)

ಕಾಕತಾಲೀಯಯೋಗೇನ ಕಾದಾಚಿತ್ಸಾಧುಸಂಗಮಾತ್ ।
ಅಶುಭೋ ಭಾವನಾಭ್ಯಾಸೋ ಜೀವಸ್ಯ ವಿನಿವರ್ತತೇ ॥ ೨೯ ॥

ಸಂಗತ್ಯಧಿಗತಂ ಚೈಷ ಕೇವಲಂ ಸ್ವೋದಯಂ ಪ್ರತಿ ।
ಪ್ರಾಕ್ತನೋ ವಾಸನಾಭ್ಯಾಸೋ ಹಾತುರುದ್ಯಮಿಮಿಾಕ್ಷತೇ ॥ ೩೦ ॥

ಯಚ್ಚೇಹಾಭ್ಯಸ್ಯತೇಽಜಸ್ರಂ ಯಚ್ಚ ದೇಹಾಂತರೇಽಪಿ ಚ ।
ಜಾಗ್ರತ್ಸ್ವಪ್ನೇಷ್ವಸದಪಿ ತತ್ಸದಿತ್ಯನುಭೂಯತೇ ॥ ೩೧ ॥

---

೨೯. ಕಾಕತಾಲೀಯ ಯೋಗದಿಂದ ಯಾವಾಗಲೋ ಒಂದುಸಲ ಆಗುವ ಸಾಧುಸಂಗಮದಿಂದ, ಅದುವರೆಗೆ ಜೀವನಿಗೆ ಆಗಿರುವ ಅಶುಭ ವಾಸನಾಭ್ಯಾಸವೆಲ್ಲವೂ ಧ್ವಂಸವಾಗಿ ಹೋಗುವುದು.

೩೦. ಪ್ರಾಕ್ತನವಾದ ವಾಸನಾಭ್ಯಾಸವು ಸತ್ಪುರುಷ ಸಂಗಮಾದಿ ಸಂಗತಿಗಳಿಂದ ಉದಯವಾಗುವುದಾದರೂ ಹಾಗೆ ಆಗಲು, ದುರ್ವಾಸನಾತ್ಯಾಗ ಮಾಡಬೇಕೆಂದಿರುವವನ ಪ್ರಯತ್ನವನ್ನು ಅಪೇಕ್ಷಿಸುತ್ತದೆ.

(ತರ್ಹಿ ಅಶುಭವಾಸನಾವತ್ ಶುಭವಾಸನಾಭ್ಯಾಸೋಽಪಿ ಸ್ವಯಮೇವ ಪ್ರಾಕ್ತನ ಸಂಸ್ಕಾರಾತ್ ಉದ್ಭವಿಷ್ಯತಿ, ತದ್ಬಲಾದೇವ ಅಯಂ ಪುರುಷಃ ಅಶುಭ ವಾಸನಾಂ ಹಾಸ್ಯತಿ ಚ ಇತಿ ಪುರುಷ ಪ್ರಯತ್ನ ವಿಧಾನಂ ವ್ಯರ್ಥಮಿತ್ಯಾಶಂಕ್ಯ ಆಹ–ಸಂಗತೀತಿ । ಹಾತುರ್ದುರ್ವಾಸನಾಜಾಲಂ ·ಜಿಹಾಸತಃ ಪುಂಸ ಏಷ ಪ್ರಾಕ್ತನಃ ಸದ್ವಾಸನಾಭ್ಯಾಸಃ ಕಾಲಾಂತರೇ ಸ್ವೋದಯಂ ಪ್ರತಿ ಸತ್ಪುರುಷ ಪ್ರಯತ್ನ ಮೀಕ್ಷತೇ ಪ್ರತೀಕ್ಷತೇ ನ ತಂವಿನಾ ಉದ್ಭವತಿ ಇತ್ಯರ್ಥಃ –ತಾ. ಪ್ರ.)

೩೧. ಯಾವುದನ್ನು ಪದೇ ಪದೇ ಈ ದೇಹದಲ್ಲಿಯೂ ದೇಹಾಂತರಗಳಲ್ಲಿಯೂ ಅನುಭವಿಸುತ್ತಲೇ ಇರುವೆವೋ ಅದನ್ನೇ ಜಾಗ್ರತ್ತಿನಲ್ಲಿಯೂ ಸ್ವಪ್ನದಲ್ಲಿಯೂ ಅದು ಅಸತ್ಯವಾಗಿದ್ದರೂ ಸತ್ಯವೆನ್ನುವೆವು.

(ಸತ್ಯಾಸತ್ಯ ವಿವೇಚನೆಯಲ್ಲಿ ಅಭ್ಯಾಸ ಎಂದರೆ ಪದೇ ಪದೇ ಆಗುತ್ತಿರುವುದು ಎಷ್ಟುಮಟ್ಟಿಗೆ ಕಾರ್ಯಕಾರಿಯಾಗುವುದು ಎಂಬುದನ್ನು ಯೋಚಿಸಿ. ಬ್ರಾಹ್ಮಣನು ತೆಗೆದುಕೊಂಡು ಹೋಗುತ್ತಿದ್ದ ಆಡನ್ನು ನಾಲ್ವರು ಸೇರಿ ನಾಯಿಯೆಂದ ಹಾಗೆ ಇವೊತ್ತಿನ ನಮ್ಮ ವ್ಯವಹಾರ.)

ತತ್ತದರ್ಥಕ್ರಿಯಾಕಾರಿ ದುಃಖಾಯ ಚ ಸುಖಾಯಚ ।
ಉದೇತಿ ಭಾವನಂ ತಸ್ಮಾದ್ಭಾವನಾಭಾವನಂ ಜಯಃ ॥ ೩೨ ॥

ಭಾವನೈವ ಸ್ವಮಾತ್ಮಾನಂ ದೇಹೋಽಯಮಿತಿ ಪಶ್ಯತಿ ।
ಅಸತ್ತಾಮಾತ್ರವಿಸ್ತಾರಂ ಗುಲ್ಮಕತ್ವಮಿವಾಂಕುರಃ ॥ ೩೩ ॥

ಭಾವನಾ ಪ್ರೇಕ್ಷ್ಯಮಾಣೈಷಾ ಕಿಂಚಿದಿಹ ಶಿಷ್ಯತೇ ।
ನಚ ವಿದ್ಯತ ಏವೇತಿ ತದ್ಭ್ರಮೇಣಾಲಮಸ್ತು ನಃ ॥ ೩೪ ॥

[ಸಚ ಯತ್ನಃ ಅನೇಕ ಜನ್ಮಾಭ್ಯಸ್ತ ಏವ ಸದ್ಭಾವನಾದಾರ್ಢ್ಯೇನ ದುರ್ವಾಸನಾಕ್ಷಯ ಸಮರ್ಥೋಽಭವತಿ ನ ಸಹಸೈವ ಇತ್ಯಾಶಯನೇನ ಆಹ ॥ ಯಚ್ಚೋಕ್ತಿ । ಅಸದಪಿ ಇತ್ಯನೇನ ಮಿಥ್ಯಾರ್ಥ ವಿಷಯ ದೇವತೋಪಾಸ್ತ್ಯಾದಿ ಪ್ರಯತ್ನೋಽಪಿ ಯತ್ರ ಜಾಗ್ರತ್ ಸ್ವಪ್ನಕಾಲ ಸತ್ಯತಾನುಭವ ಯೋಗ್ಯ ದೇವತಾ ಭಾವಾದಿ ಫಲಸಮರ್ಥೋಽ ಭವತಿ, ತತ್ರ ಕಿಂ ವಾಚ್ಯಂ ಪರಮಾರ್ಥ ವಸ್ತು ಗೋಚರಃ ಶ್ರವಣಾದಿ ಪ್ರಯತ್ನಃ ಪ್ರಮಾಣಗಮ್ಯ ಪರಮಾರ್ಥಸತ್ಯ ಸ್ವಭಾವ ಲಾಭಾಯ ಭವತೀತಿ ಸೂಚ್ಯತೇ ॥ —ತಾ. ಪ್ರ.]

೩೨. ಭಾವನವು ಹುಟ್ಟಿ ತನ್ನ ಸ್ವರೂಪಕ್ಕೆ ಅನುಗುಣವಾಗಿ ಕಾರ್ಯಗಳನ್ನು ಮಾಡಿ ಸುಖದುಃಖ ಎಂಬ ಫಲವನ್ನು ಕೊಡುವುದು. ಅದರಿಂದ ಜಯವೆನ್ನುವುದು ಭಾವನಾ ಭಾವನವು.

(ಭಾವನಂ ಅನಾತ್ಮ ಚಿಂತನಂ —ತಾ. ಪ್ರ.)

೩೩. ಆತ್ಮನಾಗಿರುವ ತನ್ನನ್ನು ಈ ದೇಹವೆಂದು ನೋಡುವುದೇ ಭಾವನೆಯು. ಅಂಕುರವೇ ಬೆಳೆದು ಪೊದೆಯಾಗುವಂತೆ, ಈ ಭಾವನೆಯು ಅಸತ್ತಾಮಾತ್ರ ವಿಸ್ತಾರವು.

೩೪. ಈ ಭಾವನೆಯನ್ನು ವಿವೇಕದಿಂದ ನೋಡಿದ ಮಾತ್ರದಿಂದಲೇ ಅದು ಎಳ್ಳಷ್ಟೂ ಉಳಿಯದೆ ಹೋಗುವುದು. ಹಾಗಿರುವಲ್ಲಿ ಅದಕ್ಕೆ ಸತ್ತಾ ಇಲ್ಲವೇ ಇಲ್ಲವೆಂಬ ನಮಗೆ ಈ ಭ್ರಾಂತಿಯಿಂದ ಆಗಬೇಕಾದುದೇನು ?

ಭ್ರಮಸ್ಯ ಜಾಗತಸ್ಯಾಸ್ಯ ಜಾತಸ್ಯಾಕಾಶವರ್ಣವತ್ ।
ಅಸಂವೇದನಮಾತ್ರೈಕಂ ಮಾರ್ಜನಾಯಾಲಮಸ್ತು ನಃ ॥ ೩೫ ॥

ಅಸನ್ಮಯಿೀಸ್ವರೂಪೈಷಾ ಪರಂ ಸತ್ತೈವ ಲಾಲನೀ ।
ವರ್ತತೇ ಚೇದ್ವಿನೋದಾಯ ಕಿಂಚಿತ್ಸಾ ನ ಕರಿಷ್ಯತಿ ॥ ೩೬ ॥

ತತ್ತಾನ್ಸರ್ವಾನ್ಸ್ವಸಂಸಾರಾನುತ್ಥಾಯಾಲೋಕಯಾಮ್ಯಹಂ ।
ಸಮ್ಯಗಾಲೋಕದಾನೇನ ತೇಭ್ಯ ಏಕೀಕರೋಮ್ಯಹಂ ॥ ೩೭ ॥

ಇತಿ ಸಂಚಿಂತ್ಯ ರುದ್ರೋಽಸೌ ತಂ ಸರ್ಗಂ ಪ್ರಜಗಾಮ ಹ ।
ಯತ್ರ ಭಿಕ್ಷುರ್ವಿಹಾರಸ್ಥಃ ಸುಪ್ತಃ ಶವ ಇವ ಸ್ಥಿತಃ ॥ ೩೮ ॥

---

೩೫. ಈ ಜಗದ್ವ್ಯವಹಾರವೆಲ್ಲವೂ ಭ್ರಮದಿಂದ ಹುಟ್ಟಿರುವುದು. ಆಕಾಶದಲ್ಲಿ ಕಾಣುವ ನೀಲಿಮಾವರ್ಣದಂತೆ ಅಸನ್ಮಯವಾದುದು. ಇದನ್ನು ಅಂಗೀಕರಿಸದೆ ಬಿಟ್ಟರೆ ಸಾಕು, ಈ ಭ್ರಮವು ತಾನಾಗಿ ತೊಳೆದುಹೋಗುವುದು.

೩೬. ಅಥವಾ ಈ ಜಗದ್ಭ್ರಮವು ಯಾವುದುಂಟೋ ಅದು ಆ ಪರಮಾತ್ಮಸ್ವರೂಪವಾದ ಚಿತ್ಸತ್ತೆಯೇ ಆಡುತ್ತಿರುವ ಆಟವು. ಇದರ ಸ್ವರೂಪವೇ ಅಸನ್ಮಯವು. ಅದರಿಂದ ವಿನೋದವಾಡುತ್ತಿರುವ ಆಕೆಯು ನಮಗೆ ಏನೂ ಹಾನಿಯನ್ನು ಮಾಡುವುದಿಲ್ಲ. (ಎಂದು ತಿಳಿದರೂ ಆಯಿತು.)

೩೭. ಅದರಿಂದ, ಇದುವರೆಗೆ ಅನುಭವಿಸಿರುವ ಆಯಾ ನೂರಾರು ಸಂಸಾರಗಳನ್ನು ಮತ್ತೊಮ್ಮೆ ಕುತೂಹಲದಿಂದ ನೋಡುವೆನು. ಸಮ್ಯಗಾವಲೋಕನದಿಂದ ಅವುಗಳಲ್ಲೆಲ್ಲಾ ಇದ್ದರೂ ಪ್ರತ್ಯೇಕನಾಗಿರುವ ಆತ್ಮನನ್ನು ಬೇರೆಯಾಗಿ ಪ್ರತ್ಯೇಕಿಸಿ ಬೇರೆ ಬೇರೆಯಾಗಿ ತೋರಿದ್ದರೂ.ಆ ಆತ್ಮನು ಒಬ್ಬನೇ ಎಂಬುದನ್ನು ತಿಳಿಯುವೆನು.

(ತತ್ ತಸ್ಮಾತ್ ಕೌತುಕವಶಾತ್ ಏವ ಉತ್ಥಾಯ ಗತ್ವಾ ಸಮ್ಯಗಾಲೋಕಸ್ಯ ಪ್ರಬೋಧಸ್ಯ ದಾನೇನ ತೇಭ್ಯ ಉಪಾಧಿಭ್ಯೋ ವಿವಿಕ್ತಂ ಸ್ವಾತ್ಮಾನಂ ಏಕೀಕರೋಮಿ —ತಾ. ಪ್ರ.)

೩೮. ಹೀಗೆಂದು ಯೋಚನೆಮಾಡಿ ಈ ರುದ್ರನು, ಯಾವ ಸರ್ಗ

ಬೋಧಯಿತ್ವಾಥ ತಂ ಭಿಕ್ಷುಂ ಚೇತಸಾ ಚೇತನೇನ ಚ |
ಯೋಜಯಾಮಾಸ ಸಸ್ಮಾರ ಭಿಕ್ಷುರಪ್ಯಾತ್ಮನೋ ಭ್ರಮಂ || ೩೯ ||

ರುದ್ರಮಾತ್ಮಾನಮಾಲೋಕ್ಯ ಜೀವಟಾದಿಮಯಂ ತಥಾ |
ಬೋಧಾದವಿಸ್ಮಯಾರ್ಹೋಽಪಿ ಸ ಭಿಕ್ಷುರ್ವಿಸ್ಮಯಂ ಯಯೌ || ೪೦ ||

ಅಥ ರುದ್ರಸ್ತಥಾ ಭಿಕ್ಷುರ್ದ್ವಾವೇವೋತ್ಥಾಯ ಜಗ್ಮತುಃ |
ಕ್ವಾಪಿ ಜೀವಟಸಂಸಾರಂ ಚಿದಾಕಾಶೈಕಕೋಣಗಂ || ೪೧ ||

ತತ್ರ ತದ್ಭುವನಂ ಗತ್ವಾ ತದ್ದ್ವೀಪಂ ತಚ್ಚ ಮಂಡಲಂ |
ವಿಷಯಂ ತತ್ಪುರಂ ತಚ್ಚ ತಂ ಚ ಪಾಣಾವಸಿಗ್ರಹಂ || ೪೨ ||

(ಬ್ರಹ್ಮಾಂಡ)ದಲ್ಲಿ ಭಿಕ್ಷುವು ವಿಹಾರದಲ್ಲಿ ನಿದ್ರಾವಶನಾಗಿ ಶವದಂತೆ ಬಿದ್ದಿದ್ದನೋ ಅಲ್ಲಿಗೆ ಹೋದನು.

೩೯. ಆ ಭಿಕ್ಷುವನ್ನು ತನ್ನ ಚಿತ್ತದಿಂದ ಎಚ್ಚರಗೊಳಿಸಿ ನಿದ್ದೆಯನ್ನು ಕಳೆದು, ಆ ಭಿಕ್ಷುಜೀವವನ್ನು ತನ್ನ ಚೇತನ (ಜ್ಞಾನ) ದಿಂದ ಎಚ್ಚರಗೊಳಿಸಿ ಮೋಹ ನಿದ್ರೆಯನ್ನು ಕಳೆಯಲು, ಆ ಭಿಕ್ಷುವು ತನ್ನ ಭ್ರಾಂತಿಯನ್ನು ಸ್ಮರಿಸಿ ಕೊಂಡನು.

೪೦. ರುದ್ರನಾಗಿರುವ ತನ್ನನ್ನೂ ಜೀವಟಾದಿಗಳಾಗಿರುವ ತನ್ನನ್ನೂ ನೋಡಿಕೊಂಡು, ಆ ಭಿಕ್ಷುವು ಜ್ಞಾನಿಯಾಗಿರುವುದರಿಂದ ವಿಸ್ಮಯಪಡಬೇಕಾಗಿಲ್ಲ ವಾದರೂ, ವಿಸ್ಮಯವನ್ನು ಹೊಂದಿದನು.

೪೧. ಆ ರುದ್ರನೂ ಭಿಕ್ಷುವೂ ಎದ್ದು ಜೀವಟ ಸಂಸಾರವಿದ್ದ ಚಿದಾಕಾಶದ ಮೂಲೆ ಯಾವುದೋ ಅಲ್ಲಿಗೆ ಹೋದರು.

(ತತ್ರ ಲೀಲೋಪಾಖ್ಯಾನ ವರ್ಣಿತ ರೀತ್ಯಾ ಪ್ರವಿಶ್ಯ ಭುವನಂ ಭೂಲೋಕಂ ಗತ್ವಾ —ತಾ. ಪ್ರ.)

೪೨. ಆ ಬ್ರಹ್ಮಾಂಡವನ್ನು ಪ್ರವೇಶಿಸಿ ಆ ದ್ವೀಪವನ್ನೂ ಆ ಮಂಡಲ ವನ್ನೂ ಆ ದೇಶವನ್ನೂ ಆ ಊರನ್ನೂ ಸೇರಿ ಕೈಯಲ್ಲಿರುವ ಕತ್ತಿಯನ್ನು ಕಾಣು ವಂತೆ ಆ ಜೀವಟನನ್ನು ಕಂಡರು.

ಸುಪ್ತಂ ದದೃಶತುರ್ನಷ್ಟಸಂಜ್ಞಂ ಜೀವಟಕಂ ಶವಂ ।
ಸ್ಥಾಪಯಿತ್ವಾ ವಪುರ್ಭಾವಂ ಪ್ರಭಾಂತಂ ಭವಭೂಮಿಷು ॥ ೪೩ ॥

ತಂ ಪ್ರಬೋಧ್ಯ ನಿಯೋಜ್ಯಾಶು ಚೇತಸಾ ಚೇತನೇನ ಚ ।
ಏಕರೂಪಾಸ್ತ್ರಿರೂಪಾಸ್ತೆ ರುದ್ರಜೀವಟಭಿಕ್ಷುಕಾಃ ॥ ೪೪ ॥

ಬೋಧವಂತೋಽಪ್ಯಬುದ್ಧಾಭಾ ವಿಸ್ಮಿತಾ ಅಪ್ಯವಿಸ್ಮಿತಾಃ ।
ಬಭೂವುಸ್ತೂಷ್ಣೀಂಸ್ಥಿತಾಶ್ಚಿತ್ರಕೃತಾಕಾರಾ ಇವ ಕ್ಷಣಂ ॥ ೪೫ ॥

ಅಥ ಜಗ್ಮುಶ್ಚ ತೇ ಸರ್ವೇ ಕ್ವಚಿದ್ವ್ಯೋಮನಿ ಸಂಸ್ಥಿತಂ ।
ವಿಪ್ರಸಂಸಾರಮಾರಬ್ಧಂ ಪರಿಭೂತಸಘುಂಘುಮಂ ॥ ೪೬ ॥

---

೪೩. ಅವರು ನಿಶ್ಚೇಷ್ಟನಾಗಿ ಶವದಂತೆ ಬಿದ್ದು ನಿದ್ದೆ ಮಾಡುತ್ತಿರುವ ಜೀವಟನನ್ನು ಕಂಡು (ಅವನಿದ್ದ ಪ್ರದೇಶವು ತಾವು ಹೋಗುವುದಕ್ಕೆ ·ಅಯೋಗ್ಯವಾಗಿದ್ದ ಕಾರಣ) ಪ್ರಭಾವದಿಂದ ತಮ್ಮಿಬ್ಬರ ರೂಪವೂ ಯಾರಿಗೂ ಕಾಣದಂತೆ ಅಂತರ್ಧಾನ ಮಾಡಿಕೊಂಡು, ಆ ಪ್ರದೇಶಕ್ಕೆ ಹೋದರು.

೪೪ ಅವನನ್ನು ನಿದ್ದೆಯಿಂದ ಎಚ್ಚರಗೊಳಿಸಿ ಅವನನ್ನು ಪ್ರಬೋಧವನ್ನು ಕೊಟ್ಟು ಮೋಹವನ್ನು ಬಿಡಿಸಿ, ರುದ್ರ ಭಿಕ್ಷುಕ ಜೀವಟರು ಏಕರೂಪರಾಗಿದ್ದರೂ ತ್ರಿರೂಪರಾಗಿ ಕಾಣಿಸಿದರು.

೪೫. ಬೋಧವಂತರೇ(ಜ್ಞಾನಿಗಳು)ಆಗಿದ್ದರೂ ಅಪ್ರಬುದ್ಧರಂತೆ, ವಿಸ್ಮಯ ಪಡಬೇಕಾಗಿಲ್ಲದಿದ್ದರೂ ವಿಸ್ಮಯಪಡುತ್ತ ಒಂದು ಗಳಿಗೆ ಚಿತ್ರ ಪ್ರತಿಮೆಗಳಂತೆ ಸುಮ್ಮನೆ ಇದ್ದರು.

೪೬. ಅವರು ಮೂವರೂ ಚಿದಾಕಾಶದ ಇನ್ನು ಯಾವುದೋ ಒಂದು ಮೂಲೆಯಲ್ಲಿ, ಬ್ರಾಹ್ಮಣನ ನಾನಾ ಪ್ರಾಣಿಗಳಿಂದ ಕೂಡಿರುವ ಸಂಸಾರವು ನಡೆಯುತ್ತಿರುವ ಪ್ರದೇಶಕ್ಕೆ ಹೋದರು.

ತೇ ತತ್ರ ಭುವನಂ ಗತ್ವಾ ತದ್ದ್ವೀಪಂ ತಚ್ಚ ಮಂಡಲಂ ।
ವಿಷಯಂ ತಚ್ಚ ತಂ ಗ್ರಾಮಂ ಪ್ರಾಪುಸ್ತಂ ಬ್ರಾಹ್ಮಣಾಲಯಂ ॥ ೪೭ ॥

ವಿಪ್ರಂ ತೇ ದದೃಶುಃ ಸುಪ್ತಂ ಕಲತ್ರವಲಿತಂ ಗೃಹೇ ।
ಕಂಠೇ ಗೃಹೀತಂ ಬ್ರಾಹ್ಮಣ್ಯಾ ಬಹಿರ್ಜೀವಮಿವ ಸ್ಥಿತಂ ॥ ೪೮ ॥

ತಂ ಪ್ರಬೋಧ್ಯ ನಿಯೋಜ್ಯಾಶು ಚೇತಸಾ ಚೇತನೇನ ಚ ।
ತತ್ರಾಸ್ಥಸ್ತೇ ಬಹವೋಽಪ್ಯನ್ಯೇ ಸವಿಸ್ಮಯವಿವಿಸ್ಮಯಾಃ ॥ ೪೯ ॥

ಅಥ ಜಗ್ಮುಶ್ಚಿದಾಕಾಶಕಚಿತಂ ಚೇತಿತಂ ಚಿತೇಃ ।
ಸಾಮಂತಂ ನೃಪಸಂಸಾರಂ ಭ್ರಮಣಾಭೋಗಸುಂದರಂ ॥ ೫೦ ॥

ತತಸ್ತೇ ಭುವನಂ ಪ್ರಾಪ್ತಾಸ್ತದ್ದ್ವೀಪಂ ತಚ್ಚ ಮಂಡಲಂ ।
ಸಾಮಂತಂ ದದೃಶುರ್ಮತ್ತಂ ಸುಪ್ತಂ ಪರ್ಯಂಕಪಂಕಜೇ ॥ ೫೧ ॥

---

೪೭. ಅವರು ಆ ಲೋಕವನ್ನು ಪ್ರವೇಶಿಸಿ, ಆ ದ್ವೀಪದಲ್ಲಿ, ಆ ಮಂಡಲದಲ್ಲಿ, ಆ ದೇಶದಲ್ಲಿ, ಆ ಗ್ರಾಮದಲ್ಲಿ, ಇರುವ ಬ್ರಾಹ್ಮಣಾಲಯವನ್ನು ಸೇರಿದರು.

೪೮. ಅಲ್ಲಿ ಅವನು ತನ್ನ ಬಹಿಃ ಪ್ರಾಣವೋ ಎಂಬಂತೆ ಇರುವ ಮಡದಿ ಮಕ್ಕಳುಗಳೊಡನೆ ಕೂಡಿರುವ ಮನೆಯಲ್ಲಿ ಬ್ರಾಹ್ಮಣಿಯು ತನ್ನ ಕತ್ತನ್ನು ಕಟ್ಟಿಕೊಂಡಿರಲು ಮಲಗಿ ನಿದ್ದೆ ಮಾಡುತ್ತಿರುವುದನ್ನು ಕಂಡರು.

೪೯. ಅವನನ್ನು ಎಚ್ಚರಗೊಳಿಸಿ ಅವನಿಗೂ ಪ್ರಬೋಧವಿತ್ತು ಅವನ ಮೋಹಕ ಮನಸ್ಸನ್ನು ಕಳೆದು, ಅವನೂ ಸೇರಿದ ಈ ನಾಲ್ವರು ವಿಸ್ಮಯ ರಹಿತರಾಗಿದ್ದರೂ ಸವಿಸ್ಮಯರಾಗಿ ಕೆಲವು ಹೊತ್ತು ಇದ್ದರು.

೫೦. ಅವರೆಲ್ಲರೂ ಚಿದಾಕಾಶದಲ್ಲಿ ಎಲ್ಲಿಯೋ ಹೊಳೆದು ಚಿತ್ತಿನಿಂದ ಚೇತಿತವಾಗಿರುವ, ಭ್ರಾಂತಿಮಯವಾದ ಅನೇಕಾನೇಕ ಭೋಗಗಳಿಂದ ಸುಂದರವಾಗಿರುವ ಸಂಸಾರವುಳ್ಳ ಆ ಸಾಮಂತ ನರಪತಿಯನ್ನು ಕಂಡರು.

೫೧. ಅವರು ಆ ಲೋಕವನ್ನು ಪ್ರವೇಶಿಸಿ, ಆ ದ್ವೀಪದಲ್ಲಿ, ಆ ಮಂಡಲದಲ್ಲಿ, ಮಂಚವೆಂಬ ಕಮಲದಲ್ಲಿ ಮದ್ಯಪಾನಮತ್ತನಾಗಿ ಸುಪ್ತನಾಗಿರುವ ಸಾಮಂತನನ್ನು ಕಂಡನು.

ಹೇಮಾವದಾತಂ ಹೇಮಾಂಗ್ಯಾ ನಿಹಿತಂ ಕುಚಕೋಟರೇ |
ಭ್ರಮರ್ಯೇವಾನ್ವಿತಂ ಪದ್ಮಕೋಶಸುಪ್ತಂ ಮಧುವ್ರತಂ || ೫೨ ||

ಕಾಂತಾಭಿರಭ್ಯಾಪಲಿತಂ ಮಂಜರೀಭಿವ ದ್ರುಮಂ |
ದೀಪಜಾಲಕಮಧ್ಯಸ್ಥಂ ರತ್ನೌಘೆ ಇವ ಕಾಂಚನಂ || ೫೩ ||

ತಂ ಪ್ರಬೋಧ್ಯ ನಿಯೋಜ್ಯಾಶು ಚೇತಸಾ ಚೇತನೇನ ಚ |
ತತ್ಸ್ಥಾಸ್ತೇ ಬಹವೋಪ್ಯೇತೇ ಸವಿಸ್ಮಯ ವಿವಿಸ್ಮಯಾಃ || ೫೪ ||

ಅಥತೇ ರಾಜಸಂಸಾರಂ ಜಗ್ಮುಸ್ತತ್ರ ವಿಬೋಧ್ಯ ತಂ |
ಚೇತಸ್ಯೈವಮಥಾನ್ಯಾಸು ಭ್ರೇಮುಃ ಸಂಸಾರಭೂಮಿಷು || ೫೫ ||

ಪ್ರಾಪ್ಯ ತಾಂ ಬ್ರಹ್ಮಹಂಸೇಹಾಂ ರುದ್ರತಾಂ ಸರ್ವ ಏವತೇ |
ಸಮಾಜಗ್ಮುರ್ವಿರೇಜುಶ್ಚ ರುದ್ರಾಣಾಮುತ್ತಮಂ ಶತಂ || ೫೬ ||

---

೫೨. ಚಿನ್ನದ ಬೊಂಬೆಯಂತಿರುವ, ಹೆಂಡತಿಯೊಡನೆ ಪದ್ಮಕೋಶದಲ್ಲಿ ಭ್ರಮರಿಯೊಡನೆ ಮಲಗಿರುವ ಭ್ರಮರದಂತೆ ಮಲಗಿರುವ, ಚಿನ್ನದಂತೆ ಸ್ವಚ್ಛ ವರ್ಣವುಳ್ಳ ಆ ಸಾಮಂತನನ್ನು ಕಂಡರು.

೫೩. ಮರವು ಪುಷ್ಪ ಗುಚ್ಛಗಳಿಂದ ಆವೃತವಾಗಿರುವಂತೆ, ಕಾಂತೆಯರ ಆಲಿಂಗನದಿಂದ ಕೂಡಿ, ರತ್ನಗಳಿಂದ ಕೂಡಿರುವ ಚಿನ್ನದಂತೆ ಹೊಳೆಯುತ್ತ ದೀಪಗಳ ಗುಂಪುಗಳು ಉರಿಯುತ್ತಿರಲು, ಆ ಸಾಮಂತನು ಮಲಗಿ ನಿದ್ರಿಸುತ್ತಿದ್ದನು.

೫೪. ಅವನನ್ನು ನಿದ್ದೆಯಿಂದ ಎಬ್ಬಿಸಿ, ಅವನಿಗೂ ಪ್ರಬೋಧವನಿತ್ತು, ಅವರೆಲ್ಲರೂ ವಿವಿಸ್ಮಯವಾದರೂ ಸವಿಸ್ಮಯರಂತೆ ಇದ್ದರು.

೫೫. ಅವರೆಲ್ಲರೂ ರಾಜಸಂಸಾರವಿದ್ದೆಡೆಗೆ ಹೋಗಿ ಅವನನ್ನೂ ಎಬ್ಬಿಸಿ, ಜ್ಞಾನದಾನ ಮಾಡಿ, ಉಳಿದಿದ್ದ ಸಂಸಾರಭೂಮಿಗಳಿಗೂ ಹೋದರು.

೫೬. ಅವರೆಲ್ಲರನ್ನೂ ಬ್ರಹ್ಮಹಂಸರೂಪವನ್ನೂ ರುದ್ರರೂಪವನ್ನೂ ಪಡೆದವರನ್ನಾಗಿ ಮಾಡಿ ಶತರುದ್ರರಾಗಿ ಪರಿಣಮಿಸಿ ಮೆರೆದರು.

ಏಕಸಂವಿದ್ಭಿನ್ನತನು ಚಿತ್ರಚೇಷ್ಟಿತವೇಷ್ಟಿತಂ ।
ಏಕರೂಪಮನೇಕಾಭಂ ರೂಪಂ ತತ್ಪಾರಮೇಶ್ವರಂ ॥ ೫೭ ॥

ರುದ್ರಾಣಾಂ ತಚ್ಛತಮಥ ನಿರಾವರಣಚಿನ್ಮಯಂ ।
ಸರ್ವಸಂಸಾರಸಂಬಂಧಿ ಸ್ಥಿತಂ ಸರ್ವ ಜಗತ್ಸ್ಥಿತಂ ॥ ೫೮ ॥

ಶತರುದ್ರಶತಾನೀಹ ಸಂತಿ ರಾಮ ಮಹಾಂತಿ ಹಿ ।
ಏತದೇಕಾದಶಂ ವಿದ್ಧಿ ಸಂಸಾರಂ ಪ್ರತಿಸಂಸ್ಥಿತಂ ॥ ೫೯ ॥

ಯೋ ಯೋಽಭಿತಃ ಸ ಜೀವಸ್ಯ ಸಂಸಾರಃ ಸಮುದೇತಿ ಹಿ ।
ತತ್ರಾಪ್ರಬುದ್ಧಾ ಜೀವೌಘಾಃ ಪಶ್ಯಂತಿ ನ ಪರಸ್ಪರಂ ॥ ೬೦ ॥

(ರುದ್ರ ಚಿತ್ತ ಚೇತನಾಂಶೈರೇವ ಚಿತ್ತ ಚೇತನವತ್ವಾತ್ ಜ್ಞಾನೈಶ್ವರ್ಯ ಸಂಪನ್ನತ್ವಾತ್ ಚೋತ್ತಮಂ ॥ —ತಾ. ಪ್ರ.)

೫೭. ಆಗ ಆ ಶತರುದ್ರರು ಏಕ ಸಂವಿತ್ತುಗಳಾದರೂ ಭಿನ್ನ ಭಿನ್ನ ತನುಗಳಾಗಿ, ವಿಚಿತ್ರವಾದ ವ್ಯಾಪಾರಗಳಿಂದ ಕೂಡಿದವರಾಗಿ, ಸದೃಶರೂಪವುಳ್ಳವರಾದರೂ ಅನೇಕವಾಗಿ ತೋರುವ ದೇಹಗಳುಳ್ಳವರಾಗಿ ಇದ್ದರು.

೫೮. ಆ ರುದ್ರಶತವು ಆ ಹಿಂದಿನ ನೂರು ಸಂಸಾರ ಸಂಬಂಧವುಳ್ಳವರಾದುದರಿಂದ, ಬ್ರಹ್ಮಾಂಡಗಗಳಲ್ಲೆಲ್ಲಾ ಇರುವುದಾಗಿದ್ದರೂ, ಯಾವುದೊಂದು ಆವರಣವಿಲ್ಲದೆ ಚಿನ್ಮಯವಾಗಿಯೇ ಇದ್ದಿತು.

೫೯. ಇಂತಹ ರುದ್ರಶತಗಳು ನೂರಾರು, ಬೇಕಾದಷ್ಟು ಇರುವುವು. ರಾಮ, ಈ ಏಕಾದಶರುದ್ರ ಸಂಸಾರವು ಪ್ರತಿಯೊಂದು ಪ್ರಾಣಿಯಲ್ಲಿಯೂ ಇರುವುದೆಂದು ತಿಳಿ.

(ಜ್ಞಾನ ಕರ್ಮೇಂದ್ರಿಯಗಳು ಹತ್ತು, ಮನಸ್ಸು ಒಂದು, ಇವು ಏಕಾದಶ ರುದ್ರರು.)

೬೦. ಪ್ರತಿಯೊಬ್ಬ ಜೀವನಿಗೂ ಯಾವ ಯಾವ ಸಂಸಾರವು ಎದುರಿಗೆ ಇರುವುದೋ ಅದದೇ ಅವನಿಗೆ ದೊಡ್ಡದಾಗಿರಲು, ಜೀವರು, ಭ್ರಾಂತಿಯಿಂದ, ಅಜ್ಞಾನದಿಂದ ಅಲ್ಲಲ್ಲಿಯೇ ನಿಂತು ಎಲ್ಲವನ್ನೂ ಮರೆತು ಇತರರನ್ನು ನೋಡಲಾರದವರಾಗುವರು.

ಮಿಲಂತಿ ಹಿ ಮನೋಬುದ್ಧಾಸ್ತರಂಗಾ ಇವ ವಾರಿಧೌ ।
ಅಪ್ರಬುದ್ಧಾಸ್ತು ತನ್ಮಾತ್ರನಿಷ್ಠಾ ಲೋಷ್ಟವದಾಸ್ಥಿತಾಃ　　|| ೬೧ ||

ಯಥಾ ದ್ರವತ್ವಾದ್ವೀಚ್ಯಂಬು ತ್ವನ್ಯೋನ್ಯಂ ಸಂಮಿಲತ್ಯಲಂ ।
ತಥಾ ಪ್ರಬುದ್ಧಾ ಜೀವೌಘಾ ಮಿಥಶ್ಚಿತ್ತ್ವಾನ್ಮಿಲಂತ್ಯಲಂ　　|| ೬೨ ||

ಪ್ರತ್ಯೇಕಮುದಿತೇ ಚೈತೇ ಸಂಸಾರೇ ಜೀವರಾಶಯಃ ।
ಚಿದ್ಧಾತೋಃ ಸರ್ವಗತ್ವೇನ ತ್ವಸತ್ಯಾಃ ಸತ್ಯವತ್ಸ್ಥಿತಾಃ　　|| ೬೩ ||

ಯದ್ಯದಾಖನ್ಯತೇ ಭೂಮೇಸ್ತತ್ತನ್ನಾಮ್ನಾ ಯಥಾ ನಭಃ ।
ಸರ್ವಗಾಯಾಶ್ಚಿತೇಯದ್ಯದುಹ್ಯತೇ ತತ್ತಥೈವ ಚಿತ್　　|| ೬೪ ||

---

೬೧. ಪ್ರಬುದ್ಧ ಮನಸ್ಸುಳ್ಳವರು ಸಮುದ್ರದಲ್ಲಿ ತರಂಗಗಳು ಹೇಗೋ ಹಾಗೆ ಒಬ್ಬರಿಗೊಬ್ಬರು ಸೇರುವರು. ಆದರೆ ಅಪ್ರಬುದ್ಧರಾದವರು ಮಣ್ಣು ಹೆಂಟೆಗಳ ಹಾಗೆ, ತನ್ಮಾತ್ರನಿಷ್ಠರಾಗಿ (ದೇಹೋಽಹಂ ಎಂದುಕೊಳ್ಳುತ್ತಾ) ಇದ್ದುಬಿಡುವರು.

[ಮಿಲಂತಿ ಸರ್ವಂ ಪಶ್ಯಂತೀತಿ —ತಾ. ಪ್ರ.]

೬೨. ದ್ರವವಾಗಿರುವುದರಿಂದ ತರಂಗವೂ ಜಲವೂ ಪರಸ್ಪರ ಸೇರಿಹೋಗುವುವು. ಹಾಗೆಯೇ ಪ್ರಬುದ್ಧ ಜೀವರೂ ಕೂಡ ಇಬ್ಬರಲ್ಲಿಯೂ ಚಿತ್ತ್ವವಿರುವುದರಿಂದ ಪರಸ್ಪರ ಸೇರುವುದು.

[ಮೇಲನೇಚ ಹೇತುಃ ಸ್ವೌಲ್ಯಾಪಗನು ಇತ್ಯಾಶಯೇನಾಹ —ತಾ. ಪ್ರ.)

೬೩. ಈ ಜೀವ ರಾಶಿಗಳು ತಮತಮಗೆ ಪ್ರಾಪ್ತವಾಗಿರುವ ಸಂಸಾರದಲ್ಲಿ ಚಿತ್ ಧಾತುವು ಸರ್ವಗವಾಗಿರುವುದರಿಂದ, ತಾವು ಅಸತ್ಯರೇ ಆಗಿದ್ದರೂ ಸತ್ಯವತ್ ಇರುವರು.

(ಸರ್ವಜೀವತತ್ತ್ವಭೂತ ಬ್ರಹ್ಮೈಕ್ಯಲಾಭ ಏವ ಸರ್ವೈಸ್ತದೀಯ ಕಲ್ಪಿತ ರೂಪಾತ್ಮಕೇ ಜೀವೈರ್ಮಿಲನಮಿತ್ಯಾಶಯೇನಾಹ —ತಾ. ಪ್ರ.)

೬೪. ಭೂಮಿಯನ್ನು ಅಗೆದು ಅಗೆದು ಕೆರೆಕಟ್ಟೆ ಭಾವಿಗಳನ್ನು ಮಾಡಿದಾಗಲೆಲ್ಲ ಆಕಾಶವೇ ಆಯಾ ರೂಪಗಳಲ್ಲಿದ್ದು ಆಯಾ ನಾಮಗಳನ್ನು ಪಡೆಯು

ಸರ್ವಪ್ರಪಂಚಭೂತಾನಿ ಯಥಾನುಭವಸೀಹ ಹಿ |
ತಥೇಹ ಸರ್ವಭೂತಾತ್ಮ ಚಿತ್ತ್ವಂ ಸರ್ವತ್ರ ವಿದ್ಯತೇ || ೬೫ ||

ಯಚ್ಛಾಲಭಂಜಿಕಾ ವೃಕ್ಷೇ ಶೈಲೇ ಶ್ವಭ್ರೇ ಗತೇಂತಕಂ |
ಪ್ರೇಕ್ಷ್ಯತೇ ತದ್ವದೇಕಾತ್ಮಾ ತಥಾ ಚಿತಿ ಜಗತ್ಸ್ಥಿತಂ || ೬೬ ||

ಅವೇದನೇ ಪರೇ ಶುದ್ಧೇ ವೇದನಂ ಯಜ್ಜಗತ್ಸ್ಥಿತಂ |
ಅಕಾರಣಮಚೈತನ್ಯಂ ಶೂನ್ಯತ್ವೇನ ಯಥಾ ನಭಃ || ೬೭ ||

ವಿದ್ಯತೇ ವೇದನಂ ದೃಶ್ಯಬಂಧೋ ಮೋಕ್ಷಸ್ತ್ವವೇದನಂ |
ಯದೇವ ರುಚಿರಂ ತೇ ಸ್ಯಾತ್ತದೇವಾಶು ದೃಢೀಕುರು || ೬೮ ||

ವಂತೆ, ಸರ್ವಗಾ ಆಗಿರುವ ಚಿತ್ತೇ ಇದೆಲ್ಲ ಆಗಿರಲು, ಅದರಲ್ಲಿ ಸೇರಿಕೊಂಡಿರುವ ನಾಮರೂಪ ಕ್ರಿಯಾಕಾರಕ ವ್ಯವಹಾರ ಕಾರಣಗಳನ್ನು ತೆಗೆದುಹಾಕಲು ಉಳಿಯುವುದೆಲ್ಲ ಚಿತ್ತೇ ಆಗಿರುವುದು.

೬೫. ಸರ್ವ ಪ್ರಪಂಚಕ್ಕೂ ಕಾರಣವಾಗಿರುವ ಪಂಚ ಭೂತಗಳನ್ನು ಹೇಗೆ ಎಲ್ಲೆಲ್ಲಿಯೂ ಅನುಭವಿಸುವೆಯೋ ಹಾಗೆಯೇ ಸರ್ವ ಪ್ರಾಣಿಗಳಿಗೂ ಆತ್ಮವಾಗಿರುವ ಚಿತ್ತ್ವವೂ ಎಲ್ಲೆಲ್ಲಿಯೂ ಇರುವುದು (ಎಂಬುದನ್ನೂ ಅನುಭವಿಸುವವನಾಗು.)

೬೬. ವೃಕ್ಷದಲ್ಲಿಯಾಗಲಿ ಶೈಲದಲ್ಲಿಯಾಗಲಿ ಕೊರೆದು ಆಕಾರವನ್ನು ಬಿಡಿಸಿದರೆ ಶಾಲಭಂಜಿಕೆಯು ಕಂಡೇಕಾಣುವಂತೆ, ಸನಾಮ ರೂಪವಾದ ಈ ಜಗತ್ತೂ ಕೂಡ ನಾಮರೂಪಗಳನ್ನು ಕಳೆದರೆ ಏಕಾತ್ಮರೂಪವಾಗಿ ಚಿತ್ತಿನಲ್ಲಿಯೇ ಇರುವುದು ಕಾಣುವುದು.

೬೭-೬೮. ಶುದ್ಧವಾದ ಪರಬ್ರಹ್ಮವನ್ನು ತಿಳಿಯದಿರುವಾಗ, ಜಗತ್ತು ಇರುವುದು ಎಂಬ ಜ್ಞಾನವಿರುವುದು. ಈ ವೇದನ (ಜ್ಞಾನ)ವು ದೃಶ್ಯಬಂಧವುಳ್ಳುದು (ದೃಶ್ಯವನ್ನಾಶ್ರಯಿಸಿರುವುದು.) ಮೋಕ್ಷವಾದರೂ ಅವೇದನವು ಎಂದರೆ ದೃಶ್ಯಬಂಧವಿಲ್ಲದುದು. ಅದರಿಂದ ಅವೇದನರೂಪವಾದ ಮೋಕ್ಷವು ಅಕಾರಣವು, ಅಚೇತನವು (ಜಡಚೇತನವೆಂಬ ವ್ಯತ್ಯಾಸ

ಸರ್ಗಾಸರ್ಗೌ ಬಂಧಮೋಕ್ಷೌ ವೇದನಾವೇದನಾತ್ಮಕೌ |
ಅಭಿನ್ನೌ ಬೋಧನಾಜ್ಞ್ಯೋಭೌ ಯಥೇಚ್ಛಸಿ ತಥಾ ಕುರು ॥ ೬೯ ॥

ಅಸಂವಿತ್ತೇಸ್ತು ಯನ್ನಾಸ್ತಿ ತನ್ನಾಶೇ ಕಾ ಕದರ್ಥನಾ |
ತೂಷ್ಣೀಂಭಾವೇನ ಯತ್ಪ್ರಾಪ್ಯಂ ಪ್ರಾಪ್ತಮೇವಾಶು ವಿದ್ಧಿತತ್ ॥ ೭೦ ॥

ಯದ್ವೈ ವೇದನಮಾತ್ರಾತ್ಮ ತದಂಗಾವೇದನಕ್ಷಯಂ |
ತತ್ವೇದನಂ ವೇದನಾಯಾ ಯದಿಷ್ಟಂ ತತ್ಸಮಾಚರೇತ್ ॥ ೭೧ ॥

ವಿಲ್ಲುದು.) ನಭದಂತೆ ಶೂನ್ಯವಾಗಿರುವುದು. ಇವೆರಡರಲ್ಲಿ ನಿನಗೆ ಯಾವುದು ರುಚಿಸುವುದೋ ಅದನ್ನೇ ದೃಢಪಡಿಸಿಕೊ.

೬೯. ಸರ್ಗ–ಅಸರ್ಗಗಳು, ಬಂಧ–ಮೋಕ್ಷಗಳು, ವೇದನ–ಅವೇದನ ಸ್ವರೂಪವಾದವು. ಬೋಧವನ್ನು ಪಡೆದವನಿಗೆ ಎರಡರಲ್ಲಿ ಏನೂ ವ್ಯತ್ಯಾಸವಿಲ್ಲ, ಅದರಿಂದ ನಿನಗೆ ತೋರಿದಂತೆ ಮಾಡು.

೭೦. ಸಂವೇದನ ಮಾಡದಿರುವುದರಿಂದಲೇ ನಾಶವಾಗುವ ಸ್ವಭಾವವುಳ್ಳದು ಹೋಯಿತೆಂದು ಆಯಾಸಪಡುವುದೇಕೆ? ಸುಮ್ಮನಿದ್ದರೆ ಯಾವುದು ಲಭಿಸುವುದೋ ಅದು ಆಗಲೇ ಲಭಿಸಿರುವುದು (ಅದರಿಂದ ಅದಕ್ಕಾಗಿ) ಆಯಾಸ ಪಡಬೇಕಾಗಿಲ್ಲ ಎಂದೂ ತಿಳಿ.

೭೧. ಯಾವುದು ವೇದನ ಮಾತ್ರದಿಂದ ಇರುವುದೋ ಅದು ಅವೇದನದಿಂದ ಕ್ಷಯವಾಗುವುದು. ಆ ವೇದನವನ್ನು ತಿಳಿಯುವ ಸಾಕ್ಷಿಯು ಒಂದುಂಟಲ್ಲಾ, ಅದೇ ಆತ್ಮನು. ಆ ಆತ್ಮವನ್ನಾದರೂ ನೋಡು. ಈ ಜಗತ್ತನ್ನಾದರೂ ನೋಡು. ನಿನಗೆ ಯಾವುದು ಬೇಕೋ ಅದನ್ನು ಮಾಡು.

ವೀಚಿರ್ಯಥಾಂಭಸಃ ಸ್ಪಂದೋ ಜಗಚ್ಚೈವ ತಥಾ ಚಿತೌ |
ಏತಾವನ್ಮಾತ್ರ ಏವಾತ್ರ ಭೇದೋ ಯದ್ರಘುನಂದನ ॥ ೭೨ ॥

ದೇಶಕಾಲಸ್ವರೂಪೇಷು ಸತ್ಸು ವೀಚ್ಯಾದಿತಾಂಭಸಿ ॥
ಜಗದಾದೌ ತು ದೇಶಾದ್ಯಾ ಅಸಂತೋ ಜಗತೀಕ್ಷಿತಾಃ ॥ ೭೩ ॥

ಆಭಾಸ್ವರಂ ತ್ರಿಜಗದಿತ್ಯತಿಭಾತಿ ಭಾಸ್ವ
ತ್ಸ್ವಂ ವೇದನಂ ವಿದನವೇವ ಚಿತೇಃ ಸ್ವರೂಪಂ |
ವಾಚಿ ಸ್ಥಿತಂ ಭವತಿ ಚೈತದುಪೋಹ ಭೇದ
ಕ್ಲಿಷ್ಟಂ ಪ್ರಶಾಂತವಚನಸ್ತು ಶಿವಃ ಪರಾತ್ಮಾ ॥ ೭೪ ॥

---

೭೨. ಜಲವು ವ್ಯಾಪಾರದಿಂದಲೇ ತರಂಗವು ಕಾಣುವಂತೆ, ಚಿತ್ತಿನಲ್ಲಿ ನಡೆಯುವ ವ್ಯಾಪಾರದಿಂದಲೇ ಈ ಜಗತ್ತು ಇರುವುದು. ರಘುನಂದನ, ಚಿತ್ತು ಜಗತ್ತುಗಳಿಗೆ ಇಷ್ಟೇ ವ್ಯತ್ಯಾಸವು.

೭೩. ದೇಶಕಾಲರೂಪ (ನಾಮ)ಗಳು ಇರುವವರೆಗೂ ನೀರಿನಲ್ಲಿ ತರಂಗವು ಇರುವಂತೆ: ಜಗತ್ತು ಹುಟ್ಟಿದಾಗಲೇ ದೇಶಾದಿಗಳು ಬಂದು, ಅಸತ್ಯಗಳೇ ಆದರೂ ಜಗತ್ತಿನಲ್ಲಿ ಇದ್ದಂತೆ ಇರುವುವು.

೭೪. ಸ್ವಯಂ ಪ್ರಕಾಶವಾಗಿರುವ, ಜ್ಞಾನಸ್ವರೂಪವು ಯಾವುದೋ, ಆತ್ಮವು ಯಾವುದೋ, ಅದೇ ಅವಿದ್ಯಾವರಣಕ್ಕೆ ಸಿಕ್ಕಿ ತನ್ನ ಪ್ರಕಾಶವನ್ನು ಅಷ್ಟು ಮರೆಮಾಡಿಕೊಂಡಂತಾಗಿ ಈ ಜಗತ್ಸ್ವರೂಪವಾಗಿ ಪ್ರತ್ಯೇಕವಾಗಿರುವಂತೆ ಜಡವಾಗಿರುವಂತೆ ಕಾಣುವುದು. ಆದರೂ ಚಿತ್ತಿನ ನಿಜರೂಪವು ಜ್ಞಾನವೇ (ಅಲ್ಲದೆ ಅಜ್ಞಾನವಲ್ಲ.) ಭೇದಸ್ವರೂಪವಾಗಿ ಕಾಣುತ್ತಿರುವ ಈ ಜಗತ್ತೆಲ್ಲವೂ ವಾಕ್ಕಿನಲ್ಲಿ ಮಾತ್ರವಿರುವುದು. ಇದನ್ನು ಉಪಸಂಹಾರ ಮಾಡು. ವಾಕ್ಕನ್ನು ಬಿಟ್ಟು ಉಪಶಾಂತನಾಗಿ ಮೌನವಾಂತರೆ ಉಳಿಯುವುದು ಯಾವುದೋ ಅದೇ ಪರಾತ್ಮವು: ಶಿವವು.

ಸಂವೇದನಂ ಸರ್ವ ಇತೀಹಶಬ್ದಾ
ದರ್ಥಾದಭಿನ್ನೌ ನ ಕದಾಚಿದೇತೌ ।
ವೀಚ್ಯಂಭಸೀ ದ್ವೇ ಇತಿ ನೋಚಿತೋಕ್ತಿ
ರ್ಯಸ್ಯಾಜ್ಞಾತಾಯಾಂ ತ್ವಿದಮೇವ ಯುಕ್ತಂ ॥ ೭೫ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ ಜೀವಟೋಪಾಖ್ಯಾನೇ "ಸ್ವಪ್ನಶತರುದ್ರೀಯಕಥನಂ" ನಾಮ
ತ್ರಿಷಷ್ಟಿತಮಃ ಸರ್ಗಃ

---

೭೫. ಸಂವೇದನ ಸ್ವರೂಪನಾದ ಪರಮಾತ್ಮನೇ ಸರ್ವವೂ ಆಗಿರುವನು ಎಂದು ಅರಿತು, ಶಬ್ದದಿಂದಾಗಲೀ ಅರ್ಥದಿಂದಾಗಲಿ, ಈ ಬ್ರಹ್ಮ ಜಗತ್ತುಗಳು ಯಾವಾಗಲೂ ಬೇರೆಬೇರೆಯಲ್ಲ ಎಂಬುದನ್ನು ತಿಳಿ. ಜಲವೂ ತರಂಗವೂ ಬೇರೆ ಬೇರೆ ಎನ್ನುವುದು ಉಚಿತವೇ? ಅಜ್ಞರು ಹಾಗೆ ಹೇಳಿದರೂ ತಿಳಿದವರು ಹಾಗೆನ್ನ ಬಾರದು.

(ಹೋಲಿಸಿ. ಯತ್ರ ಯತ್ರ ಮನೋದೇಹೀ । ಧಾರಯೇತ್ಸಕಲಂ ಧಿಯಾ ।
ಸ್ನೇಹಾದ್ದ್ವೇಷಾದ್ಭಯಾದ್ವಾಪಿ । ಯಾತಿ ತತ್ತತ್ಸರೂಪತಾಂ॥
ಭಾಗವತ ಸ್ಕಂಧ ೧೦-೯-೨೨.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಸ್ವಪ್ನಶತರುದ್ರೀಯಕಥನ" ಎಂಬ ಅರವತ್ತಮೂರನೆಯ ಸರ್ಗವು

ಚತುಃಷಷ್ಟಿತಮಃ ಸರ್ಗಃ

ಶ್ರೀರಾಮ ಉವಾಚ:—

ಜೀವಟಬ್ರಾಹ್ಮಣಾದೀನಾಂ ಹಂಸಾದೀನಾಂ ಮುನೀಶ್ವರ ।
ಭಿಕ್ಷುಸ್ವಪ್ನಶರೀರಾಣಾಂ ಸಂಪನ್ನಂ ಕಿಮತಃ ಪರಂ ॥ ೧ ॥

ಶ್ರೀ ವಸಿಷ್ಠ ಉವಾಚ:—

ರುದ್ರೇಣ ಸಹ ಸಂಭೂಯ ಪ್ರಬುದ್ಧಾಃ ಸರ್ವ ಏವ ತೇ ।
ಮಿಥಶ್ಚ ದೃಷ್ಟಸಂಸಾರಾ ರುದ್ರಾಂಶಾಃ ಸುಖಿನಃ ಸ್ಥಿತಾಃ ॥ ೨ ॥

ತೇನ ರುದ್ರೇಣ ತಾಂ ಮಾಯಾಮವಲೋಕ್ಯ ಯಥೋದಿತಾಂ ।
ಸ್ವಾಂಶಾಸ್ತಾಮೇವ ಸಂಸಾರಾಸ್ಥಿತಂ ತೇ ಪ್ರೇಷಿತಾಃ ಪುನಃ ॥ ೩ ॥

ಅರವತ್ತನಾಲ್ಕನೆಯ ಸರ್ಗವು

ಶ್ರೀ ರಾಮನು ಕೇಳಿದನು :—

೧. “ಎಲೈ ಮುನೀಶ್ವರನೆ, ಭಿಕ್ಷುವಿನ ಸ್ವಪ್ನದಲ್ಲಿ ಶರೀರಿಗಳಾಗಿ ಕಾಣಿಸಿಕೊಂಡ ಜೀವಟ ಬ್ರಾಹ್ಮಣಾದಿಗಳಿಗೂ ಹಂಸಾದಿಗಳಿಗೂ ಮುಂದೆ ಏನು ಗತಿಯಾಯಿತು ?

ಶ್ರೀ ವಸಿಷ್ಠನು ಹೇಳಿದನು:—

೨. ರುದ್ರನ ಜೊತೆಯಲ್ಲಿಯೇ ಇದ್ದು ಅವರೆಲ್ಲರೂ ಆತನಂತೆಯೇ ಬೋಧಸಂಪನ್ನರಾದರು. ಒಬ್ಬರೊಬ್ಬರು ಇನ್ನೊಬ್ಬರೊಬ್ಬರ ಸಂಸಾರವನ್ನು ನೋಡಿದರು. ರುದ್ರಾಂಶಸಂಪನ್ನರಾಗಿ ಸುಖಿಗಳಾದರು.

೩. ಆ ರುದ್ರನು ಮಾಯಾಮಯವಾದ ಜೀವಟಾದಿಗಳ ಸಂಸಾರವನ್ನು ನೋಡಿ, ಸಂಸಾರವನ್ನು ಮುಗಿಸಿಕೊಂಡು ಬನ್ನಿರೆಂದು ಸ್ವಾಂಶಸಂಪನ್ನರಾದ ಅವರನ್ನು ಕಳುಹಿಸಿಕೊಟ್ಟನು.

ಶ್ರೀರುದ್ರ ಉವಾಚ :—

ಗಚ್ಛತಾಶು ನಿಜಂ ಸ್ಥಾನಂ ತತ್ರ ಭುಕ್ತ್ವಾ ಕಲತ್ರಕೈಃ |
ಕಂಚಿತ್ಕಾಲಂ ಸಮಂ ಭೋಗಾನ್ಮತ್ಸಕಾಶಮುಪೈಷ್ಯಥ || ೪ ||

ಭವಿಷ್ಯಥ ಮದಂಶಾ ಯೇ ಗಣಾ ಮತ್ಪುರಭೂಷಣಾಃ |
ತತೋ ಮಹಾಪ್ರಲಯತೋ ಯಾಸ್ಯಾಮಸ್ತತ್ಪರಂ ಪದಂ || ೫ ||

ಶ್ರಿ ವಸಿಷ್ಠ ಉವಾಚ :—

ಇತ್ಯುಕ್ತ್ವಾ ಭಗವಾನ್ ರುದ್ರಸ್ತೇಷಾಂ ಸೋಽಂತರಧೀಯತ |
ಅಂತ್ಯಸಂಸಾರಸಂಖ್ಯಾನಂ ರುದ್ರಾಣಾಂ ಮಧ್ಯಮಾಯಯೌ || ೬ ||

ಪ್ರಯಯುಃ ಸ್ವಾಸ್ಪದಂ ತೇಽಪಿ ಜೀವಟಬ್ರಾಹ್ಮಣಾದಯಃ |
ಸ್ವಕಲತ್ರೈಃ ಸಮಂ ದೇಹಂ ತ್ಯಕ್ತ್ವಾ ಯಥಾ ಕಾಲತಃ || ೭ ||

ಶ್ರೀ ರುದ್ರನು ಹೇಳಿದನು :—

೪. ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ತೆರಳಿ ನಿಮ್ಮ ನಿಮ್ಮ ಸಂಸಾರಗಳಲ್ಲಿದ್ದು ಕೆಲವು ಭೋಗಗಳನ್ನು ಅನುಭವಿಸಿ ಮತ್ತೆ ನನ್ನ ಬಳಿಗೆ ಬರುವರಾಗಿ

೫. ಎಲ್ಲೈ ನನ್ನಂಶದಿಂದ ಹುಟ್ಟಿದವರೆ, ನನ್ನ ನಗರಕ್ಕೆ ಭೂಷಣಗಳಾದ ಗಣಗಳಾಗಿ ಮಹಾಪ್ರಲಯದವರೆಗೂ ಇದ್ದು ಅನಂತರ ನಾವೆಲ್ಲರೂ ಪರಮಪದವನ್ನು ಹೊಂದೋಣ.

ಶ್ರೀ ವಸಿಷ್ಠನು ಹೇಳಿದನು :—

೬. ಭಗವಾನ್ ರುದ್ರನು ಅವರಿಗೆ ಹೀಗೆ ಹೇಳಿ ಅಂತರ್ಧಾನವಾದನು. ರುದ್ರಾಂಶ ಸಂಪನ್ನರಾದ ಅವರೆಲ್ಲರಿಗೂ ಅಂತ್ಯನಾದ ರುದ್ರನ ಸಂಸಾರದ ದರ್ಶನವು ತಮ್ಮೆಲ್ಲರ ಸಂಸಾರಗಳ ಮಧ್ಯೇ ಬಂತು.

೭. ಜೀವಟ ಬ್ರಾಹ್ಮಣಾದಿಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ತಮ್ಮ ತಮ್ಮ ಕುಟುಂಬದವರೊಡನೆ ಯಥಾಕಾಲದಲ್ಲಿ ದೇಹವನ್ನು ಬಿಟ್ಟು,

ರುದ್ರಲೋಕಂ ಸಮಾಸಾದ್ಯ ಭವಿಷ್ಯಂತಿ ಗಣೋತ್ತಮಾಃ |
ಕದಾಚಿದ್ವ್ಯೋಮ್ನಿ ದೃಶ್ಯಂತೇ ತಾರಕಾಕಾರಕಾರಿಣಃ ॥ ೮ ॥

ಶ್ರೀ ರಾಮ ಉವಾಚ:—

ಭಿಕ್ಷುಸಂಕಲ್ಪರೂಪಾಸ್ತೇ ಜೀವಟಬ್ರಾಹ್ಮಣಾದಯಃ |
ಕಥಂ ಸತ್ಯತ್ವಮಾಯಾತಾಃ ಸಂಕಲ್ಪಾರ್ಥೇ ಕ್ವ ಸತ್ಯತಾ ॥ ೯ ॥

ಶ್ರೀ ವಸಿಷ್ಠ ಉವಾಚ ;—

ಸಂಕಲ್ಪಸತ್ಯತಾ ತ್ವಂಶೇ ತ್ಯಜ ಸಂಕಲ್ಪಸತ್ಯತಾಂ |
ತತ್ರ ಯನ್ನಾಸ್ತಿ ಯತಃ ಸರ್ವಾತ್ಮ ತತ್ಪದಂ ॥ ೧೦ ॥

---

೮. ರುದ್ರಲೋಕವನ್ನು ಸೇರಿ ಗಣೋತ್ತಮರಾಗಿ ಆಗಾಗ ಆಕಾಶದಲ್ಲಿ ನಕ್ಷತ್ರಗಳಾಗಿ ಕಾಣುವರು.

ಶ್ರೀ ರಾಮನು ಕೇಳಿದನು :—

೯. ಭಿಕ್ಷು ಸಂಕಲ್ಪದಿಂದ ಆಕಾರವನ್ನು ಪಡೆದ ಆ ಜೀವಟ ಬ್ರಾಹ್ಮಣಾದಿಗಳು ಸತ್ಯತ್ವವನ್ನು ಹೇಗೆ ಪಡೆದರು? ಸಂಕಲ್ಪಾರ್ಥಕ್ಕೆ ಸತ್ಯತೆಯೂ ಉಂಟೆ ?

ಶ್ರೀ ವಸಿಷ್ಠನು ಹೇಳಿದನು:—

೧೦. ಸಂಕಲ್ಪ ಸತ್ಯತೆಯೂ ಅಂಶವಾಗಿ ಇರುವುದೇ ಹೊರತು ಪೂರ್ಣವಾಗಿ ಇರುವುದಿಲ್ಲವಾದ್ದರಿಂದ ಅದನ್ನು ಬಿಡು. ಅದರಲ್ಲಿ ಇಲ್ಲದ ಅಂಶವು ಇಲ್ಲವೇ ಇಲ್ಲ. ಎಲ್ಲವೂ ಆತ್ಮವೇ ! ಆದುದರಿಂದ ಎಲ್ಲವೂ ತತ್ಪದವೇ !

(ಅಂಶೇ ಅಧಿಷ್ಠಾನಚಿದಂಶ ಏವ | ಅಧ್ಯಸ್ತಾಂಶೇ ತು ಸಂಕಲ್ಪಸ್ಯ ಸತ್ಯತಾಂ ವಿವೇಕೇನ ತ್ಯಜ| ತತ್ರ ಸದಸತ್ಸಂವಲಿತ ಸಾಂಕಲ್ಪಿಕಾರ್ಥೇ ಯತ್ಸದತಿರಿಕ್ತರೂಪಂ ಪೂರ್ವೋತ್ತರಕಾಲಯೋಃ ನಾಸ್ತಿ ತದೇವ ನಾಸ್ತಿ, ತತ್ಪದ ಮಧಿಷ್ಠಾನಂ ತು ಯತಃ ಸರ್ವಾತ್ಮ ತತೋ ಅಸ್ತ್ಯೇವೇತಿ ತತ್ಸತ್ತಯಾ ಏವ ಭೋಜಕಾದೃಷ್ಟೋದ್ಬೋಧಿತ ಸಾಂಕಲ್ಪಿಕಾರ್ಥಸ್ಯ ಅರ್ಥಕ್ರಿಯಾ ಸಾಮರ್ಥ್ಯಂ-ಇತ್ಯರ್ಥಃ —ತಾ. ಪ್ರ.)

ಯತ್ಸ್ವಪ್ನೇ ದೃಶ್ಯತೇ ಯಚ್ಚ ಸಂಕಲ್ಪೈರವಲೋಕ್ಯತೇ ।
ತತ್ತಥಾ ವಿದ್ಯತೇ ತತ್ರ ಸರ್ವಕಾಲಂ ತದಾತ್ಮಕಂ ॥ ೧೧ ॥

ತದ್ದೇಶಕಾಲಾತ್ಮತಯಾ ಗತ್ವಾ ದೇಶಾಂತರಂ ಯಥಾ ।
ದೇಶಾದ್ದೇಶಾಂತರಂ ಯದ್ವನ್ನ ಗತ್ಯಾತ್ಮಾದಿಕಂ ವಿನಾ ॥ ೧೨ ॥

ನ ಲಭ್ಯತೇ ತಥಾ ಸ್ವಪ್ನೋ ವಿನಾ ತತ್ರ ನ ಲಭ್ಯತೇ ।
ಸರ್ವಮಸ್ತಿ ಚಿತಃ ಕೋಶೇ ಯದ್ಯಥಾಲೋಕಯತ್ಯಸೌ ॥ ೧೩ ॥

ಚಿತ್ತಥಾ ತದವಾಪ್ನೋತಿ ಸರ್ವಾತ್ಮತ್ವಾದವಿಕ್ಷತಂ ।
ಸಂಕಲ್ಪಃ ಸ್ವಪ್ನಕಸ್ತ್ವಂಗ ಯಯಾ ಚ ದಶಯಾಪ್ಯತೇ ॥ ೧೪ ॥

---

೧೧. ಯಾವುದು ಸ್ವಪ್ನದಲ್ಲಿ ಕಾಣುವುದೋ, ಯಾವುದನ್ನು ಸಂಕಲ್ಪಗಳಿಂದ ಕಾಣಲಾಗುವುದೋ, ಅದು ಹಾಗೆಯೇ ಅಲ್ಲಿಯೇ ಎಲ್ಲಾ ಕಾಲಗಳಲ್ಲಿಯೂ [ಸದಧಿಷ್ಠಾನವಾಗಿಯೇ] ದೇಶಾಂತರ ಹೋಗಿರುವವರಂತೆ ದೇಶಕಾಲಾತ್ಮಕವಾಗಿ ಇರುವುದು.

೧೨. ದೇಶಾಂತರದಲ್ಲಿರುವ ವಸ್ತುವು, ಕಾಣಬೇಕಾದರೆ ತಾನು ಇರುವ ಕಡೆಯಿಂದ ಗಮನ ಮಾಡಬೇಕು: ಅದನ್ನು ಕಾಣುವ ಮನಸ್ಸು, ಕಣ್ಣು, ತೋರಿಸುವ ಮನುಷ್ಯ, ಇವರೆಲ್ಲ ಇರಬೇಕು: ಇದರಲ್ಲಿ ಯಾವುದು ಇಲ್ಲದಿದ್ದರೂ ಅದು ಹೇಗೆ ಕಾಣುವುದಿಲ್ಲವೋ ಹಾಗೆಯೇ ಸ್ವಪ್ನವಾಗಬೇಕಾದರೂ ಆ ದೇಶ ಕಾಲಾಂತರಗಳು ಇಲ್ಲದೆ ಆಗುವುದಿಲ್ಲ.

[ಇಲ್ಲಿ ಅರ್ಥವು ಸ್ಪಷ್ಟವಾಗಿಲ್ಲ. "ಸ್ವಪ್ನ ಸಂಕಲ್ಪಗಳಲ್ಲಿಯೂ ದೇಶ ಕಾಲಗಳು ಉಂಟು. ಯಾವುದೋ ದೇಶ, ಯಾವುದೋ ಕಾಲದಲ್ಲಿ ನಡೆದುದೋ, ನಡೆಯುವುದೋ, ಸ್ವಪ್ನವಾಗಿ ಇಲ್ಲಿ ಕಾಣುವುದು. ಅದರಿಂದ ಸ್ವಪ್ನವೂ ಚಿತ್ತಿನ ಏಕಾಂಶವಾದುದರಿಂದ ಸತ್ಯವೇ ಆದರೂ ಅದು ಪ್ರಾತಿಭಾಸಿಕವಾದುದರಿಂದ ಸತ್ಯವಲ್ಲ ಎಂಬುದು ಮಥಿತಾರ್ಥವು. ಈ ಅರ್ಥವನ್ನು ಹೇಳುವ. ಉಪಾಖ್ಯಾನ ಗಳು ಹಿಂದೆಯೂ ಬಂದಿವೆ. ಅದ್ವೈತಿಗಳ ದೃಷ್ಟಿಯಲ್ಲಿ ದೇಶ ಕಾಲಾದಿ ಪರಿ ಚ್ಛೇದಕಗಳೂ ಸತ್ಯವಲ್ಲ: ಅವೂ ಪ್ರಾತಿಭಾಸಿಕ ಸಾಮಗ್ರಿಯಂತೆಯೇ ಅವಾಸ್ತವ ಗಳು. ಮುಂದಿನ ಶ್ಲೋಕ ನೋಡಿ.]

೧೩-೧೪. ಕನಸಿನ ವಿಷಯಗಳೂ ಚಿತ್ತಿನ ಕೋಶದಲ್ಲಿ ಇದ್ದೇ ಇರುವುವು.

ಪರಮಭ್ಯಾಸಯೋಗಾಭ್ಯಾಂ ವಿನಾ ತ್ವೇತನ್ನ ಲಭ್ಯತೇ ।
ಯೇಷಾಂ ತು ಯೋಗವಿಜ್ಞಾನದೃಷ್ಟಯಃ ಫಲಿತಾಃ ಸ್ಥಿತಾಃ ॥ ೧೫ ॥

ಸರ್ವಂ ಸರ್ವತ್ರ ಪಶ್ಯಂತಿ ತೇ ಯತಃ ಶಂಕರಾದಯಃ ।
ಇದಮಗ್ರಗತಂ ವಸ್ತು ತಥಾ ಸಂಕಲ್ಪಿತಂ ಮಯಾ ॥ ೧೬ ॥

ನಾಪ್ಯಂ ಯತೋಽಭಯಭ್ರಂಶಂ ಸ ಪ್ರಾಪ್ನೋತ್ಯುಭಯಾಶ್ರಯಾತ್ ।
ಸರ್ವಂ ಹ್ಯಭಿಮತಂ ಕಾರ್ಯಮೇಕನಿಷ್ಠಸ್ಯ ಸಿಧ್ಯತಿ ॥ ೧೭ ॥

ದಕ್ಷಿಣಾಂ ಕಕುಭಂ ಗಚ್ಛನ್ಕಃ ಪ್ರಾಪ್ನೋತ್ಯುತ್ತರಾಂ ದಿಶಂ ।
ಸಂಕಲ್ಪಾರ್ಥಪರೈರೇವ ಸಂಕಲ್ಪಾರ್ಥೋಽವಗಮ್ಯತೇ ॥ ೧೮ ॥

ಚಿತ್ತು ಆತ್ಮವಾದುದರಿಂದ ಆ ಕನಸನ್ನು ಸಮಗ್ರವಾಗಿ ಹಾಗೆಯೇ ತೋರಿಸಿಬಿಡುವುದು. ಸಂಕಲ್ಪವಾಗಲಿ, ಸ್ವಪ್ನವಾಗಲಿ ಯಾವ ರೀತಿಯಲ್ಲಿ ಬರುವುದು ಎಂಬುದನ್ನು ಕೇಳು.

೧೪–೧೫–೧೬. ಹೀಗಾಗಬೇಕಾದರೆ ಶ್ರೇಷ್ಠವಾದ ಅಭ್ಯಾಸವೂ ಯೋಗವೂ ಬೇಕು. ಅವಿಲ್ಲದಿದ್ದರೆ ಈ ಸಂಕಲ್ಪ, ಸ್ವಪ್ನಗಳು ಫಲಿಸುವುದಿಲ್ಲ. ಯಾರಿಗೆ ಯೋಗ ವಿಜ್ಞಾನ ದೃಷ್ಟಿಗಳು ಫಲವಾಗಿವೆಯೋ ಆ ಶಂಕರಾದಿಗಳು ಸರ್ವವನ್ನೂ, ಸರ್ವ ದೇಶ ಕಾಲಗಳಲ್ಲಿಯೂ ನೋಡಬಲ್ಲರು. ಎದುರಿಗೆ ಇರುವ ಈ ವಸ್ತುವನ್ನು ನಾನು ಹೀಗೆ ನೋಡಬೇಕೆಂದು ಸಂಕಲ್ಪಿಸಿದ್ದರೇನೇ ಹಾಗೆ ಕಾಣುವುದು. ದೇಶ ಕಾಲಗಳ ಆಶ್ರಯವಿಲ್ಲದಿದ್ದರೆ ಸಿಕ್ಕುವುದಿಲ್ಲ : ಆ ಉಭಯಗಳ ಆಶ್ರಯವು ದೊರೆತರೆ ಅದು ಇಂದ್ರಿಯ ಗೋಚರವಾಗುವುದು. ಮನಸ್ಸು ಏಕಾಗ್ರವಾದರೆ ಯಾವುದೋ ಒಂದರಲ್ಲಿಯೇ ನಿಷ್ಠವಾದರೆ, ಅದು [ದೇಶ ಕಾಲಾಶ್ರಯವನ್ನು ಪಡೆದು] ಸಿದ್ಧಿಯಾಗಲೇ ಆಗುವುದು.

೧೮. ದಕ್ಷಿಣ ದಿಕ್ಕಿಗೆ ಹೋದವನಿಗೆ ಉತ್ತರ ದಿಕ್ಕು ಎಂದೂ ಸಿಕ್ಕುವುದಿಲ್ಲ. ಸಂಕಲ್ಪವನ್ನು ಹಿಡಿದು ಕೆಲಸ ಮಾಡುವವರಿಗೆ ಸಂಕಲ್ಪಾರ್ಥವು ಸಿಕ್ಕಿಯೇ ಸಿಕ್ಕುವುದು.

ಅಗ್ರಸ್ಥಾರ್ಥಪರ್ಯೈರಗ್ರೇ ಸಂಸ್ಥಿತೋಽರ್ಥೋಽವಗಮ್ಯತೇ |
ಅಗ್ರಸ್ಥೇಬುದ್ಧಿಸಂಸ್ಥೇ ಯಃ ಸಂಕಲ್ಪಂ ಪ್ರಾಪ್ತುಮಿಚ್ಛತಿ || ೧೯ ||

ತದಾಸಾವೇಕನಿಷ್ಠತ್ವಾಭಾವಾತ್ತನ್ನಾಶಯೇದ್ದ್ವಯಂ |
ತಸ್ಮಾದೇಕಾರ್ಥನಿಷ್ಠತ್ವಾದ್ಭಿಕ್ಷುಜೀವೇನ ರುದ್ರತಾಂ || ೨೦ ||

ಪ್ರಾಪ್ಯ ಸರ್ವಾತ್ಮನಾ ಲಬ್ಧಂ ತಥಾ ಸರ್ವಂ ತಥಾಸ್ಥಿತೇಃ |
ಭಿಕ್ಷುಸಂಕಲ್ಪಜೀವಾಸ್ತೇ ಪ್ರತ್ಯೇಕಂ ತಜ್ಜಗತ್ಪೃಥಕ್ || ೨೧ ||

ಪಶ್ಯಂತಿ ಚೈತೇನಾನ್ಯೋನ್ಯಂ ರುದ್ರಜ್ಞಾನಾದೃತೇ ತತಃ |
ಅಪ್ರಬುದ್ಧಾಃ ಪ್ರಜಾಯಂತೇ ಜೀವಾ ಜೀವಾಂತಬೋಧಿನಃ || ೨೨ ||

---

೧೯. ಯಾವನಾದರೊಬ್ಬನು ತನ್ನ ಎದುರಿಗೆ ಇದ್ದು ಬುದ್ಧಿಗೆ ಬರುವುದರಲ್ಲಿಯೇ ತನ್ನ ಸಂಕಲ್ಪ ಸಿದ್ಧಿಯನ್ನು ಕಾಣಬೇಕು ಎಂದು ಇಚ್ಛಿಸಿದರೆ, ಎದುರಿಗಿರುವ ಅರ್ಥವಾಗಿಯೇ ತನ್ನ ಸಂಕಲ್ಪ ಸಿದ್ಧಿಯನ್ನು ಪಡೆಯುವನು.

೨೦. ಅದೇ ಅಂತಹ ಏಕನಿಷ್ಠೆಯು ಇಲ್ಲದಿದ್ದರೆ ಸಂಕಲ್ಪವೂ ಸಿದ್ಧಿಯೂ ಎರಡೂ ನಷ್ಟವಾಗುವುವು ಅದರಿಂದ ಭಿಕ್ಷುವಿನ ಚಿತ್ತವು ಏಕಾರ್ಥನಿಷ್ಠವಾಗಿದ್ದುದರಿಂದ ರುದ್ರತ್ವವನ್ನು [ಹೊಂದಿತು].

೨೧. ಆ ರುದ್ರತ್ವವನ್ನು ಹೊಂದಿ ಅದು ಬುದ್ಧಜೀವವಾದುದರಿಂದ ಅದಕ್ಕೆ ಸರ್ವಜ್ಞತ್ವವು ಉಂಟಾಗಿ ಅದುವರೆಗೆ ನಡೆದಿದ್ದ ಸರ್ವವನ್ನೂ ಕಂಡಿತು. ಆದರೆ ಅದೇ ಭಿಕ್ಷು ಸಂಕಲ್ಪದಿಂದ ಆದ ಇತರ ಜೀವ ಜಗತ್ತುಗಳು ಪ್ರತ್ಯೇಕ ಪ್ರತ್ಯೇಕವಾಗಿದ್ದುವು.

೨೨. ಅವರು ರುದ್ರ ಜ್ಞಾನವಿಲ್ಲದೆ ಒಬ್ಬರನ್ನೊಬ್ಬರು ನೋಡಲಾರದವರಾದರು. ಏಕೆಂದರೆ ಅವರು ಅಪ್ರಬುದ್ಧರಾಗಿದ್ದರು. ಜೀವರು ತಮ್ಮ ತಮ್ಮ ಸಂಸಾರವನ್ನು ಮುಗಿಸಬೇಕಾದರೆ, ಅದರಿಂದ ಹೊರಗೆ ಬರಬೇಕಾದರೆ ರುದ್ರನ ಜ್ಞಾನವು ದೊರೆಯಬೇಕು.

ತದಿಚ್ಛಯಾಶು ತದ್ರೂಪಾ ಬಹುರೂಪಾಶ್ಚತೇ ಇಹ |
ಇಹ ವಿದ್ಯಾಧರೋಽಹಂ ಸ್ಯಾಮಹಂ ಸ್ಯಾಮಿಹ ಪಂಡಿತಃ || ೨೩ ||

ಇತ್ಯೇಕಧ್ಯಾನಸಾಫಲ್ಯಂ ದೃಷ್ಟಾಂತೋಽಸ್ಯಾಂ ಕ್ರಿಯಾಸ್ಥಿತೌ || || ೨೪ ||

ಏಕತ್ವಂ ಚ ಬಹುತ್ವಂ ಚ ಮೌರ್ಖ್ಯಂ ಪಾಂಡಿತ್ಯಮೇವ ವಾ ।
ದೇವತ್ವ ಮಾನುಷತ್ವಂ ಚ ದೇಶಕಾಲಕ್ರಿಯಾಕ್ರಮೈಃ |
ತುಲ್ಯಕಾಲಮಲಂಕರ್ತುಂ ಧಾರಣಾಧ್ಯಾನಯತ್ನತಃ || ೨೫ ||

ಸರ್ವಶಕ್ಯಃ ಸ್ವರೂಪತ್ವಾಜ್ಜೀವಸ್ಯಾಸ್ತ್ಯೇಕಶಕ್ತತಾ |
ಅನಂತಶ್ಚಾಂತಪೃಕ್ತಶ್ಚ ಸ್ವಭಾವೋಽಸ್ಯ ಸ್ವಭಾವತಃ || ೨೬ ||

---

೨೩. ಆ ರುದ್ರನ ಇಚ್ಛೆಯಿಂದ ಅವರು ರುದ್ರರೂಪರೂ ಆಗಬಹುದು. ಬಹುರೂಪರೂ ಆಗಬಹುದು. ಇಲ್ಲಿ ವಿದ್ಯಾಧರನಾಗಿರುವೆನು. ಇಲ್ಲಿ ಪಂಡಿತನಾಗಿರುವೆನು. (ಎಂಬ,)

೨೪. ಎಂಬುದಾಗಿ ಧ್ಯಾನವನ್ನು ಏಕನಿಷ್ಠೆಯಿಂದ ಮಾಡುತ್ತಿದ್ದರೆ, ಅದು ಸಫಲವಾಗುವುದು. ಇದು ನಿಜವು, ಸಂಕಲ್ಪವು ಕ್ರಿಯಾಕಾರಿಯಾಗುವುದು ಎನ್ನುವುದಕ್ಕೆ ಈ ಭಿಕ್ಷುವಿನ ಇತಿಹಾಸವೇ ದೃಷ್ಟಾಂತರವು.

೨೫. ಏಕತ್ವ, ಬಹುತ್ವ, ಮೌರ್ಖ್ಯ, ಪಾಂಡಿತ್ಯ, ದೇವತ್ವ. ಮನುಷ್ಯತ್ವ ಇವೆಲ್ಲವೂ ದೇಶ, ಕಾಲ, ಕ್ರಿಯಾ, ಕ್ರಮಗಳಿಂದ ಆದವು. ಇವೆಲ್ಲವನ್ನೂ ಧಾರಣಾ, ಧ್ಯಾನಗಳ, ಬಲದಿಂದ ಏಕಕಾಲದಲ್ಲಿಯೇ ಮಾಡಲು ಸಾಧ್ಯವು.

೨೬. ಸ್ವರೂಪದಲ್ಲಿರುವ ಚಿತ್ತಿಗೆ ಸರ್ವಶಕ್ತಿಗಳೂ ಉಂಟು. ಸ್ವರೂಪದಿಂದ ಚ್ಯುತವಾಗಿ ಜೀವನಾಗಿರುವ ಚಿತ್ತಿಗೆ ಏಕಶಕ್ತಿಯು, ಜೀವನಿಗೆ ಚಿತ್ಸ್ವಭಾವದಿಂದ ಅನಂತ ಶಕ್ತಿಗಳು ಇದ್ದರೂ, ಇವನು ತನ್ನ ಅಭಿಮಾನವನ್ನು ಒಂದೊಂದು ದೇಹದಲ್ಲಿಟ್ಟುಕೊಂಡು ತನ್ನ ಕ್ಷೇತ್ರವಿಷ್ಟೇ ಎಂದುಕೊಂಡಿರುವುದರಿಂದ, ಆ ಪರಿಚ್ಛೇದ ಬಲದಿಂದ ಅವನೂ ಅಲ್ಪಶಕ್ತಿಯಾಗಿರುವನು.

ಸವಿಕಾಸಃ ಸಸಂಕೋಚೋಹಿಂಸ್ರಸ್ತೇನ ಚಿದಾತ್ಮನಃ ।
ಯದಿಚ್ಛತಿ ತದಸ್ಯಾಂಗ ಜಂತುಃ ಸಂಪದ್ಯತೇ ಸ್ವಯಂ ॥ ೨೭ ॥

ಸ್ವಯಂ ಸಂಪಾದಿತೈರೇಭಿರ್ದೇಶಕಾಲಕ್ರಿಯಾಕ್ರಮೈಃ ।
ಯೋಗಿನ್ಯೋ ಯೋಗಿನಶ್ಚೇಹ ತಿಷ್ಠಂತ್ಯನ್ಯತ್ರ ಯತ್ರ ಚ ॥ ೨೮ ॥

ಇಹ ವಾಮುತ್ರ ಭೋಗೇನ ದೃಷ್ಟಮೇತದನೇಕಶಃ ।
ಕಾರ್ತವೀರ್ಯೋ ಗೃಹೇ ತಿಷ್ಠನ್ಸರ್ವೇಷಾಂ ಭಯದೋಽಭವತ್ ॥ ೨೯ ॥

ವಿಷ್ಣುಃ ಕ್ಷೀರೋದಧೌ ತಿಷ್ಠನ್ಜಾಯತೇ ಪುರುಷೋ ಭುವಿ ।
ಪರ್ಶ್ವರ್ಥಂ ಯಾಂತಿ ತಿಷ್ಠಂತ್ಯೋ ಯೋಗಿನ್ಯೋ ಯೋಗಿನೀಗಣೇ ॥ ೩೦ ॥

---

೨೭. ಇದರಿಂದಲೇ ಜೀವರು ತಾವು ತಾವು ಅನುಭವಿಸುವ ವಿಕಾಸ (ಸುಖ), ಸಂಕೋಚ (ದುಃಖ)ಗಳು ಇವುಗಳಿಗೆ ತಾವೇ ಹೊಣೆಯಾಗಿರುವರು. ಇದರಿಂದಲೇ ಪರಮಾತ್ಮನು ಜೀವಜೀವರ ಸುಖದುಃಖಗಳಿಗೆ ಕಾರಣನಾಗದೆ ಅಹಿಂಸ್ರನಾಗಿ ಇರುವನು. ಪ್ರತಿಯೊಂದು ಪ್ರಾಣಿಯೂ ಏನನ್ನು ಬಯಸುವುದೋ ಅದೇ ಆಗುವುದು.

೨೮. ಹೀಗೆ ತಾವೇ ತಮ್ಮ ತಮ್ಮ ಪ್ರಯತ್ನಗಳಿಂದ ಸಂಪಾದಿಸಿರುವ ಧ್ಯಾನ ಧ್ಯಾರಣಾ ಸಾಮರ್ಥ್ಯಗಳಿಂದ ದೇಶ ಕಾಲ ಕ್ರಿಯಾಕ್ರಮಗಳನ್ನು ಆಳ ಬಲ್ಲವರಾಗಿ ಯೋಗಿಗಳೂ ಯೋಗಿನಿಯರೂ ತಾವಿದ್ದಲ್ಲಿಯೇ ಇದ್ದುಕೊಂಡು ಎಲ್ಲಿ ಎಂದರಲ್ಲಿ ಏನುಬೇಕಾದರೂ ಮಾಡಬಲ್ಲರು.

೨೯. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಏಕಕಾಲದಲ್ಲಿಯೇ ಪ್ರಾರಬ್ಧ ಭೋಗವನ್ನು ಅನುಭವಿಸುತ್ತಿರುವ ಅನೇಕ ಯೋಗ ಸಾಮರ್ಥ್ಯ ಸಂಪನ್ನರ ಉದಾಹರಣೆಗಳು ಅನೇಕಾನೇಕವಾಗಿ ಉಂಟು. ಕಾರ್ತವೀರ್ಯನು ತನ್ನ ಅರಮನೆಯಲ್ಲಿಯೇ ಇದ್ದುಕೊಂಡು ಸಮಸ್ತರನ್ನೂ ತುಳಿದು ಆಳುತ್ತಿದ್ದನು.

೩೦. ಮಹಾವಿಷ್ಣುವು ಕ್ಷೀರಸಮುದ್ರದಲ್ಲಿಯೇ ಇದ್ದುಕೊಂಡೂ ಭೂಲೋಕದಲ್ಲಿ ಮನುಷ್ಯನಾಗಿ ಹುಟ್ಟುವನು. ಯೋಗಿನಿಯರು ಯೋಗಿನೀ ಗಣದಲ್ಲಿಯೇ ಇದ್ದುಕೊಂಡೇ ಪರ್ಶ್ವರ್ಥವಾಗಿ ಸಂಚಾರ ಹೊರಡುವರು.

ಶಕ್ರಃ ಸ್ವರ್ಗಾಸನಸ್ತಿಷ್ಠನ್ಯಾತಿ ಯಜ್ಞಾರ್ಥಮುರ್ವಿಕಾಂ ।
ಸಹಸ್ರಮೇಕಂ ಭವತಿ ತಥಾ ಚಾಸ್ಮಿನ್ ಜನಾರ್ದನಃ ॥ ೩೧ ॥

ನೃಣಾಂ ಶತಾನಿ ಭಕ್ತಾನಾಂ ಮಾನುಷ್ಯಂ ಯಾತಿ ತನ್ನತೈಃ ।
ಏಕಃ ಸಹಸ್ರಂ ಭವತಿ ತಥಾ ಚೈಷ ಜನಾರ್ದನಃ ॥ ೩೨ ॥

ಅಂಶಾವತಾರಲೀಲಾಭಿಃ ಕುರುತೇ ಜಾಗತೀಂ ಸ್ಥಿತಿಂ ।
ಏಕಃ ಕಾಂತಾಸಹಸ್ರಾಣಿ ತುಲ್ಯಕಾಲಂ ನಿಮೇಷವತ್ ॥ ೩೩ ॥

ಏವಂ ತೇ ಭಿಕ್ಷುಸಂಕಲ್ಪಾ ಜೀವಟಬ್ರಾಹ್ಮಣಾದಯಃ ।
ರುದ್ರವಿಜ್ಞಾನವಶತಃ ಸ್ವಸಂಕಲ್ಪಪುರೀಂ ಗತಾಃ ॥ ೩೪ ॥

---

೩೧. ಇಂದ್ರನು ಸ್ವರ್ಗಾಸನದಲ್ಲಿಯೇ ಕುಳಿತಿದ್ದು ಯಜ್ಞಾರ್ಥವಾಗಿ ಭೂಲೋಕಕ್ಕೆ ಬರುವನು. ಜನಾರ್ದನನು ತನ್ನ ಯೋಗ ಸಾಮರ್ಥ್ಯದಿಂದಲೇ ಬೇಕೆಂದರೆ ಸಾವಿರ ರೂಪವನ್ನು ಪಡೆದು ಮತ್ತೆ ಏಕರೂಪನೇ ಆಗುವನು.

(ಅಸ್ಮಿನ್ ರಾಮಾವತಾರೇ ಜನಾರ್ದನೋ ಜನಸ್ಥಾನೇ ಚತುರ್ದಶ ಸಹಸ್ರ ರಾಕ್ಷಸವಧಾಯ ಸಹಸ್ರಂ ಸಂಪನ್ನಃ ಪುನರೇಕೋ ಭವತಿ —ತಾ. ಪ್ರ.)

೩೨. ಭಕ್ತರು ನೂರಾರು ಜನರು ಪ್ರಾರ್ಥನಾದಿಗಳಿಂದ ತನ್ನನ್ನು ಒಲಿಸಿಕೊಳ್ಳಲು ಜನಾರ್ದನನು ಅವರನ್ನು ಅನುಗ್ರಹಿಸುವುದಕ್ಕೆ ತಾನೊಬ್ಬನೇ ಆದರೂ ಸಹಸ್ರ ರೂಪಗಳನ್ನು ಧರಿಸುವನು.

(ಭಕ್ತಾನಾಂ ನೃಣಾಂ ಶತಾನಿ ಅನುಗ್ರಹೀತುಂ ಪುನರ್ಯದುಕುಲೇ ಮಾನುಷ್ಯಂ ಯಾತಿ, ತತ್ರ ಚ ಕುರುಸಭಾಯಾಂ ದುರ್ಯೋಧನಾದಿ ವ್ಯಾಮೋಹನಾಯ ಏಕಸ್ಸಹಸ್ರಂಭವತಿ । —ತಾ. ಪ್ರ.)

೩೩. ಅಂಶಾವತಾರ ಲೀಲೆಗಳಿಂದ ಜಗತ್ತಿನ ಸ್ಥಿತಿಯನ್ನು ಜನಾರ್ದನನು ಕಾಪಾಡುತ್ತಿರುವನು. ವಿದೇಹನಾಗಿ ನಿಮಿಯು ಪ್ರತಿಯೊಬ್ಬರ ರೆಪ್ಪೆಗಳಲ್ಲಿಯೂ ಕುಳಿತು ರೆಪ್ಪೆಗಳನ್ನು ಆಡಿಸುತ್ತಿರುವಂತೆ, ಜನಾರ್ದನನು ತಾನೊಬ್ಬನೇ ಷೋಡಶ ಸಹಸ್ರಕಾಂತೆಯರೊಡನೆ ಏಕಕಾಲದಲ್ಲಿಯೇ ಭೋಗಗಳನ್ನು ಅನುಭವಿಸುತ್ತಿರುವನು.

೩೪. ಹೀಗೆಯೇ ಭಿಕ್ಷು ಸಂಕಲ್ಪಜಾತರಾದ ಜೀವಟ ಬ್ರಾಹ್ಮಣಾದಿಗಳು

ತತ್ರ ಭುಕ್ತ್ವಾ ಚಿರಂ ಭೋಗಾನ್ಪ್ರಾಪ್ಯ ರುದ್ರಪುರಂ ತತಃ ।
ಗಣತಾಮಾವಸಂತಸ್ತೇ ಸ್ಥಾಸ್ಯಂತಿ ಸಪರಿಚ್ಛದಾಃ ॥ ೩೫ ॥

ನಿತ್ಯಂ ಪ್ರಪುಲ್ಲನವಕಲ್ಪಲತಾಲಯೇಷು
ರುದ್ರೇಣ ಸಾಕಮುರುರತ್ನಗುಲುಚ್ಛಕೇಷು ।
ನಾನಾಜಗತ್ಸು ಚ ತದಾ ಶಿವಪತ್ತನೇಷು
ವಿದ್ಯಾಧರೀಷ್ವಮರಮೌಲಿಧರಾಶ್ಚ ರೇಜುಃ ॥ ೩೬ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಗಣತ್ವಪ್ರಾಪ್ತಿ" ರ್ನಾಮ ಚತುಃಷಷ್ಟಿತಮಃ ಸರ್ಗಃ

ಸ್ವಪ್ನಶತರುದ್ರೀಯಂ ಸಮಾಪ್ತಂ

ರುದ್ರ ವಿಜ್ಞಾನ ಬಲದಿಂದ ತಮ್ಮ ತಮ್ಮ ಸಂಕಲ್ಪ ಪುರಿಗಳನ್ನು ಸೇರಿ ಅಲ್ಲಿ ಸಂಸಾರ ಮಾಡಿಕೊಂಡಿದ್ದರು.

೩೫. ಅಲ್ಲಿ ದೀರ್ಘಕಾಲ ಭೋಗಾದಿಗಳನ್ನು ಭೋಗಿಸುತ್ತಿದ್ದು, ಅಲ್ಲಿಂದ ರುದ್ರಪುರಕ್ಕೆ ಹೋಗಿ, ಅಲ್ಲಿ ಗಣತ್ವವನ್ನು ಹೊಂದಿ ತಮ್ಮ ತಮ್ಮ ಪರಿವಾರ ಗಳೊಡನೆ ಸುಖವಾಗಿರುವರು.

೩೬. ಆ ರುದ್ರಗಣಗಳು ಯಾವಾಗಲೂ ವಿಕಾಸವಾಗಿರುವ ಹೊಸ ಕಲ್ಪ ಲತೆಗಳಿಂದಾದ, ನಾನಾ ರತ್ನಗಳ ಗೊಂಚಲುಗಳಿಂದ ಸುಂದರವಾಗಿರುವ ಲತಾ ಗೃಹಗಳಲ್ಲಿ, ನಾನಾ ಜಗತ್ತುಗಳಲ್ಲಿ, ಶಿವಪತ್ತನಗಳಲ್ಲಿ, ವಿದ್ಯಾಧರಿಯರೊಡನೆ ದೇವಮುಖ್ಯರಾಗಿ ವಿಹರಿಸಿಕೊಂಡಿದ್ದರು.

(ಅಮರಂ ಮರಣನಿವಾರಕಮಮೃತಪೂರ್ಣಂ ಚಂದ್ರಂ ಮೌಲೌ ಧಾರಯಂತೀತಿ ವಾ ಅಮರ ಮೌಲಿಧರಾಃ —ತಾ. ಪ್ರ.)

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಗಣತ್ವಪ್ರಾಪ್ತಿ" ಎಂಬ ಅರವತ್ತನಾಲ್ಕನೆಯ ಸರ್ಗವು.

ಸ್ವಪ್ನಶತರುದ್ರೀಯವು ಮುಗಿದುದು

ಪಂಚಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ಈಷದ್ದೃಷ್ಟೋ ಯಥಾ ತೇನ ಭಿಕ್ಷುಣಾ ಚೇತಸಿ ಭ್ರಮಃ ।
ಭೂತಂ ಪ್ರಯತ್ನಮೇವೈಷ ಪೃಥಕ್ಕೃತ್ವಾ ಸುಪಶ್ಯತಿ ॥ ೧ ॥

ಸರ್ವಸ್ಯಾಭಾಸಜೀವಸ್ಯ ಮೃತಿಜನ್ಮಮಯೀ ಸ್ಥಿತಿಃ ।
ಭವತ್ಯೇವ ಚಿದಾಕಾಶರೂಪಿಣ್ಯೇವಾಕೃತಿಂ ಗತಾ ॥ ೨ ॥

ಪೃಥಕ್ಕೃತ್ಯೈಕ್ಯಮಭ್ಯೇತಿ ಸ್ವಾತ್ಮಾ ಸಂಸಾರಖಂಡಕಂ ।
ಸರ್ವ ಏವ ಮೃತೋ ಜಂತುಃ ಪೃಥಕ್ಸ್ವಪ್ನನಿಭಾತ್ಮಕಂ ॥ ೩ ॥

ಅರವತ್ತೈದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಭಿಕ್ಷುವು ತನ್ನ ಮನಸ್ಸಿನಲ್ಲಿ ಉಂಟಾದ ಭ್ರಾಂತಿಯನ್ನು ಕೊಂಚವಾಗಿ ಕಂಡನು ಎಂದು ವರ್ಣಿಸಿದೆನಲ್ಲವೆ ? ಹೀಗೆಯೇ ಹಿಂದೆ ಮಾಡಿದ್ದ ಸಂಕಲ್ಪರೂಪ ಭ್ರಾಂತಿಯೇ ಫಲಕಾಲಬಂದಾಗ ಬೇರೆಯಾಗಿ ನಿಂತಿರುವಂತೆ ಕಾಣಿಸುವುದು.

೨. ಪ್ರಾತಿಭಾಸಿಕ ಜೀವರುಗಳಿಗೆಲ್ಲ ಚಿದಾಕಾಶರೂಪವಾದ ಆಕೃತಿಯೂ, ಜನ್ಮಮರಣಗಳುಳ್ಳ ಸ್ಥಿತಿಯೂ ಆಗಿಯೇ ಆಗುವುದು.

೩. ಐಕ್ಯರೂಪನಾದ ಆತ್ಮನೇ ತನ್ನನ್ನು ತಾನೇ ಪೃಥಕ್ಕರಿಸಿಕೊಂಡು ಸಂಸಾರವನ್ನು ಹೊಂದುವನು. ಸರ್ವ ಜಂತುಗಳೂ ಸಾಯುವಾಗ ತಮ್ಮ ಪ್ರಾಚೀನ ಕರ್ಮಗಳನ್ನೆಲ್ಲಾ ಪ್ರತ್ಯೇಕವಾದ ಒಂದು ಕನಸಿನಲ್ಲಿ ಕಾಣುವುವು.

ಏವಂ ತತಸ್ವರೂಪೋऽಪಿ ದೇಹೀ ಚಾಮೋಕ್ಷವತಕುಲಃ ।
ಜೀವಯೂಥಂ ಮಯಾ ತುಭ್ಯಂ ಕಥಿತಂ ಕಥಯಾನಯಾ || ೪ ||

ಪರಾತ್ಪ್ರಸ್ಪಂದಿತಾತ್ಮೇತಿ ನ ಭಿಕ್ಷೂ ರಾಮ ಕೇವಲಂ ।
ಮೋಹಾನ್ಮೋಹಾಂತರಂ ಯಾತಿ ಜೀವೋಹರಹರೇವ ನಃ || ೫ ||

ಪರ್ವತಾಗ್ರಪರಿಭ್ರಷ್ಟೋ ಹ್ಯಧೋಧ ಉಪಲೋ ಯಥಾ ।
ಪರಮಾತ್ಮಪರಿಭ್ರಷ್ಟೋ ಜೀವಃ ಸ್ವಪ್ನಮಿಮಂ ದೃಢಂ || ೬ ||

ಪಶ್ಯತ್ಯಸ್ಮಾದಪಿ ಸ್ವಪ್ನಾದ್ಯಾತಿ ಸ್ವಪ್ನಾಂತರಂ ಪುನಃ ।
ಸ್ವಪ್ನಾತ್ಸ್ವಪ್ನೇ ವಿನಿಪತನ್ಮೃಷೈವೇದಂ ದೃಢಂ ಕಿಲ || ೭ ||

---

೪. ಹೀಗೆ ದೇಹಿಯಾಗಿರುವ ಆತ್ಮನು ಬೇಕಾದ ಹಾಗೆ ಹರಡಿಕೊಳ್ಳಬಲ್ಲ ಸ್ವರೂಪವುಳ್ಳವನಾದರೂ, ಮೋಕ್ಷವಾಗುವವರೆಗೂ ಎಂದರೆ ಸಮ್ಯಗ್ಬೋಧವು ಲಭಿಸುವವರೆಗೂ ತಾನೇ ದೇಹವೆಂಬ ವ್ಯಾಕುಲ ಬುದ್ಧಿಯಿಂದಲೇ ದುಃಖಪಡುತ್ತಿರುವನು. ಇದನ್ನು ತಿಳಿಸುವುದಕ್ಕೆಂದೇ ಈ ಕಥೆಯನ್ನೂ ಇದರಲ್ಲಿ ಬರುವ ಜೀವರ ಗುಂಪುಗಳನ್ನೂ ನಿನಗೆ ಹೇಳಿದೆನು.

೫. ಜೀವ ಜೀವರು ಪೂರ್ಣ ಬ್ರಹ್ಮದಿಂದ ವ್ಯಾಪಾರಾತ್ಮಕವಾಗಿ ಹೊರ ಬಂದವರು ಎಂಬುದು ಸ್ವಭಾವಸಿದ್ಧವಾಗಿದ್ದರೂ, ರಾಮ, ಮೋಹದಿಂದ ಮೋಹಕ್ಕೆ ಹೋಗುತ್ತಿರುವುದು ಕೇವಲ ಭಿಕ್ಷುವು ಮಾತ್ರವಲ್ಲ: ನಮ್ಮ ಜೀವಗಳೂ ದಿನದಿನವೂ ಹೀಗಾಗುತ್ತಿರುವುದನ್ನು ಅನುಭವಿಸುತ್ತಲೇ ಇದ್ದೇವೆ.

೬. ಬೆಟ್ಟದ ಮೇಲಿನಿಂದ ಉರುಳಿದ ಬಂಡೆಯು ಕೆಳಕ್ಕೆ ಉರುಳಿಕೊಂಡು ಹೋಗುತ್ತಲೇ ಇರುವಂತೆ, ಪರಮಾತ್ಮ ಪದದಿಂದ ಜಾರಿದ ಜೀವನು ಈ ಸ್ವಪ್ನ ಭ್ರಮೆಯಲ್ಲಿ ಮುಂದುಮುಂದಕ್ಕೆ ಹೋಗುತ್ತಲೇ ಇರುವನು.

೭. ಈ ಸ್ವಪ್ನದಿಂದ ಸ್ವಪ್ನಾಂತರವನ್ನೂ, ಸ್ವಪ್ನದಲ್ಲಿಯೇ ಸ್ವಪ್ನವನ್ನೂ ಹೊಂದುತ್ತ ಇರುವನು. ಇವೆಲ್ಲವೂ ಮಿಥ್ಯೆಗಳೇ !

ಪರಿಪಶ್ಯತಿ ಜೀವೋಽಂತರ್ಮಾಯಯಾ ಜರ್ಜರೀಕೃತಃ |
ಕ್ವಚಿತ್ಕೇನಚಿದೇವೇಹ ಕದಾಚಿದಪಿ ವಾ ಸ್ವಯಂ || ೮ ||

ದೇಹನಾಮ್ನೋಽಹಮಿತ್ಯಂತೋ ಮುಚ್ಯತೇ ಸ್ವಂ ಪ್ರಪದ್ಯತೇ || ೯ ||

ಶ್ರೀ ರಾಮ ಉವಾಚ:—

ಅಹೋ ನು ವಿಷಮೋ ಮೋಹೋ ಜೀವಸ್ಯಾಸ್ಯೋಪಜಾಯತೇ |
ಯಥಾ ಸುಪ್ತಸ್ಯ ಸ್ತೋಕೇನ ನಾನಾಕಾರವಿಕಾರಯಾ || ೧೦ ||

ಮಿಥ್ಯಾಜ್ಞಾನೋಗ್ರಯಾಮಿನ್ಯಾ ಮಾಯಯಾ ನಿಪತತ್ಯಲಂ |
ಆಹೋ ನು ಖಲು ವೈಷಮ್ಯಂ ಭೀಮಂ ನಿಜವದುಚ್ಯತೇ || ೧೧ ||

ಭಗವನ್ಸರ್ವದಾ ಸರ್ವಂ ಸರ್ವದೈವ ಜಗತ್ಸ್ಥಿತೌ |
ತ್ವಯಾ ಸಂಭವತೀತ್ಯುಕ್ತಂ ಯಥಾ ತಚ್ಚಾನುಭೂಯತೇ || ೧೨ ||

---

೮. ಹೀಗೆ ಮಾಯೆಯಿಂದ ಜರ್ಜರಿತನಾಗಿ ಹಣ್ಣುಹಣ್ಣಾಗಿದ್ದು, ಯಾವಾಗಲೋ, ಯಾರಿಂದಲೋ, ಎಲ್ಲಿಯೋ ಏನೋ ಕಾರಣದಿಂದ, ತನ್ನಲ್ಲಿಯೇ ತಾನೇ ಆತ್ಮಸ್ವರೂಪವನ್ನು ನೋಡಿಕೊಳ್ಳುವನು.

೯. ಆಗ ದೇಹವನ್ನೇ ನಾನು ಎಂದು ತಿಳಿದುಕೊಂಡು ಇರುವ ಪಿಂಡಗ್ರಹದೋಷದಿಂದ ಮುಕ್ತನಾಗಿ ತನ್ನ ಸ್ವರೂಪವನ್ನು ತಿಳಿದುಕೊಳ್ಳುವನು.

ಶ್ರೀ ರಾಮನು ಕೇಳಿದನು :—

೧೦–೧೧. ಅಬ್ಬಾ ! ಈ ಮೋಹವೆಂಥದು ! ಇದು ಜೀವನಿಗೆ ಹಿಡಿಯುವುದಲ್ಲ! ನಿದ್ದೆಯಲ್ಲಿರುವವನಿಗೆ ಎಳ್ಳಷ್ಟು ಮಾತ್ರದಿಂದಲೇ ನಾನಾಕಾರ ವಿಕಾರಗಳುಳ್ಳ, ಮಿಥ್ಯಾ ಜ್ಞಾನವೆಂಬ ಉಗ್ರವಾದ ಕಾಳರಾತ್ರಿ ಸ್ವರೂಪವಾದ ಮಾಯೆಯಿಂದ ಇವನು, ಹಳ್ಳದಲ್ಲಿ ಬೀಳುವನು. ಆಹಾ ! ಈ ವಿಷಮವೂ ಭಯಂಕರವೂ ಆದ ಅಸತ್ಯವೂ ಸತ್ಯವೇ ಎನ್ನಿಸುವುದಲ್ಲ !

೧೨. ಎಲೈ ಭಗವಂತನೇ, ನೀನು ಜಗತ್ತಿನಲ್ಲಿ, ಈ ಸಂಸಾರದಲ್ಲಿ ಯಾವಾಗ ಏನುಬೇಕಾದರೂ ಆಗಬಹುದು ಎಂದು ಹೇಳಿದ್ದೆಯಲ್ಲ, ಅದು ನಮ್ಮೆಲ್ಲರಿಗೂ ಅನುಭವದಲ್ಲಿ ಇದ್ದೇಇರುವುದು.

ಏವಂ ಗುಣವಿಶಿಷ್ಟಾತ್ಮಾ ತನ್ಮೋಹಾತ್ಮಾ ಸಭಿಕ್ಷುಕಃ ।
ಕ್ವಚಿದಸ್ತಿ ನ ವಾಸ್ತ್ಯಂತರಾಲೋಕ್ಯ ಕಥಯಾಶು ಮೇ ॥ ೧೩ ॥

ಶ್ರೀ ವಸಿಷ್ಠ ಉವಾಚ:—

ಅದ್ಯ ರಾತ್ರೌ ಸಮಾಧಿಸ್ಥಸ್ತ್ರಿಲೋಕೀಮಠಿಕಾಮಿಮಾಂ ।
ಭಿಕ್ಷುರೇಕೋಽಸ್ತಿ ನಾಸ್ತೀತಿ ಪ್ರೇಕ್ಷ್ಯ ಪ್ರಾತರ್ವದಾಮ್ಯಹಂ ॥ ೧೪ ॥

ಶ್ರೀ ವಾಲ್ಮೀಕಿ ಉವಾಚ:—

ಮುನೌ ಚೈವಂ ಕಥಯತಿ ಬಹಿರ್ಮಧ್ಯಾಹ್ನಡಿಂಡಿಮಃ ।
ಉದಭೂತ್ತೂಲಯುಕ್ಶುಬ್ಧಘನಗರ್ಜಿತಮಾಂಸಲಃ ॥ ೧೫ ॥

---

೧೩. ನೀನು ಕಥೆಯಲ್ಲಿ ಹೇಳಿದ ಗುಣಗಳಿರುವ ಭಿಕ್ಷುವೊಬ್ಬನು ಹಾಗೆ ಮೋಹಪರವಶನಾಗಿ ನೂರಾರು ಜನ್ಮಗಳನ್ನು ಅನುಭವಿಸಿದವನು ಯಾವನಾದರೊಬ್ಬನು ಇರುವನೇ ? ಅಥವಾ ಇಲ್ಲವೇ ? ಎಂಬುದನ್ನು ಒಳಗೆ ನೋಡಿ ಹೇಳು.

(ಯೋಗಿಗಳು ಪ್ರಜ್ಞಾನ ಘನ ಎಂಬುದೊಂದು ಅವಸ್ಥೆಯನ್ನು ಕುರಿತು ಹೇಳುತ್ತಾರೆ. ಜೀವನು ಧ್ಯಾನಧಾರಣಾ ಸಾಮರ್ಥ್ಯದಿಂದ ಪ್ರಜ್ಞಾನ ಘನವನ್ನು ಪ್ರವೇಶಿಸಿ ಅಲ್ಲಿ ದೇಶ, ಕಾಲ, ಕ್ರಿಯಾದಿಗಳಿಂದ ಖಂಡವಾಗದ ಅಖಂಡ ಜ್ಞಾನದಲ್ಲಿ ಭೂತ ಭವಿಷ್ಯಗಳನ್ನೆಲ್ಲಾ ತಿಳಿಯಬಹುದು ಕಾವ್ಯವಾಣಿಯಿಂದ ಕಾಲಿದಾಸನು ರಘುವಂಶದಲ್ಲಿ "ದಿಲೀಪನಿಗೆ ಸಂತತಿಸ್ತಂಭವಾಗಲು ಕಾರಣವನ್ನು ವಸಿಷ್ಠನು ಪ್ರಣಿಧಾನದಿಂದ ತಿಳಿದನು" ಎಂದು ಹೇಳಿದ್ದಾನೆ. ಯೋಗ ಮಾಡಿ ಒಳಗೆ ಸಿಕ್ಕಿಕೊಂಡವರು ಹಲವರನ್ನು ಶ್ರೀ ಶ್ರೀ ಜಗದ್ಗುರು ನೃಸಿಂಹ ಭಾರತಿ ಸ್ವಾಮಿಗಳು ಪ್ರಜ್ಞಾನ ಘನ ಪ್ರವೇಶಮಾಡಿ ಏನು ತಪ್ಪಾಗಿದೆ ಎಂಬುದನ್ನು ತಿಳಿದುಬಂದು ಉದ್ಧಾರಮಾಡಿರುವ ಕಥೆಗಳು ಹಲವು ಇವೆ.)

ಶ್ರೀ ವಸಿಷ್ಠನು ಹೇಳಿದನು :—

೧೪. ಈ ರಾತ್ರಿಯಲ್ಲಿ ಸಮಾಧಿಸ್ಥನಾಗಿ ತ್ರಿಲೋಕವೆಂಬ ಈ ಮಠದಲ್ಲಿ ಹುಡುಕಿ, ಈ ಕಥೆಯಲ್ಲಿ ಬಂದಂತಹ ಭಿಕ್ಷುವು ಒಬ್ಬನಿದ್ದಾನೆಯೇ ಇಲ್ಲವೇ ಎಂಬುದನ್ನು ನಾನು ಬೆಳಿಗ್ಗೆ ಹೇಳುವೆನು.

ಶ್ರೀ ವಾಲ್ಮೀಕಿಯು ಹೇಳಿದನು :—

೧೫. ಮುನೀಂದ್ರನಾದ ವಸಿಷ್ಠನು ಹೀಗೆ ಹೇಳುತ್ತಿರಲು, ಹೊರಗೆ

ತತ್ಯಜುಃ ಪಾದಯೋಸ್ತಸ್ಯ ಪುಷ್ಪಾಂಜಲಿಪರಂಪರಾಃ |
ನೃಪಾಃ ಪೌರಾ ವಿಟಪಿನಃ ಪುಷ್ಪಂ ವಾತಧುತಾ ಇವ ॥ ೧೬ ॥

ಪೂಜಯಿತ್ವಾ ಮುನಿಶ್ರೇಷ್ಠಾನುದತಿಷ್ಠನ್ಸ್ವವಿಷ್ಟರಾತ್ |
ಸಭಾ ತದನು ಸೋತ್ತಸ್ಥೌ ಸಪ್ರಣಾಮಪರಂಪರಾ ॥ ೧೭ ॥

ಕ್ರಮೇಣ ಹ್ಯಸ್ತನೇನೈವ ಜಗ್ಮುಃ ಖೇಚರಭೂಚರಾಃ |
ಸ್ವಾಸ್ಪದೇಷು ಯಥಾಶಾಸ್ತ್ರಮಹರ್ವ್ಯಾಪಾರಮಾದೃತಾಃ ॥ ೧೮ ॥

ಸರ್ವೆ ಸಂಪಾದಯಾಮಾಸುಃ ನಿಜಧರ್ಮಂ ಕ್ರಮೋಚಿತಂ ॥ ೧೯ ॥

ಮಧ್ಯಾಹ್ನ ಕಾಲಸೂಚಕನಾದ ಡಿಂಡಿಮುವಾದ್ಯವು ಪ್ರಲಯ ಕಾಲದಲ್ಲಿ ಆಗುವ ಗುಡುಗಿನಂತೆ ಮಹಾ ಶಬ್ದವಾಗಿ ಮೊಳಗಿತು.

೧೬. ಆಗ ಗಾಳಿಯು ಬೀಸಲು ಮರಗಳು ಹೂಗಳನ್ನು ಉದುರಿಸುವ ಹಾಗೆ ನರಪತಿಗಳೂ ಪೌರರೂ ಆ ವಸಿಷ್ಠ ಮಹಾ ಮುನಿಯ ಪಾದಗಳಲ್ಲಿ ಪುಷ್ಪಾಂಜಲಿಯನ್ನು ಅರ್ಪಿಸಿದರು.

೧೭. ಇತರ ಮುನೀಂದ್ರರನ್ನೂ ಹಾಗೆಯೇ ಪೂಜೆ ಮಾಡಿ, ಪ್ರಣಾಮ ಪರಂಪರೆಗಳನ್ನು ಒಪ್ಪಿಸಿ, ಆ ಮುನೀಂದ್ರರು ಏಳುತ್ತಿದ್ದ ಹಾಗೆಯೇ ಅವರೊಡನೆಯೇ ಎದ್ದಿತು.

೧೮. ಖೇಚರರೂ ಭೂಚರರೂ ಹಿಂದಿನ ದಿನದ ಕ್ರಮದಂತೆಯೇ, ಯಥಾ ಶಾಸ್ತ್ರವಾಗಿ ಆಚರಿಸಬೇಕಾದ ಅಹರ್ವ್ಯಾಪಾರವನ್ನು ಮಾಡಬೇಕೆಂದು ತಮ್ಮ ತಮ್ಮ ಮಂದಿರಗಳಿಗೆ ತೆರಳಿದರು.

೧೯. ಎಲ್ಲರೂ ಕ್ರಮವಾಗಿ ತಾವು ತಾವು ಆಚರಿಸಬೇಕಾದ ನಿಜಧರ್ಮವನ್ನು ಆಚರಿಸಿದರು.

ಚಿಂತಯಂತೋ ಮುನಿಪ್ರೋಕ್ತಂ ಮಹೀಚರನಭಶ್ಚರಾಃ ।
ಜ್ಞಾನಂ ಕ್ಷಪಾಂ ಕ್ಷಣಮಿವ ನಿನ್ಯುಃ ಕಲ್ಪಮಿವಾಪಿ ಚ ॥ ೨೦ ॥

ಪ್ರಾತಃ ಪುನಃ ಪ್ರಸೃತಕಾರ್ಯಪರಂಪರೇಽಸ್ಮಿನ್ ।
ಜಾತೇ ಜನೇ ಖಚರಭೂಚರಭೂತಸಂಘೇಃ ।
ಆಖ್ಯಾನ ಲೋಕರಚನೇನ ತಥೈವ
ತಸ್ಥಾವನ್ಯೋನ್ಯಸಂವದನಪೂಜಿತ ಪೂಜ್ಯಲೋಕಃ ॥ ೨೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ವಿದ್ಯೋತ್ತರವಿಸ್ಮಯವರ್ಣನಂ" ನಾಮ ಪಂಚಷಷ್ಟಿತಮಃ ಸರ್ಗಃ

---

೨೦. ಮಹೀಚರ ನಭಶ್ಚರರೆಲ್ಲರೂ ವಸಿಷ್ಠ ಮುನೀಂದ್ರನು ಹೇಳಿದ ಜ್ಞಾನ ವಿಚಾರವನ್ನು ಕುರಿತು ಚಿಂತಿಸುತ್ತಾ ಆ ರಾತ್ರಿಯನ್ನು ಒಂದು ಕ್ಷಣ ದಂತೆಯೂ ಒಂದು ಕಲ್ಪದಂತೆಯೂ ಕಳೆದರು.

೨೧. ಮತ್ತೆ ಬೆಳಗಾಗುತ್ತಲೂ ಜನ ಸಂಘವು ತಮ್ಮ ತಮ್ಮ ಕಾರ್ಯಗಳಿಗಾಗಿ ಹೊರ ಹೊರಡುತ್ತಲೂ, ಖೇಚರರೂ ಭೂಚರರೂ ಎಲ್ಲರೂ, ವಸಿಷ್ಠ ಮುನೀಂದ್ರನ ವ್ಯಾಖ್ಯಾನವನ್ನು ಕೇಳಬೇಕೆಂಬ ಕುತೂಹಲದಿಂದ, ಪೂಜ್ಯರನ್ನು ಸಂಪೂಜನಮಾಡಿ, ಪರಸ್ಪರ ಕುಶಲ ಪ್ರಶ್ನಾದಿಗಳಿಂದ ಸಂಭಾವಿಸಿಕೊಂಡು, ಹಿಂದಿನ ದಿನದಂತೆಯೇ ಸಭೆಯನ್ನು ಅಲಂಕರಿಸಿದರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ವಿದ್ಯೋತ್ತರವಿಸ್ಮಯವರ್ಣನ" ಎಂಬ ಅರವತ್ತೈದನೆಯ ಸರ್ಗವು

ಷಟ್ಷಷ್ಟಿತಮಃ ಸರ್ಗಃ

ಶ್ರೀ ವಾಲ್ಮೀಕಿ ಉವಾಚ:—

ವಸಿಷ್ಠಮುನಿಸಂಯುಕ್ತಾ ವಿಶ್ವಾಮಿತ್ರಾದಿ ಸಂಯುತಾಃ ।
ಸ್ಥಿತಾಃ ಖೇಚರಸಿದ್ಧೌಘಾ ವಿಶ್ರಾಂತಾ ನೃಪನಾಯಕಾಃ ॥ ೧ ॥

ಸರಾಮಲಕ್ಷ್ಮಣಾ ಸೈವ ತಥೈವಾಥ ಸಭಾ ಬಭೌ ।
ಸೌಮ್ಯಾ ಸಮುಸಮಾಭೋಗಾ ಶಾಂತವಾತೇವ ಪದ್ಮಿನೀ ॥ ೨ ॥

ಅನವೇಕ್ಷ್ಯ ವಚಃ ಪ್ರಶ್ನಮುವಾಚಾಥ ಮುನೀಶ್ವರಃ ।
ಬೋಧಯಂತಿ ಬಲಾದೇವ ಸಾನುಕಂಪಾ ಹಿ ಸಾಧವಃ ॥ ೩ ॥

ಅರವತ್ತಾರನೆಯ ಸರ್ಗವು

ಶ್ರೀ ವಾಲ್ಮೀಕಿಯು ಹೇಳಿದನು :—

೧. ವಸಿಷ್ಠ ಮಹಾ ಮುನಿಯೂ ವಿಶ್ವಾಮಿತ್ರಾದಿ ಬ್ರಹ್ಮರ್ಷಿಗಳೂ ಆಕಾಶ ಚರರಾದ ದೇವತೆಗಳೂ ಸಿದ್ಧಾದಿಗಳೂ ನೃಪೋತ್ತಮರೂ ಸಮಾಹಿತ ಮನಸ್ಕರಾಗಿ ಶ್ರವಣಕುತೂಹಲಿಗಳಾಗಿ ಸ್ವಸ್ಥಾನಗಳಲ್ಲಿ ಕುಳಿತರು.

೨. ರಾಮಲಕ್ಷ್ಮಣರೂ ಸೇರಿರಲು, ಆ ಸಭೆಯು ಸೌಮ್ಯವಾಗಿ, ಚಚ್ಚೌಕವಾಗಿ, ಗಾಳಿಯಿಲ್ಲದಿರುವಾಗ ನಿಶ್ಚಲವಾಗಿರುವ ಸರೋವರದಂತೆ ಮನೋಹರವಾಗಿತ್ತು.

೩. ಮುನೀಶ್ವರನಾದ ವಸಿಷ್ಠನು ಪ್ರಶ್ನೆಯನ್ನು ನಿರೀಕ್ಷಿಸದಯೇ ಹೇಳಲು ಆರಂಭಿಸಿದನು : ಸಾಧುಗಳು ಎಲ್ಲರಲ್ಲಿಯೂ ದಯೆಯುಳ್ಳವರು : ಬಲಾತ್ಕಾರದಿಂದಲಾದರೂ ಬೋಧಿಸುವರು.

ಶ್ರೀ ವಸಿಷ್ಠ ಉವಾಚ:—

ರಾಜರ್ಷೇ ರಘುಕುಲಾಕಾಶಶಶಾಂಕ ರಘುನಂದನ ।
ಹ್ಯೋ ಮಯಾ ಜ್ಞಾನನೇತ್ರೇಣ ಸ ಭಿಕ್ಷುಃ ಪ್ರೇಕ್ಷಿತಶ್ಚಿರಂ ॥ ೪ ॥

ಧ್ಯಾನೇನಾಹಂ ಚಿರಂ ಭ್ರಾಂತಸ್ತಾವ್ಯಕ್ಷಿಕ್ಷುದಿದೃಕ್ಷಯಾ ।
ದ್ವೀಪಾನಿ ಸಪ್ತ ವಿಪುಲಾಂ ಕುಲಶೈಲಸಪರ್ವತಾಂ ॥ ೫ ॥

ಯಾವತ್ಕ್ಕತಶ್ಚಿದಪ್ಯೇವಂ ಭಿಕ್ಷುರ್ಲಬ್ಧೋ ನ ತಾದೃಶಃ ।
ಕಥಂ ಕಿಲ ಮನೋರಾಜ್ಯಂ ಬಹಿರಪ್ಯುಪಲಭ್ಯತೇ ॥ ೬ ॥

ತತಸ್ತ್ರಿಭಾಗಶೇಷಾಯಾಂ ರಾತ್ರ್ಯಾಂ ಪುನರಹಂ ಧಿಯಾ ॥
ಉತ್ತರಾಶಾಂತರಂ ಯಾತೋ ವೇಲಾವಾತ ಇವಾರ್ಣವಂ ॥ ೭ ॥

ಜಿನನಾಮ್ನೈಷ ತತ್ರಾಸ್ತಿ ಶ್ರೀಮಾನ್ ಜನಪದೋ ಮಹಾನ್ ।
ವಲ್ಮೀಕೋಪರಿ ತತ್ರಾಸ್ತಿ ವಿಹಾರೋ ಜನಸಂಶ್ರಯಃ ॥ ೮ ॥

ಶ್ರೀ ವಸಿಷ್ಠನು ಹೇಳಿದನು:—

೪. ರಾಜನೆ, ರಘುಕುಲಾಕಾಶದ ಶಶಾಂಕನಂತಿರುವ ರಘುನಂದನನೇ, ನಿನ್ನೆಯ ರಾತ್ರಿ ನಾನು ಜ್ಞಾನನೇತ್ರದಿಂದ ಆ ಭಿಕ್ಷುವನ್ನು ಕಂಡೆನು.

೫. ಧ್ಯಾನಾರೂಢನಾಗಿ, ಆ ಭಿಕ್ಷುವನ್ನು ನೋಡಬೇಕೆಂದು ಸಪ್ತ ದ್ವೀಪಗಳನ್ನೂ ಕುಲಶೈಲಗಳೂ ಪರ್ವತಗಳೂ ಇರುವ ಪೃಥ್ವೀಮಂಡಲವನ್ನೂ ಬಹುಕಾಲ ಸುತ್ತಿದೆನು.

೬. ಎಲ್ಲೆಲ್ಲಿ ಹುಡುಕಿದರೂ ಕಥೆಯಲ್ಲಿ ಬಂದಂತಹ ಭಿಕ್ಷುವೊಬ್ಬನು ಸಿಕ್ಕಲಿಲ್ಲ. ಮನೋರಾಜ್ಯದಲ್ಲಿದ್ದ ವಸ್ತುವು ಬಹಿಯೂ ಸಿಕ್ಕುವುದು ಹೇಗೆ ?

೭. ಅನಂತರ ಮೂರನೆಯ ಜಾವದಲ್ಲಿ ಮತ್ತೆ ಧ್ಯಾನಾರೂಢನಾಗಿ, ಸಮುದ್ರದ ಮೇಲೆ ಬೀಸುವ, ವೇಲಾ ವಾತದಂತೆ, ಉತ್ತರ ದಿಕ್ಕನ್ನು ಕುರಿತು ಹೋದೆನು.

೮. ಅಲ್ಲಿ 'ಜಿನ' ಎಂಬ ಒಂದು ಸಂಪನ್ನವೂ ವಿಸ್ತಾರವೂ ಆದ ದೇಶ

ತಸ್ಮಿನ್ವಿಹಾರೇ ಸ್ವಕುಟೀಕೋಶೇ ಕಪಿಲಮೂರ್ಧಜಃ ।
ಭಿಕ್ಷುರ್ದೀರ್ಘದೃಶೋ ನಾಮ ಸ್ಥಿತ ಏವ ಸಮಾಧಯೇ ॥ ೯ ॥

ಏಕವಿಂಶತಿ ರಾತ್ರಂ ಚ ತಸ್ಯೈವಂ ಸ್ಥಿತಿಶಾಲಿನಃ ।
ದೃಢಾರ್ಗಲಂ ಗೃಹಂ ಧ್ಯಾನಭಂಗಭೀತಾ ವಿಶಂತಿ ನೋ ॥ ೧೦ ॥

ಭೃತ್ಯಾಃ ಪ್ರಿಯಾಃ ಕಿಲ ತಥಾ ಸಂತಿಷ್ಠತಿ ಸ ಭಿಕ್ಷುಕಃ ।
ಅದ್ಯೈವ ತಸ್ಯ ಸಂವೇತ್ತುಂ ನಿಯತೇರೀದೃಶೀ ಸ್ಥಿತಿಃ ॥ ೧೧ ॥

ರಾತ್ರಯೋ ಧ್ಯಾನನಿಷ್ಠಸ್ಯ ಗತಾಸ್ತಸ್ಯೈಕವಿಂಶತಿಃ ।
ಸ ತು ವರ್ಷಸಹಸ್ರಾಣಿ ತಥಾ ಚಿತ್ತೇನ ಭೂತವಾ೯ ॥ ೧೨ ॥

ವುಂಟು, ಅದು ವಲ್ಮೀಕವೆಂಬ ದೇಶದ ಆಚೆ ಇರುವುದು. ಆ ದೇಶದಲ್ಲಿ ಬಹು ಜನರಿಗೆ ಆಶ್ರಯ ಕೊಟ್ಟಿರುವ ಒಂದು ಜೈನರ ವಿಹಾರವಿರುವುದು.

(ತತ್ರ ಜನಪದೇ ವಿಹಾರಾಖ್ಯೋ ಜನ ಸಂಶ್ರಯೋ ಬಹುಜನಾಶ್ರಯೋ ದೇಶೋಽಸ್ತಿ —ತಾ. ಪ್ರ.)

೯. ಆ ವಿಹಾರದಲ್ಲಿ ತನ್ನದೊಂದು ಕಿರುಮನೆಯಲ್ಲಿ ಕಪಿಲವರ್ಣದ ಕೇಶಗಳುಳ್ಳ ಭಿಕ್ಷುವೊಬ್ಬನಿರುವನು. ದೀರ್ಘದೃಕ್ಕು ಎಂದು ಆತನ ಹೆಸರು. ಸಮಾಧಿಯನ್ನು ಅಭ್ಯಾಸ ಮಾಡುವನಂತೆ ಆತನಿರುವನು.

೧೦. ಆ ಭಿಕ್ಷುವು ಇಪ್ಪತ್ತೊಂದು ದಿನ ಹೀಗೆಯೇ ಸಮಾಧಿಯಲ್ಲಿ ಇದ್ದುಬಿಟ್ಟನು. ಆ ಬಾಗಿಲನ್ನು ಅಗಳಿ ಹಾಕಿ ಮುಚ್ಚಿಬಿಟ್ಟಿತ್ತು. ಆತನ ಧ್ಯಾನಕ್ಕೆ ಭಂಗ ಬಂದೀತೆಂದು ಹೆದರಿ, ಯಾರೂ ಬಾಗಿಲನ್ನು ತೆರೆಯುವ ಯತ್ನ ಮಾಡಲಿಲ್ಲ.

೧೧. ಆತನ ಭೃತ್ಯರು ಆತನಲ್ಲಿ ಪ್ರೀತಿಯುಳ್ಳವರಾದರೂ ಬಾಗಿಲು ತೆಗೆಯಲಿಲ್ಲ. ಆ ಭಿಕ್ಷುವು ಹಾಗೆಯೇ ಕುಳಿತಿರುವನು. ಈ ದಿನ ಆತನಿಗೆ ಮುಕ್ತಿಯಾಗುವುದು. ಇದು ನಿಯತಿಯು ಗೊತ್ತುಮಾಡಿರುವ ಸ್ಥಿತಿಯು.

೧೨. ಧ್ಯಾನನಿಷ್ಠನಾಗಿ ಕುಳಿತಿದ್ದ ಆತನಿಗೆ ಇಪ್ಪತ್ತೊಂದು ರಾತ್ರಿಗಳು ಕಳೆದುಹೋದುವು. ಆ ಇಪ್ಪತ್ತೊಂದು ರಾತ್ರಿಗಳೇ ಆತನಿಗೆ ಚಿತ್ತದಿಂದ ನೋಡುವಾಗ ಒಂದು ಸಾವಿರ ವರ್ಷಗಳಾಗಿದ್ದುವು.

ಕಸ್ಮಿಂಶ್ಚಿತ್ಪ್ರಾಕ್ತನೇ ಕಲ್ಪೇ ಭಿಕ್ಷುರೇವಂ ಪುರಾಭವತ್ ।
ಅದ್ಯ ತ್ವಿಹ ದ್ವಿತಿಯೋಽಸ್ಮಿಂಸ್ತೃತೀಯೋ ನೋಪಲಭ್ಯತೇ ॥ ೧೩ ॥

ಮಯಾ ತು ಪುನರನ್ವಿಷ್ಯ ಚೇತಸಾ ಚತುರಾತ್ಮನಾ ।
ತಾದೃಕ್ ಭಿಕ್ಷುಸ್ತೃತೀಯೋಽನ್ಯೋ ಜಗತ್ಪದ್ಮೋದರಾಲಿನಾ ॥ ೧೪ ॥

ಅಸ್ಮಾತ್ಸರ್ಗಾತ್ತತೋ ಲಬ್ಧಸ್ತೃತೀಯಸ್ತಾದೃಶಾಶಯಃ ।
ಅಥಾನ್ಯೇ ಲೀಲಯಾ ಸರ್ಗಾ ಮಯಾ ಸಂಪ್ರೇಕ್ಷಿತಾಸ್ತತಃ ॥ ೧೫ ॥

ಯಾವತ್ತಸ್ಮಿಂಶ್ಚಿದಾಕಾಶಕೋಶಶಾಯಿನಿ ಸರ್ಗಕೇ ।
ಏವಂ ತೇನೈವ ತೇನೈವ ಸಂನಿವೇಶೇನ ಭೂರಿಶಃ ॥ ೧೬ ॥

---

೧೩. ಹಿಂದೆ ಕಳೆದುಹೋದ ಯಾವುದೋ ಒಂದು ಕಲ್ಪದಲ್ಲಿ ಇಂತಹ ಭಿಕ್ಷುವಿದ್ದನು. ಈ ಕಲ್ಪದಲ್ಲಿ ಈತನು ಇರುವನು. ಮೂರನೆಯವನು ಸಿಕ್ಕಲಿಲ್ಲ

೧೪. ಮತ್ತೆ ನಾನು ಬಹಳ ಬುದ್ಧಿವಂತಿಕೆಯಿಂದ ಜಗತ್ಪದ್ಮದ ಉದರ ವನ್ನು ಭ್ರಮರದಂತೆ ಹೊಕ್ಕು ಮೂರನೆಯ ಭಿಕ್ಷುವಿರುವನೋ ಎಂದು ಹುಡುಕಿದೆನು.

೧೫. ಮತ್ತೊಂದು ಕಲ್ಪದ ಸೃಷ್ಟಿಯಲ್ಲಿ ನಾನು ಕಥೆಯಲ್ಲಿ ಹೇಳಿದ ಭಿಕ್ಷುವಂತಹ ಭಿಕ್ಷುವೊಬ್ಬನು ಸಿಕ್ಕಿದನು. ಅದಕ್ಕಾಗಿ ನಾನು ಮಿಕ್ಕ ಸರ್ಗ ಗಳನ್ನು ಹುಡುಕಬೇಕಾಯಿತು. ಆ ಹುಡುಕುವುದೂ ಲೀಲೆಯಾಯಿತೇ ಹೊರತು ಆಯಾಸವಾಗಲಿಲ್ಲ. (ನಮ್ಮ ಸಾಮರ್ಥ್ಯವನ್ನು ಮೀರಿದರೆ ಆಯಾಸ; ನಮ್ಮ ಸಾಮರ್ಥ್ಯವನ್ನು ಮೀರದಿದ್ದರೆ ಲೀಲೆ.)

೧೬. ಬ್ರಹ್ಮಸೃಷ್ಟಿಯೆಲ್ಲವೂ ಒಂದೇ ಕ್ರಮವನ್ನು ಅನುಸರಿಸುವುದು ಅದರಿಂದ ಚಿದಾಕಾಶದ ಕೋಶದಲ್ಲಿ ಎಲ್ಲಿಯೋ ಒಂದು ಮೂಲೆಯಲ್ಲಿ ಇರುವ ಸೃಷ್ಟಿಯಲ್ಲಿ ಅಂತಹ ಭಿಕ್ಷುವಿರುವನು.

ಏವಂ ತೇನೈವ ತೇನೈವ ಸಂನಿವೇಶೇನ ಭೂರಿಶಃ ।
ಭವಿಷ್ಯಂತ್ಯಭವನ್ಸರ್ವೇ ಪದಾರ್ಥಾಃ ಸರ್ಗಸಂತತೌ ॥ ೧೭ ॥

ಅಸ್ಯಾಂ ಸಭಾಯಾಮಪಿ ಯೇ ಮುನಯೋ ಬ್ರಾಹ್ಮಣಾಸ್ತಥಾ ।
ಭಾವ್ಯಮೇವಂ ಸಮಾಚಾರೈಸ್ತೈರನ್ಯೈರಪ್ಯನೇಕಶಃ ॥ ೧೮ ॥

ನಾರದೇನಾಮುನಾ ಭಾವ್ಯಂ ಪುನರನ್ಯೇನ ಚಾಮುನಾ ।
ಏವಂ ಕಲನಕರ್ಮಾಭ್ಯಾಂ ಯುಕ್ತೇನಾನ್ಯೇನ ಭೂರಿಶಃ ॥ ೧೯ ॥

ಏವಂ ಜನ್ಮಾದಿನಾ ಭಾವ್ಯಂ ವ್ಯಾಸೇನಾಪಿ ಶುಕೇನ ಚ ।
ಶೌನಕೇನ ಪುನರ್ಭಾವ್ಯಂ ಕ್ರತುನಾ ಪುಲಹೇನ ಚ । ॥ ೨೦ ॥

---

೧೭. ಹೀಗೆಯೇ ಈ ಸರ್ಗ ಪರಂಪರೆಯಲ್ಲಿ ಅದದೇ ದೇಶ ಕಾಲ ಸನ್ನಿವೇಶಗಳಲ್ಲಿ ಒಂದೇ ಜಾತಿಯ ವಸ್ತುಗಳು ಬೇಕಾದ ಹಾಗೆ ಆಗಿದ್ದುವು: ಆಗುತ್ತವೆ.

೧೮. ಈ ಸಭೆಯಲ್ಲಿ ಇರುವ ಮುನೀಂದ್ರರೂ ಬ್ರಾಹ್ಮಣರೂ, ಇದೇ ಇದೇ ಸಂ+ಆಚಾರಗಳೂ, ಬೇರೆ ಆಚಾರಗಳೂ ಉಳ್ಳವರಾಗಿ ಎಷ್ಟೆಷ್ಟೋ ಆಗಿ ಇದ್ದರು : ಇರುವರು : ಇರುತ್ತಾರೆ ಎಂದು ಭಾವಿಸಿಕೊಳ್ಳಬೇಕು.

೧೯. ಈ ಎದುರಿಗೇ ಇರುವ ನಾರದನಂತೆಯೇ ಕಲನ (ಜ್ಞಾನ) ಕರ್ಮ (ಆಚಾರಗಳುಳ್ಳವರೂ ಭಿನ್ನಕಲನ ಕರ್ಮಗಳುಳ್ಳವರಾದರೂ ನಾರದನಂತೆಯೇ ನಾಮರೂಪಗಳುಳ್ಳವರೂ ಎಷ್ಟೋ ಜನರು ಇದ್ದರು : ಇರುವರು : ಇರುತ್ತಾರೆ ಎಂದೂ ಭಾವಿಸಿಕೊಳ್ಳಬೇಕು.

೨೦. ಹೀಗೆಯೇ ವ್ಯಾಸ, ಶುಕ, ಶೌನಕ, ಕ್ರತು, ಪುಲಹ, ಮೊದಲಾದವರೂ ನಾಮ, ರೂಪ, ಕ್ರಿಯಾ, ಜ್ಞಾನಗಳಿಂದ ಸದೃಶರೂ ಅಸದೃಶರೂ ಆಗಿ ಇರುವರು : ಇದ್ದರು : ಇರುತ್ತಾರೆ ಎಂದೂ ತಿಳಿ.

ಅಗಸ್ತ್ಯೇನ ಪುಲಸ್ತ್ಯೇನ ಭೃಗುಣಾಂಗಿರಸಾಪಿ ಚ । ॥ ೨೧ ॥

ಏತ ಏವ ತಥಾನ್ಯೇ ಚ ಏವಂ ರೂಪಕ್ರಿಯಾಸ್ಪದಂ ।
ಚಿರಾಚ್ಚಿರಾದ್ಭವಿಷ್ಯಂತಿ ಮಾಯೇಯಂ ವಿತತಾ ಯತಃ ।
ಸದೃಶಾಚಾರ ಜನ್ಮಾನಸ್ತ ಏವಾನ್ಯೇ ಚ ಭೂರಿಶಃ ॥ ೨೨ ॥

---

೨೧. ಅಗಸ್ತ್ಯ, ಪುಲಸ್ತ್ಯ, ಭೃಗು, ಆಂಗೀರಸರೂ ಹೀಗೆಯೇ ;

೨೨. ಇವರು ಹೇಗೋ ಇತರರೂ ಹಾಗೆಯೇ ! ಏಕೆಂದರೆ ಲೋಕವೇ ಹೀಗೆಯೇ ಈ ರೂಪಕ್ರಿಯಾದಿಗಳನ್ನು ಆಶ್ರಯಿಸಿ ತೋರುವುದು. ಬಹು ಕಾಲಕ್ಕೊಮ್ಮೆಯೋ, ಅಥವಾ ಬೇಗ ಬೇಗಲೋ, ಆಗಿಯೇ ಆಗುವರು. ಏಕೆಂದರೆ ಈ ಮಾಯೆಯು ಬಹುರೂಪವಾಗಿ ಹರಡಿಕೊಂಡಿರುವುದು.

[ಮಾಯೆಯು ಯಾವ ಯಾವ ಪದಾರ್ಥಗಳನ್ನು ತಂದು ಜೋಡಿಸಿ ಈ ಸೃಷ್ಟಿಯನ್ನು ಮಾಡುವುದೋ ಆ ಪದಾರ್ಥಗಳ ಸಂಖ್ಯೆಯು ಮಿತವಾದುದು. ಅಮಿತ ವನ್ನು ಮಿತವಾಗಿ ಮಾಡಿರುವುದೇ ಮಾಯೆ. ಅದರಿಂದ ಅದು ಉಪಯೋಗಿಸುವ ಪದಾರ್ಥಗಳ ಸಂಖ್ಯೆಯು ಅಪರಿಮಿತವಾಗಿರುವಂತೆ ಕಂಡರೂ ಅವು ಮೂಲತಃ ಮಿತವಾಗಿಯೇ ಇರಬೇಕು.]

ಆ ಮೂಲ ಪದಾರ್ಥಗಳ ಸಂಶ್ಲೇಷಣ (combination) ವಿಶ್ಲೇಷಣ (seperation) ಪುನಾರಚನ (permutation) ಗಳಿಂದ ಪದಾರ್ಥಗಳು ನಾನಾ ಆಗಿ ಕಂಡರೂ ಅದರಲ್ಲಿ ಸಾದೃಶ್ಯಗಳು ಕಂಡೇ ಕಾಣಬೇಕು.

ಓಡಾಡುತ್ತಿರುವ ನದಿಯಲ್ಲಿ ಸುಳಿ, ಅಲೆ, ಎಲ್ಲವೂ ಮತ್ತೆ ಮತ್ತೆ ಕಾಣು ತ್ತಲೇ ಇರಬೇಕು. ಅವುಗಳಲ್ಲಿ ಒಮ್ಮೆಯಾದರೂ ಸಾದೃಶ್ಯ ಕಂಡರೆ ವಿಶೇಷ ವೇನು ? ಸಮಾನ ವಸ್ತುವಿನಲ್ಲಿ ಆಗುವ ವಿಕಾರಗಳಲ್ಲಿ ಅಸಾದೃಶ್ಯವು ವಿಶೇಷವೇ ಹೊರತು ಸಾದೃಶ್ಯವಲ್ಲ.)

ಭೂಯೋಭೂಯೋ ವಿವರ್ತಂತೇ ಸರ್ಗೇಷ್ವಪ್ಸ್ವಿವ ವೀಚಯಃ ।
ಅತ್ಯಂತಸದೃಶಾಃ ಕೇಚಿತ್ಕೇಚಿದರ್ಧಸಮಕ್ರಮಾಃ ॥ ೨೩ ॥

ಕೇಚಿದೀಷತ್ಸಮಾಃ ಕೇಚಿನ್ನ ಕದಾಚಿತ್ಪುನಸ್ತಥಾ ।
ಏವಮೇಷಾತಿವಿತತಾ ಮಹತಾಮಪಿ ಮೋಹಿನೀ ॥ ೨೪ ॥

ಕ್ಷಣೇನೇಹಾಸ್ತಿ ನೋ ಕರ್ಮ ಪ್ರತಿಪತ್ತಿರ್ಹಿ ಜೃಂಭತೇ ।
ಕ್ವೈಕವಿಂಶತ್ಯಹೋರಾತ್ರಾ ಅನಂತಾಕ್ಪತಯೋನಘ ॥ ೨೫ ॥

ಕ್ವ ತಾಸಾಮುಪಲಂಭೋಽಲಮಹೋ ಭೀಮಾ ಮನೋಗತಿಃ ।
ಪ್ರತಿಭಾಮಾತ್ರಮೇವೇದಮಿತ್ಥಂ ವಿಕಸಿತಂ ಸ್ಥಿತಂ ॥ ೨೬ ॥

---

೨೩. ನೀರಿನಲ್ಲಿ ತರಂಗಗಳು ಕಾಣಿಸುವಂತೆ ಸರ್ಗಗಳಲ್ಲಿ ಮತ್ತೆ ಮತ್ತೆ ವಿವರ್ತವಾಗಿ ಪದಾರ್ಥಗಳು ಹುಟ್ಟುತ್ತಲೇ ಇರುವುವು. ಕೆಲವು ಅತ್ಯಂತ ಸದೃಶಗಳು: ಇನ್ನು ಕೆಲವು ಅರ್ಧ ಅರ್ಧ ಸಮಗಳು.

(ವಿವರ್ತವೆಂದರೆ ಕಾರಣವು ತನ್ನ ಸ್ವಭಾವವನ್ನು ಬಿಡದೆ ಕಾರ್ಯವಾಗುವುದು. ಚಿನ್ನವು ಕಡಗವಾದಂತೆ.)

೨೪. ಕೆಲವು ಈಷತ್ಸಮಗಳು, ಕೆಲವು ವಿಷಮಗಳು ಹೀಗೆ ಈ ಮಾಯೆಯು ಬಹು ವಿಸ್ತಾರವಾಗಿ ಹರಡಿರುವುದು: ಇದು ಎಂಥಾ ಮಹಾತ್ಮರಿಗಾದರೂ ಮೋಹವನ್ನು ಉಂಟುಮಾಡುವುದು.

೨೫. ಕ್ಷಣ (ನಿರವಯವವಾದ ಅಖಂಡ ಕಾಲ)ದಲ್ಲಿ ಮನಸ್ಸಿನ ಕಲ್ಪನಗಳು ಯಾವುವೂ ಇಲ್ಲ. ಕರ್ಮವೂ ಇಲ್ಲ. ಕೇವಲವಾಗಿ ಎಲ್ಲವೂ ನಡೆದಂತೆ ತೋರಿ ನಂಬಿಕೆಯಾಗುವ ಪ್ರತಿಪತ್ತಿ ಮಾತ್ರ ಇರುವುದು. ಇಪ್ಪತ್ತೊಂದು ರಾತ್ರಿಗಳೆಲ್ಲಿ ? ಅನಂತವಾಗಿರುವ ಭಿಕ್ಷು ಕಥೆಯ .ಕಾಲವೆಲ್ಲಿ ?

೨೬. ಅದರಿಂದ ಆ ಕಥಾನಕಗಳ ಉಪಲಂಭವೆಲ್ಲಿ ? ಅಬ್ಬಾ ! ಮನೋಗತಿಯು ಎಷ್ಟು ಭಯಂಕರವಾದುದು ! ಈ ಜಗತ್ತಿಗೆ ಜಗತ್ತೇ ಹೀಗೆ ಪ್ರಾತಿಭಾಸಕವಾಗಿ ಹೀಗೆ ವಿಕಾಸವಾಗುವುದು.

ನಾನಾಕಲಹಕಲ್ಲೋಲಂ ಜಲೇ ಪ್ರಾತರಿವಾಂಬುಜಂ ।
ಜಾತಂ ಸಂವೇದನಾದೇವ ಶುದ್ಧಾದಿದಮಶುದ್ಧಿಮತ್ ।
ಸಂಸಾರ ಜಾಲಮಖಿಲಂ ಸಾರ್ಚಿರ್ವಹ್ನಿಕಣಾದಿವ ॥ ೨೭ ॥

ಪ್ರತ್ಯೇಕಮೇವಮುದಿತಃ ಪ್ರತಿಭಾಸುಖಂಡಃ ।
ಖಂಡಾಂತರೇಷ್ವಪಿ ಚ ತಸ್ಯ ವಿಚಿತ್ರಖಂಡಃ ।
ಸರ್ವೇ ಸ್ವಯಂ ನನು ಚ ತೇಪಿ ಮಿಥೋ ನ ಮಿಥ್ಯಾ ।
ಸರ್ವಾತ್ಮನಿ ಸ್ಫುರತಿ ಕಾರಣಕಾರಣೇಽಸ್ಮಿನ್ ॥ ೨೮ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಭಿಕ್ಷುಸಂಸೃತಿಕಥನಂ" ನಾಮ ಷಟ್‌ಷಷ್ಟಿತಮಃ ಸರ್ಗಃ

---

೨೭. ಬೆಳಗಿನ ಹೊತ್ತು ಅರಳುತ್ತಿರುವ ಕಮಲದಲ್ಲಿ ಭ್ರಮರಗಳ ಕಲಹಗಳೆಷ್ಟು? ಅದರ ಸುತ್ತಲೂ ಇರುವ ಜಲದಲ್ಲಿ ಏಳುವ ತರಂಗಗಳೆಷ್ಟು? ಅದರಂತೆಯೇ ಸಂವೇದನದಿಂದಲೇ–ಪರಮಶುದ್ಧವಾದ ಚಿತ್ತಿನಿಂದಲೇ ಅಚಿತ್, ಜಡವಾದ, ಈ ಜಗತ್ತು ಹುಟ್ಟಿರುವುದು. ಈ ಸಂಸಾರ ಜಾಲವೆಲ್ಲವೂ ಬೆಂಕಿಯ ಕಿಡಿಯು ಹೊತ್ತಿಕೊಂಡು ಉರಿಗಳಾದ ಹಾಗೆ!

೨೮. ಪ್ರತಿಭಾಸಖಂಡ (ಸ್ವಪ್ನ)ವೊಂದು ಪ್ರತ್ಯೇಕವಾಗಿ ಕಾಣಿಸಿತು ಎನ್ನುವುದು ಹೀಗೆ! ಆ ಖಂಡಾಂತರಗಳಲ್ಲಿ ಇನ್ನೊಂದು ವಿಚಿತ್ರ ಖಂಡವೂ ಹೀಗೆಯೇ ಉದಿಸುವುದು. ಅವೆಲ್ಲವೂ ಮಿಥೋಮಿಥ್ಯಗಳಲ್ಲ: (ಎಂದರೆ ಒಂದನ್ನೊಂದು ಮಿಥ್ಯವೆನ್ನುವಂತಿಲ್ಲ.) ಇವೆಲ್ಲವೂ ಸರ್ವಾತ್ಮವಾಗಿರುವ ಕಾರಣ ಕಾರಣದಲ್ಲಿಯೇ ಸ್ವಯಂ ಉದಿಸುವುವು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಭಿಕ್ಷುಸಂಸೃತಿಕಥನ" ಎಂಬ ಅರವತ್ತಾರನೆಯ ಸರ್ಗವು

ಸಪ್ತಷಷ್ಟಿತಮಃ ಸರ್ಗಃ

ದಶರಥ ಉವಾಚ:—

ಮುನಿನಾಯಕ ತಂ ಭಿಕ್ಷುಂ ಗತ್ವಾ ಸಂಬೋಧಯಂತ್ವಮೀ ।
ನರಾ ಮತ್ಪ್ರಹಿತಾಃ ಶೀಘ್ರಂ ಚಾನಯಂತು ಕುಟೀಗತಂ ॥ ೧ ॥

ಶ್ರೀ ವಸಿಷ್ಠ ಉವಾಚ:—

ರಾಜಂಸ್ತಸ್ಯ ಮಹಾಭಿಕ್ಷೋಃ ಸ ದೇಹಃ ಪ್ರಾಣವರ್ಜಿತಃ ।
ಕ್ಲೇದೋ ವೈವರ್ಣ್ಯಮಾಯಾತೋ ನಾಸೌ ಜೀವಿತಭಾಜನಂ ॥ ೨ ॥

ತಸ್ಯ ಭಿಕ್ಷೋಸ್ತು ಜೀವೋಽಸೌ ಭೂತ್ವಾ ಪದ್ಮಜಸಾರಸಃ ।
ಜೀವನ್ಮುಕ್ತಃ ಸ್ಥಿತೋ ಭೂಯೋ ನಾಸೌ ಸಂಸೃತಿಭಾಜನಂ ॥ ೩ ॥

ಅರವತ್ತೇಳನೆಯ ಸರ್ಗವು

ದಶರಥನು ಕೇಳಿದನು:—

೧. ಎಲೈ ಮುನಿನಾಯಕನೆ, ನಮ್ಮ ಜನರನ್ನು ಕಳುಹಿಸುವೆನು. ಅವರು ಹೋಗಿ ಆ ಭಿಕ್ಷುವನ್ನು ಎಚ್ಚರಗೊಳಿಸಿ, ಆ ವಿಹಾರದಿಂದ ಇಲ್ಲಿಗೆ ಕರೆತರಲಿ.

ಶ್ರೀ ವಸಿಷ್ಠನು ಹೇಳಿದನು:—

೨. ಎಲೈ ರಾಜನೆ, ಆ ಮಹಾ ಭಿಕ್ಷುವಿನ ದೇಹವು ಪ್ರಾಣವರ್ಜಿತವಾಗಿರುವುದು, ಒಣಗಿಹೋಗಿರುವುದು: ವಿವರ್ಣವಾಗಿರುವುದು: ಅವನು ಬದುಕಿಯೂ ಇಲ್ಲ.

೩., ಆ ಭಿಕ್ಷುವಿನ ಜೀವವು ಬ್ರಹ್ಮಹಂಸವಾಗಿ ಜೀವನ್ಮುಕ್ತನಾಗಿರುವುದು. ಅದರಿಂದ ಅದು ಮತ್ತೆ ಅವನ ದೇಹಕ್ಕೆ ಬಂದು ಅಲ್ಲಿ ಸಂಸಾರ ಮಾಡುವುದಿಲ್ಲ.

ತದ್ಗೃಹೇ ಮಾಸಪರ್ಯಂತೇ ಬಲಾನ್ನಿಷ್ಕಾಸಿತಾರ್ಗಲಾಃ ।
ಅಂತರಾಲೇ ತು ತಿಷ್ಠಂತಿ ಭೃತ್ಯಾ ಭಿಕ್ಷುದಿದೃಕ್ಷವಃ ॥ ೪ ॥

ತತೋ ನಷ್ಟಾಂಗಸಂಧಾನಂ ಕಾಯಂ ನಿಷ್ಕಾಲ್ಯತೇ ಜಲೇ ।
ತ್ಯಕ್ಷ್ಯಂತ್ಯನ್ಯಂ ಕರಿಷ್ಯಂತಿ ಭಿಕ್ಷುಮುಕ್ಷುಣ್ಣಮಾನಸಂ ॥ ೫ ॥

ಅನೇನೈವಂ ಸ ದೇಹೇನ ಭಿಕ್ಷುರ್ಮುಕ್ತೋ ವ್ಯವಸ್ಥಿತಃ ।
ಕಥಂ ಪ್ರಬೋಧ್ಯತೇ ನಷ್ಟಂ ತದ್ವಿಹಾರೇ ಶರೀರಕಂ ॥ ೬ ॥

ಏಷಾ ಗುಣಮಯೀ ಮಾಯಾ ದುರ್ಬೋಧೇನ ದುರತ್ಯಯಾ ।
ನಿತ್ಯಂ ಸತ್ಯಾವಬೋಧೇನ ಸುಖೇನೈವಾತಿವಾಹ್ಯತೇ ॥ ೭ ॥

ಅಸತ್ಯೇವ ಕೃತಾರಂಭಾ ಹೇಮ್ನಃ ಕಟಕತಾ ಯಥಾ ।
ಪ್ರತಿಭಾಸವಿಪರ್ಯಾಸ ಮಾತ್ರಕಾರಣಕೋದಯಾ ॥ ೮ ॥

---

೪. ಅಲ್ಲಿ ಆ ಭಿಕ್ಷುವು ಒಂದು ತಿಂಗಳವರೆಗೂ ಬಾಗಿಲನ್ನು ತೆಗೆಯಬೇಡಿರಿ ಎಂದು ಭೃತ್ಯರಿಗೆ ಆಜ್ಞೆ ಮಾಡಿರುವನು. ಅದರಿಂದ ಅವರು ಭಿಕ್ಷುವನ್ನು ದರ್ಶನ ಮಾಡಬೇಕು ಎಂದು ನಡುಮನೆಯಲ್ಲಿ ಕಾದು ಕುಳಿತಿರುವರು.

೫. ತಿಂಗಳಾದಮೇಲೆ ಬಾಗಿಲನ್ನೊಡೆದು ಆ ಭಿಕ್ಷು ಶವವನ್ನು ಜಲದಲ್ಲಿ ವಿಸರ್ಜಿಸಿ, ಮಠದಲ್ಲಿ ಆತನ ರೂಪವುಳ್ಳ ಪ್ರತಿಮೆಯೊಂದನ್ನು ಅಲ್ಲಿ ಸ್ಥಾಪಿಸುವರು.

೬. ಆ ಭಿಕ್ಷುವು ಆ ದೇಹವನ್ನು ತ್ಯಜಿಸಿ ಮುಕ್ತನಾಗಿರುವನು. ಅದರಿಂದ ಆ ವಿಹಾರದಲ್ಲಿರುವ ಶರೀರವನ್ನು ಹೇಗೆ ಎಚ್ಚರಿಗೊಳಿಸುವುದು ?

೭. ಇದು ಗುಣಮಯಿಯಾದ ಮಾಯೆಯು. ಅಜ್ಞಾನದಿಂದ ಇದನ್ನು ದಾಟುವುದಕ್ಕಾಗುವುದಿಲ್ಲ. ತತ್ವವನ್ನು ತಿಳಿದವನಾದರೆ ಇದನ್ನು ಯಾವಾಗಲೂ ಸುಖವಾಗಿ ದಾಟುವನು.

[ದುರ್ಬೋಧೇನ ಭ್ರಾಂತಿಪರಂಪರಾ ಹೇತು ವಿಕ್ಷೇಪ ಶಕ್ತ್ಯಾ—ತಾ. ಪ್ರ.]

೮. ಚಿನ್ನದಲ್ಲಿರುವ ಕಟಕತ್ವದಂತೆ, ಈ ಮಾಯೆಯು ತಾನು ಅಸತ್ಯವಾಗಿದ್ದರೂ ಪ್ರತಿಭಾಸದಿಂದ ವಿಪರ್ಯಾಸವನ್ನು ಸಂಪಾದಿಸಿಕೊಂಡು ಅದನ್ನೇ ಕಾರಣ ಮಾಡಿಕೊಂಡು ತಾನು ಪ್ರಕಟವಾಗಿ ಜಗತ್ತಿನ ಕಾರ್ಯವನ್ನು ಆರಂಭಿಸುವುದು.

ಪರಮಾತ್ಮನಿ ವಾಚೀಯಮಿತ್ಥಂ ಮಾಯಾನುಮೀಯತೇ !
ತರಂಗಾಲೀವ ಪಯಸಿ ಪ್ರೇಕ್ಷಾಮಾತ್ರವಿನಾಶಿನೀ ॥ ೯ ॥

ಜ್ಞೋ ಹಿ ದೃಶ್ಯಮಯಾ ದ್ದೀರ್ಘಸ್ವಪ್ನಾತ್ಸ್ವಪ್ನಾಂತರಂ ವ್ರಜೇತ್ !
ಏವಂ ಜೀವತ್ವಮಾಯಾತಿ ವಿವೇಕಾತ್ಸರ್ವಮಾತ್ಮದೃಕ್ ॥ ೧೦ ॥

ಯೋ ಯಸ್ಯ ಪ್ರತಿಭಾಸಃ ಸ್ಯಾದಾತ್ಮೈವ ಸ ಸ್ವಬೋಧತಃ !
ಸ ಏವೋದೇತಿ ಸಂಸಾರಃ ಕರಂಜವನಗುಲ್ಮದೃಕ್ ॥ ೧೧ ॥

(ಪ್ರತಿಭಾಸ=ಕನಸಿನಂತಹ ಅನುಭವ. ವಿಪರ್ಯಾಸ=ಇದ್ದುದು ಒಂದಾಗಿ ಕಾಣುವುದು ಇನ್ನೊಂದಾಗಿರುವುದು.)

೯. ನೀರಿನಲ್ಲಿ ತರಂಗಗಳು ಕಾಣಿಸುತ್ತಿದ್ದರೂ ಕಣ್ಣಿಟ್ಟು ನೋಡಿದರೆ ಇಲ್ಲದೆಯೇ ಇರುವಂತೆ, ಪರಮಾತ್ಮನಲ್ಲಿ "ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ" ಮೊದಲಾದ ಶ್ರುತಿ ವಾಕ್ಯಗಳಲ್ಲಿ ಹೇಳಿರುವಂತೆ, ಮಾಯೆಯನ್ನು ಅನುಮಾನ ಪ್ರಮಾಣದಿಂದ ತಿಳಿಯಬೇಕಲ್ಲದೆ ಪ್ರತ್ಯಕ್ಷ ಪ್ರಮಾಣದಿಂದ ತಿಳಿಯಲಾಗುವುದಿಲ್ಲ.

(ಕಾರ್ಯಾನುಮೇಯಾ ಸುಧಿಯೈವ ಮಾಯಾ ॥ –ಶಂಕರ.)

೧೦. ಪರಮಾತ್ಮನು ಒಂದು ದೀರ್ಘ ಸ್ವಪ್ನದಿಂದ ಇನ್ನೊಂದು ಸ್ವಪ್ನಕ್ಕೆ ಹೋಗುತ್ತ ದೃಶ್ಯಮಯ ಬುದ್ಧಿಯಾಗಿ ಜೀವತ್ವವನ್ನು ಹೊಂದುವನು. ವಿವೇಕದಿಂದ ತನ್ನ ಸ್ವಸ್ವರೂಪ ಜ್ಞಾನವಾಗುತ್ತಲೂ ಆತ್ಮ ದೃಕ್ಕಾಗುವನು.

೧೧. ಯಾವನಿಗೆ ಯಾವುದು ಪ್ರಾತಿಭಾಸಿಕವಾಗಿ ಕಾಣುವುದೋ ಅವನು ಅದೇ ಆಗುವನು. ಹಾಗೆ ಪ್ರಾತಿಭಾಸಿಕನಾಗಿದ್ದರೂ ಆತ್ಮ ಬೋಧವು ಲಭಿಸಿದ ಕೂಡಲೇ ಆತ್ಮನೇ ಆಗುವನು. ಹಾಗಿಲ್ಲದೆ ಪ್ರಾತಿಭಾಸಿಕನಾಗಿದ್ದಾಗ ಕರಂಜ ವನವು ಗುಲ್ಮವನ್ನು ಕಂಡಂತೆ ಸಂಸಾರವು ಉದಯಿಸುವುದು.

(ಕರಂಜದ ಮರವು ಬುಡವು ಒಂದೇ ಆಗಿದ್ದರೂ ಹೊರಡುವಾಗಲೇ ಬುಡದಿಂದ ಹಲವು ಶಾಖೆಗಳಾಗಿ ಒಡೆಯುವುದಂತೆ.)

ಪ್ರತ್ಯೇಕಂ ಭೂತಮುದಿತಂ ಕೃತಂ ಸಂಸಾರಮಂಡಲಂ ।
ಭಿಕ್ಷೋಃ ಸ್ವಪ್ನಾಂತರ ಇವ ಪರಾಂ ಭಂಗಿಮಿವಾಂಭಸಃ ॥ ೧೨ ॥

ಪ್ರಸ್ತುತಃ ಪದ್ಮಜಾದೇವ ಜಗತ್ಸ್ವಪ್ನೋ ಯಥೋದಿತಃ ।
ತಥೈವಾಸ್ವಚ್ಛಚಿತ್ತೋತ್ಥೋ ರೂಢಃ ಸರ್ವಜನಂ ಪ್ರತಿ ॥ ೧೩ ॥

ಪಿತಾಮಹವದಾಭಾತಿ ಸರ್ಗಃ ಸ್ವಪ್ನವಿಲಾಸವತ್ ।
ಪ್ರತ್ಯೇಕಮುದಿತಸ್ತೇನ ಬ್ರಹ್ಮಾಂಡಾನೀವ ಕೋಟಿಶಃ ॥ ೧೪ ॥

ಸ್ಫುರನ್ಯಥಾ ಕಥಾ ವಾಸ್ಮಿನ್ ಜೀವಃ ಪಶ್ಯತಿ ವಿಭ್ರಮಂ ।
ಹೃದಯೇಯಂ ಸಮರ್ಥಂ ಚ ಸ್ವಪ್ನವದ್ದೀರ್ಘಮಾಂತರಂ ॥ ೧೫ ॥

ಚಿತ್ಸತ್ತಾಮಾತ್ರಮಾಸಾದ್ಯ ಪ್ರತೀತಿಚ್ಯುತಮಾತ್ರತಃ ।
ಜರಾಮರಣದುಃಖಾನಾಂ ಕ್ವಚಿದ್ಭಾಜನತಾಂ ಗತಃ ॥ ೧೬ ॥

---

೧೨. ಭಿಕ್ಷುವಿನ ಸ್ವಪ್ನಾಂತರಗಳಲ್ಲಿ ಆದಂತೆ, ನೀರಿನಲ್ಲಿ ಆಗುವ ವ್ಯಾಪಾರ ವೊಂದೊಂದು ಒಂದೊಂದು ವಿಧವಾಗಿ ಕಾಣುವಂತೆ, ಪ್ರತಿಯೊಂದು ಪ್ರಾಣಿಗೂ ಒಂದೊಂದು ಸಂಸಾರವಿರುವುದು.

೧೩. ಸಮಷ್ಟಿಯಾದ ಹಿರಣ್ಯಗರ್ಭನು ಒಂದು ಕನಸನ್ನು ಕಂಡನು. ಅದು ಜಗತ್ಸ್ವಪ್ನವಾಯಿತು. ಆ ಸ್ವಪ್ನದಲ್ಲಿ ಜೀವರು ಕಾಣಿಸಿಕೊಂಡರು. ಆ ಜೀವರ ಅಸ್ವಚ್ಛ ಚಿತ್ತದಿಂದ ಅವರವರಿಗೆ ಒಂದೊಂದು ಕನಸು ಏರ್ಪಟ್ಟಿತು.

೧೪-೧೫. ಪಿತಾಮಹನಂತೆ ನಾವೂ ಸ್ವಚ್ಛಚಿತ್ತರಾದರೆ ಸಂಸಾರವು ನಮಗೂ ಸ್ವಪ್ನದಂತೆ ವಿಲಾಸವೇ ಆಗುವುದು. ಅದರಿಂದ (ಆತ್ಮಬೋಧರಹಿತ ವಾಗಿ ಅಸ್ವಚ್ಛಚಿತ್ತರಾಗಿರುವುದರಿಂದ) ಪ್ರತಿಯೊಬ್ಬರಿಗೂ ಬ್ರಹ್ಮಾಂಡಗಳು ಕೋಟಿ ಕೋಟಿಗಳಾಗಿ ಕಾಣುವುವು. ಈ ಜೀವನು ಯಾವರೂಪವಾಗಿ ಸ್ಫುರಣ ಹೊಂದುವನೋ ಅದೇ ರೂಪವಾದ ಭ್ರಾಂತಿಯನ್ನು ಹೊಂದುವನು. ಅವನು ಹಾಗೆ ಕಾಣುವುದು ತನ್ನ ಹೃದಯದಲ್ಲಿಯೇ! ಅದು ಕಾಣಿಸುವುದೂ ಸ್ವಪ್ನದಂತೆ.

೧೬. ಮೂಲರೂಪವನ್ನು ಬಿಟ್ಟು ಬಂದಿದ್ದರೂ ಚಿತ್ಸತ್ತೆಯು ಕೊಂಚ ವಾದರೂ ಇರುವುದರಿಂದ ಜೀವನಾಗಿದ್ದುಕೊಂಡು ಯಾವುದಾದರೂ ಒಂದು ದೇಹದಲ್ಲಿ ಜರಾ ಮರಣದುಃಖಭಾಜನನಾಗಿ ಸಂಸಾರಿಯಾಗುವನು.

ಪಾತಾಲಂ ಬ್ರಹ್ಮಲೋಕಂ ವಾ ಚಿತ್ತತ್ಸುಕೃತಶಾಲಿನೀ ।
ಚಿತ್ತಾಂಶಸ್ಪಂದಮಾತ್ರೇಣ ಕೃತ್ವಾ ಕೃತ್ವೇವ ಸಂಸ್ಥಿತಾ ॥ ೧೭ ॥

ಚಿತ್ಸ್ಪಂದರೂಪಿಣೀ ಜೀವನಾಮರೂಪಂ ಗತಾತ್ಮನಿ ।
ಅನ್ಯತ್ರ ಚ ವಿಲುಠತಿ ಗತ್ವಾ ಸಂಭ್ರಮಹಾರಿಣೀ ॥ ೧೮ ॥

ಚಿತ್ತೇತಿ ಪರಮಾತ್ಮಾ ನ ಪರಮಾತ್ಮಾ ನ ವಾ ನ ಕಿಂ ।
ಜೀವದೇಹಾದಿನಾಮ್ನೋಽಸ್ಯ ಪ್ರತಿಬಿಂಬಾದಿವಾರ್ಹತಾ ॥ ೧೯ ॥

---

೧೭. ಜೀವರೂಪವಾಗಿರುವ ಚಿತ್ತು ತನ್ನ ಚಿತ್ತದಲ್ಲಿ ವ್ಯಾಪಾರ ಮಾಡುತ್ತ ಕೆಲಸಮಾಡುವುದರಲ್ಲಿರುವ ನಿಪುಣಿಕೆಯಿಂದ ಪಾತಾಲವನ್ನಾಗಲೀ ಬ್ರಹ್ಮಲೋಕವನ್ನಾಗಲಿ ಮಾಡಿಕೊಂಡು ಅಲ್ಲಲ್ಲಿ ನಿಂತು ಭೋಗ ಮಾಡುವುದು.

೧೮. ಜೀವನೆಂಬ ನಾಮರೂಪಗಳನ್ನು ಪಡೆದ ಆತ್ಮನಲ್ಲಿ ಸ್ಪಂದರೂಪಿಣಿಯಾಗಿ ನಿಂತು ಚಿತ್ತು ದೇಹೇಂದ್ರಿಯಗಳಲ್ಲಿಯೂ ಇಂದ್ರಿಯವಿಷಯಗಳಲ್ಲೂ ಸಂಭ್ರಮವಾಗಿ ಕೆಲಸ ಮಾಡುವುದು.

(ಪರಮಾತ್ಮಚಿದೇವ ಪ್ರಾಣ ಕಲ್ಪನಯಾ ತದಧೀನ ಸ್ಪಂದರೂಪಿಣೀ ಭೂತ್ವಾ ತದ್ದ್ವಾರೇಣ ಜೀವನಾಮಕಂ ರೂಪಂಗತಾ ಸತೀ ಆತ್ಮನಿ ದೇಹಾಕಾರಾ ಸಂಭ್ರಮ ಹಾರಿಣೀ ಅನ್ಯತ್ರ ಬಹಿಶ್ಚ ಗತ್ವಾ ವಿಷಯಾಕಾರ ಸಂಭ್ರಮ ಹಾರಿಣೀ ಭೂತ್ವಾ ವಿಲುಠತೀ —ತಾ. ಪ್ರ.)

೧೯. ಉಪಾಧಿಗ್ರಸ್ತವಾದ ಚಿತ್ತವಾದ ಮಾತ್ರಕ್ಕೆ ಪರಮಾತ್ಮನು ಪರಮಾತ್ಮನಲ್ಲವೇನು? ಜೀವ, ದೇಹ, ಮೊದಲಾದ ನಾಮಗಳುಳ್ಳ ಪರಮಾತ್ಮನು ಶುದ್ಧಪರಮಾತ್ಮನ ಪ್ರತಿಬಿಂಬವೇ ಅಲ್ಲವೇನು ?

(ಕಿಂತು ಅಭೇದೇಪ್ಯುಪಾಧಿವಶಾತ್ಯ ಸರ್ವಂ ಸಂಭವತ್ಯೇವ ತಥಾ ಚ ಶ್ರುತಿಃ "ಸ ಏಷ ಇಹ ಪ್ರವಿಷ್ಟ ಆನಖಾಗ್ರೇಭ್ಯಃ" "ಪ್ರಾಣನ್ನೇವ ಪ್ರಾಣೋ ನಾಮ ಭವತಿ, ವರ್ದವಾಕ್, ಪರ್ಶ್ಯಶ್ಚಕ್ಷುಃ, ಶೃಣ್ವನ್‌ಶ್ರೋತ್ರಂ ಮನ್ವಾನೋ ಮನ ಇತಿ ತಾನ್ಯೇತಸ್ಯ ಕರ್ಮನಾಮಾನ್ಯೇವ" —ತಾ. ಪ್ರ.)

ಬ್ರಹ್ಮಣ್ಯೇವ ಪರಂ ಬ್ರಹ್ಮ ಜಗದ್ದೃಷ್ಟ್ಯೈವ ಸಂಸ್ಥಿತಂ ।
ಶುದ್ಧಾಕಾಶಮಿವಾಕಾಶೇ ಜಲೇ ಜಲಮಿವಾಮಲಂ ॥ ೨೦ ॥

ಲೋಕೋ ಬ್ರಹ್ಮಣ ಏವಾಯಂ ಜಗದ್ರೂಪೇಷು ತಿಷ್ಠತಿ ।
ಬಿಭೇತ್ಯನ್ಯತಯಾsಬೋಧಾತ್ಪ್ರತಿಬಿಂಬಾದಿವಾರ್ಭಕಃ ॥ ೨೧ ॥

ಸ್ಪಂದೇಽಸ್ಪಂದೀಕೃತೇ ಜೀಹ ಸ್ವತಃ ಸಂಜ್ಞಾ ವಿಲೀಯತೇ ।
ಸಾಪ್ಯಲಂ ಪರಿಮಾಣೇನ ಲೀಯತೇಽಗ್ನೌ ಘೃತಂ ಯಥಾ ॥ ೨೨ ॥

ಚಿತ್ಸ್ಪಂದ ಏವ ಚಿತ್ಸ್ಪಂದೇ ಸರ್ವಾತ್ಮನಿ ವಿಜೃಂಭಿತಃ ।
ಸ್ಪಂದಾಸ್ಪಂದೌ ಜೃಂಭಣಾದಿ ಕಲ್ಪಿತಂ ನಾತ್ರ ವಾಸ್ತವಂ ॥ ೨೩ ॥

ನ ಸ್ಪಂದೋಽಸ್ತೀಹ ನಾಸ್ಪಂದೋ ನೈಕತಾ ವಾಪಿ ನ ದ್ವಿತಾ ।
ಶುದ್ಧಂ ಚಿನ್ಮಾತ್ರಸರ್ವಸ್ವಂ ಯಥೈವಾಸ್ತಿ ತಥಾ ಸ್ಥಿತಂ ॥ ೨೪ ॥

---

೨೦. ಬ್ರಹ್ಮದಲ್ಲಿಯೇ ಪರಬ್ರಹ್ಮನು ಜಗದ್ದೃಷ್ಟಿಯಿಂದ ಇರುವನು. ಆಕಾಶದಲ್ಲಿ ಶುದ್ಧಾಕಾಶವಿರುವಂತೆ, ಜಲದಲ್ಲಿ ನಿರ್ಮಲವಾದ ಜಲವಿರುವಂತೆ ಈ ಸಂಸ್ಥಿತಿಯು.

೨೧. ಲೋಕವೆಲ್ಲವೂ ಬ್ರಹ್ಮನವೇ ಆಗಿ ಜೀವಜಗದ್ರೂಪವಾಗಿ ಇರುವುದು. ಜೀವವು ಜಗತ್ತು ತನಗಿಂತ ಬೇರೆಯೆಂದುಕೊಂಡು ಹೆದರುವುದು. ಅಜ್ಞಾನ ವಿರುವುದರಿಂದ ತನ್ನ ಪ್ರತಿಬಿಂಬವನ್ನು ಕಂಡು ತಾನೇ ಹೆದರುವ ಬಾಲಕನಂತೆ ಈ ಹೆದರುವಿಕೆಯು.

೨೨. ಚಿತ್ತದ ವ್ಯಾಪಾರವನ್ನು ಶ್ರಮಪಟ್ಟು ನಿಲ್ಲಿಸಿದುದೇ ಆದರೆ, ಈ ಜೀವ ಜಗದಾದಿ ಸಂಜ್ಞೆಗಳು ತಾವಾಗಿ ವಿಲೀನವಾಗುವುವು. ಆ ಸಂಜ್ಞೆಯೂ ಕೂಡ ಅಗ್ನಿಯಲ್ಲಿ ಹೋಮಮಾಡಿದ ತುಪ್ಪದಂತೆ ಚರಮ ಸಾಕ್ಷಾತ್ಕಾರದಲ್ಲಿ ಕರಗಿ ಹೋಗುವುದು.

೨೩. ಚಿತ್ಸ್ಪಂದವೇ ಚಿತ್ಸ್ಪಂದಸ್ವರೂಪನಾದ ಸರ್ವಾತ್ಮನಲ್ಲಿ ವಿಜೃಂಭಿಸಿತು. ಸ್ಪಂದ, ಅಸ್ಪಂದ, ಜೃಂಭಣ ಇವೆಲ್ಲವೂ ಕಲ್ಪಿತವಲ್ಲದೆ ವಾಸ್ತವವಲ್ಲ.

೨೪. ಆ ಪರವಸ್ತುವಿನಲ್ಲಿ ಸ್ಪಂದವಿಲ್ಲ: ಅಸ್ಪಂದವಿಲ್ಲ: ಏಕತಾ ಇಲ್ಲ:

ಸಾರೇಣ ತು ವಿಚಾರೇಣ ಸರ್ವಶಬ್ದಾರ್ಥಯೋಃ ಸಮೇ
ಚಿನ್ಮಾತ್ರಮೇವ ಜ್ಞಾತೋಽಯಂ ನಾಸ್ತೀತ್ಯಪಿ ನ ವಿದ್ಯತೇ || ೨೫ ||

ಭೇದವೇದನಯೋದೇತಿ ಭೇದಃ ಪ್ರಕೃತಿಲಾಂಛನಂ |
ಅಭೇದಬೋಧಾದಖಿಲೇ ಗಲಿತೇ ಶಿಷ್ಯತೇ ಪರಂ || ೨೬ ||

ನಾನಾತ್ವೈವಾಸ್ಯಬೋಧೇನ ಸ ಬೋಧಸ್ತ್ವನವೇಕ್ಷಣಾತ್ |
ಪೃಚ್ಛ ಕಂಚ್ಚೈನಮಸ್ತ್ಯೇವ ತಸ್ಮಾನ್ನಿಃಶಂಕತಾ ಪರಾ || ೨೭ ||

ತತಃ ಸ್ವಪ್ನೋ ನ ಜಾಗರ್ತಿರ್ನ ಸುಷುಪ್ತಿರ್ನ ತುರ್ಯತಾ |
ನ ಬಂಧೋಽಸ್ತಿ ನ ಮೋಕ್ಷೋಽಸ್ತಿ ನಾನ್ಯಥಾಕಲ್ಪನಾತ್ಮಕಂ || ೨೮ ||

ದ್ವಿತಾ ಇಲ್ಲ: ಶುದ್ಧವಾಗಿ ಚಿನ್ಮಾತ್ರವಾಗಿ ಸರ್ವವೂ ತಾನೇ ಆಗಿ ಹೇಗಿರುವುದೋ ಹಾಗೆಯೇ ಇರುವದು ಅದು.

೨೫. ಸಾರವಾಗಿರುವ ವಿಚಾರದಿಂದ ಸರ್ವಶಬ್ದಾರ್ಥಗಳನ್ನೂ ತಿಳಿದು ನೋಡಿದರೆ, ಆ ಬ್ರಹ್ಮದಲ್ಲಿರುವುದೆಲ್ಲಾ ಚಿನ್ಮಾತ್ರವೇ! ಆ ಬ್ರಹ್ಮವನ್ನು ತಿಳಿದರೆ ಇಲ್ಲ ಎನ್ನುವುದೂ ಕೂಡ ಇಲ್ಲ.

೨೬. ಭೇದವಿದೆಯೆಂದು ತಿಳಿಯುವುದರಿಂದ ಪ್ರಕೃತಿಯ ಗುರುತಾಗಿರುವ ಭೇದವು ಹುಟ್ಟುವುದು. ಅಭೇದವನ್ನು ತಿಳಿದರೆ ಸರ್ವವೂ ಗಲಿತವಾಗಿ ಪರಬ್ರಹ್ಮವೊಂದೇ ಉಳಿಯುವುದು.

೨೭. ಅಬೋಧದಿಂದ ನೀನೇ ನಾನಾತಾ ಆಗಿರುವೆ. ಆ ನಾನಾತೆಯನ್ನು ಅನವೇಕ್ಷಣ (ನೋಡದೆ ಬಿಡುವುದು) ಮಾಡಿದರೆ ಅದೇ ಬೋಧವು. ಹೌದೋ ಅಲ್ಲವೋ ಯಾರನಾದರೂ ಕೇಳಿನೋಡಿ. ಇದೇ ಪರಮಾರ್ಥವು. ಅದರಿಂದ ನಿಶ್ಯಂಕನಾಗಿರುವುದೇ ಉತ್ತಮ ಕಾರ್ಯವು.

೨೮. ಹಾಗಿದ್ದರೆ, ಸ್ವಪ್ನವಿಲ್ಲ: ಜಾಗ್ರತ್ತಿಲ್ಲ: ಸುಷುಪ್ತಿಯಿಲ್ಲ; ತುರ್ಯವಿಲ್ಲ: ಬಂಧವಿಲ್ಲ: ಮೋಕ್ಷವಿಲ್ಲ; ಅನ್ಯತಾಕಲ್ಪನೆಯಾಗುವುದು ಎನ್ನುವುದು ಕೂಡಾ ಇಲ್ಲ.

ಶಾಂತಿರೇಕಾ ಜಗನ್ನಾಮ್ನೀ ಶಾಂತಿರೇವಮುವಸ್ಥಿತಾ |
ಅಬೋಧೋಽಸತ್ಯ ಏವಾತಃ ಕ್ವ ದ್ರಷ್ಟೃದೃಶ್ಯದರ್ಶನಂ || ೨೯ ||

ಸ್ಪಂದೋಽಪ್ಯಸ್ಪಂದ ಏವ ಸ್ಯಾನ್ನಿಃಸಂಕಲ್ಪತಯಾ ಚ ತೇ |
ನ ಸ್ಪಂದಾಸ್ಪಂದಯೋರ್ಭಿನ್ನಾ ಸಂಕಲ್ಪರಹಿತೈವ ಚಿತ್ || ೩೦ ||

ದ್ವೈತೈಕ್ಯವಿಕಲಾ ರೂಪಸಂಕಲ್ಪಶ್ಚಿದಭಾವನಾತ್ |
ಸ ಚ ಭಾವನಮಾತ್ರೇಣ ಗತೋ ಬ್ರಹ್ಮೈವ ಶಿಷ್ಯತೇ || ೩೧ ||

ಚಿಚ್ಚಂದ್ರಬಿಂಬೇ ಸಂಕಲ್ಪಕಲಂಕಃ ಸ್ಫುರತೀವ ಯಃ |
ನಾಸೌ ಕಲಂಕಸ್ತದ್ವಿದ್ಧಿ ಚಿದ್ಘನಸ್ಯ ಘನಂ ವಪುಃ || ೩೨ ||

---

೨೯. ಜಗತ್ತೆಂಬ ಹೆಸರುಳ್ಳ ಶಾಂತಿಯು ಒಂದೇ ಒಂದಾಗಿ ನಿಲ್ಲುವುದು. ಹೀಗೆ ಶಾಂತಿಯೊಂದೇ ನಿಲ್ಲುವುದು. ಅಬೋಧವೇ ಅಸತ್ಯವಾಗಿರಲು, ಅದರಿಂದ ಹುಟ್ಟಿದ ದೃಕ್ ದೃಶ್ಯ ದರ್ಶಗಳೆಲ್ಲಿಯವು?

೩೦. ಆಗ ಸ್ಪಂದವೂ ಅಸ್ಪಂದವೇ ಆಗುವುದು. ಏಕೆಂದರೆ ಅವಕ್ಕೆ ಕಾರಣವಾದ ಸಂಕಲ್ಪವಿಲ್ಲವಾಗುವುದು. ಸಂಕಲ್ಪರಹಿತವಾದ ಚಿತ್ತು ಸ್ಪಂದಾ ಸ್ಪಂದಗಳಿಗಿಂತ ಭಿನ್ನವಾದುದಲ್ಲ.

೩೧. ಚಿತ್ತಿನ ಸ್ವರೂಪವನ್ನು ಕುರಿತು ಭಾವನ ಮಾಡದಿರುವುದರಿಂದ ದ್ವೈತ, ಐಕ್ಯ, ಎಂಬುವ ಭ್ರಮುಗಳಿಂದ ವಿಕಲವಾಗಿರುವ ಸಂಕಲ್ಪವು ಉದಯ ವಾಗುವುದು. ಚಿತ್ತನ್ನು ಕುರಿತು ಭಾವನ ಮಾಡಿದರೆ ಸಾಕು, ಆ ಸಂಕಲ್ಪವು ಹೋಗಿ ಬ್ರಹ್ಮವು ಮಾತ್ರ ಉಳಿಯುವುದು.

೩೨. ಚಿತ್ತೆಂಬ ಚಂದ್ರಬಿಂಬದಲ್ಲಿ ಸಂಕಲ್ಪವೆಂಬ ಕಲಂಕವು ತೋರುವು

ಚಿದ್ಘನಸ್ಯ ನ ಸನ್ನಾರ್ಸಸ್ಥಿೀಯತಾಂ ಯತ್ತತೇ ಪದೇ |
ಇತ್ಯದೋಪಮಹಾಬೋಧಸಾರಸಂಗ್ರಹಣಂ ಕೃತಂ || ೩೩ ||

ಚಿಚ್ಚಂದ್ರಬಿಂಬಾಸಂಕಲ್ಪಕಲಂಕಾಮೃತವಿಗ್ರಹಃ |
ತ್ವಯಾ ಭವ್ಯೇನ ಸಂಸ್ಪೃಷ್ಟೋ ಭಾವಾಭಾವಕ್ಷಯಾತ್ಮನಾ || ೩೪ ||

ಭಾವಾಭಾವಾದಿಕಲನಾಂ ನೀತ್ವಾ ಚಿನ್ಮಯತಾಂ ಚಿತಃ |
ಸವೋಲ್ಲಾಸವಿಲಾಸಾಂತಃ ಸಮಾಶ್ವಸ ಯಥಾಸುಖಂ || ೩೫ ||

ದಲ್ಲಾ, ಅದು ನಿಜವಾಗಿಯೂ ಪ್ರತಿಬಿಂಬದಂತೆ ಬೇರೆಯಾದ ಕಲಂಕವಲ್ಲ. ಏಕೆಂದರೆ ಚಿದ್ಘನದಲ್ಲಿ ಅದೆಲ್ಲವೂ ಚಿತ್ತೇ ಹೊರತು ಅಲ್ಲಿ ಬೇರೆಯೇನೂ ಇಲ್ಲವೇ ಇಲ್ಲ.

೩೩. ಚಿದ್ಘನದಲ್ಲಿ, ಸತ್, ಅಸತ್, ಎಂಬುದೂ ಎರಡೂ ಇಲ್ಲ: ಇರುವುದೆಲ್ಲ ಅಖಂಡವಾದ ಚಿತ್ತು ಒಂದೇ ಒಂದು! ತಾನೇ ತಾನಾಗಿ ತುಂಬಿಹೋಗಿರುವ ಆ ಚಿತ್ಪದದಲ್ಲಿ ನಿಲ್ಲುವವನಾಗು. ಹೀಗೆ ಮಾಡಿರುವ ಈ ಉಪದೇಶವು ನಿರ್ದುಷ್ಟವಾದ ಮಹಾ ಬೋಧದ ಸಾರ ಸಂಗ್ರಹವೆಂದು ನಂಬು.

೩೪. ಎಲೈ ಚಿಚ್ಚಂದ್ರಬಿಂಬ ಸ್ವರೂಪನೇ, ಸಂಕಲ್ಪವೆಂಬ ಕಲಂಕವಿಲ್ಲದವನೇ, ಭಾವ, ಅಭಾವ, ಎಂಬ ಎರಡೂ ಕ್ಷಯವಾಗಿರುವ ಮನಸ್ಸುಳ್ಳ ಭವ್ಯಾತ್ಮನಾದ ನೀನು ಏನನ್ನು ಮುಟ್ಟಿದರೂ ಅದೂ ಅಮೃತವಿಗ್ರಹವೇ ಆಗುವುದು.

೩೫. ಭಾವ, ಅಭಾವ, ಎಂಬ ಸಂಕಲ್ಪಗಳನ್ನೆಲ್ಲಾ ಚಿದ್ಭಾವನದಿಂದ ಚಿನ್ಮಯತೆಯನ್ನು ಹೊಂದಿಸಿ, ಉಲ್ಲಾಸ ವಿಲಾಸಗಳಲ್ಲೆಲ್ಲಾ ಸಮವಾಗಿರುವ ಅಂತಃಕರಣವುಳ್ಳವನಾಗಿ ಸುಖವಾಗಿ ವಿಶ್ರಾಂತಿಯನ್ನು ಹೊಂದುವನಾಗು.

ಸ್ಪಂದಾಸ್ಪಂದೌ ಕಲ್ಪನಾಕಲ್ಪನಾ ವಾ ।
ಚಿತ್ತಾಮ್ನಾಯೇ ವಿದ್ಧಿ ನಾಮಾಬ್ಧಿನಾಮ್ನಾ ।
ಸರ್ವಾಕಾರಾ ನಿರ್ವೃತಿಃ ಶಾಂತಿಸತ್ತಾ ।
ಪೂರ್ಣಾಪೂರ್ಣೇ ಹ್ಯೇಕಮೇವಾಸ್ಥಿತೇತಿ ॥ ೩೬ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಬ್ರಹ್ಮೈಕ್ಯಪ್ರತಿಪಾದನಂ" ನಾಮ ಸಪ್ತಷಷ್ಟಿತಮಃ ಸರ್ಗಃ

---

೩೬. ಸ್ಪಂದವಾಗಲಿ ಅಸ್ಪಂದವಾಗಲಿ, ಕಲ್ಪನೆಯಾಗಲಿ ಅಕಲ್ಪನೆಯಾಗಲಿ, ಇವೆಲ್ಲವೂ ಚಿತ್ತದ ಆಮ್ನಾಯ (ಭ್ರಾಂತಿ) ಎಂದು ತಿಳಿ. ಸಮುದ್ರವಾಗಿ ಕುಳಿತವನಿಗೆ (ತರಂಗ, ಆವರ್ತ, ವಿವರ್ತ ಆದಿ ಸ್ಪಂದಾಸ್ಪಂದಗಳೆಲ್ಲ ಜಲಮಯವೇ ಆಗಿ ಏನೂ ವಿಕಾರವಿಲ್ಲದಿರುವಂತೆ) ಸರ್ವವೂ ಚಿತ್ತೇ ಎಂದು ತಿಳಿದವನಿಗೆ ಶಾಂತಿಯು ಲಭಿಸುವುದು : ನಿರ್ವಾಣವೂ ದೊರೆಯುವುದು. ಪೂರ್ಣ ಅಪೂರ್ಣ ಎಂಬ ಎರಡು ದಶೆಗಳಲ್ಲಿಯೂ ಬ್ರಹ್ಮವೊಂದೇ ಇರುವುದು ಎಂದು ತಿಳಿ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ಬ್ರಹ್ಮೈಕ್ಯಪ್ರತಿಪಾದನ" ಎಂಬ ಅರವತ್ತೇಳನೆಯ ಸರ್ಗವು.

ಅಷ್ಟಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠನು ಹೇಳಿದನು:—

ಸುಷುಪ್ತಮೌನವಾನ್ ಭೂತ್ವಾ ತ್ಯಕ್ತ್ವಾ ಚಿತ್ತವಿಲಾಸಿತಾಂ |
ಕಲನಾಮಲನಿರ್ಮುಕ್ತಸ್ತಿಷ್ಠಾವಷ್ಟಬ್ಧತತ್ಪದಃ ॥ ೧ ॥

ಶ್ರೀರಾಮ ಉವಾಚ:—

ವಾಙ್ಮೌನಮಕ್ಷಮೌನಂ ಚ ಕಾಷ್ಠಮೌನಂ ಚ ವೇದ್ಮ್ಯಹಂ |
ಸುಷುಪ್ತಮೌನಂ ಮೌನೇಶ ಬ್ರಹ್ಮನ್ ಬ್ರೂಹಿ ಕಿಮುಚ್ಯತೇ ॥ ೨ ॥

ಶ್ರೀ ವಸಿಷ್ಠ ಉವಾಚ:—

ದ್ವಿವಿಧಃ ಪ್ರೋಚ್ಯತೇ ರಾಮ ಮುನಿರ್ಮುನಿವರೈರಿಹ |
ಏಕಃ ಕಾಷ್ಠತಪಸ್ವೀ ಸ್ಯಾಜ್ಜೀವನ್ಮುಕ್ತಸ್ತಥೇತರಃ ॥ ೩ ॥

ಅರವತ್ತೆಂಟನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಚಿತ್ತವು ಸ್ವಭಾವವಾಗಿ ವಿಲಾಸಿಯು. ಅದನ್ನು ತಪ್ಪಿಸಿ, ಸುಷುಪ್ತ(ನು ಹೇಗೆ ಮೌನವಾಗಿರುವನೋ ಹಾಗೆ,) ಮೌನವಾಗಿದ್ದು, ಸಂಕಲ್ಪವೆಂಬ ಮಲವನ್ನು ತೊಳೆದುಕೊಂಡು, ತತ್ಪದದಲ್ಲಿ ನೆಲೆಯಾಗಿ ನಿಂತುಕೊಳ್ಳುವನಾಗು.

ಶ್ರೀ ರಾಮನು ಕೇಳಿದನು :—

೨. ಮೌನಸ್ವರೂಪಗಳನ್ನೆಲ್ಲ ಬಲ್ಲ ಎಲೈ ಬ್ರಹ್ಮನೆ, ವಾಙ್ಮೌನ, ಇಂದ್ರಿಯ ಮೌನ, ಕಾಷ್ಠಮೌನಗಳನ್ನು ನಾನು ಬಲ್ಲೆ. ಸುಷುಪ್ತ ಮೌನವೆಂದರೇನು ಹೇಳು.

ಶ್ರೀ ವಸಿಷ್ಠನು ಹೇಳಿದನು :—

೩. ಮುನಿವರರು, ರಾಮ, ಮೌನವನ್ನು ಅವಲಂಬಿಸಿರುವ ಮುನಿಯು

ಅಭಾವತಾಯಾಂ ಶುಷ್ಕಾಯಾಂ ಕ್ರಿಯಾಯಾಂ ಬದ್ಧನಿಶ್ಚಯಃ ।
ಹಠಾಜ್ಜಿತೇಂದ್ರಿಯಂಗ್ರಾಮೋ ಮುನಿಃ ಸ್ಯಾತ್ಕಾಷ್ಠತಾಪಸಃ || ೪ ||

ಯಥಾಭೂತಮಿದಂ ಬುದ್ಧ್ವಾ ಭಾವಿತಾತ್ಮಾತ್ಮನಿ ಸ್ಥಿತಃ ।
ಲೋಕೋಪಮೋಽಪಿ ತೃಪ್ತೋಂತರ್ಯಃ ಸ ಮುಕ್ತಮುನಿಃ ಸ್ಮೃತಃ || ೫ ||

ಏತಯೋರ್ಯೋ ಭವೇದ್ಭಾವಃ ಶಾಂತಯೋರ್ಮುನಿನಾಥಯೋಃ ।
ಚಿತ್ತನಿಶ್ಚಯರೂಪಾತ್ಮಾ ಮೌನಶಬ್ದೇನ ಸಸ್ಮೃತಃ || ೬ ||

ಚತುಷ್ಪ್ರಕಾರಮಾಹುಸ್ತಂ ಮೌನಂ ಮೌನವಿದೋ ಜನಾಃ ।
ವಾಙ್ಮೌನಮಕ್ಷಮೌನಂ ಚ ಕಾಷ್ಠಂ ಸೌಷುಪ್ತಮೇವ ಚ || ೭ ||

ಎರಡು ವಿಧವಾಗಿರುವನು ಎನ್ನುವರು. ಕಾಷ್ಠ ತಪಸ್ವಿಯೊಬ್ಬನು, ಜೀವನ್ಮುಕ್ತನು ಇನ್ನೊಬ್ಬನು.

(ತ್ರಯಾಣಾಂ ಕಾಷ್ಠತಪಸ್ವಿನಾಂ ತಾರತಮ್ಯ ಭೇದಾನಾಂ ಅನಾತ್ಮಜ್ಞತಯಾ ಏಕ ಕೋಟಿತಾ ಏವ ಇತಿ ಭಾವಃ । —ತಾ. ಪ್ರ.)

೪. ಬ್ರಹ್ಮತತ್ವ ಭಾವಿತಾಂತರಂಗರಾಗದೆ, ಶುಷ್ಕವಾಗಿ ನೀರಸವಾದ ಕ್ರಿಯಾಕಲಾಪಗಳೇ ನಿಶ್ಚಯವೆಂಬ ಬುದ್ಧಿಯಿಂದ, ಹಟದಿಂದ ಇಂದ್ರಿಯ ಗ್ರಾಮುಗಳನ್ನು ಗೆದ್ದು ಮುನಿಯಾಗಿರುವವನು ಕಾಷ್ಠತಾಪಸನು.

೫. ಇರುವುದೆಲ್ಲವನ್ನೂ ಬ್ರಹ್ಮವೆಂದು ಭಾವಿಸುವವನಾಗಿ, ಆತ್ಮಸ್ಥಿತನಾಗಿ, ವ್ಯವಹಾರಾದಿಗಳಿಂದ ಲೋಕದಲ್ಲಿರುವ ಇತರರಂತೆ ಇದ್ದರೂ, ಅಂತಸ್ತೃಪ್ತನಾಗಿರುವ ಯಾವನೋ ಆತನು ಮುಕ್ತಮುನಿಯೆನ್ನಿಸಿಕೊಳ್ಳುವನು.

೬. ಇವರಿಬ್ಬರೂ ಶಾಂತರು. ಮುನಿನಾಥರು. ಇವರಿಗೆ ಯಾವ ಭಾವವು ಚಿತ್ತನಿಶ್ಚಯರೂಪವಾಗಿ ಇರುವುದೋ ಆ ಭಾವವನ್ನು ಹಿಡಿದು ಅಂತಹ ಮೌನವೆನ್ನುವರು.

೭. ಮೌನವನ್ನು ಬಲ್ಲ ವಿದ್ವಾಂಸರು ಆ ಮೌನವನ್ನು ನಾಲ್ಕು ಪ್ರಕಾರವಾಗಿ ಹೇಳುವರು. ವಾಙ್ಮೌನ, ಅಕ್ಷಮೌನ, ಕಾಷ್ಠಮೌನ, ಸೌಷುಪ್ತ ಮೌನ ಎಂಬುದು ಆ ನಾಲ್ಕು ವಿಧವು.

ವಾಙ್ಮೌನಂ ವಚಸಾಂ ರೋಧೋ ಬಲಾದಿಂದ್ರಿಯನಿಗ್ರಹಃ |
ಅಕ್ಷಮೌನಂ ಪರಿತ್ಯಾಗಶ್ಚೇಷ್ಟಾನಾಂ ಕಾಷ್ಠಸಂಜ್ಞಿಕಂ || ೮ ||

ಮನೋಮೌನಂ ಪಂಚಮಂ ಚ ತನ್ಮೃತೌ ಕಾಷ್ಠತಾಪಸೇ |
ಭಾವೇ ಸುಷುಪ್ತಮೌನಾಖ್ಯಂ ಜೀವನ್ಮುಕ್ತೋಽನುಜೀವತಿ || ೯ ||

ತ್ರಿಷು ಮೌನವಿಶೇಷೇಷು ವಿಷಯಃ ಕಾಷ್ಠತಾಪಸಃ |
ಸುಷುಪ್ತಮೌನಾವಸ್ಥಾಯಾಂ ಸಾ ತುರ್ಯಾ ಸೈವ ಮುಕ್ತಧೀಃ || ೧೦ ||

ವಾಙ್ಮೌನಂ ಮೌನಮಿತ್ಯೇತತ್ಸಿದ್ಧಂ ತಚ್ಚ ಮನಃ ಕಿಲ |
ಮಲಿನಂ ಜೀವಬಂಧಾಯ ತತ್ರಸ್ಥಃ ಕಾಷ್ಠತಾಪಸಃ || ೧೧ ||

---

೮. ವಾಕ್ಕುಗಳನ್ನು ತಡೆದು ಮಾತನಾಡದಿರುವಿಕೆಯು ವಾಙ್ ಮೌನವು. ಬಲವಂತದಿಂದ ಇಂದ್ರಿಯನಿಗ್ರಹ ಮಾಡಿರುವುದು ಅಕ್ಷಮೌನವು. ಯಾವ ವ್ಯಾಪಾರವನ್ನೂ ಮಾಡದೆ ಕಟ್ಟಿಗೆಯಂತೆ ನಿಶ್ಚೇಷ್ಟನಾಗಿ ಇರುವಿಕೆಯು ಕಾಷ್ಠ ಮೌನವು.

೯. ಆ ಕಾಷ್ಠತಾಪಸನು ಮರಣವನ್ನು ಹೊಂದಿದಾಗ ಕಾಣುವ ಮನೋಮೌನವೂ ಒಂದುಂಟು. ಅದು ಐದನೆಯದು (ಆದರದನ್ನು ಯಾರೂ ಅಷ್ಟಾಗಿ ಪರಿಗಣಿಸುವುದಿಲ್ಲ.) ಆತ್ಮತತ್ತ್ವವನ್ನು ಬಲ್ಲವನ ಮೌನವು ಸೌಷುಪ್ತಮೌನವೆನ್ನಿಸುವುದು. ಅದನ್ನು ಜೀವನ್ಮುಕ್ತನು ತನ್ನ ಜೀವನದಲ್ಲಿ ಅನುಷ್ಠಾನ ಮಾಡುವನು.

೧೦. ಕಾಷ್ಠತಾಪಸನು ಮೊದಲಿನ ಮೂರು ಮೌನಗಳಲ್ಲಿ ಅಧಿಕಾರಿಯು: ಆದರೆ ಯಾವನು ನಾಲ್ಕನೆಯ ಸೌಷುಪ್ತ ಮೌನಾವಸ್ಥೆಯಲ್ಲಿರುವನೋ ಆತನು ಮುಕ್ತನು.

೧೧. ವಾಙ್ಮೌನವೂ ಮೌನವೇ ಆದರೂ ಅಲ್ಲಿ ಮನಸ್ಸು ಮಲಿನವಾಗಿಯೇ ಇರುವುದರಿಂದ, ಕಾಷ್ಠತಾಪಸನು ಆ ಮೌನವನ್ನು ಮಾಡಿದ್ದರೂ ಅದು ಅವನನ್ನು ಸಂಸಾರ ಬಂಧದಲ್ಲಿಡುವುದೇ ಹೊರತು ಅವನಿಗೆ ಮುಕ್ತಿಯನ್ನು ಕೊಡುವುದಿಲ್ಲ.

ಅಸ್ಮತ್ಸಂಸ್ಮರಣಂ ವಾಪಿ ದೃಶ್ಯಂ ವಾಙ್ಮಯಮಸ್ಪೃಶನ್ ।
ಅಪಶ್ಯನ್ನೇವ ಪಶ್ಯನ್ ಹಿ ಕಾಷ್ಠಮೌನೀ ತು ತಿಷ್ಠತಿ ॥ ೧೨ ॥

ಪ್ರಸ್ಫುರಚ್ಚಿತ್ತಕಲನಮೇತನ್ಮೌನತ್ರಯಂ ಸ್ಮೃತಂ ।
ಭವಂತಿ ಮೌನಿನಸ್ತತ್ರ ನ ತಜ್ಜ್ಞಾಸ್ತತ್ಸ್ಥಲೀಲಯಾ ॥ ೧೩ ॥

ನಾತ್ರೋಪಾದೇಯತಾಜ್ಞಾನಮೇತನ್ಮೌನತ್ರಯೇ ಕಿಲ ।
ಲೀಲಯಾ ಕಥಿತಂ ತೇನ ತಜ್ಜ್ಞಾಃ ಕುಪ್ಯಂತು ವಾ ನವಾ ॥ ೧೪ ॥

---

೧೨. ಆ ಮೌನದಲ್ಲಿ ಕಾಷ್ಠಮೌನಿಯು ತನ್ನೊಳಗಿರುವ ಆತ್ಮನನ್ನು ಕಾಣದೆ, "ನಾಮರೂಪಾತ್ಮಕವಾದ ಪ್ರಪಂಚವನ್ನು ನೋಡುವುದಿಲ್ಲ, ನೋಡುವುದಿಲ್ಲ." ಎನ್ನುತ್ತ ಎನ್ನುತ್ತಲೇ ನೋಡುತ್ತಲೇ ಇರುವನು.

(ತರ್ಹಿ ತದ್ವಾನ್ ಕಾಷ್ಠತಾಪಸಃ ಸಮಾಧೌ ಕಥಂ ತಿಷ್ಠತಿ ? ತದಾಹ–ಅಸ್ಮದಿತಿ । ಬಲಾನ್ಮನೋ ಸಗ್ರಹೇಣ ಅಂತರಸ್ಮದೋऽಹಂಭಾವಸ್ಯ ಸಂಸ್ಮರಣಮನುಸಂಧಾನಂ ಅಸ್ಪೃಶನ್, ಬಹಿರಪಿ ದೃಶ್ಯಂ ರೂಪಪ್ರಪಂಚಂ ವಾಙ್ಮಯಂ ನಾಮ ಪ್ರಪಂಚಂ ಚ ಅಸ್ಪೃಶನ್ ಅಜ್ಞಾನಾವೃತ ಮಾತ್ಮಾನ ಮಪಶ್ಯನ್ ಏವ ಸುಷುಪ್ತಾವಿವ ನಿತ್ಯಾತ್ಮ ದೃಗ್ವಿಲೋಪಾಭಾವಾತ್ ಭಸ್ಮಚ್ಛನ್ನಾಗ್ನಿವತ್ ಸಾಕ್ಷಿಮಾತ್ರ ಜ್ಯೋತಿಷಾ ಪಶ್ಯಂಸ್ತಿಷ್ಠತೀತ್ಯರ್ಥಃ । —ತಾ. ಪ್ರ.)

೧೩. ಚಿತ್ತ ವ್ಯಾಪಾರವು ಈ ಮೂರು ಮೌನಗಳಲ್ಲಿಯೂ ಉಂಟು, ಅದರಿಂದ ಈ ಮೌನಗಳನ್ನು ಅವಲಂಬಿಸಿದರೂ ಬ್ರಹ್ಮಜ್ಞರಾಗುವುದಿಲ್ಲ.

೧೪. ಈ ಮೌನತ್ರಯದಲ್ಲಿಯೂ ಉಪಾದೇಯವಾದ ವಿಷಯವು ಯಾವುದು ಎಂಬ ಜ್ಞಾನವೇ ಇರುವುದಿಲ್ಲವಾಗಿ, ಅಲ್ಲಿ ಆಗುವ ಸಮಾಧಿಯೂ ಒಂದು ಲೀಲೆಯಂತೆ ಎಂದೆವು. ಆ ಮೌನತ್ರಯವನ್ನು ಬಲ್ಲವರಿಗೆ ಕೋಪವು ಬಂದರೂ ಬರಲಿ.

ಇದಂ ಸುಷುಪ್ತಮೌನಂ ತು ಜೀವನ್ಮುಕ್ತಮಿತಿ ಸ್ಥಿತಂ ।
ಅಪುನರ್ಜನ್ಮನೋ ಜಂತೋಃ ಶೃಣು ಶ್ರವಣಭೂಷಣಂ ॥ ೧೫ ॥

ನಾತ್ರ ಸಂಯಮ್ಯತೇ ಪ್ರಾಣಸ್ತ್ರಿವಿಧೋ ನಾಪಿ ಯೋಜ್ಯತೇ ।
ನೋಲ್ಲಸ್ಯಂತೇ ನ ಗ್ಲಾಯಂತೇ ಸಮಸ್ತೇಂದ್ರಿಯಸಂವಿದಃ ॥ ೧೬ ॥

ನಾನಾತಾಕಲನೇಯಂ ಚ ನ ವಲ್ಗತಿ ನ ಶಾಮ್ಯತಿ ।
ಚೇತೋ ನಚೇತೋ ನಾಚೇತೋ ನ ಸನ್ನಾಸನ್ನ ಚೇತರತ್ ॥ ೧೭ ॥

ಅವಿಭಾಗಮನಭ್ಯಾಸಂ ಯದನಾದ್ಯಂತಮಾಸ್ಥಿತಂ ।
ಧ್ಯಾಯತೋಽಧ್ಯಾಯತಶ್ಚೈತತ್ಸೌಷುಪ್ತಂ ಮೌನಮುಚ್ಯತೇ ॥ ೧೮ ॥

---

೧೫. ಈ ಸುಷುಪ್ತ ಮೌನವಾದರೋ ಜೀವನ್ಮುಕ್ತರಿಗೆ ಮಾತ್ರ ಸಾಧ್ಯವು. ಇದನ್ನು ಸಾಧಿಸಿದವರಿಗೆ ಪುನರ್ಜನ್ಮವಿಲ್ಲವು. ಅದರಿಂದ ಶ್ರವಣ ಭೂಷಣವಾದ ಇದನ್ನು ಕೇಳು.

೧೬. ಮೌನವು (ತತ್ವದರ್ಶನಮಾಡಿದ ಪುಣ್ಯವಂತರಿಗೆ ಸಹಜವಾಗಿ ಲಭಿಸುವುದರಿಂದ) ಇಲ್ಲಿ ಪ್ರಾಣವನ್ನು ಸಂಯಮ ಮಾಡಬೇಕಾಗಿಲ್ಲ. ಊರ್ಧ್ವ, ಅಧಃ, ಮಧ್ಯ, ವೆಂಬ ಸಂಚಾರ ಭೇದದಿಂದ ಮೂರಾಗುವ ಪ್ರಾಣವನ್ನು ಯೋಗ ಮಾಡಲೂ ಬೇಕಾದುದಿಲ್ಲ. ಈ ಮೌನದಲ್ಲಿ ಇಂದ್ರಿಯಗಳ ಚೈತನ್ಯವು ಹಿಗ್ಗುವುದಿಲ್ಲ.; ಆಯಾಸವಾಗುವುದಿಲ್ಲ.

೧೭. ನಾನಾತಾ ಭಾವನೆಯು ಯಾವುದುಂಟೋ ಅದು ಕುಣಿಯುವುದೂ ಇಲ್ಲ: ಸಂಪೂರ್ಣವಾಗಿ ಉಪಶಾಂತವೂ ಆಗುವುದಿಲ್ಲ. ಚಿತ್ತವು ತನ್ನ ಚಿತ್ತತೆಯನ್ನು ಕಳೆದುಕೊಂಡಿರುವುದರಿಂದ ಅದು ಚಿತ್ತವೂ ಅಲ್ಲ; ಅಚಿತ್ತವೂ ಅಲ್ಲ: ಅದು ಇದೆಯೆನ್ನುವಂತಿಲ್ಲ: ಇಲ್ಲವೆನ್ನುವಂತಿಲ್ಲ: ಇವೆರಡೂ ಅಲ್ಲದ ಇನ್ನೊಂದೂ ಅಲ್ಲ: ಎಂಬಂತಿರುವುದು.

೧೮. ಆ ಸುಷುಪ್ತ ಮೌನವು ಆದಿ ಅಂತಗಳಿಲ್ಲದೆ ಅನಾದ್ಯಂತವಾಗಿ ಪ್ರತಿಷ್ಠಿತವಾಗಿ ಕುಳಿತಿರುವುದರಿಂದ ಅವಸ್ಥಾತ್ರಯಗಳಲ್ಲಿಯೂ ಅವಿಭಾಗವಾಗಿಯೇ ಇರುವುದು. ಆದರಿಂದ ಅದನ್ನು ಮತ್ತೆ ಮತ್ತೆ ಅಭ್ಯಾಸ ಮಾಡಬೇಕಾಗಿಲ್ಲ. ಧ್ಯಾನದಲ್ಲಿದ್ದರೂ ಧ್ಯಾನದಲ್ಲಿ ಇಲ್ಲದಂತೆಯೇ ಇರುವುದು. ಇಂಥದನ್ನು ಸೌಷುಪ್ತ ಮೌನ ಎನ್ನುವರು.

ಯಥಾಭೂತಮಿದಂ ಬುದ್ಧ್ವಾ ಜಗನ್ನಾನಾತ್ವವಿಭ್ರಮಂ |
ಯಥಾಸ್ಥಿತಮಸಂದೇಹಂ ಸೌಷುಪ್ತಂ ಮೌನಮೇವ ತತ್ || ೧೯ ||

ಅನೇಕಸಂವಿದ್ರೂಪಾತ್ಮ ಶಿವೇಸ್ಸೈವೇದಮಾತತಂ |
ಇತ್ಯಾಸ್ಥಿತಮನಂತಂ ಯತ್ಸೌಷುಪ್ತಂ ಮೌನಮುಚ್ಯತೇ || ೨೦ ||

ಆಕಾಶಂ ನೈವ ಚಾಕಾಶಂ ಸರ್ವಮಸ್ತಿ ಚ ನಾಸ್ತಿ ಚ |
ಇತಿ ಚಿತ್ತಂ ಸಮಂ ಶಾಂತಂ ಯತ್ತನ್ಮೌನಂ ಸುಷುಪ್ತವತ್ || ೨೧ ||

ಸರ್ವಶೂನ್ಯಂ ನಿರಾಲಂಬಂ ಶಾಂತಿವಿಜ್ಞಪ್ತಿಮಾತ್ರಕಂ |
ನ ಸನ್ನಾಸದಿತಿ ಯಸ್ಯಾವಾಸಿತಂ ಮೌನಮುತ್ತಮಂ || ೨೨ ||

ಭಾವಾಭಾವದಶಾದೇಶವಿಶೇಷೈರ್ವಿತತೋತ್ಥಿತೈಃ |
ಸಂವಿದೋ ಯದನಾಭಾಸಸ್ತನ್ಮೌನಂ ಪರಮಂ ವಿದುಃ || ೨೩ ||

---

೧೯. ಜಗತ್ತಿನಲ್ಲಿ ಕಾಣುವ ನಾನಾತ್ವವು ಬರಿಯ ಭ್ರಾಂತಿಯೆಂದು ಇದ್ದುದನ್ನು ಇದ್ದಂತೆ ತಿಳಿಯುತ್ತ, ಯಾವ ಸಂದೇಹವೂ ಇಲ್ಲದೆ ಇರುವುದು ಯಾವುದೋ ಅದನ್ನು ಸೌಷುಪ್ತ ಮೌನವೆನ್ನುವರು.

೨೦. ಅನೇಕ ಜೀವರೂಪನಾಗಿ ಶಿವನೇ ಈ ಜಗತ್ತಿನಲ್ಲೆಲ್ಲಾ ವ್ಯಾಪಿಸಿ ಕೊಂಡು ಅನಂತ ವ್ಯಾಪಾರಗಳನ್ನು ಮಾಡುತ್ತಿರುವನು ಎಂದು ತೆಪ್ಪಗೆ ಕುಳಿತಿರು ವುದೇ "ಸೌಷುಪ್ತ ಮೌನ"ವು.

೨೧. ಆಕಾಶವು ಇಲ್ಲ: ಇರುವುದೆಲ್ಲವೂ ಆಕಾಶವೇ ಹೌದು. ಎಲ್ಲವೂ ಇದೆ; ಯಾವುದೂ ಇಲ್ಲ. ಹೀಗೆಂದು ಚಿತ್ತವು ಸಮವಾಗಿ ಶಾಂತವಾಗಿ ಸುಷುಪ್ತಿಯಲ್ಲಿ ಇರುವಂತೆ ಇರುವುದೇ ಸೌಷುಪ್ತ ಮೌನವು.

೨೨. ಸರ್ವಶೂನ್ಯವೂ ನಿರಾಲಂಬವೂ ಶಾಂತಿಯೂ ವಿ-ಜ್ಞಪ್ತಿಯೂ ಆಗಿರುವ ಆತ್ಮವೊಂದು ಮಾತ್ರವಾಗಿ ಉಳಿದು, ಮಿಕ್ಕವೆಲ್ಲ ಇದೆ ಇಲ್ಲ ಎಂಬಂತೆ ಇರುವ ಸ್ಥಿತಿಯು ಯಾವುದೋ ಅದು ಮೌನವು.

೨೩. ತಾವೇ ತಾವಾಗಿ ಕುಣಿಯುತ್ತಿರುವ ಭಾವ, ಅಭಾವಗಳೆಂಬ ದಶಾ ವಿಶೇಷಗಳನ್ನು ತೋರಿಸುವ ಸಂವೇದನವು ಎಲ್ಲಿ ತೋರುವುದೇ ಇಲ್ಲವೋ ಅದು ಪರಮ ಮೌನವೆಂದು ಬಲ್ಲವರು ಹೇಳುವರು.

ತ್ಯಂತಸಮತೈವಾಂತಶ್ಚೇತಸಾವೃತ್ತಿರೂಪಿಣಾ ।
ಯದನಾವರ್ತನಂ ಸಂವಿದ್ವೃತ್ತೇಸ್ತನ್ಮೌನಮಕ್ಷಯಂ ॥ ೨೪ ॥

ನಾಹಮಸ್ಮಿ ನ ಚಾನ್ಯೋಽಸ್ತಿ ನ ಮನೋ ನ ಚ ಮಾನಸಂ ।
ಇತಿ ಸಂವಿದಸಂವಿತ್ತಿರವಿಚ್ಛಿನ್ನಾತಿಮೌನಿತಾ ॥ ೨೫ ॥

ಅಹಮಸ್ಮಿ ಜಗತ್ಯಸ್ಮಿನ್ ಸ್ವಸ್ತಿ ಶಬ್ದಾರ್ಥಮಾತ್ರಕಂ ।
ಸತ್ತಾಸಾಮಾನ್ಯಮೇವೇತಿ ಸೌಷುಪ್ತಂ ಮೌನಮುಚ್ಯತೇ ॥ ೨೬ ॥

ಯಸ್ಮಾತ್ಸಂವಿದಮೇವ ಸ್ಯಾತ್ಸ್ವನ್ಯಾದಿಕಲನಾ ಕುತಃ ।
ಅನಂತಮೇವ ಸೌಷುಪ್ತಂ ಸರ್ವಂ ಮೌನಮತಸ್ತತಂ ॥ ೨೭ ॥

---

೨೪. ಅಂತರಂಗದಲ್ಲಿ ಅತ್ಯಂತವಾದ ಸಮತೆಯುಳ್ಳದಾಗಿ ಚಿತ್ತದಲ್ಲಿ ಯಾವ ವೃತ್ತಿಯೂ ಇಲ್ಲದ್ದಾಗಿ, (ದೃಶ್ಯ) ಸಂವೇದನ (ರೂಪಚಿತ್ತ) ವೃತ್ತಿಯನ್ನು ಮತ್ತೆ ಹೊಂದದೆ ಇರುವುದು ಯಾವುದೋ ಅದು ಅಕ್ಷಯವಾದ ಮೌನವು.

೨೫. ಅಹಂ ಎಂಬುದು ಇಲ್ಲ, ಅನ್ಯ ಎಂಬುದು ಇಲ್ಲ. ಮನಸ್ಸಿಲ್ಲ: ಮಾನಸ ವ್ಯಾಪಾರವಿಲ್ಲ. ಎಂಬ ಸಂವಿತ್–ಅಸಂವಿತ್ ಎಂಬ ಅನಿರ್ವಚನೀಯ ಸ್ಥಿತಿಯು ಸಂತತವಾಗಿರುವುದೇ ಅತಿ ಮೌನವು.

೨೬. ಈ ಜಗತ್ತಿನಲ್ಲಿ ನಾನು ಇರುವೆನು. ಆ ನಾನು, ಎಂಬುದು ಸ್ವಸ್ತಿ (ಅನಾಮಯವು) ಜಗತ್ತು ಶಬ್ದಾರ್ಥ ಮಾತ್ರಕವಾದುದು. ಇವೆರಡಕ್ಕೂ ಸತ್ತಾ ಸಾಮಾನ್ಯವು ಎಂದು ಅರಿತು ಅದರಂತೆ ಇರುವುದು ಸೌಷುಪ್ತ ಮೌನವು.

೨೭. ಯಾವ ಕಾರಣದಿಂದ ಸಂವಿತ್ತು ಅ-ಮಾ ಆಗುವುದೋ ಆಗ ತಾನು, ಅನ್ಯ ಎಂಬ ಕಲ್ಪನೆಯಾದರೂ ಹೇಗೆ ಆದೀತು? ಅದರಿಂದ ಹಾಗೆ–ಸರ್ವದೃಶ್ಯವೂ ಬಾಧಿತವಾದ ಮೇಲೆ ಉಳಿಯುವ ಅನಂತದ ಚಿಂತನದಲ್ಲಿ ಇರುವುದೇ ಸೌಷುಪ್ತ ಮೌನವು. ಆಗ ಸರ್ವವೂ ಮೌನವೇ ಆಗಿರುವುದು.

(ಅ-ಮಾ=ಸರ್ವಬಾಧಕ ಸ್ವಾಕಾರ ಚರಮವೃತ್ತಿ ಪ್ರಮಾಶೂನ್ಯಾ, ತಾಮಪಿ ಗ್ರಸಂತೀವ ಸ್ಯಾತ್ –ತಾ. ಪ್ರ.)

ಸುಷುಪ್ತಮೌನಮೇವೇದಮನಂತತ್ವಾತ್ಪ್ರಬೋಧವತ್ ।
ತುರ್ಯಮೇವಾಮಲಂ ವಿದ್ಧಿ ತುರ್ಯಾತೀತಮಥಾಪಿ ಚ ॥ ೨೮ ॥

ಸೌಷುಪ್ತೈಕಸಮಾಧಾನಸ್ತಥಾ ತುರ್ಯಸಮಾಧಿಕಃ ।
ತುರ್ಯಾತೀತಸಮಾಧಿರ್ವಾ ಜಾಗ್ರತ್ಯಪಿ ಭವಂತಿ ವೈ ॥ ೨೯ ॥

ತುರ್ಯಸ್ಥ ಏವ ಸಕಲಾಮಲಶಾಂತಿವೃತ್ತಿ ।
ರ್ಜಾಗ್ರತ್ಯಪಿ ವ್ಯವಹರನ್ನಿಪುಣಂ ಸಮಂತಾತ್ ।
ನಿತ್ಯಂ ಸದೇಹ ಉತ ವಾಪಿ ವಿದೇಹ ಏವ ।
ಬ್ರಹ್ಮನ್ನಭೋ ಭವತ ಏವ ಕಿಲಾಸ್ತಿ ಸಾಧೋ ॥ ೩೦ ॥

---

೨೮. ಈ ಸುಷುಪ್ತ ಮೌನವೂ ಪ್ರಬೋಧದಂತೆಯೇ ಅನಂತವಾದುದರಿಂದ ಇದೇ ಅಮಲವಾದ ತುರ್ಯವೆಂದೂ ತುರ್ಯಾತೀತವೆಂದೂ ತಿಳಿ.

(ಅವಿದ್ಯಾಬಾಧಾತ್ ತುರ್ಯಂ, ತದ್ಬಾಧಕ ವೃತ್ತೀನಾಮಪಿ ಬಾಧಾತ್ ತುರ್ಯಾತೀತಂ ॥ —ತಾ. ಪ್ರ.)

೨೯. ಈ ಸೌಷುಪ್ತ ಸಮಾಧಿ, ತುರ್ಯ ಸಮಾಧಿ, ತುರ್ಯಾತೀತ ಸಮಾಧಿಗಳು ಜಾಗ್ರತ್ತಿನಲ್ಲಿಯೂ ಆಗುವುದುಂಟು.

(ಹಿಂದೆ ಹೇಳಿರುವ ಸಪ್ತ ವಿಧ ಜ್ಞಾನ ಭೂಮಿಕೆಗಳಲ್ಲಿ ಪಂಚಮ, ಷಷ್ಠ, ಸಪ್ತಮ ಭೂಮಿಕೆಗಳು ಸಮಾಧಿ ಭೇದರೂಪಗಳು, ಅವೇ ಈ ಮೂರು. ಇವು ಜಾಗ್ರತ್ತಿನಲ್ಲಿಯೂ ಸ್ವಪ್ನದಲ್ಲಿಯೂ ಕೂಡ ಆಗುವುದುಂಟು. —ತಾ. ಪ್ರ.)

೩೦. ಯಾವನ ಸಕಲ ವೃತ್ತಿಗಳೂ ಅಮಲಶಾಂತಿ ಪರಿಪೂರ್ಣಗಳಾಗಿರುವವೋ ಅಂಥವನು ಜಾಗ್ರತ್ತಿನಲ್ಲಿಯೇ ಇದ್ದು ಮೊದಲಿಂದ ಕೊನೆಯವರೆಗೂ ನಿಪುಣವಾಗಿ ವ್ಯವಹಾರ ಮಾಡುವವನಾದರೂ ಅವನು ಯಾವಾಗಲೂ ತುರ್ಯಸ್ಥನೇ! ಅವನು ಸದೇಹನಾದರೂ ವಿದೇಹನೇ! ಬ್ರಹ್ಮಜ್ಞನೇ, ನೀನು ಹಾಗೆ ಆಗಿ ಆಕಾಶದಂತೆ ಪರಮಶುದ್ಧನಾಗಿರುವೆ. ಸಾಧುವೆ, ನಿನಗೆ ಅಂತಹ ಸ್ಥಿತಿಯು ಬಂದಿರುವುದು.

ಓಮಿತ್ಯುದಸ್ತಭವವಾಸನಮೇಕಮಾಸ್ಸ್ವ ನ ।
ತ್ವಂ ನ ಚಾಹಮಪಿ ನಾನ್ಯದಿಹಾಸ್ತಿ ಸತ್ಯಂ ।
ಸರ್ವಂ ಚ ವಿದ್ಯತ ಇತೀಹ ಕಿಲಾಂತರಾಭಂ ।
ಜ್ಞಸ್ತಿಷ್ಠ ಚಿದ್ಗಗನಕೋಶಕಲೈಕನಿಷ್ಠಃ ॥ ೩೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ನಿರ್ವಾಣ ಪ್ರಕರಣೇ "ಮಹಾಮೌನಯತ್ನೋಪದೇಶೋ" ನಾಮ ಅಷ್ಟಷಷ್ಟಿತಮಃ ಸರ್ಗಃ

---

೩೧. ಓಂ ಎಂದು ಪ್ರಣವವನ್ನು ಅನುಸಂಧಾನ ಮಾಡುತ್ತ, ಸರ್ವ ಜನ್ಮ ಜನ್ಮಾಂತರಗಳ ವಾಸನಾ ಜಾಲವೆಲ್ಲವೂ ಸಂಪೂರ್ಣವಾಗಿ ಅಸ್ತವಾಗಿ ಹೋಗಿರಲು, ಉಳಿಯುವ ಏಕವಾದ ತುರ್ಯದಲ್ಲಿ ನಿಲ್ಲುವವನಾಗು. ತ್ವಂ, ಅಹಂ, ಅನ್ಯತ್, ಎಂಬುದು ಯಾವುದೂ ಸತ್ಯವಲ್ಲ. ಎಲ್ಲವೂ ಕೂಡ, ಅಂತರಾಭಂ (ದೇಹದೊಳಗೆ ನಾಡಿಗಳಲ್ಲಿ ಅನುಭವಿಸುವ ಕನಸಿಗೆ ಸಮವಾಗಿ) ಆಗಿ ಇರುವುದು. ಇದನ್ನು ತಿಳಿದು, ಚಿದಾಕಾಶಕೋಶನಾಗಿ, ಜೀವನ್ಮುಕ್ತನಾದ 'ಜ್ಞ' ನಾಗಿ ಇರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ನಿರ್ವಾಣ ಪ್ರಕರಣದಲ್ಲಿ "ಮಹಾಮೌನಯತ್ನೋಪದೇಶ" ಎಂಬ ಅರವತ್ತೆಂಟನೆಯ ಸರ್ಗವು.

ಏಕೋನಸಪ್ತತಿತಮಃ ಸರ್ಗಃ

ಶ್ರೀ ರಾಮ ಉವಾಚ:—

ಕುತಃ ಶತತ್ವಮಾಯಾತಂ ರುದ್ರಾಣಾಂ ಮುನಿನಾಯಕ ।
ಯೇ ಗಣಾಸ್ತೇ ತು ಯೇ ರುದ್ರಾ ಉತ ನೇತಿ ವದಾಶು ಮೇ ॥ ೧ ॥

ಶ್ರೀ ವಸಿಷ್ಠ ಉವಾಚ:—

ಸ್ವಪ್ನಾನಾಂ ಭಿಕ್ಷುಣಾ ದೃಷ್ಟಂ ಶತಂ ಶತಶರೀರಕಂ ।
ಸರ್ವಮುದ್ದೇಶತೋ ಜ್ಞಾತಂ ತತ ಉಕ್ತಂ ನ ತನ್ಮಯಾ ॥ ೨ ॥

ಅರವತ್ತೊಂಭತ್ತನೆಯ ಸರ್ಗವು

ಶ್ರೀ ರಾಮನು ಕೇಳಿದನು :—

೧. ಎಲೈ ಮುನೀಂದ್ರನೇ, ರುದ್ರರು ನೂರು ಮಂದಿಯಾದುದು ಹೇಗೆ? ಗಣಗಳಾದವರೂ ರುದ್ರರೇ ಆದರೇ ಹೇಗೆ? ಇದನ್ನು ನನಗೆ ಹೇಳು.

(ಹಿಂದೆ 63–56 ರಲ್ಲಿ ಭಿಕ್ಷುಸ್ವಪ್ನದ ವ್ಯಕ್ತಿಗಳೆಲ್ಲರೂ ರುದ್ರರಾದರು ಎಂದೂ ೬೪–೩೫ ರಲ್ಲಿ ರುದ್ರಗಣಗಳಾದರು ಎಂದೂ ಹೇಳಿದೆ. ಶ್ರೀರಾಮನಿಗೆ ಇಲ್ಲಿ ರುದ್ರರಾದರೋ ರುದ್ರಗಣಗಳಾದರೋ ಎಂದು ಸಂದೇಹವು ಬಂದಿದೆ. ಅದನ್ನು ಕೇಳುತ್ತಾನೆ.)

ಶ್ರೀ ವಸಿಷ್ಠನು ಹೇಳಿದನು :—

೨. ಭಿಕ್ಷುವು ಕಂಡ ಸ್ವಪ್ನಗಳ ನೂರು ಶರೀರಗಳೂ ಅವರವರ ಸಂಸಾರಗಳನ್ನು ಅನುಭವಿಸಿ ರುದ್ರರೇ ಆದರೆಂದು ಹೇಳಿದೆನಾಗಿ, ಅದನ್ನು ನಾನು ವಿವರಿಸಲಿಲ್ಲ.

(ಉದ್ದೇಶತಃ ಪ್ರಾಗ್ವರ್ಣಿತ ತತ್ತಜ್ಜನ್ಮಾದಿಪ್ರಸ್ತಾವಃ ತ್ವಯಾ ಜ್ಞಾತಮೇವ ತತಃ ತನ್ಮಯಾ ರುದ್ರಶತಸಂಖ್ಯಾನೇ ನಾಮತೋ ವಿಶಿಷ್ಯನೋಕ್ತಂ ॥ —ತಾ.ಪ್ರ)

ಯ ಆಕಾರಾಶ್ಚ ತೇ ಸ್ವಪ್ನೇ ತತ್ತದ್ಗಣಶತಂ ಸ್ಮೃತಂ |
ತದೇತದ್ರುದ್ರಶತಕಂ ರುದ್ರಾ ಅಪಿ ಗಣಾ ವಿಧೌ ॥ ೩ ॥

ಶ್ರೀ ರಾಮಃ ಉವಾಚ :—

ಏಕಸ್ಮಾದ್ಭಗವಂಶ್ಚಿತ್ತಾತ್ಕಥಂ ಚಿತ್ತಶತಂ ಕೃತಂ |
ತತ್ಸ್ವಪ್ನಕೃತರುದ್ರೇಣ ದೀಪಾದ್ದೀಪಶತಂ ಯಥಾ ॥ ೪ ॥

ಶ್ರೀ ವಸಿಷ್ಠ ಉವಾಚ :—

ನಿರಾವರಣಸದ್ಭಾವಾ ಯದ್ಯಥಾ ಕಲ್ಪಯಂತಿ ಹಿ ||
ತತ್ತಥಾನುಭವಂತ್ಯೇವ ರಸಾವರಣಸಂವಿದಃ ॥ ೫ ॥

---

೩. ಸ್ವಪ್ನಸಂಭೂತವಾದ ಆಕಾರಗಳೂ ಯಾವಯಾವವೋ ಅವೆಲ್ಲ ಶತ ರುದ್ರಗಣಗಳಾದರು ಎಂದು ಹೇಳಿದೆ. ಆ ರುದ್ರಶತಕವೂ ರುದ್ರರೇ ಆದರೂ, ಸೃಷ್ಟ್ಯಾದಿಯಲ್ಲಿ ಬರುವ ಮಹಾರುದ್ರನೊಬ್ಬನೇ ಆದುದರಿಂದ, ಅವರೆಲ್ಲರೂ ಆತನ ಪ್ರಭಾವದಿಂದ ರುದ್ರತ್ವವನ್ನು ಪಡೆದವರಾದುದರಿಂದ, ಅವರೆಲ್ಲರೂ ಇತರರ ದೃಷ್ಟಿಯಿಂದ ರುದ್ರರಾದರೂ ಪೂರ್ವಸಿದ್ಧರುದ್ರನಿಗೆ ಗಣಗಳೇ !

ಶ್ರೀ ರಾಮನು ಕೇಳಿದನು :—

೪. ಎಲೈ ಭಗವಂತನೆ, ಒಂದೇ ಒಂದು ಚಿತ್ತದಿಂದ ನೂರು ಚಿತ್ತಗಳು ಆದುದು ಹೇಗೆ? ಅದೂ ಆ ನೂರನೆಯ ಸ್ವಪ್ನದಲ್ಲಿ ಬಂದ ರುದ್ರನಿಂದ ಎಲ್ಲರಿಗೂ ರುದ್ರತ್ವವು ಬಂತು ಎಂದರೆ, ಏನು ದೀಪದಿಂದ ಹೊತ್ತಿಸಿದ ದೀಪದಂತೆಯೇ ?

ಶ್ರೀ ವಸಿಷ್ಠನು ಹೇಳಿದನು:—

೫. ಜ್ಞಾನೈಶ್ವರ್ಯವನ್ನು ಹೊಂದಿ ಆವರಣವನ್ನು ಕಳೆದುಕೊಂಡವರೂ ಯೋಗೈಶ್ವರ್ಯವನ್ನು ಹೊಂದಿ ಸದ್ಭಾವವನ್ನು ಎಂದರೆ ಸತ್ಯಸಂಕಲ್ಪವನ್ನು ಪಡೆದವರೂ ಆದವರು ಏನೇನು ಸಂಕಲ್ಪ ಮಾಡುವರೋ ಅದೆಲ್ಲವೂ ಹಾಗೆ ಹಾಗೆಯೇ ಅನುಭವಕ್ಕೆ ಬರುವುದು. ಏಕೆಂದರೆ ರಸವನ್ನು ಪಡೆದು ತಮ್ಮ ಆವರಣ ಸಂವಿತ್ತುಗಳೆರಡೂ ರಸವೇ ಆಗುವಂತೆ ಮಾಡಿಕೊಂಡಿರುವರು.

(ರಸೋ ವೈ ಸಃ | ರಸಂ ಹ್ಯೇವಾಯಂ ಲಬ್ಧ್ವಾ ಆನಂದೀ ಭವತಿ | —ಇತಿ ಶ್ರುತೇಃ | ರಸೋ ಭೂಮಾನಂದಃ –ತಂ ಆಸಮಂತಾತ್ ಸಾಂಕಲ್ಪಿಕ–ಅರ್ಥ

ಸರ್ವಾತ್ಮನಃ ಸರ್ವಗತ್ವಾದ್ಯದ್ಯಥಾ ಯತ್ರ ಭಾವ್ಯತೇ ।
ತಥಾನುಭೂಯತೇ ತತ್ರ ತತ್ತಥಾ ಜ್ಞತಯಾ ಧಿಯಾ ॥ ೬ ॥

ಶ್ರೀ ರಾಮ ಉವಾಚ :—

ಕಪಾಲಮಾಲಾಭರಣೋ ಭಸ್ಮಶಾಲೀ ದಿಗಂಬರಃ ।
ಶ್ಮಶಾನನಿಲಯೋ ಬ್ರಹ್ಮನ್ ಕಾಮುಕಶ್ಚ ಕಿಮೀಶ್ವರಃ ॥ ೭ ॥

ಶ್ರೀ ವಸಿಷ್ಠ ಉವಾಚ :—

ಮಹೇಶ್ವರಾಣಾಂ ಸಿದ್ಧಾನಾಂ ಜೀವನ್ಮುಕ್ತಶರೀರಿಣಾಂ ।
ನ ಕ್ರಿಯಾನಿಯಮೋಽಸ್ತೀಹ ಸ ಹ್ಯಜ್ಞಸ್ಯೈವ ಕಲ್ಪಿತಃ ॥ ೮ ॥

ಸತ್ತಾಲಾಭಾಯ ವೃಣೋತಿ ಸ್ವೀಕರೋತಿ ತಥಾವಿಧಾ ಯಾ ಮಾಯಾ ಪ್ರತಿಬಿಂಬ ಸಂವಿತ್ ಸಾರ್ವಜ್ಞ್ಯ ಸರ್ವಶಕ್ತತ್ವಾಖ್ಯಾ ತದ್ಬಲಾದಿತ್ಯರ್ಥಃ —ತಾ. ಪ್ರ.)

೬. ಸರ್ವಾತ್ಮವಾದ ಬ್ರಹ್ಮವು ಸರ್ವಗವಾದುದರಿಂದ ಅದು ಹೇಗೆ ಎಲ್ಲೆಲ್ಲಿಯೂ ಇರುವುದೆಂದು ಅನುಭವಕ್ಕೆ ಬರುವುದೋ, ಹಾಗೆಯೇ ಆ ಬ್ರಹ್ಮಜ್ಞವಾಗಿರುವ ಬುದ್ಧಿಯು ಯಾವುದನ್ನು ಹೇಗೆ ಭಾವಿಸಿದರೆ ಅದೂ ಹಾಗೆಯೇ ಅನುಭವಕ್ಕೆ ಬರುವುದು.

ಶ್ರೀ ರಾಮನು ಕೇಳಿದನು :—

೭. ಎಲೈ ಬ್ರಹ್ಮನೆ, (ನೀನು ಹೇಳಿದಂತೆ ಬ್ರಹ್ಮಜ್ಞನು ಯಾವುದನ್ನು ಸಂಕಲ್ಪಿಸಿದರೆ ಅದು ಆಗುವುದು ಎನ್ನುವುದಾದರೆ) ಈಶ್ವರನು ಕಪಾಲಮಾಲೆಗಳನ್ನು ಆಭರಣಗಳಾಗಿ ಧರಿಸಿಕೊಂಡು, ಭಸ್ಮವನ್ನು ಬೊಳೆದುಕೊಂಡು, ಬಟ್ಟೆಗಳನ್ನು ಕಿತ್ತೆಸೆದು ದಿಗಂಬರನಾಗಿ, ಸ್ಮಶಾನಗಳಲ್ಲಿ ವಾಸಮಾಡಿಕೊಂಡು, ಕಾಮುಕನಾಗಿ ಇರಬೇಕು ಏಕೆ?

(ಏವಮೈಶ್ವರ್ಯೇ ಸತಿ ಹರಿಹರಾದಯಃ ಕಿಮರ್ಥಂ ಮಾನುಷಯೋನ್ಯಾದ್ಯವತಾರ ಶ್ಮಶಾನ ವಾಸಾದಿ ಕದರ್ಥನಾಂ ಸ್ವಸ್ಯ ಕಲ್ಪಯಂತಿ ಶುಣ ಮೇವ ನಭ ಕುತೋ ಕಲ್ಪಯಂತಿ ಇತ್ಯಾಶಯೇನ ರಾಮಃ ಪೃಚ್ಛತಿ —ತಾ. ಪ್ರ.)

ಶ್ರೀ ವಸಿಷ್ಠನು ಹೇಳಿದನು :—

೮. ಮಹೇಶ್ವರರೂ ಸಿದ್ಧರೂ ಆದ ಜೀವನ್ಮುಕ್ತ ಶರೀರಿಗಳಿಗೆ ಕ್ರಿಯಾ

ಅಜ್ಞಸ್ತ್ವುದಿತಚಿತ್ತತ್ವಾತ್ಕ್ರಿಯಾನಿಯಮನಂ ವಿನಾ ।
ಗಚ್ಛನ್ನ್ಯಾಯೇನ ಮಾತ್ಸ್ಯೇನ ಪರಂ ದುಃಖಂ ಪ್ರಯಾತಿ ಹಿ ॥ ೯ ॥

ಸುಜ್ಞಾಸ್ತ್ವಿಷ್ಟೇಷ್ಟನಿಷ್ಟೇಷು ನ ನಿಮಜ್ಜಂತಿ ವಸ್ತುಷು ।
ಯತೇಂದ್ರಿಯತ್ವಾದ್ಬುದ್ಧತ್ವಾನ್ನಿರ್ವಾಸನತಯಾ ತಥಾ ॥ ೧೦ ॥

ಕಾಕತಾಲೀಯವದ್ರೂಢಾಂ ಕ್ರಿಯಾಂ ಕುರ್ವಂತಿ ತೇ ಸದಾ ।
ನ ಕುರ್ವಂತ್ಯಪಿ ವೈ ಕಿಂಚಿನ್ನೈಷಾಂ ಕ್ವಚಿದಪಿ ಗ್ರಹಃ ॥ ೧೧ ॥

ನಿಯಮವಿಲ್ಲ: ಎಂದರೆ ಹೀಗೆಯೇ ಮಾಡಬೇಕೆಂಬ ಬಲಾತ್ಕಾರವಿಲ್ಲ. ಅಂತಹ ನಿಯಮಗಳೆಲ್ಲ ಏರ್ಪಟ್ಟಿರುವುದು ಅಜ್ಞನಿಗಾಗಿ.

(ಕ್ರಿಯಾಃ ಶಾಸ್ತ್ರೀಯಾ ಏವ ಮಂಗಲರೂಪಾ ಏವ ಸುಖಭೋಗಫಲಾ ಏವ ಕಾರ್ಯಾಃ ಇತಿ ನ ನಿಯಮಸ್ತೇಷಾಂ ವಿಧಿಕಿಂಕರತ್ವಾಭಾವಾತ್ । ಅಜ್ಞದೃಕ್ ಪ್ರಸಿದ್ಧ ಮಂಗಲಾನಾಮಪಿ ಸರ್ವೇಷಾಂ ತತ್ತ್ವದೃಶಾ ಅಮಂಗಲತಮತ್ವಾವಿಶೇಷಾತ್ । ಅಶುಭಕರ್ಮಾಭಾವೇನ ದುಃಖಸಾಮಗ್ರ್ಯಾಽಪಿ ತೇಷಾಂ ದುಃಖಭೋಗಾನುದಯಾತ್ ಸರ್ವಸ್ಯ ಸುಖರೂಪತ್ವಾವಿಶೇಷಾಚ್ಚ ಇತಿ ಭಾವಃ —ತಾ. ಪ್ರ.)

೯. ಅಜ್ಞನಾದವನಿಗೆ ರಾಗದ್ವೇಷಾದಿಗಳಿಂದ ಹತವಾದ ಚಿತ್ತವಿರುವುದರಿಂದ, ಅವನಿಗೆ ಕ್ರಿಯಾನಿಯಮವು ಬೇಕೇ ಬೇಕು. ಅವನು ಬದುಕುವುದೇ ಮಾತ್ಸ್ಯನ್ಯಾಯದಿಂದ. ಅದರಿಂದ ಕ್ರಿಯಾನಿಯಮನವಿಲ್ಲದಿದ್ದರೆ ಅವನು ಅತಿಶಯ ದುಃಖಭಾಜನನಾಗುವನು.

(ಮಾತ್ಸ್ಯನ್ಯಾಯ ಎಂದರೆ ಪ್ರಬಲರು ದುರ್ಬಲರನ್ನು ಹಿಂಸಿಸುವುದು.)

೧೦. ತಿಳಿದವರು (ಸುಜ್ಞರು) ಇಂದ್ರಿಯಗಳನ್ನು ಗೆದ್ದವರು: ಬೋಧವನ್ನು ಪಡೆದವರು: ನಿರ್ವಾಸನವಾದ ಚಿತ್ತವುಳ್ಳವರು: ಅದರಿಂದ ಇಷ್ಟ, ಅನಿಷ್ಟ ವಸ್ತುಗಳಲ್ಲಿ ಮಗ್ನರಾಗುವುದಿಲ್ಲ.

೧೧. ಯಾವಾಗಲೂ ಕಾಕತಾಲೀಯದಂತೆ ರೂಢವಾಗಿರುವ ಕ್ರಿಯಾಕಲಾಪಗಳನ್ನು ಮಾಡಿಕೊಂಡು ಹೋಗುವರು: ಯಾವುದಾದರೂ ಒಂದಷ್ಟು ಲೋಪವಾದರೂ ಅವರಿಗೆ ಯಾವುದರಲ್ಲಿಯೂ ಗ್ರಹವಿರುವುದಿಲ್ಲ.

ಕಾಕತಾಲೀಯತೋ ವಿಷ್ಣುರೇವಂಕರ್ಮೋದಿತಃ ಪುರಾ ।
ಏವಂ ಕರ್ಮಾ ತ್ರಿನಯನ ಏವಂಕರ್ಮಾಂಬುಜೋದ್ಭವಃ ॥ ೧೨ ॥

ನ ನಿಂದ್ಯಮಸ್ತಿ ನಾನಿಂದ್ಯಂ ನೋಪಾದೇಯಂ ನ ಹೇಯತಾ ।
ನ ಚಾತ್ಮೀಯಂ ನ ಚ ಪರಂ ಕರ್ಮ ಜ್ಞವಿಷಯಂ ಕ್ವಚಿತ್ ॥ ೧೩ ॥

ಅಗ್ನ್ಯಾದೀನಾಂ ಯಥೌಷ್ಣ್ಯಾದಿ ಸರ್ಗಾದೌ ರೂಢಿಮಾಗತಂ ।
ಹರಾದೀನಾಂ ತಥಾ ಕರ್ಮ ದ್ವಿಜಾತೀನಾಂಚ ಜಾತಯಃ ॥ ೧೪ ॥

ಸರ್ಗೇ ಪ್ರರೂಢಿಮಾಯಾತೇ ಸಂಕೇತವಶತಃ ಪೃಥಕ್ ।
ಅನುಭೂತಿಫಲಾಶ್ಚರ್ಯಾಃ ಕಲ್ಪಿತಾಃ ಕಲ್ಪಿತಾಃ ಸ್ವಯಂ ॥ ೧೫ ॥

(ಗ್ರಹ ಎಂದರೆ ಆಗಿಯೇ ತೀರಬೇಕೆಂಬ ಹಠ)
(ರೂಢಾಂ ಅಕಸ್ಮಾತ್ ಪ್ರಾದುರ್ಭೂತಾಂ —ತಾ. ಪ್ರ.)

೧೨. ಕಾಕತಾಲೀಯವಾಗಿಯೇ ವಿಷ್ಣುವು ಅವತಾರ ನಿರ್ವಹಣಾದಿ ಕರ್ಮಗಳನ್ನು ಮಾಡುವನು. ತ್ರಿಯನನೂ ತನ್ನದೆಂದುಕೊಂಡಿರುವ ಕರ್ಮಗಳನ್ನು ಮಾಡುವನು: ಪದ್ಮೋದ್ಭವನೂ ಹಾಗೆಯೇ!

೧೩. ಬ್ರಹ್ಮಜ್ಞರು ಮಾಡುವ ಕರ್ಮಗಳ ವಿಷಯದಲ್ಲಿ ನಿಂದ್ಯ, ಅನಿಂದ್ಯ ಎಂಬುದಿಲ್ಲ: ಉಪಾದೇಯವಿಲ್ಲ: ಹೇಯವಿಲ್ಲ: ಆತ್ಮಾರ್ಥವಾಗಿ ಮಾಡಿದುದು ಪರಾರ್ಥವಾಗಿ ಮಾಡಿದುದು ಎಂಬುದಿಲ್ಲ.

೧೪. ಅಗ್ನ್ಯಾದಿಗಳಿಗೆ ಔಷ್ಣ್ಯ ಮೊದಲಾದ ಗುಣಗಳು ಹೇಗೆ ಸೃಷ್ಟಿಯ ಆದಿಕಾಲದಲ್ಲಿ ರೂಢವಾಗಿ ಬಂದುವೋ ಹಾಗೆಯೇ ಹರ ಮೊದಲಾದವರ ಕರ್ಮಗಳೂ ದ್ವಿಜರಿಗೆ ಜಾತಿಗಳೂ ನಿಯತವಾದುವು.

(ಜಾತಯಃ ತತ್ತ್ರಜ್ಞಾತ್ಯುಚಿತ ಕರ್ಮನಿಯಮಃ । ಮುಖ್ಯೇಶ್ವರೇಚ್ಛಾ ರೂಪಾನಾದಿ ನಿಯತಿರೇವ ತದ್ವ್ಯವಸ್ಥಾಪಿಕಾ ಇತ್ಯರ್ಥಃ —ತಾ. ಪ್ರ.)

೧೫. ಸೃಷ್ಟಿಯು ಬೆಳೆದು ಬಂದಮೇಲೆ, ಹಲವರು ಸೇರಿಕೊಂಡು ಲೋಕದಲ್ಲಿ ಶಾಂತ್ಯಾದಿ ವ್ಯವಸ್ಥೆಗಳು ಕೆಡದಂತೆ, ಸಂಕೇತವಶವಾಗಿ ಅನುಭವಕ್ಕೆ ಸಿಕ್ಕು

ವಿದೇಹಮುಕ್ತವಿಷಯಂ ತುರ್ಯಮೌನಮತೋ ಮಯಾ ।
ನೋಕ್ತಂ ತವ ಪರಂ ಮೌನಂ ಸದೇಹಸ್ಯ ರಘೂದ್ವಹ ॥ ೧೬ ॥

ಖಾದಪ್ಯತಿತರಾಮಚ್ಛಮಾತ್ಮಾಕಾಶಂ ಚಿದಾತ್ಮಕಂ ।
ತತ್ಪ್ರಾಪ್ತಿಃ ಪರಂ ಶ್ರೇಯಃ ಸಾ ಕಥಂ ಪ್ರಾಪ್ಯತೇ ಶೃಣು ॥ ೧೭ ॥

ವಂತಹ, ಆಶ್ಚರ್ಯ ಫಲಗಳನ್ನು ಕೊಡುವಂತಹ ಕರ್ಮ, ವ್ಯವಸ್ಥೆ, ಮೊದಲಾದುವುಗಳನ್ನು ಅವರವರಿಗೆ ಸರಿತೋರುವಂತೆ ಕಲ್ಪಿಸಿಕೊಂಡರು.

(ಧರ್ಮವು ಸಾಮಯಿಕ, ಆಚಾರಿಕ, ಎಂದು ಎರಡು ವಿಧ. ಸಾಮಯಿಕ ಎಂದರೆ ಹತ್ತು ಜನರುಸೇರಿ, ಹೀಗೆ ಇರೋಣ ಎಂದು ಮಾಡಿಕೊಂಡಿರುವ ಕಟ್ಟುಗಳು. ಆಚಾರಿಕ ಎಂದರೆ ಪೂರ್ವಕಾಲದಿಂದ ನಡೆದುಬಂದಿರುವ ನಿಟ್ಟುಗಳು "ಅಥ ಸಾಮಾಯಾಚಾರಿಕಾ ಧರ್ಮಾರ್ವ್ಯಾಖ್ಯಾಸಾಮಃ" ಎಂಬ ಸೂತ್ರವನ್ನು ಕುರಿತು ಚಿಂತಿಸಿ.)

(ಆಜ್ಞಾನಾಂತು ಚರ್ಯಾ ನಾಗ್ನ್ಯಾದಿ ಕ್ರಿಯಾವನ್ನಿಯತಾಃ ಸರ್ಗಾದಾವಭಿವ್ಯಕ್ತಾಃ ಕಿಂತು ಸರ್ಗೇ ರೂಢಿಮಾಯಾತೇ ಸತಿ ತತ್ತದ್ವರ್ಣಾದಿ ವಿಭಾಗ ಸಂಕೇತ ವಶತಃ ಪೃಥಕ್ ಐಹಿಕ ಪಾರಲೌಕಿಕ ಸುಖದುಃಖಾನುಭೂತಿಫಲಾಃ ಶಾಸ್ತ್ರೀಯಾಃ ಸ್ವಾಭಾವಿಕ್ಯಶ್ಚ ರಾಗಾದಿವಶಾತ್ಸ್ವಯಂ ಕಲ್ಪಿತಾ ಇತಿ ವೈಷಮ್ಯಮಿತ್ಯರ್ಥಃ ॥
—ತಾ. ಪ್ರ.)

೧೬. (ನೀನು ಕೇಳಿದ ಪ್ರಶ್ನಕ್ಕೆ ಉತ್ತರವಾಯಿತು. ಮತ್ತೆ ಮೌನವಿಚಾರವನ್ನು ಕೇಳು.) ಇದುವರೆಗೆ ವಿದೇಹಮುಕ್ತನು ಅನುಭವಿಸುವ ತುರ್ಯಮೌನವನ್ನು ಕುರಿತು ಹೇಳಿಯಾಯಿತು. ಎಲೈ ರಘುವಲ್ಲಭನೆ, ನಿನಗೆ ಸದೇಹಮುಕ್ತನು ಯಾವ ಮೌನವನ್ನು ಅನುಭವಿಸುವನೋ ಅದನ್ನು ಕುರಿತು ಹೇಳಿಲ್ಲ. ಈಗ ಹೇಳುವೆನು.

೧೭. ಚಿದಾತ್ಮಕವಾದ ಆತ್ಮಾಕಾಶವು ಆಕಾಶಕ್ಕಿಂತ ಸ್ವಚ್ಛವಾದುದು. ಅಂತಹ ಆಕಾಶವಾಗುವಿಕೆಯೇ ಪರಮ ಶ್ರೇಯಸ್ಸು. ಅದು ಹೇಗೆ ಲಭ್ಯವಾಗುವುದು ಎಂಬುದನ್ನು ಕೇಳು.

(ಪರಂ ಶ್ರೇಯೋ ಮೋಕ್ಷಃ —ತಾ. ಪ್ರ.)

ಸಮ್ಯಗ್ಜ್ಞಾನಾವಬೋಧೇನ ನಿತ್ಯಮೇಕಸಮಾಧಿನಾ |
ಸಂಖ್ಯಯೈವಾವಬುದ್ಧಾ ಯೇ ತೇ ಸ್ಮೃತಾಃ ಸಾಂಖ್ಯಯೋಗಿನಃ || ೧೮ ||

ಪ್ರಾಣಾದ್ಯನಿಲಸಂಶಾಂತೌ ಯುಕ್ತ್ಯಾ ಯೇ ಪದಮಾಗತಾಃ |
ಅನಾಮಯಮನಾದ್ಯಂತಂ ತೇ ಸ್ಮೃತಾ ಯೋಗಯೋಗಿನಃ || ೧೯ ||

ಉಪಾದೇಯಂ ತು ಸರ್ವೇಷಾಂ ಶಾಂತಂ ಪದಮಕೃತ್ರಿಮಂ |
ತತ್ಕೇಚಿತ್ಸಂಖ್ಯಯಾ ಪ್ರಾಪ್ತಾಃ ಕೇಚಿದ್ಯೋಗೇನ ದೇಹತಃ || ೨೦ ||

ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ |
ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ಪರಂ ಯೋಗೈಸ್ತದೇವ ಹಿ || ೨೧ ||

---

೧೮. (ಅದನ್ನು ಹೊಂದುವುದಕ್ಕೆ ಸಾಂಖ್ಯ ಯೋಗ ಎಂದು ಎರಡು ಉಪಾಯಗಳು. ಒಂದೊಂದಾಗಿ ಹೇಳುವೆನು ಕೇಳು.) ಸಮ್ಯಗ್ಜ್ಞಾನವನ್ನು ಚೆನ್ನಾಗಿ ತಿಳಿದು, ಯಾವಾಗಲೂ ಏಕಸಮಾಧಿಯಲ್ಲಿರುತ್ತ ಸಂಖ್ಯಾನದಿಂದಲೇ ಅವಬುದ್ಧರು ಆಗುವವರು ಯಾರೋ ಅವರು ಸಾಂಖ್ಯಯೋಗಿಗಳು.

(ಸಂಖ್ಯಯಾ ವಿವೇಕ ವಿಚಾರ ಪ್ರಯುಕ್ತ ರಾಜಯೋಗೇನ —ತಾ. ಪ್ರ.)

೧೯. ಪ್ರಾಣವಾಯು ಮೊದಲಾದವುಗಳನ್ನು ನಿರೋಧಮಾಡಿ ಯುಕ್ತಿಯಿಂದ ಅನಾಮಯವೂ ಅನಾದ್ಯಂತವೂ ಆದ ಮುಕ್ತಿಪದವನ್ನು ಹೊಂದುವರು ಯಾರೋ ಅವರ ಯೋಗಯೋಗಿಗಳು.

೨೦. ಅಕೃತ್ರಿಮವಾಗಿ, (ಮಾಯಾವಿದ್ಧವಲ್ಲದ) ಶಾಂತಪದವಿಯು ಯಾವುದೋ ಅದನ್ನೇ ಎಲ್ಲರೂ ಅಪೇಕ್ಷಿಸುವುದು. ಅದನ್ನು ಕೆಲವರು ಸಂಖ್ಯೆಯಿಂದಲೂ ಇನ್ನೂ ಕೆಲವರು ಯೋಗದಿಂದಲೂ ದೇಹವಿರುವಾಗಲೇ ಪಡೆಯುವರು.

೨೧. ಸಾಂಖ್ಯವೂ ಯೋಗವೂ ಒಂದೇ ಎಂಬುದನ್ನು ಯಾವನು ತಿಳಿಯುವನೋ ಅವನು ನಿಜವಾಗಿಯೂ ಬಲ್ಲವನು. ಸಾಂಖ್ಯರು ಯಾವಸ್ಥಾನವನ್ನು ಪಡೆಯುವರೋ ಅದೇ ಸ್ಥಾನವು ಯೋಗಿಗಳಿಗೂ ಲಭಿಸುವುದು.

ಯತ್ರ ಪ್ರಾಣಮನೋವೃತ್ತಿರತ್ಯಂತಂ ನೋಪಲಭ್ಯತೇ ।
ವಾಸನಾವಾಗುರೋತ್ಕ್ರಾಂತಾ ತದ್ವಿದ್ಧಿ ಪರಮಂ ಪದಂ ॥ ೨೨ ॥

ವಾಸನಾಂ ಚಿತ್ತಮೇವಾಹುಃ ಕಾರಣಂ ತದ್ಧಿ ಸಂಸೃತೇಃ ।
ತದಕಾರಣತಾಮೇತಿ ವಿಲೀಯೋಭಯಕರ್ಮಸು ॥ ೨೩ ॥

ಮನಃ ಪಶ್ಯತಿ ವೈದೇಹಂ ಬಾಲೋ ವೇತಾಲಕಂ ಯಥಾ ।
ಸ್ವಾತ್ಮಾನಂ ವಿಲಯಂ ನೀತ್ವಾ ನ ಭೂಯಸ್ತಂ ಪ್ರಪಶ್ಯತಿ ॥ ೨೪ ॥

---

೨೨. ಪರಮಪದವೆಂದರೆ ಯಾವುದು ಬಲ್ಲೆಯಾ? ಎಲ್ಲಿ ಪ್ರಾಣವೃತ್ತಿಯಾಗಲಿ, ಮನೋವೃತ್ತಿಯಾಗಲಿ, ಎಳ್ಳಷ್ಟೂ ಇಲ್ಲದೆ ಅತ್ಯಂತವಾಗಿ ನಿರಸ್ತವಾಗಿರುವುದೋ, ವಾಸನಾ ಎಂಬ ಬಲೆಯಿಂದ ತಪ್ಪಿಸಿಕೊಂಡಿರುವುದು ಯಾವುದೋ ಅದೇ ಪರಮಪದವೆಂದು ತಿಳಿ.

೨೩. ವಾಸನೆಯನ್ನೇ ಚಿತ್ತವೆನ್ನುವರು. ಸಂಸಾರಕ್ಕೆ ಅದೇ ಕಾರಣವು. ಪ್ರಾಣವಾಸನಾ, ಕರ್ಮವಾಸನಾ ಎಂಬ ಎರಡು ವಾಸನೆಗಳಿಂದ ಪ್ರಾಪ್ತವಾಗುವ ಕರ್ಮಗಳು ಸಂಪೂರ್ಣವಾಗಿ ನಾಶವಾದರೆ, ಆ ಚಿತ್ತವು ಅಕಾರಣವಾಗುವುದು ಎಂದರೆ ಸಂಸಾರಕ್ಕೆ ಕಾರಣವಾಗಿರುವುದು ತಪ್ಪುವುದು.

(ಏಕಫಲತ್ವೇ ಔದನಸಿದ್ಧಾ ವಹ್ನಿ ಜಲಯೋರಿವ ಸಾಂಖ್ಯಯೋಗಯೋಃ ಸಮುಚ್ಚಯೋ ಯುಕ್ತಃ ನವಿಕಲ್ಪ ಇತಿಚೇತ್ ತತ್ರಾಹ-ವಾಸನಾಮಿತಿ । ಸಂಸೃತೇಃ ಬಾಹ್ಯಾಂತಃಕರಣ ಪ್ರಾಣಾದಿಚೇಷ್ಟಾಯಾಃ ತದ್ವಾಸನಾ ಪುಂಜಾತ್ಮಕಂ ಮನ ಏವ ಕಾರಣಂ ತಚ್ಚ ಸಾಂಖ್ಯೇನ ಯೋಗೇನ ವಾ ಏಕೇನೈವ ವಿಲೀಯ ತತ್ವಜ್ಞಾನಾತ್ಮನಾ ಪರಿಣತಮುಭಯೋಃ ಕರಣ ಪ್ರಾಣಯೋರಪಿ ಕರ್ಮಸು ವ್ಯಾಪಾರೇಷು ಅಕಾರಣತಾಮೇತಿ ಇತಿ ಏಕೈಕೇನ ಉಭಯ ಫಲಸಿದ್ಧೇಃ ನ ಸಮುಚ್ಚಯ ಇತ್ಯರ್ಥಃ ॥ —ತಾ. ಪ್ರ.)

೨೪. ಬಾಲಕನಾದವನು ದೇಹವೇ ಇಲ್ಲದಿರುವ ಬೇತಾಳನನ್ನು ತನ್ನ ಭ್ರಾಂತಿಯಿಂದ ನೋಡುವಂತೆ, ಮನಸ್ಸು ಭ್ರಾಂತಿವಶವಾಗಿರುವುದರಿಂದ ಈ ಸಂಸಾರವನ್ನೂ ಅಲ್ಲಿ ಲಭಿಸುವ ಸುಖದುಃಖಗಳನ್ನೂ ನೋಡುವುದು. ಯಾವನು ತಾನು ದೇಹವೆಂಬ ಪಿಂಡಗ್ರಹದಿಂದ ಮುಕ್ತನಾಗುವನೋ ಅವನಿಗೆ ಈ ಸಂಸಾರವು ಇಲ್ಲವಾಗುವುದು.

ಮನೋ ಮುಧೈವಾಭ್ಯುದಿತಮಸದೇವಾನವೇಕ್ಷಣಾತ್ ।
ಸ್ವಪ್ನೇ ಸ್ವಮರಣಾಕಾರಂ ಪ್ರೇಕ್ಷ್ಯಮಾಣಂ ನ ವಿದ್ಯತೇ ॥ ೨೫ ॥

ಮನೋಭವಸ್ತು ಸಂಸಾರಃ ಕ್ವ ಮಮಾಹಂ ಕ್ವ ಸಂತತಿಃ ।
ಉಪದೇಶ್ಯೋಪದೇಶಾದಿಬಂಧಮೋಕ್ಷೌ ಚ ತತ್ಕೃತಃ ॥ ೨೬ ॥

ಏಕತತ್ತ್ವಘನಾಭಾಸಃ ಪ್ರಾಣಾನಾಂ ವಿಲಯಸ್ತಥಾ ।
ಮನೋವಿನಿಗ್ರಹಶ್ಚೇತಿ ಮೋಕ್ಷಶಬ್ದಾರ್ಥಸಂಗ್ರಹಃ ॥ ೨೭ ॥

(ದೇಹಾಹಂತಾ ದರ್ಶನ ಪೂರ್ವಿಕೈವ ಸರ್ವಾಸಂಸೃತಿಃ। ತನ್ಮೂಲಂ ಮನಃ, ತಚ್ಛಾಂತೌ ಸರ್ವಸಂಸೃತಿಶಾಂತಿರುಪಪನ್ನಾ ಇತ್ಯಾಹ —ತಾ. ಪ್ರ.)

೨೫. ಮನಸ್ಸು ಎನ್ನುವುದು ಅಕಾರಣವಾಗಿಯೇ ಭ್ರಾಂತಿಯಿಂದ ಹುಟ್ಟಿರುವುದು. ಅದು ನಿಜವಾಗಿಯೂ ಅಸತ್. ಅದು ಅವಿಚಾರರೂಪ ಅನವೇಕ್ಷಣದಿಂದ ಬದುಕಿರುವುದು. ಅದು ಕನಸಿನಲ್ಲಿ ಕಾಣುವ ಸ್ವಮರಣದಂತಹುದು. ಕಾಣಿಸುತ್ತಿದ್ದರೂ ಸ್ವತಂತ್ರವಾಗಿ ಇರುವುದು ಎನ್ನುವುದು ಅದಕ್ಕಿಲ್ಲ.

೨೬. ಸಂಸಾರವೆಂಬುದು ಮನಸ್ಸಿನಿಂದ ಉದ್ಭವಿಸಿದುದು. ಹೀಗಿರಲು 'ಮಮ' ಎನ್ನುವುದು ಎಲ್ಲಿ ಉಂಟು? 'ನಾನು' ಎನ್ನುವುದು ಎಲ್ಲುಂಟು? ಮಕ್ಕಳುಮರಿ ಎನ್ನುವುದು ಎಲ್ಲಿಯದು? ಉಪದೇಶ್ಯಂ—ಉಪದೇಶ, ಬಂಧ-ಮೋಕ್ಷ, ಇವೆಲ್ಲ ಎಲ್ಲಿಂದ ಬಂದುವು?

(ಜ್ಞಾನೇನ ಮನೋ ಬಾಧೇ, ತತ್ಕಾರ್ಯ-ಅಹಂ ಮಮತಾದಿ ಬಂಧ ಮೋಕ್ಷಾಂತಃ ಸರ್ವಾಃ ಕಲ್ಪನಾ ಬಾಧ್ಯಂತೆ, ಇತ್ಯಾಹ —ತಾ. ಪ್ರ.)

೨೭. ಒಂದೇ ಒಂದು ತತ್ತ್ವವನ್ನು ಹಿಡಿದು ಅಭ್ಯಾಸ ಮಾಡುತ್ತಿರುವುದು: ಪ್ರಾಣಗಳನ್ನು ವಿಲಯ ಮಾಡುವುದು: ಮನಸ್ಸನ್ನು ಸಂಪೂರ್ಣವಾಗಿ ನಿಗ್ರಹಣ ಮಾಡುವುದು: ಎಂಬ ಇವೆಲ್ಲವೂ ಮೋಕ್ಷವೆಂಬ ಶಬ್ದದ ಅರ್ಥ ಸಂಗ್ರಹವು.

(ಇದಾನೀಂ ಉತ್ತಮಾಧಮ ಮಧ್ಯಮ ಅಧಿಕಾರಿ ಕ್ರಮೇಣ ಮೋಕ್ಷ ಸಾಧನ ತ್ರಯಂ ಸರ್ವಶಾಸ್ತ್ರಾರ್ಥ ತಾತ್ಪರ್ಯ ಸಂಗ್ರಹೇಣ ದರ್ಶಯತಿ-ಏಕೇತಿ —ತಾ. ಪ್ರ.)

ಶ್ರೀರಾಮ ಉವಾಚ:—

ಯದಿ ಹಿ ಪ್ರಾಣವಿಲಯೋ ಮುನೇ ಮೋಕ್ಷಸ್ಯ ಕಾರಣಂ ।
ಮೃತಾ ಏವಂ ವಿಮುಚ್ಯಂತೇ ತನ್ಮನ್ಯೇ ಸರ್ವಜಂತವಃ ॥ ೨೮ ॥

ಶ್ರೀ ವಸಿಷ್ಠ ಉವಾಚ:—

ತ್ರಿಷ್ವೇತೇಷು ಪ್ರಯೋಗೇಷು ಮನಃ ಪ್ರಶಮನಂ ವರಂ ।
ಸಾಧ್ಯಂ ವಿದ್ಧಿ ತದೇವಾಶು ಯಥಾ ಭವತಿ ತಚ್ಛಿವಂ ॥ ೨೯ ॥

ಯದಾ ನಿರ್ವಾಣನಂ ಪ್ರಾಣಾಸ್ತ್ಯಜಂತೀದಂ ಶರೀರಕಂ ।
ತದಾನುಭೂಯ ತನ್ಮಾತ್ರೈರ್ಯಾಂತಿ ವ್ಯೋಮನಿ ಸಂಗಮಂ ॥ ೩೦ ॥

ಶ್ರೀ ರಾಮನು ಕೇಳಿದನು :—

೨೮. ಎಲೈ ಮುನೀಂದ್ರನೇ, ಪ್ರಾಣವಿಲಯವೇ ಮೋಕ್ಷಕಾರಣವು ಎನ್ನುವುದಾದರೆ, ಮೃತರಾದ ಸರ್ವಜಂತುಗಳೂ ಮೋಕ್ಷವನ್ನು ಪಡೆದೇ ಪಡೆಯಬೇಕಾಗುವುದು. (ತೇಷು ಮಧ್ಯಮಂ ರಾಮಆಕ್ಷಿಪತಿ —ತಾ.ಪ್ರ.)

ಶ್ರೀ ವಸಿಷ್ಠನು ಹೇಳಿಧನು :—

೨೯. ಈ ಮೇಲೆ ಹೇಳಿದ ಮೂರು ಪ್ರಯೋಗಗಳಲ್ಲಿ ಮನಃಪ್ರಶಮನವೆಂಬುದೇ ಶ್ರೇಷ್ಠವಾದುದು. ಬಹು ಸುಲಭವಾಗಿ ಸಿದ್ಧಿಸುವುದು. ಅದು ಹೇಗೆ ಲಭಿಸುವುದು ಎಂಬುದನ್ನು ಹೇಳುವೆನು ಕೇಳು.

(ತ್ರಯೋಽಪ್ಯುಪಾಯಃ ಮನೋನಾಶದ್ವಾರೈವ ಮೋಕ್ಷಹೇತವಃ, ಮರಣೇ ಚ ನ ಮನೋನಾಶಃ ಪ್ರಾಣನಾಶೋ ವಾ ಕಿಂತು ಮೂರ್ಛಾಕಾಲೇ ವಿಲೀನ ಸೈಂಧವವತ್ ಅವಿದ್ಯಾಯಾಂ ವಾಸನಾತ್ಮನಾವಸ್ಥಾನಮುತ್ಕ್ರಮಣ ಕಾಲೇ ಪುನರಾವಿರ್ಭಾವಃ । ಸವಿಜ್ಞಾನೋ ಭವತಿ, ಸವಿಜ್ಞಾನಮೇವ ಅನ್ವವಕ್ರಾಮತೀತಿ ಶ್ರುತೇಃ, ತೃಣ ಜಲಾಯುಕಾ ದೃಷ್ಟಾಂತ ಪ್ರಸಿದ್ಧೇಃ, ವಿಲೀನಾನಾಂ ಪ್ರಾಣಾನಾಂ ಚಕ್ಷುರಾದಿ ದ್ವಾರೇಣ, ಉತ್ಕ್ರಮಣಾಸಂಭವಾಚ್ಚ । ನಚ ಸ್ಥೂಲ ದೇಹ ರೂಪಾಧಾರಾಭಾವಾತ್, ಬಹಿರ್ನಿರ್ಗತಾನಾಂ ವಿಲಯಃ । ಬಾಹ್ಯಾಕಾಶೇ ಸಹೋತ್ಕ್ರಾಂತಿಭಿಃ ಭೂತಮಾತ್ರಾಭಿಃ ತಾತ್ಕಾಲಿಕ ವ್ಯವಹಾರ ಯೋಗ್ಯ ದೇಹ ಕಲ್ಪನ ಸಂಭವಾತ್, ಇತ್ಯಾಶಯೇನಾಹ —ತಾ. ಪ್ರ.)

೩೦. ಯಾವಾಗ ಮೃತವಾದ ದೇಹವನ್ನು ಪ್ರಾಣಗಳು ಬಿಡುವುವೋ

ವಾಸನಾಸಾತ್ಮಕಾನ್ಯೇವ ವಿದ್ಧಿ ತನ್ಮಾತ್ರಕಾಣಿ ವೈ ।
ತಾದಾತ್ಮ್ಯೈರ್ಮನೋವದ್ಭಿಃ ಪ್ರಾಣೈಃ ಶ್ಲಿಷ್ಯಂತಿ ನೇತರೈಃ ॥ ೩೧ ॥

ಸವಾಸನಾಸ್ತೂತ್ಪದ್ಯಂತೇ ಪ್ರಾಣಾ ಮುಂಚಂತಿ ದೇಹಕಂ ।
ತದ್ವ್ಯೋಮವಾಯುಸಂಶ್ಲೇಷಂ ಯಾಂತಿ ದುಃಖಾಯ ಗಂಧವತ್ ॥ ೩೨ ॥

ಆಗ ಮುಂದೆ ಯಾವ ಶರೀರವು ಬರುವುದು ಎಂಬುದನ್ನು ಕಂಡು, ತನ್ನ ತನ್ಮಾತ್ರ ಸ್ವರೂಪದಿಂದ ಆಕಾಶದಲ್ಲಿ ಸೇರುವುವು.

(ಯದಾ ಪ್ರಾಣಾ ನಿರ್ವಾಣನಂ–ವಣ ಶಬ್ದೇ, ಉಪಶಾಂತ· ಘುರ್ಘುರಾವ ಮಿದ ಶರೀರಕಂ ತ್ಯಜಂತಿ, ತದಾ ವಾಸನಾ ಕಾಮ ಕರ್ಮೋಪಸ್ಥಾಪಿತಂ ಭಾವಿದೇಹಾಕಾರಮನುಭೂಯ ಬಾಹ್ಯವ್ಯೋಮನಿ, ತಾದೃಶ ದೇಹಾರಂಭಾನು ಕೂಲೈಃ, ತನ್ಮಾತ್ರೈಃ, ಭೂತಮಾತ್ರಾಭಿಃ, ಸಂಗಮಂ ಯಾಂತಿ । ತಥಾ ಚ ಶ್ರುತಿಂ "ಸವಿಜ್ಞಾನೋ ಭವತಿ, ಸವಿಜ್ಞಾನಮೇವ ಅನ್ವವಕ್ರಾಮತಿ" ಇತಿ । "ತದ್ಯಥಾ ಪೇಶಸ್ಕಾರೀ ಪೇಶಸೋ ಮಾತ್ರಾಂ ಉಪಾದಾಯ ಅನ್ಯನ್ನವತರಂ ಕಲ್ಯಾಣತರಂ ರೂಪಂ ಕುರುತೇ ಪಿತ್ರ್ಯಂ ವಾ, ಗಾಂಧರ್ವಂ ವಾ, ದೈವಂ ವಾ, ಪ್ರಾಜಾಪತ್ಯಂ ವಾ, ಬ್ರಾಹ್ಮಂ ವಾ, ಅನ್ಯೇಷಾಂ ವಾ ಭೂತಾನಾಂ" ಇತಿ ಚ । ಶ್ರುತೌ ಪೇಶಸ್ಕಾರೀ ಸ್ವರ್ಣಕಾರಃ ಪೇಶಸಃ ಸ್ವರ್ಣಸ್ಯ ಮಾತ್ರಾಂ ಶಕಲಾನಿ ಉಪಾದಾಯ ಇತ್ಯರ್ಥಃ —ತಾ. ಪ್ರ.)

೩೧. ತನ್ಮಾತ್ರ ಶಕಲ (ತುಂಡು)ಗಳು ವಾಸನೆಯಿಂದಲೇ ಆದವು: ಅದರಿಂದ ವಾಸನಾತ್ಮಕಗಳಾಗಿ ಮನೋವತ್ ಆದ ಪ್ರಾಣಗಳೊಡನೆ ಸೇರುವುವು· ಅಲ್ಲದೆ ಇನ್ನು ಯಾವುದರೊಡನೆಯೂ ಸೇರುವುದಿಲ್ಲ.

೩೨. ಪ್ರಾಣಗಳು ದೇಹದಲ್ಲಿ ಸವಾಸನಗಳಾಗಿಯೇ ಹುಟ್ಟುವುವು : ದೇಹವನ್ನು ಬಿಡುವಾಗಲೂ ಸವಾಸನಗಳಾಗಿಯೇ ಬಿಡುವುವು· ಅವು ಹೂವಿನಿಂದ ಬರುವ ಪರಿಮಳದಂತೆ ವಾಯುರೂಪವಾಗಿ ಬಂದು ಆಕಾಶದಲ್ಲಿ ಸೇರುವುವು. ಹಾಗೆ ಸೇರುವಾಗ ದುಃಖವಾಗುವುದು.

(ಪ್ರಾಣಾ ದೇಹಾಂತರೇ ತದ್ದೇಹ ವಾಸನಾ ಸಹಿತಾ ಏವ ಉತ್ಪದ್ಯಂತೇ । ಯತಃ ಪೂರ್ವ ದೇಹಮಪಿ ಭಾವಿದೇಹವಾಸನಾ ಸಹಿತಾ ಏವ ಮುಂಚಂತಿ । ದೇಹಾಂತರೇ ಚ ತದೀಯ ಹಾರ್ದ್ರ ವ್ಯೋಮ್ನಾ ತದಂತರ್ಗತ ವಾಯುಭಿಶ್ಚ

ಮನಃ ಸಾಂಬುರಿವಾಂಭೋಧೌ ನ ಶಾಮ್ಯತಿ ಸವಾಸನಂ ।
ನಾಮನಸ್ಕಾಃ ಸಂಭವಂತಿ ಪ್ರಾಣಾಃ ಸೂರ್ಯ ಇವ ತ್ವಿಷಃ ॥ ೩೩ ॥

ನ ಜಹಾತಿ ಮನಃ ಪ್ರಾಣಾನ್ವಿನಾ ಜ್ಞಾನೇನ ಕರ್ಹಿಚಿತ್ ।
ತೃಣಾಂತರೇಣೈವ ವಿನಾ ತೃಣಾಂಗಮಿವ ತಿತ್ತಿರಿಃ ॥ ೩೪ ॥

ಜ್ಞಾನಾದವಾಸಿನೀಭಾವಂ ಸ್ವನಾಶಂ ಪ್ರಾಪ್ನುಯಾನ್ಮನಃ ।
ಪ್ರಾಣಾತ್ಸ್ಪಂದಂ ಚ ನಾದತ್ತೇ ತತಃ ಶಾಂತಿರ್ಹಿ ಶಿಷ್ಯತೇ ॥ ೩೫ ॥

ಜ್ಞಾನಾತ್ಸರ್ವಪದಾರ್ಥಾನಾಮಸತ್ವಂ ಸಮುದೇತ್ಯಲಂ ।
ತತೋಂಗ ವಾಸನಾನಾಶಾದ್ವಿಯೋಗಃ ಪ್ರಾಣಚೇತಸೋಃ ॥ ೩೬ ॥

ಸಂಶ್ಲೇಷಂ ಯಾಂತಿ ಯಥಾ ಕುಸುಮಗಂಧಃ ತಿಲೇಷು ಪ್ರತಿವಿರ್ಶ ತದ್ಗತ ತೈಲೇನ ಸಂಶ್ಲೇಷಂ ಯಾತೀತಿ ಯಂತ್ರ ನಿಷ್ಪೀಡನಾದಿ ದುಃಖಾಯ ಭವತಿ ತದ್ವತ್ ॥ —ತಾ. ಪ್ರ.)

೩೩. ಮನವು ಸವಾಸನವಾಗಿರುವುದರಿಂದ ನೀರು ತುಂಬಿದ ಮಡಕೆಯು ಸಮುದ್ರದಲ್ಲಿ ಮುಳುಗಿದ್ದರೂ ಅದರಲ್ಲಿರುವ ನೀರು ಸಮುದ್ರ ಜಲದೊಡನೆ ಸೇರಿ ಹೋಗದೆ ಪ್ರತ್ಯೇಕವಾಗಿರುವಂತೆ ಮರಣ ಕಾಲದಲ್ಲಿಯೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ. ಪ್ರಕಾಶರಹಿತನಾಗಿ ಸೂರ್ಯನು ಹೇಗೆ ಹುಟ್ಟುವುದಿಲ್ಲವೋ ಹಾಗೆಯೇ ಅಮನಸ್ಕಗಳಾಗಿ ಪ್ರಾಣಗಳು ಹುಟ್ಟುವುದೇ ಇಲ್ಲ.

೩೪. ತಿತ್ತಿರಿ ಎಂಬ ಕ್ರಿಮಿಯು ಇನ್ನೊಂದು ತೃಣವು ಸಿಕ್ಕುವವರೆಗೂ ತಾನು ಹಿಡಿದಿರುವ ತೃಣವನ್ನು ಹೇಗೆ ಬಿಡುವುದಿಲ್ಲವೋ ಹಾಗೆಯೇ ಜ್ಞಾನವನ್ನು ಪಡೆಯುವುದೊಂದು ಬಿಟ್ಟು ಇನ್ನೇನು ಮಾಡಿದರೂ ಮನಸ್ಸು ಪ್ರಾಣಗಳನ್ನು ಬಿಡುವುದೇ ಇಲ್ಲ.

೩೫. ಜ್ಞಾನವನ್ನು ಪಡೆದರೆ ಅವಾಸನೀ ಭಾವವು ಬರುವುದು ವಾಸನೆಯು ಹಾಗೆ ನಿರಸ್ತವಾದರೆ ಆಗ ಮನವು ನಾಶವನ್ನು ಪಡೆಯುವುದು. ಪ್ರಾಣದಿಂದ ಸ್ಪಂದವೂ ಕೂಡ ಹುಟ್ಟುವುದಿಲ್ಲ. ಅದರಿಂದ ಶಾಂತಿಯು ಉಳಿದೇ ಉಳಿಯುವುದು.

೩೬. ಜ್ಞಾನವು ಲಭಿಸಿದರೆ, ಬ್ರಹ್ಮ ವ್ಯತಿರಿಕ್ತವಾದ ಪದಾರ್ಥಗಳೆಲ್ಲವೂ ಅಸತ್ ಎನ್ನುವುದು ಗೋಚರವಾಗುವುದು. ಆ ಜ್ಞಾನದಿಂದಲೇ ವಾಸನಾ ನಾಶ

ತತೋ ನ ಪಶ್ಯತಿ ಮನಃ ಪ್ರಶಾಂತಂ ದೇಹತಾಂ ಪುನಃ ।
ಸ್ವನಾಶೇನ ಪದಂ ಪ್ರಾಪ್ತಂ ವಾಸನೈವ ಮನೋ ವಿದುಃ ॥ ೩೭ ॥

ಚೇತೋ ಹಿ ವಾಸನಾಮಾತ್ರಂ ತದಭಾವೇ ಪರಂ ಪದಂ ।
ತತ್ತ್ವಂ ಸಂಪದ್ಯತೇ ಜ್ಞಾನಂ ಜ್ಞಾನಮಾಹುರ್ವಿಚಾರಣಂ ॥ ೩೮ ॥

ಇತ್ಯಸ್ಯಾಃ ಸಂಸೃತೇ ರಾಮ ಪರ್ಯಂತಃ ಸಂಪ್ರವರ್ತತೇ ।
ಸ್ವಯಂ ವಿವೇಕಮಾತ್ರೇಣ ರಜ್ಜುಸರ್ಪಭ್ರಮಾಕೃತೇಃ ॥ ೩೯ ॥

ಏಕಾರ್ಥಾಭ್ಯಸನ ಪ್ರಾಣರೋಧ ಚೇತಃಪರಿಕ್ಷಯಾಃ ।
ಏಕಸ್ಮಿನ್ನೇವ ಸಂಸಿದ್ಧೇ ಸಂಸಿದ್ಧ್ಯಂತಿ ಪರಸ್ಪರಂ ॥ ೪೦ ॥

ವಾಗುವುದು. ವಾಸನಾ ನಾಶವಾದರೆ ಪ್ರಾಣ ಚಿತ್ತಗಳು ಬೇರೆ ಬೇರೆಯಾಗುವುವು.

(ಕಥಂ ಜ್ಞಾನೇನ ವಾಸನಾನಾಶ ಇತಿ ಚೇತ್, ತದ್ಧೇತು ದ್ವೈತ ಬಾಧಾತ್ ಇತ್ಯಾಹ —ತಾ. ಪ್ರ.)

೩೭. ಹೀಗೆ ವಾಸನಾ ನಾಶವಾಗಲು ಮನವೂ ಪ್ರಶಾಂತವಾಗಿ ತಾನು ದೇಹ ಎಂಬುದನ್ನು ಮರೆಯುವುದು. (ಬಿಡುವುದು.) ವಾಸನೆಯೇ ಮನಸ್ಸು. ಅದರಿಂದ ಅದು ನಾಶವಾಗಲು ಮೋಕ್ಷವು ಸಿದ್ಧಿಸಿಯೇ ಸಿದ್ಧಿಸುವುದು.

೩೮. ಮನಸ್ಸೆಂಬುದು ವಾಸನಾ ಮಾತ್ರವು. ಅದಿಲ್ಲದಿರುವುದೇ ಪರಮ ಪದವು. ಜ್ಞಾನವು ವಾಸನೆಯನ್ನು ನಾಶಮಾಡಿ ತತ್ವವಾಗುವುದು. ಜ್ಞಾನವೆಂಬುದು ವಿಚಾರಣವು.

(ತದಪಿ ಜ್ಞಾನಂ ಸವಾಸನಂ ಸರ್ವಂ ಬಾಧಿತ್ವಾ ಆತ್ಮ ತತ್ತ್ವಮೇವ ಸಂಪದ್ಯತೇ । ತಚ್ಚ ತತ್ತ್ವಂ ವಿಚಾರಣಂ-ರಲಯೋಃ ಅಭೇದಾತ್ ವಿಗತ ಚಾಲನಂ ಅಚಲಂ ಜ್ಞಾನಮೇವ ಶಿಷ್ಯತ ಇತ್ಯನುಭವನಿಷ್ಠಾ ಆಹುಃ ॥ —ತಾ. ಪ್ರ.)

೩೯. ರಜ್ಜು ಸರ್ಪಭ್ರಮ ರೂಪವಾಗಿರುವ ಈ ಸಂಸಾರದ ಕೊನೆಯು ಆತ್ಮ ವಿವೇಕವು ಬರುತ್ತಲೂ ತಾನಾಗಿ ಒದಗುವುದು.

೪೦. ಏಕಾರ್ಥಾಭ್ಯಾಸ, ಪ್ರಾಣನಿರೋಧನ, ಚಿತ್ತ ಪರಿಕ್ಷಯ, ಎಂಬ

ತಾಲವೃಂತಸ್ಯ ಸಂಸ್ಪಂದೇ ಶಾಂತೇ ಶಾಂತೋ ಯಥಾನಿಲಃ ।
ಪ್ರಾಣಾನಿಲಪರಿಸ್ಪಂದೇ ಶಾಂತೇ ಶಾಂತಂ ತಥಾ ಮನಃ ॥ ೪೧ ॥

ಪ್ರಾಣಃ ಶರೀರವಿಲಯೇ ಪ್ರಯಾತಿ ವ್ಯೋಮವಾಯುತಾಂ ।
ಯಥಾ ವಾಸಿತಮೇವೇದಂ ಸರ್ವಂ ಪಶ್ಯತಿ ತತ್ರ ವಾ ॥ ೪೨ ॥

ಯಥಾ ವಿದೇಹಾಃ ಪಶ್ಯಂತಿ ಪ್ರಾಣಾ ವ್ಯೋಮನಿ ದೇಹಕಂ ।
ಸಮನಸ್ಕಾಸ್ತಥಾಚಾರಂ ಸರ್ವಂ ಚಾನುಭವಂತಿ ತೇ ॥ ೪೩ ॥

ಶಾಂತೇ ವಾತಪರಿಸ್ಪಂದೇ ಯಥಾ ಗಂಧಃ ಪ್ರಶಾಮ್ಯತಿ ।
ತಥಾ ಶಾಂತೇ ಮನಸ್ಪಂದೇ ಶಾಮ್ಯಂತಿ ಪ್ರಾಣವಾಯವಃ ॥ ೪೪ ॥

ಅವಿನಾಭಾವಿನೀ ನಿತ್ಯಂ ಜಂತೂನಾಂ ಪ್ರಾಣಚೇತಸೀ ।
ಕುಸುಮಾಮೋದವನ್ಮಿಶ್ರೇ ತಿಲತೈಲೇ ಇವಸ್ಥಿತೇ ॥ ೪೫ ॥

ಈ ಮೂರರಲ್ಲಿ ಒಂದು ಸಿದ್ಧವಾದರೆ ಸಾಕು. ಇನ್ನೆರಡೂ ತಾವಾಗಿ ಸಿದ್ಧವಾಗುವುವು.

೪೧. ಬೀಸುತ್ತಿರುವ ತಾಳೆಯ ಗರಿಯು ಬೀಸುವಾಗ ಬರುವ ಗಾಳಿಯು ಅದು ಬೀಸುವುದು ನಿಂತರೆ ನಿಂತುಹೋಗುವಂತೆ, ಪ್ರಾಣ ವಾಯುವಿನ ಸಂಸ್ಪಂದದಿಂದ ಆಗಿರುವ ಮನಸ್ಸು ಆ ಸ್ಪಂದವು ನಿಂತಾಗ ತಾನೂ ಇಲ್ಲವಾಗುವುದು.

೪೨. ಶರೀರವು ಬಿದ್ದುಹೋದಾಗ ಪ್ರಾಣವು ವ್ಯೋಮವಾಯುವಾಗುವುದು, ಮತ್ತು ತನ್ನ ವಾಸನಾಬಲದಿಂದ ಭೂತಭವಿಷ್ಯತ್ತುಗಳನ್ನು ಬಹಿರಾಕಾಶದಲ್ಲಿಯೇ ಕಾಣುವುದು.

೪೩. ದೇಹವನ್ನು ಬಿಟ್ಟು ಬಂದ ಪ್ರಾಣಗಳು ಆಕಾಶದಲ್ಲಿ ಯಾವ ಜಾತಿಯ ದೇಹವನ್ನು ಕಂಡು ಅದನ್ನು ಪ್ರವೇಶಿಸುವುವೋ, ಆ ಜಾತಿಯ ಮನಸ್ತ್ವವನ್ನು ಪಡೆದು, ಆ ಜಾತಿಯ ಆಚಾರಾದಿಗಳನ್ನೆಲ್ಲ ಅನುಭವಿಸುವುವು.

೪೪. ಗಾಳಿಯು ಬೀಸುತ್ತಿರುವುದು ನಿಂತರೆ, ಪರಿಮಳವು ಹರಡುವುದೂ ಹೇಗೆ ನಿಂತುಹೋಗುವುದೋ, ಹಾಗೆಯೇ ಮನಸ್ಸಿನ ವ್ಯಾಪಾರವು ನಿಂತರೆ, ಪ್ರಾಣವಾಯುಗಳೂ ನಿರ್ವ್ಯಾಪಾರಗಳಾಗುವುವು.

೪೫. ಪ್ರಾಣ ಚಿತ್ತಗಳು ಯಾವ ಜಂತುವಿನಲ್ಲಿಯೇ ಆಗಲಿ, ಒಂದನ್ನು

ಮನಸಃ ಸ್ಪಂದನಂ ಪ್ರಾಣಃ ಪ್ರಾಣಸ್ಯ ಸ್ಪಂದನಂ ಮನಃ ।
ಏತೌ ವಿಹರತೋ ನಿತ್ಯಮನ್ಯೋನ್ಯಂ ರಥಸಾರಥೀ ॥ ೪೬ ॥

ಆಧಾರಾಧೇಯವಚ್ಚೈತಾವೇಕಾಭಾವೇ ವಿನಶ್ಯತಃ ।
ಕುರುತಶ್ಚ ಸ್ವನಾಶೇನ ಕಾರ್ಯಂ ಮೋಕ್ಷಾಖ್ಯಮುತ್ತಮಂ ॥ ೪೭ ॥

ಏಕತತ್ತ್ವಘನಾಭ್ಯಾಸಾಚ್ಛಾಂತಂ ಶಾಮ್ಯತ್ಯಲಂ ಮನಃ ।
ತಲ್ಲೀನತ್ವಾತ್ಸ್ವಭಾವಸ್ಯ ತೇನ ಪ್ರಾಣೋಽಪಿ ಶಾಮ್ಯತಿ ॥ ೪೮ ॥

ವಿಚಾರ್ಯ ಯದನಂತಾತ್ಮತತ್ತ್ವಂ ತನ್ಮಯತಾಂ ನಯ ।
ಮನಸ್ತತಸ್ತಲ್ಲಯೇನ ತದೇವ ಭವತಿ ಸ್ಥಿರಂ ॥ ೪೯ ॥

ಬಿಟ್ಟು ಇನ್ನೊಂದಿರುವುದಿಲ್ಲ. ಅವೆರಡೂ ಹೂವೂ ಪರಿಮಳವೂ ಇದ್ದಂತೆ: ತಿಲ ತೈಲಗಳಿದ್ದಂತೆ.

೪೬. ಮನಸ್ಸಿನ ಸ್ಪಂದನವೇ ಪ್ರಾಣವು: ಪ್ರಾಣದ ಸ್ಪಂದನವೇ ಮನಸ್ಸು. ಮನಃ ಪ್ರಾಣಗಳೆರಡೂ ರಥ ಸಾರಥಿಗಳಂತೆ ಒಂದರ ವ್ಯಾಪಾರ ದಿಂದ ಇನ್ನೊಂದು ಸಂತೋಷಪಟ್ಟುಕೊಳ್ಳುತ್ತಾ ಎರಡೂ ವ್ಯಾಪಾರ ಮಾಡು ತ್ತಿರುವುವು.

೪೭. ಆಧಾರ, ಆಧೇಯತೆಗಳಿಂದ ಇವೆರಡೂ ಏಕಭಾವಗಳು. ಇವು ನಷ್ಟವಾಗುವುದೂ ಹಾಗೆಯೇ. ಒಂದು ಹೋದರೆ ಇನ್ನೊಂದೂ ಹೋಗುವುದು. ಸ್ವನಾಶದಿಂದ ಅವು ಉತ್ತಮ ಫಲವೊಂದನ್ನು ಸಾಧಿಸಿಕೊಡುವುವು. ಅದೇ ಮೋಕ್ಷವೆನ್ನುವುದು.

(ಆಧಾರ ಆಧೇಯವತ್ ಅಗ್ನ್ಯೌಷ್ಣ್ಯವತ್ —ತಾ. ಪ್ರ.)

೪೮. ಏಕತತ್ವವನ್ನು ಅಭ್ಯಾಸ ಮಾಡುವುದರಿಂದ ಮನಸ್ಸು ಶಾಂತಿ ಯನ್ನು ಪಡೆದು ಅದರಲ್ಲಿ ತಾನೂ ಶಾಂತವಾಗುವುದು. ಆಗ ಆ ಏಕತತ್ವದಲ್ಲಿ ಸ್ವಭಾವವೇ ಶಾಂತವಾಗುವುದರಿಂದ ಪ್ರಾಣವೂ ಶಾಂತವಾಗುವುದು.

೪೯. ಅನಂತವಾದ ಆತ್ಮ ತತ್ವವನ್ನು ಕುರಿತು ವಿಚಾರ ಮಾಡಿ ಮನಸ್ಸನ್ನು ಅಲ್ಲಿಗೆ ಕರೆದುಕೊಂಡು ಹೋಗು. ಅಲ್ಲಿಯೇ ಅದು ಲಯವಾಗಿ, ತಾನೂ ಅದೇ ಆಗುವುದು.

ಯದೇವಾತೀತರಾಂ ಶ್ರೇಯೋನುಪಲಂಭೋಪಲಂಭಯೋಃ ।
ದ್ವಯೋರಪ್ಯಸತೋಸ್ತತ್ರ ಶೇಷೇ ವಾಪಿ ಸ್ಥಿರೋ ಭವ ॥ ೫೦ ॥

ಏಕಸ್ಮಿನ್ಸುದೃಢೇ ತತ್ತ್ವೇ ತಾವದ್ಭಾವಂ ವಿಭಾವಯೇತ್ ।
ಭಾವೋ ಭಾವತ್ವಮಾಯಾತಿ ಸ್ವಭ್ಯಾಸಾದ್ಯಾವದಾತತಂ ॥ ೫೧ ॥

ಪ್ರತ್ಯಾಹಾರವತಾಂ ಚೇತಃ ಸ್ವಯಂ ಭೋಗ್ಯಕ್ಷಯಾದಿವ ।
ವಿಲೀಯತೇ ಸಹ ಪ್ರಾಣೈಃ ಪರಮೇವಾಶಿಷ್ಯತೇ ॥ ೫೨ ॥

ಯದೇಕತಾನಂ ಭವತಿ ಚೇತಸ್ತದ್ಭವತಿ ಕ್ಷಣಾತ್ ।
ಶಾಂತಾಶೇಷ ವಿಶೇಷೌಘಂ ಚಿರಾಭ್ಯಾಸಸ್ವಭಾವತಃ ॥ ೫೩ ॥

---

೫೦. ಅನುಪಲಂಭ, ಉಪಲಂಭ (ಅನುಭವ) ಎಂಬ ಎರಡೂ ಅಸತ್ತುಗಳೇ ಇವೆರಡಕ್ಕೂ ಅತಿಶಯವಾದ ಶ್ರೇಯಸ್ಸು ಯಾವುದೋ ಅದನ್ನು ಪಡೆ. ಇವೆರಡನ್ನೂ ಕಳೆದು ಉಳಿದ ಯಾವುದೋ ಅದರಲ್ಲಿ ಶಾಶ್ವತವಾಗಿ ನಿಲ್ಲುವವನಾಗು.

೫೧. ಒಂದೇ ಒಂದಾಗಿರುವ ತತ್ವದಲ್ಲಿ ಭಾವವನ್ನು ನಿಲ್ಲಿಸಿ ದೃಢವಾಗಿ ವಿಭಾವನ ಮಾಡಬೇಕು. ಭಾವವೆಂದರೆ ತದಾಕಾರ ವೃತ್ತಿ ಧಾರೆಯು. ಆ ತದಾಕಾರ ವೃತ್ತಿಯು ಏಕಸಮವಾಗಿ ನಡೆದು ನಡೆದು ತತ್ತ್ವೇ ಆಗುವುದು. ಆಗ ಭಾವವು ಭಾವತ್ವವನ್ನು ಹೊಂದುವುದು. ಹಾಗೆ ಆಗಲು ಅಭ್ಯಾಸವು ಸಂತತವಾಗಿ ನಡೆದು ತಾನೇ ತಾನಾಗಬೇಕು.

೫೨. ಪ್ರತ್ಯಾಹಾರ ಮಾಡುವವರಿಗೆ, ಭೋಗ್ಯ ವಸ್ತುಗಳಿಂದ ಆಹಾರಾದಿಗಳನ್ನು ಬಿಟ್ಟವರಿಗೆ ದೇಹವು ಕ್ಷಯಿಸುವಹಾಗೆ, ಮನಸ್ಸು ಪ್ರಾಣಗಳೊಡನೆ ವಿಲೀನವಾಗಿ ಹೋಗುವುದು. ಹಾಗೆ ಮನಃ ಪ್ರಾಣಗಳೆರಡೂ ಲಯವಾಗಲು ಪರವಸ್ತುವೊಂದೇ ಉಳಿಯುವುದು.

೫೩. ಯಾವಾಗ ಮನಸ್ಸು ಏಕತಾನವಾಗುವುದೋ ಆಗ ತಾನೂ ಒಂದೇ ಕ್ಷಣದಲ್ಲಿ ಅದೇ ಆಗುವುದು. ಒಂದೇಸಮನಾಗಿ ಆ ಏಕತಾನವನ್ನೂ ಅಭ್ಯಾಸ ಮಾಡುತ್ತಿದ್ದರೆ ಸಮಸ್ತ ವಿಶೇಕೌಷೈಘಗಳೂ ಎಂದರೆ ದ್ವೈತ ಭಾವನೆಗಳೆಲ್ಲಾ ಶಾಂತವಾಗಿ ಹೋಗುವುವು.

(ಧಾರಣಾಂತೈಃ ಪಂಚಭಿರಂಗೈಃ ಮನಸೋ ಬಾಹ್ಯಾಕಾರ ಕ್ಷಯೇಸತಿ ಧಾರಣಾದಿಭಿ ಸ್ತ್ರಿಭಿಃ ಬ್ರಹ್ಮೈಕತಾನತಾ ಸಂಪತ್ತ್ಯಾ ನಿರ್ವಿಕಲ್ಪ ಸಮಾಧಿ ಪರಿಪಾಕೇನ ಬ್ರಹ್ಮಭಾವಃ ಸಿದ್ಧ್ಯತೀತ್ಯಾಹ —ತಾ. ಪ್ರ.)

ಅವಿದ್ಯೇಯಂ ತು ನಾಸ್ತೀತಿ ಬುದ್ಧ್ವಾ ಯುಕ್ತಿಯುತಂ ಧಿಯಾ ।
ಜ್ಞಾನಾದೇವ ಪರಾವಾಪ್ತಿಸ್ತದಭ್ಯಾಸಸ್ತತಃ ಪರಂ ॥ ೫೪ ॥

ಚಿತ್ತೇ ಶಾಂತೇ ಶಾಮ್ಯತೀಯಂ ಸಂಸಾರಮೃಗತೃಷ್ಣಿಕಾ ।
ಜರಾಮುಪಗತೇ ಮೇಘೇ ಮಿಹಿಕಾ ತನ್ಮಯೀ ಯಥಾ ॥ ೫೫ ॥

ಚಿತ್ತಮಾತ್ರಮವಿದ್ಯೇತಿ ಕುರುತೇ ನೈವ ತತ್ ಕ್ಷಯಂ ।
ತದ್ರೂಪಂ ರಾಮ ಚಿತ್ತಾತ್ಮಾ ನಾಭಾವೋ ಹಿ ಪರಂ ಪದಂ ॥ ೫೬ ॥

ಮುಹೂರ್ತಮೇವ ನಿರ್ವಾಣಂ ಯದಿ ಚೇತಃ ಪರೇ ಪದೇ ।
ತತ್ತತ್ಪರಿಣತಂ ವಿದ್ಧಿ ತತ್ರೈವಾಸ್ವಾದಮಾಗತಂ ॥ ೫೭ ॥

ಯದಿ ಸಾಂಖ್ಯೇನ ವಿಶ್ರಾಂತಂ ಚೇತೋ ಯೋಗೇನ ವಾಪಿ ತೇ ।
ಕ್ಷಣಂ ತತ್ಸತ್ವತಾಂ ಯಾತಂ ನ ಭೂಯ ಇಹ ಜಾಯತೇ ॥ ೫೮ ॥

---

೫೪. ಬುದ್ಧಿಯಿಂದ ಯುಕ್ತಿಗಳನ್ನು ಚಿಂತನ ಮಾಡಿ ಅವಿದ್ಯೆಯೆಂಬುದು ಇಲ್ಲ, ಜ್ಞಾನದಿಂದಲೇ ಪರ ವಸ್ತುವಿನ ಪ್ರಾಪ್ತಿಯಾಗುವುದು ಎಂದು ಗೊತ್ತು ಮಾಡಿಕೊಂಡು ಅಭ್ಯಾಸ ಮಾಡಿದುದೇ ಆದರೆ ಪರಮಪದವು ಲಭಿಸುವುದು.

೫೫. ಮೇಘವು (ಶರತ್ಕಾಲದಲ್ಲಿ) ಮುಪ್ಪಾಗಿ ಹೋಗಲು ಅದರಿಂದ ಸುರಿಯುವ ಹಿಮವೂ ಶಾಂತವಾಗುವ ಹಾಗೆ, ಚಿತ್ತವು ಶಾಂತವಾಗಲು ಸಂಸಾರ ವೆಂಬ ಮರೀಚಿಕೆಯೂ ಶಾಂತವಾಗುವುದು.

೫೬. ಚಿತ್ತಮಾತ್ರವೆನ್ನುವುದು ಅವಿದ್ಯೆಯೇ ಆದುದರಿಂದ, ಆ ಚಿತ್ತವನ್ನು ಚಿತ್ತದಿಂದಲೇ ಕ್ಷಯಮಾಡು. ಆ ಚಿತ್ತವೂ ಆತ್ಮರೂಪವೇ (ಎಂದು ತಿಳಿಯು ವುದೇ ಅದರ ಕ್ಷಯವು.) ಹಾಗೆ ಅಲ್ಲಿ ಆತ್ಮವಿಲ್ಲವೆಂದರೆ ಅಭಾವವಾಗುವುದು. ಅಭಾವವು ಎಂದಿಗೂ ಪರಮಪದವಲ್ಲವಷ್ಟೇ ?

೫೭. ಯಾವಾಗ ಚಿತ್ತವು ಪರಮಪದದಲ್ಲಿ ಒಂದು ಮುಹೂರ್ತವಾದರೂ ನಿರ್ವಾಣವನ್ನು ಎಂದರೆ ಪರಮ ವಿಶ್ರಾಂತಿಯನ್ನು ಹೊಂದಿತೋ ಆಗಲೇ ಆ ಚಿತ್ತವು ಅಲ್ಲಿಯೇ ಪರಿಣತವಾಗುವುದು. ಆ ರುಚಿಯನ್ನು ಕಂಡು ಮಿಕ್ಕೆಲ್ಲದ ರಲ್ಲಿಯೂ ವಿಮುಖವಾಗುವುದು.

೫೮. ಚಿತ್ತವು ಸಾಂಖ್ಯದಿಂದಲಾಗಲಿ ಯೋಗದಿಂದಲಾಗಲಿ ವಿಶ್ರಾಂತಿ ಯನ್ನು ಪಡೆದುದೇ ಆದರೆ, ಒಂದು ಕ್ಷಣ ಕಾಲ ಸತ್ವತೆಯನ್ನು ಅನುಭವಿಸಿದರೆ, ಮತ್ತೆ ಈ ಲೋಕವಲ್ಲಿ ಹುಟ್ಟುವುದಿಲ್ಲ.

ಚೇತೋವಿಗಲಿತಾವಿದ್ಯ ಸತ್ವಶಬ್ದೇನ ಕಥ್ಯತೇ ।
ದಗ್ಧ ಸಂಸಾರಬೀಜಂ ತನ್ನ ತದಾತ್ಯಂತರಂ ಪುನಃ ॥ ೫೯ ॥

ಕಶ್ಚಿದ್ವಿಗಲಿತಾವಿದ್ಯಃ ಸತ್ವಸ್ಥಃ ಶಾಂತವಾಸನಃ ।
ಪರಂ ಶೂನ್ಯೋಪಮಂ ಸದ್ಯೋ ಜ್ಯೋತಿಃ ಪಶ್ಯತಿ ಶಾಮ್ಯತಿ ॥ ೬೦ ॥

ವಿಗಲಿತಾತ್ಮಪದಂ ವಿಗಲನ್ಮನಃ
ಸುಭಗ ಸತ್ವಮಿತೀಹ ಹಿ ಕಥ್ಯತೇ ।
ನ ಪುನರೇತಿ ಕಲಾಮಲಿನಂ ಪದಂ
ಕನಕತಾಮಿವ ತಾಮ್ರಮುಪಾಗತಂ ॥ ೬೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ನಿರ್ವಾಣ ಪ್ರಕರಣೇ "ಪ್ರಾಣಮನಃ ಸಂಯೋಗವಿಚಾರಣಂ" ನಾಮ
ಏಕೋನಸಪ್ತತಿತಮಃ ಸರ್ಗಃ

---

೫೯. ಮನಸ್ಸು ಅವಿದ್ಯೆಯನ್ನು ಬಿಡುವುದೇ ಸತ್ವತೆಯೆನ್ನಿಸಿಕೊಳ್ಳುವುದು. ಅದು ಸಂಸಾರ ಬೀಜವನ್ನು ಸುಟ್ಟ ಅವಸ್ಥೆಯು. ಅದು ಮತ್ತೆ ಅಂತರವನ್ನು ಎಂದರೆ ಬ್ರಹ್ಮಭಾವ ವಿಚ್ಛೇದವನ್ನು ಕೊಡುವುದಿಲ್ಲ.

೬೦. ಯಾವನಾದರೊಬ್ಬನು ಅವಿದ್ಯೆಯನ್ನು ಕಳೆದುಕೊಂಡು, ಸತ್ವಸ್ಥನಾಗಿ ಶಾಂತವಾಸನನಾದರೆ, ಅಜ್ಞರ ದೃಷ್ಟಿಯಿಂದ ಶೂನ್ಯದಂತಿರುವ, ಬ್ರಹ್ಮಾನುಭವ ಮಾಡಿದವರ ದೃಷ್ಟಿಯಿಂದ ಪರಂಜ್ಯೋತಿಯಾಗಿರುವ ಬ್ರಹ್ಮದ ದರ್ಶನ ಮಾಡಿ ಪರಮಶಾಂತನಾಗುವನು.

೬೧. ಎಲೈ ಪುಣ್ಯವಂತನಾದ ರಾಮನೆ, ಜೀವಾತ್ಮನ ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಭ್ರಾಂತಿ ದರ್ಶನ ಪದಗಳನ್ನು ಕಳೆದುಕೊಂಡು ಮನಸ್ತ್ವವನ್ನೂ ನೀಗಿಕೊಂಡ ಅವಸ್ಥೆಯು ಯಾವುದೋ ಅದೇ ಬ್ರಹ್ಮಜ್ಞರಿಂದ ಸತ್ತ್ವವೆಂದು ಕರೆಯಿಸಿಕೊಳ್ಳುವುದು. ಅಂತಹ ಅವಸ್ಥೆಯನ್ನು ಪಡೆದವನು ಮತ್ತೆ ಭಾಗ ವಿಭಾಗದ ದ್ವೈತದಿಂದ ಮಲಿನವಾಗಿರುವ ಸಂಸಾರ ಪದವನ್ನು ಹೊಂದುವುದಿಲ್ಲ. ತಾಮ್ರವು ಒಂದು ಸಲ ಚಿನ್ನವಾಗಿ ಹೋದ ಮೇಲೆ ಮತ್ತೆ ತಾಮ್ರವಾಗುವುದೂ ಉಂಟೇನು ?

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ನಿರ್ವಾಣ ಪ್ರಕರಣದಲ್ಲಿ "ಪ್ರಾಣಮನಃ ಸಂಯೋಗ ವಿಚಾರಣ" ಎಂಬ
ಅರವತ್ತೊಂಭತ್ತನೆಯ ಸರ್ಗವು

ಹದಿನಾರನೆಯ ಸಂಪುಟವು ಮುಗಿದುದು